ಭಾನುವಾರ, ಡಿಸೆಂಬರ್ 14, 2025 ₹ 7.00
www.prajavani.net
prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಮನಸೆಳೆದ ಪ್ರಾಣಿ ಮೇಳ
ನವದೆಹಲಿಯಲ್ಲಿ ಶನಿವಾರ ನಡೆದ 'ಪೆಟ್ ಫೆಡ್ ದೆಹಲಿ–2025' ಮೇಳದಲ್ಲಿ ವೀಕ್ಷಕಿಯೊಬ್ಬರು ಇಗ್ವಾನಾ (ದೊಡ್ಡ ಹಲ್ಲಿ ಮಾದರಿಯ ಪ್ರಾಣಿ) ಕೈಲಿಡಿದು ಸಂಭ್ರಮಿಸಿದರು

ಪ್ರಶಸ್ತಿ ಸುತ್ತಿಗೆ ಉನ್ನತಿ
ಉದಯೋನ್ಮುಖ ಆಟಗಾರ್ತಿ ಉನ್ನತಿ ಹೂಡ ಅವರು ಒಡಿಶಾ ಮಾಸ್ಟರ್ಸ್ ಸೂಪರ್ 100 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ಶನಿವಾರ ಫೈನಲ್ ಪ್ರವೇಶಿಸಿದರು


Video shot at site
Scan to chat
Scan for floor plans
FUTURE IS ONE
ನೋಟವನ್ನು ಬದಲಾಯಿಸಿ.
ನವ ನವೀನ ಡ್ಯೂಪ್ಲೆಕ್ಸ್ ಗಳ
18 ಅಡಿ ಎತ್ತರದ ಸೀಲಿಂಗ್ ಗಳ
ಭವ್ಯತೆಯನ್ನು ಕಣ್ತುಂಬಿಕೊಳ್ಳಿ
ಈ ಪ್ರಶಸ್ತಿ ಪುರಸ್ಕೃತ ಡ್ಯೂಪ್ಲೆಕ್ಸ್‌ಗಳನ್ನು ತಮ್ಮದಾಗಿಸಿಕೊಳ್ಳಿ
ಫೇಸ್- 2ರ ದರ ಹೆಚ್ಚುವಿಕೆಯ ಮುನ್ನ
ಅತ್ಯಧಿಕ ಬಾಡಿಗೆ
• ಮುಂಬರುವ ಇನ್ಫೋಸಿಸ್ ಕ್ಯಾಂಪಸ್ ಪಕ್ಕ
• ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಿಂದ ನಡಿಗೆ ದೂರ (50 acre operational campus)
• ಮುಂಬರುವ ನ್ಯೂ ಹಾರಿಜನ್ ವಿಶ್ವವಿದ್ಯಾಲಯಕ್ಕೆ ಕೂಗಳತೆ ದೂರ
ಅದ್ಭುತ ಜಾಗ
• ಎಲ್ಲಾ ಪ್ರಮುಖ ಅಂತಾರಾಷ್ಟ್ರೀಯ ಶಾಲೆಗಳಿಗೆ ಹತ್ತಿರ
• ಯೋಜಿತ ಸ್ವಿಫ್ಟ್ ಸಿಟಿಗೆ ಹತ್ತಿರ (15 ನಿಮಿಷ)
• ಪ್ರಮುಖ ಎಂಎನ್‌ಸಿಗಳಿಗೆ ಹತ್ತಿರ
ಫೇಸ್-1 :
ಇನ್ನು ಕೆಲವೇ ಯುನಿಟ್ ಗಳು ಮಾತ್ರ ಬಾಕಿ
ಫೇಸ್-2 :
ಮೇ 2026ಕ್ಕೆ Launch
ಪ್ರಶಸ್ತಿ ಪುರಸ್ಕೃತ ಡೂಪ್ಲೆಕ್ಸ್‌ಗಳು- INTERIORS INCLUDED
2.5 BHK ರೂ.1.33 ಕೋಟಿ 1586 ಚ. ಅಡಿ
3.5 BHK ರೂ.1.51 ಕೋಟಿ 1731-1907 ಚ. ಅಡಿ
5.5 BHK ರೂ.2.34 ಕೋಟಿ 2807 ಚ. ಅಡಿ
4-way convertible ಮನೆಗಳು
18+ ಪ್ರಮುಖ ಸೌಲಭ್ಯಗಳು
EV ರೆಡಿ ಪಾರ್ಕಿಂಗ್
ಅಲೆಕ್ಸಾ ಸ್ಮಾರ್ಟ್ ಹೋಮ್
18 ಅಡಿ double height ಸೀಲಿಂಗ್ಸ್
ಹೈಡ್ರೋಪೋನಿಕ್ ಗ್ರೀನ್ಸ್
AIKYA VILLAGE
SARJAPUR
741513 1234
aikyavillage.com
RERA No.: PRM/KA/RERA/1251/446/PR/221123/006419
A new era of design, smart & convertible homes built for the future.

ಭಾನುವಾರ, ಡಿಸೆಂಬರ್ 14, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 344 | ಪುಟ 16
• www.prajavani.net prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಆಹಾರ ಅರಸುತ್ತಾ...



ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟದಲ್ಲಿರುವ ಅಮ್ಮನ ಕೆರೆಗೆ ಆಹಾರ ಅರಸುತ್ತಾ ಬಂದ ಬೂದು ಕೊಕ್ಕರೆ (ಗ್ರೇ ಹೆರಾನ್)

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಶಾಲೆಗೆ ಕಂಪ್ಯೂಟರ್: ₹109 ಕೋಟಿ ನಷ್ಟ 5
ಸ್ಥಳೀಯ ಸಂಸ್ಥೆ ಚುನಾವಣೆ: ಯುಡಿಎಫ್ ಮೇಲುಗೈ 6

ಯುಕೆಪಿಗೆ ಇಚ್ಛಾಶಕ್ತಿ ಕೊರತೆ

ಕೇಂದ್ರ ಸರ್ಕಾರದ ಅಸಹಕಾರ | ರಾಜ್ಯ ಸರ್ಕಾರದ ನಿರ್ಲಕ್ಷ್ಯ ಧೋರಣೆ

ಒಳನೋಟ

• ಜಯಸಿಂಹ ಆರ್.

ಬೆಂಗಳೂರು: ಕೃಷ್ಣಾ ಕೊಳ್ಳದಲ್ಲಿ ಸಂಗ್ರಹವಾಗುವ ಒಟ್ಟು ನೀರಿನಲ್ಲಿ, ಕರ್ನಾಟಕವು 173 ಟಿಎಂಸಿ ಅಡಿಗಳಷ್ಟು ನೀರನ್ನು ಬಳಸಿಕೊಳ್ಳಬಹುದು ಎಂದು ಕೃಷ್ಣಾ ಜಲವಿವಾದ ನ್ಯಾಯಮಂಡಳಿ–2 ತೀರ್ಪಿತ್ತು 15 ವರ್ಷಗಳೇ ಕಳೆದಿವೆ. ಆದರೆ ರಾಜ್ಯದಲ್ಲಿ ಆಡಳಿತ ನಡೆಸಿದ ರಾಜಕೀಯ ಪಕ್ಷಗಳ ಇಚ್ಛಾಶಕ್ತಿಯ ಕೊರತೆ ಮತ್ತು ಕೇಂದ್ರ ಸರ್ಕಾರದ ನಿರ್ಲಕ್ಷ್ಯ ಧೋರಣೆಯ ಕಾರಣಕ್ಕೆ ಈ ಹೆಚ್ಚುವರಿ ನೀರಿನಲ್ಲಿ ಒಂದು ಹನಿಯೂ ರಾಜ್ಯದ ರೈತನ ಹೊಲಗಳಿಗೆ ಹರಿದಿಲ್ಲ.

ಯೋಜನೆ ಅನುಷ್ಠಾನಕ್ಕೆ ಅಗತ್ಯವಿದ್ದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಲ್ಲಿ ಎದುರಾದ ಸಮಸ್ಯೆಗಳನ್ನು ನಿರ್ವಹಿಸುವಲ್ಲಿ ರಾಜ್ಯ ಸರ್ಕಾರಗಳು ಎಡವಿದರೆ, ತಾಂತ್ರಿಕ ಕಾರಣಗಳನ್ನು ಮುಂದೊಡ್ಡಿ ಯೋಜನೆ ಸಂಬಂಧ ಗೆಜೆಟ್ ಅಧಿಸೂಚನೆ ಹೊರಡಿಸದೆ ಕೇಂದ್ರ ಸರ್ಕಾರವು ಕಡೆಗಣಿಸಿತು. ಸರ್ಕಾರಗಳ ನಿರ್ಲಿಪ್ತ ಭಾವನೆಯಿಂದ ರಾಜ್ಯದ ರೈತರು ನ್ಯಾಯವಂಚಿತರಾದರು. 5.95 ಲಕ್ಷ ಹೆಕ್ಟೇರ್‌ಗೆ ನೀರಾವರಿ ಒದಗಿಸಬಹುದಾಗಿದ್ದ ಈ ಯೋಜನೆ ವಿಳಂಬವಾದಷ್ಟೂ ರೈತರ ಬದುಕು ಹಸನಾಗುವುದು ಮುಂದೆ ಹೋಗುತ್ತಿದೆ.

ಕೃಷ್ಣಾ ಜಲವಿವಾದ ಹೊಸತಲ್ಲ. 1956ರಲ್ಲೇ ಆಂಧ್ರಪ್ರದೇಶ ನೀರು ಹಂಚಿಕೆ ಸಂಬಂಧ ತಕರಾರು ದಾಖಲಿಸಿತ್ತು. ಸುಪ್ರೀಂಕೋರ್ಟ್ ಮತ್ತು ಆನಂತರ ರಚನೆಯಾದ ಕೃಷ್ಣಾ ಜಲವಿವಾದ ನ್ಯಾಯಮಂಡಳಿಯು ಕಾಲಕಾಲಕ್ಕೆ ಮಹಾರಾಷ್ಟ್ರ, ಕರ್ನಾಟಕ ಮತ್ತು ಆಂಧ್ರಪ್ರದೇಶಕ್ಕೆ ನೀರು ಹಂಚಿಕೆ ಮಾಡಿ ತೀರ್ಪಿತ್ತಿದೆ. ಆ ಪ್ರಕಾರವೇ ಕರ್ನಾಟಕವು ಕೃಷ್ಣಾ ಮೇಲ್ದಂಡೆ ಹಂತ–1ರ ಕಾಮಗಾರಿ ಮುಗಿಸಿದೆ, ಹಂತ–2ರ ಕಾಮಗಾರಿ ಮುಗಿಯುವ ವಿವಿಧ ಹಂತಗಳಲ್ಲಿ ಇದೆ. ಈ ಮಧ್ಯೆಯೇ ನ್ಯಾಯಮಂಡಳಿಯು ಆಲಮಟ್ಟಿ ಅಣೆಕಟ್ಟೆಯ ಎತ್ತರವನ್ನು 519.6 ಮೀಟರ್‌ಗಳಿಂದ 524.25 ಮೀಟರ್‌ಗಳಿಗೆ ಹೆಚ್ಚಿಸಲು ಹಾಗೂ ಕರ್ನಾಟಕಕ್ಕೆ ಕೃಷ್ಣಾ ಕೊಳ್ಳದ 173 ಟಿಎಂಸಿ ನೀರು ಹಂಚಿಕೆ ಮಾಡಿ 2010ರಲ್ಲೇ ಅಂತಿಮ ತೀರ್ಪು ನೀಡಿತ್ತು.

4



ಆಲಮಟ್ಟಿ ಜಲಾಶಯದ ನೋಟ

ಕೇಂದ್ರದ ಜಾಣ ಕಡೆಗಣನೆ

ಆರಂಭದಿಂದಲೂ ಭೂಸ್ವಾಧೀನ ಮತ್ತು ಸಂಬಂಧಿತ ಪ್ರಕರಣಗಳೇ ಈ ಯೋಜನೆಯ ಬಹುದೊಡ್ಡ ವೈರಿ ಎಂಬಂತೆ ಬಿಂಬಿಸಲಾಯಿತು. ವಾಸ್ತವದಲ್ಲಿ ಯೋಜನೆ ವಿಳಂಬವಾಗುವಲ್ಲಿ ಕೇಂದ್ರ ಸರ್ಕಾರದ ಪಾಲು ಬಹಳ ದೊಡ್ಡದಿದೆ. ನ್ಯಾಯಮಂಡಳಿಯು 2010ರಲ್ಲಿ ತೀರ್ಪು ನೀಡಿದ ಮತ್ತು ಅಣೆಕಟ್ಟೆ ಎತ್ತರವನ್ನು 1956ರ ಮೂಲ ಯೋಜನೆಯಲ್ಲಿ ಇದ್ದಂತೆ 524.25 ಮೀಟರ್‌ಗೆ ಹೆಚ್ಚಿಸಲು ಸುಪ್ರೀಂ ಕೋರ್ಟ್ ಅನುಮತಿ ನೀಡಿದ ನಂತರ ಕೇಂದ್ರ ಸರ್ಕಾರವು ಈ ಸಂಬಂಧ ಅಧಿಸೂಚನೆ ಹೊರಡಿಸಬೇಕಿತ್ತು. ಆದರೆ ಈವರೆಗೆ ಅಂತಹ ಅಧಿಸೂಚನೆ ಹೊರಡಿಸಿಲ್ಲ.

ಕೃಷ್ಣಾ ಜಲವಿವಾದ ನ್ಯಾಯಮಂಡಳಿ–2, 'ಈ ತೀರ್ಪಿನ ಅನುಷ್ಠಾನಕ್ಕಾಗಿ ಕೃಷ್ಣಾ ಜಲ ತೀರ್ಪು ಅನುಷ್ಠಾನ ಮಂಡಳಿ ರಚಿಸಬೇಕು' ಎಂದು ತೀರ್ಪಿನಲ್ಲಿ ಆದೇಶಿಸಿತ್ತು. ಆದರೆ ಈವರೆಗೆ ಅನುಷ್ಠಾನ ಮಂಡಳಿ ರಚನೆಯಾಗಿಲ್ಲ.

2010ರ ತೀರ್ಪಿನ ವಿರುದ್ಧ ಆಂಧ್ರಪ್ರದೇಶ ಸರ್ಕಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ.

4

ಮತ ಕಳವು– ಗುತ್ತೇದಾರ್, ಮಗ ಭಾಗಿ: ಎಸ್‌ಐಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಬುರಗಿಯ ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ನಡೆದಿದ್ದ ಮತ ಕಳವು ಪ್ರಕರಣದಲ್ಲಿ ಮಾಜಿ ಶಾಸಕ, ಬಿಜೆಪಿಯ ಪರಾಜಿತ ಅಭ್ಯರ್ಥಿ ಸುಭಾಷ್ ಗುತ್ತೇದಾರ್, ಅವರ ಮಗ ಹರ್ಷಾನಂದ ಗುತ್ತೇದಾರ್ ಸೇರಿ ಆರು ಮಂದಿ ಭಾಗಿಯಾಗಿರುವುದನ್ನು ಈ ಬಗ್ಗೆ ತನಿಖೆ ನಡೆಸಿದ ಸಿಐಡಿಯ ವಿಶೇಷ ತನಿಖಾ ದಳ (ಎಸ್‌ಐಟಿ) ದೃಢಪಡಿಸಿದೆ.

22 ಸಾವಿರ ಪುಟಗಳಿರುವ ದೋಷಾರೋಪ ಪಟ್ಟಿಯನ್ನು ಇಲ್ಲಿನ ಎಸಿಎಂಎಂ ನ್ಯಾಯಾಲಯಕ್ಕೆ ಶುಕ್ರವಾರ (ಡಿ.12) ತನಿಖಾಧಿಕಾರಿಗಳು ಸಲ್ಲಿಸಿದ್ದಾರೆ. ಅಕ್ರಮ ನಡೆದ ಜಾಡಿನ ಬೆನ್ನುಬಿದ್ದಿದ್ದ ಎಸ್‌ಐಟಿ, ಇವೆಲ್ಲವನ್ನೂ ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಿದೆ ಎಂದು ಗೊತ್ತಾಗಿದೆ.

ಮತ ಕಳವು ಕೃತ್ಯದಲ್ಲಿ ಮಾಜಿ ಶಾಸಕರ ಆಪ್ತ ಸಹಾಯಕ ತಿಪ್ಪೇರುದ್ರ, ಕಲಬುರಗಿಯ ಮೂರು 'ಡೇಟಾ ಸೆಂಟರ್'ಗಳ ನಿರ್ವಾಹಕರಾದ ಅಕ್ರಮ್ ಪಾಷಾ, ಮುಕರ್‌ರಮ್ ಪಾಷಾ ಮತ್ತು ಮೊಹಮ್ಮದ್ ಅಶ್ಫಾಕ್ ಹಾಗೂ ಪಶ್ಚಿಮ ಬಂಗಾಳದ ಬಾಪಿ ಅದ್ಯಾ ಅವರ ಪಾತ್ರ ಇರುವುದೂ ತನಿಖೆ ವೇಳೆ ಪತ್ತೆಯಾಗಿದೆ ಎಂಬುದಾಗಿ ತನಿಖಾಧಿಕಾರಿಗಳು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಿದ್ದಾರೆ.

6

ಚಿನ್ನ (Std. 10g) ₹1,37,920 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,99,500 (ಬೆಂಗಳೂರು)

ಚಿನಕುರುಳಿ ಪ್ರಕಾಶ್ ಶೆಟ್ಟಿ



ಕೋಲ್ಕತ್ತ: ಪ್ರೇಕ್ಷಕರಿಂದ ಕುರ್ಚಿ, ಟೆಂಟ್ ಧ್ವಂಸ • ಮುಖ್ಯ ಆಯೋಜಕನ ಸೆರೆ

ಮೆಸ್ಸಿ ನೋಡಲು ಸಿಗದ್ದಕ್ಕೆ ಆಕ್ರೋಶ

ಕೋಲ್ಕತ್ತ (ಎಎಫ್‌ಪಿ/ಪಿಟಿಐ): ಫುಟ್‌ಬಾಲ್ ದಿಗ್ಗಜ, ಅರ್ಜೆಂಟೀನಾದ ಲಯೊನೆಲ್ ಮೆಸ್ಸಿ ತಮ್ಮ ಕಾರ್ಯಕ್ರಮವನ್ನು ಮೊಟಕುಗೊಳಿಸಿ, ಹಠಾತ್ತನೇ ನಿರ್ಗಮಿಸಿದ್ದರಿಂದ ನಿರಾಸೆಗೊಂಡ ಅವರ ಅಭಿಮಾನಿಗಳು ಆಕ್ರೋಶಗೊಂಡು ದಾಂದಲೆ ನಡೆಸಿದ್ದಕ್ಕೆ ಇಲ್ಲಿನ ಸಾಲ್ಟ್ ಲೇಕ್ ಕ್ರೀಡಾಂಗಣ ಶನಿವಾರ ಸಾಕ್ಷಿಯಾಯಿತು.

ನೂರಾರು ಜನರು ತಡೆಗೋಡೆಗಳನ್ನು ದಾಟಿ ಕ್ರೀಡಾಂಗಣಕ್ಕೆ ನುಗ್ಗಿ, ಪಿಚ್‌ಗೆ ಹಾನಿ ಮಾಡಿದರು. ಸಮೀಪದಲ್ಲಿಯೇ ಅಳವಡಿಸಿದ್ದ ಬ್ಯಾನರ್‌ಗಳು ಹಾಗೂ ಟೆಂಟ್‌ಗಳನ್ನು ಧ್ವಂಸಗೊಳಿಸಿದರು. ಈ ಘಟನೆ ಬೆನ್ನಲ್ಲೇ, ಕಾರ್ಯಕ್ರಮದ ಮುಖ್ಯ ಆಯೋಜಕ ಶತಾದ್ರು ದತ್ತ ಅವರನ್ನು ಬಂಧಿಸಲಾಗಿದೆ ಎಂದು ಡಿಜಿಪಿ ರಾಜೀವ್ ಕುಮಾರ್ ಹೇಳಿದ್ದಾರೆ.

'ಕಾರ್ಯಕ್ರಮವನ್ನು ಸರಿಯಾಗಿ ನಿರ್ವಹಣೆ ಮಾಡದ್ದಕ್ಕಾಗಿ ನನಗೆ ಆಘಾತ ಹಾಗೂ ನೋವಾಗಿದೆ' ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಪ್ರತಿಕ್ರಿಯಿಸಿದ್ದಾರೆ.

'ಈ ದುರದೃಷ್ಟಕರ ಘಟನೆಗಾಗಿ ಮೆಸ್ಸಿ, ಅವರ ಅಭಿಮಾನಿಗಳು ಹಾಗೂ ಕ್ರೀಡಾ ಪ್ರೇಮಿಗಳಲ್ಲಿ ನಾನು ಕ್ಷಮೆ ಕೋರುತ್ತೇನೆ. ಈ ಕುರಿತು ತನಿಖೆಗೆ ಆದೇಶಿಸಲಾಗಿದೆ' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಇನ್ನಷ್ಟು ಸುದ್ದಿಗಳು 12

ಪ್ರಮುಖ ಅಂಶಗಳು

- ಸ್ಟೇಡಿಯಂನಲ್ಲಿ ಅಳವಡಿಸಿದ್ದ ದೊಡ್ಡ ಪರದೆಗಳಲ್ಲಿ ಕೂಡ ಮೆಸ್ಸಿ ಅವರನ್ನು ಸ್ಪಷ್ಟವಾಗಿ ತೋರಿಸಲಿಲ್ಲ– ಜನರ ದೂರು
- ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಬಾಲಿವುಡ್ ನಟ ಶಾರುಕ್ ಖಾನ್, ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಸೌರವ್ ಗಂಗೂಲಿ ಸೇರಿ ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮುಂಜಾನೆ ಮಂಜು ಮುಸುಕಿದ ವಾತಾವರಣ ಇರಲಿದ್ದು, ನಂತರ ಶುಭ್ರ ಆಕಾಶ ಇರಲಿದೆ.

ಮಾರ್ಗಸೂಚಿ ಪಾಲನೆ ನಿರ್ಲಕ್ಷ್ಯಕ್ಕೆ ಹೈಕೋರ್ಟ್ ಅಸಮಾಧಾನ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ವಿವಿಧ ಅಪರಾಧ ಕೃತ್ಯಗಳಲ್ಲಿ ಭಾಗಿಯಾದ ಆರೋಪಿಗಳನ್ನು ಮುಂಜಾಗ್ರತಾ ಕ್ರಮವಾಗಿ ಗೂಂಡಾ ಕಾಯ್ದೆ ಅಡಿ ಬಂಧಿಸುವಾಗ ಅಧಿಕಾರಿಗಳು ಹಳೆಯ ತಪ್ಪುಗಳನ್ನೇ ಮುಂದುವರಿಸುತ್ತಿದ್ದಾರೆ' ಎಂದು ಹೈಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಹುಬ್ಬಳ್ಳಿಯ ದಾವುದ್ ನದಾಫ್ ಎಂಬುವರನ್ನು 2025ರ ಜೂನ್ 3ರಂದು ಹುಬ್ಬಳ್ಳಿ-ಧಾರವಾಡ ಪೊಲೀಸ್ ಆಯುಕ್ತರು ಮುಂಜಾಗ್ರತಾ ಕ್ರಮವಾಗಿ ಬಂಧಿಸಿದ್ದ ಕ್ರಮ ಪ್ರಶ್ನಿಸಿ ಅವರ ಪತ್ನಿ ಪ್ರತಿಭಾ ತಲಪಾಟಿ ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಆರ್.ದೇವದಾಸ್ ನೇತೃತ್ವದ ವಿಭಾಗೀಯ ನ್ಯಾಯಪೀಠ (ಧಾರವಾಡ) ಪೊಲೀಸ್ ಇಲಾಖೆಯ ಕ್ರಮಕ್ಕೆ ತೀವ್ರ ಬೇಸರ ವ್ಯಕ್ತಪಡಿಸಿದೆ.

'ಅಧಿಕಾರಿಗಳ ಸಣ್ಣಪುಟ್ಟ ತಪ್ಪುಗಳಿಂದಾಗಿ ಎದುರಾಗುವ ತಾಂತ್ರಿಕ ಕಾರಣಗಳ ಆಧಾರದಲ್ಲಿ ಬಂಧನಕ್ಕೆ ಒಳಗಾಗುವಂತಹ ಆರೋಪಿಗಳ ಬಿಡುಗಡೆಗೆ ಆದೇಶಿಸಬೇಕಾಗುತ್ತದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಮುಂಜಾಗ್ರತಾ ಕ್ರಮ ವಾಗಿ ಬಂಧನದ ಆದೇಶ ಹೊರಡಿಸುವುದಕ್ಕೆ ಸಂಬಂಧಿಸಿದಂತೆ ನೀಡಲಾಗಿರುವ ಮಾರ್ಗಸೂಚಿಗಳನ್ನು ಸರ್ಕಾರ ಸಂಬಂಧಿಸಿದ ಇಲಾಖೆಗಳಿಗೆ ರವಾನಿಸುವಂತೆ ನ್ಯಾಯಪೀಠ ಇದೇ ವೇಳೆ ನಿರ್ದೇಶಿಸಿದೆ.

ಗೂಂಡಾ ಕಾಯ್ದೆಯಡಿ ಬಂಧಿಸುವಾಗ 13 ಅಂಶಗಳ ಮಾರ್ಗಸೂಚಿ ಪಾಲನೆ ಮಾಡುವಂತೆ ಹೈಕೋರ್ಟ್ 2019ರಲ್ಲಿ ಆದೇಶಿಸಿದೆ.

'ಎ.ಐ ನಮ್ಮ ಜತೆಗಿನ ಸಹಯೋಗಿ'

ಕಂಪ್ಯೂಟರ್ ಭಾಷಾ ವಿಜ್ಞಾನಿ ಕೆ.ಪಿ. ರಾವ್‌ಗೆ 'ಬನ್ನಂಜೆ ಪುರಸ್ಕಾರ' ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದ ಬಗ್ಗೆ ಅನಗತ್ಯ ಆತಂಕ ಪಡುವ ಬದಲು, ಅದು ನಮ್ಮ ಜತೆಗಿನ ಸಹಯೋಗಿಯೆಂದು ಅರಿತು ಸದುಪಯೋಗ ಮಾಡಿಕೊಳ್ಳಬೇಕು' ಎಂದು ಕಂಪ್ಯೂಟರ್ ಭಾಷಾ ವಿಜ್ಞಾನಿ ಕೆ.ಪಿ.ರಾವ್ ಹೇಳಿದರು.

ಬನ್ನಂಜೆ ಗೋವಿಂದಾಚಾರ್ಯ ಪ್ರತಿಷ್ಠಾನ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಆಚಾರ್ಯರ ಐದನೇ ಪುಣ್ಯಾರಾಧನೆ ಕಾರ್ಯಕ್ರಮದಲ್ಲಿ 'ಬನ್ನಂಜೆ ಪುರಸ್ಕಾರ' ಸ್ವೀಕರಿಸಿ ಮಾತನಾಡಿದರು.

'ಕಾಲ ಕಳೆದಂತೆ ಸೌಕರ್ಯದಲ್ಲಿ ಕೂಡ ಸಾಕಷ್ಟು ಬದಲಾವಣೆಯಾಗಿದೆ. ಅದೇ ರೀತಿ, ತಂತ್ರಜ್ಞಾನ ಕ್ಷೇತ್ರವೂ ಹೊಸ ಆಯಾಮಕ್ಕೆ ಹೊರಳಿದೆ. ತಂತ್ರಜ್ಞಾನದ ಬಗ್ಗೆ ನಾವು ಅರಿತು ಸಾಗಬೇಕು. ಕೃತಕ ಬುದ್ಧಿಮತ್ತೆಯಂತಹ ತಂತ್ರಜ್ಞಾನಗಳು ನಮ್ಮನ್ನು ಹೊಸ ರೀತಿಯ ಯೋಚನೆಗಳಿಗೆ ಹಚ್ಚಿ, ಹೊಸ ಅವಕಾಶಗಳನ್ನು ದರ್ಶನ ಮಾಡಿಸುತ್ತಿವೆ. ಇಂತಹ ತಂತ್ರಜ್ಞಾನಗಳನ್ನು ನಾವು ಯಾವ ರೀತಿ ಬಳಸಿಕೊಳ್ಳುತ್ತೇವೆ ಎನ್ನುವುದು ಮುಖ್ಯವಾಗುತ್ತದೆ' ಎಂದು ಅಭಿಪ್ರಾಯಪಟ್ಟರು.

'ಬನ್ನಂಜೆ ಗೋವಿಂದಾಚಾರ್ಯರ ಜತೆಗೆ ಹಲವು ಸಂಗತಿಗಳ ಚರ್ಚಿಸುವ ಅವಕಾಶಗಳು ನನಗೆ ದೊರಕಿದ್ದವು. ಅವರು ನೀಡಿದ ಜ್ಞಾನವು ಎಲ್ಲೆಡೆ ಪಸರಿಸಬೇಕು' ಎಂದರು.

ಪ್ರತಿಷ್ಠಾನದ ಅಧ್ಯಕ್ಷರೂ ಆಗಿರುವ ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್, 'ಗೋವಿಂದಾಚಾರ್ಯ ಅವರು ಸಾಮಾಜಿಕ ಸಂತ. ಅವರು ತೋರಿದ ಮಾರ್ಗ, ನಿರ್ದೇಶನಗಳನ್ನು ಅನುಸರಿಸಬೇಕು' ಎಂದು ಹೇಳಿದರು.

ವಿದ್ವಾಂಸ ವಿನಯ ವಾರಣಾಸಿ ಅವರು 'ಗೋವಿಂದ ನಾಮ ಜಿಜ್ಞಾಸೆ' ವಿಷಯದ ಮೇಲೆ ಉಪನ್ಯಾಸ ನೀಡಿದರು. ಉಡುಪಿಯ ಬನ್ನಂಜೆ ರಾಘವೇಂದ್ರ ಸ್ವಾಮೀಜಿ ಅವರು ಸಾನ್ನಿಧ್ಯ ವಹಿಸಿದ್ದರು. ಬನ್ನಂಜೆ ಗೋವಿಂದಾಚಾರ್ಯ ಅವರ ಪುತ್ರಿ ವೀಣಾ ಬನ್ನಂಜೆ ಉಪಸ್ಥಿತರಿದ್ದರು.



ಕೆ.ಪಿ. ರಾವ್ ಅವರಿಗೆ 'ಬನ್ನಂಜೆ ಪುರಸ್ಕಾರ' ನೀಡಿ ಗೌರವಿಸಲಾಯಿತು. ಮಲ್ಲೇಪುರಂ ಜಿ. ವೆಂಕಟೇಶ್, ಬನ್ನಂಜೆ ರಾಘವೇಂದ್ರ ಸ್ವಾಮೀಜಿ, ವಿನಯ್ ವಾರಣಾಸಿ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ


ಸುದ್ದಿ 2 ನಿಮಿಷ

ಪಿಟಿಸಿಎಲ್ ಪ್ರಕರಣ: 28 ವರ್ಷಗಳ ನಂತರದ ಅರ್ಜಿ ಅಮಾನ್ಯ

ಬೆಂಗಳೂರು: 'ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಮುದಾಯದವರಿಗೆ ಸರ್ಕಾರದಿಂದ ಮಂಜೂರಾದ ಜಮೀನನ್ನು ಮಾರಾಟ ಮಾಡಿದ ಬಳಿಕ ಪರಿಶಿಷ್ಟ ಜಾತಿ ಮತ್ತು ಪಂಗಡಗಳ (ಕೆಲವು) ಜಮೀನುಗಳ ಪರಾಭಾರೆ ನಿರ್ಬಂಧ-ಪಿಟಿಸಿಎಲ್) ಕಾಯ್ದೆಯಡಿ ಮರು ಸ್ಥಾಪನೆ ಕೋರಿ 28 ವರ್ಷಗಳ ಬಳಿಕ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲು ಅವಕಾಶವಿಲ್ಲ' ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

'ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ ಈ ಅವಧಿಯನ್ನು ಸಮಂಜಸ ಅವಧಿ ಎಂದು ಪರಿಗಣಿಸಲು ಆಗದು' ಎಂದು ನ್ಯಾಯಮೂರ್ತಿ ಅನು ಶಿವರಾಮನ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಸರ್ಕಾರದಿಂದ ಮಂಜೂರಾಗಿದ್ದ ಜಮೀನನ್ನು ಮಾರಾಟ ಮಾಡಿದ ಬಳಿಕ ಮತ್ತೆ ಜಮೀನಿನ ಮೇಲೆ ತಮ್ಮ ಹಕ್ಕುಗಳನ್ನು ಪುನರ್‌ಸ್ಥಾಪಿಸಿ ಉಪವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿ ಹೊರಡಿಸಿದ್ದ ಆದೇಶ ರದ್ದುಪಡಿಸಿದ್ದ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಪ್ರಶ್ನಿಸಲಾದ ಮೇಲ್ಮನವಿಯಲ್ಲಿ ಈ ಕುರಿತಂತೆ ಆದೇಶಿಸಲಾಗಿದೆ.



ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿಯ ವಿನೋಬಾ ನಗರದ ನಿವಾಸಿಗಳಾದ ಪೂಜಾರಿ ನಾರಾಯಣಪ್ಪ ಮತ್ತು ಅವರ ವಾರಸುದಾರರು ಸಲ್ಲಿಸಿದ್ದ ಮೇಲ್ಮನವಿಯಲ್ಲಿ ಈ ಕುರಿತಂತೆ ಆದೇಶ ಹೊರಡಿಸಲಾಗಿದೆ.

ಮಂಗಳೂರು, ವಿಜಯಪುರದಲ್ಲಿ ಪ್ಲಾಸ್ಟಿಕ್ ಪಾರ್ಕ್: ಎಂ.ಬಿ. ಪಾಟೀಲ

ಬೆಂಗಳೂರು: ಪ್ಲಾಸ್ಟಿಕ್ ಉದ್ಯಮ ವಲಯದ ಬೆಳವಣಿಗೆಯನ್ನು ಉತ್ತೇಜಿಸಲು ರಾಜ್ಯ ಸರ್ಕಾರವು ಮಂಗಳೂರು ಮತ್ತು ವಿಜಯಪುರದಲ್ಲಿ 200 ಎಕರೆಯಲ್ಲಿ ಸುಸಜ್ಜಿತ ಪ್ಲಾಸ್ಟಿಕ್ ಪಾರ್ಕ್' ಸ್ಥಾಪಿಸಲಿದೆ. ಅರ್ಜಿ ಸಲ್ಲಿಸುವ ಉದ್ಯಮಿಗಳಿಗೆ ಜಮೀನು ಒದಗಿಸಲಾಗುವುದು ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಶನಿವಾರ ನಡೆದ ಪ್ಲಾಸ್ಟ್ ಇಂಡಿಯಾ-2026 ಪ್ರದರ್ಶನ ಮೇಳದ ಪೂರ್ವಭಾವಿ ಉದ್ಘಾಟನಾ ಸಮಾವೇಶದಲ್ಲಿ ಅವರು ಮಾತನಾಡಿದರು.

ದೇಶದಲ್ಲಿ ಪ್ಲಾಸ್ಟಿಕ್ ಉದ್ಯಮವು 40 ಲಕ್ಷ ಜನರಿಗೆ ಉದ್ಯೋಗ ನೀಡಿದೆ. ಮುಂದಿನ ಒಂದು ವರ್ಷದಲ್ಲಿ ಇನ್ನೂ 15 ಲಕ್ಷ ಉದ್ಯೋಗ ಸೃಷ್ಟಿಯಾಗಲಿದೆ. ರಾಜ್ಯದಲ್ಲಿ ಹೂಡಿಕೆದಾರರಿಗೆ ಆದ್ಯತೆ ಇದ್ದು, ಸಮಗ್ರ ಕೈಗಾರಿಕಾ ಬೆಳವಣಿಗೆಯ ಗುರಿ ಇಟ್ಟುಕೊಳ್ಳಲಾಗಿದೆ ಎಂದರು.

12ನೇ ವರ್ಷದ ಅಂತರರಾಷ್ಟ್ರೀಯ ಸಮಾವೇಶವು ಮುಂದಿನ ವರ್ಷ ಫೆ.5ರಿಂದ 10ರವರೆಗೆ ದೆಹಲಿಯ ಭಾರತ ಮಂಟಪದಲ್ಲಿ ನಡೆಯಲಿದೆ.

ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್. ಸೆಲ್ವಕುಮಾರ್, ಪಾಸ್ಟ್ ಇಂಡಿಯಾ ಫೌಂಡೇಶನ್ ಅಧ್ಯಕ್ಷ ರವೀಶ್ ಕಾಮತ್, ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಮುಖ್ಯಸ್ಥ ಅಲೋಕ್ ಟೈಬರ್ವಾಲಾ, ಪ್ಲಾಸ್ಟ್ ಇಂಡಿಯಾ ಫೌಂಡೇಷನ್‌ನ ರಾಷ್ಟ್ರೀಯ ಸಲಹಾ ಮಂಡಳಿಯ ಅಧ್ಯಕ್ಷ ಪ್ರದೀಪ್ ರಾಥೋಡ್ ಉಪಸ್ಥಿತರಿದ್ದರು.

'ನೈಜ ಕಲಾ ಯೋಗಿ ಕ.ವೆಂ. ರಾಜಗೋಪಾಲ್'


ರಂಗಚಿಂತಕನ ಜನ್ಮಶತಮಾನೋತ್ಸವ ಸಮಾರಂಭದಲ್ಲಿ ಸಾಹಿತಿ ಹಂಪನಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಂಗಭೂಮಿ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ ಪ್ರೊ.ಕ.ವೆಂ. ರಾಜಗೋಪಾಲ್ ಅವರು ನೈಜ ಕಲಾ ಯೋಗಿ ಆಗಿದ್ದು, ಕಲಾವಿದರಿಗೆ ಬೆನ್ನು ತಟ್ಟಿ ಪ್ರೋತ್ಸಾಹಿಸಿದ ದೊಡ್ಡ ಚೇತನ' ಎಂದು ಎಂದು ಸಾಹಿತಿ ಹಂಪ ನಾಗರಾಜಯ್ಯ ಹೇಳಿದರು.

ಕರ್ನಾಟಕ ನಾಟಕ ಅಕಾಡೆಮಿ ಮತ್ತು ಪ್ರೊ.ಕ.ವೆಂ. ರಾಜಗೋಪಾಲ್ ಜನ್ಮ ಶತಮಾನೋತ್ಸವ ಸಮಿತಿ ಜಂಟಿಯಾಗಿ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ರಂಗಚಿಂತಕ ಪ್ರೊ.ಕ.ವೆಂ. ರಾಜಗೋಪಾಲ್ ಅವರ ಜನ್ಮಶತಮಾನೋತ್ಸವ ಸಮಾರಂಭ ಉದ್ಘಾಟಿಸಿ, ಮಾತನಾಡಿದರು.

'ಕನ್ನಡ ರಂಗಭೂಮಿಯಷ್ಟೇ ಅಲ್ಲ, ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೂ ರಾಜಗೋಪಾಲ್ ಅವರು ದೊಡ್ಡ ಸಂತರಾಗಿದ್ದರು. ಸಾಹಿತಿ, ಕವಿ, ನಾಟಕ ನಿರ್ದೇಶಕ ಹಾಗೂ ನಾಟಕಕಾರನಾಗಿ ಕೊಡುಗೆ ನೀಡಿದ್ದಾರೆ. ಪ್ರಗತಿಪರ ಚಿಂತನೆಯಲ್ಲಿ ಮುಂಚೂಣಿಯಲ್ಲಿದ್ದ ಅವರು, ಅನೇಕ ವಿದ್ಯಾರ್ಥಿಗಳನ್ನು ರಂಗ ಚಳವಳಿಯ ಜತೆಗೆ ಸಾಮಾಜಿಕ ಚಳವಳಿಗೂ ತಂದಿದ್ದರು' ಎಂದು ಅಭಿಪ್ರಾಯಪಟ್ಟರು.



ಕಾರ್ಯಕ್ರಮದಲ್ಲಿ ಪ್ರೊ.ಕ.ವೆಂ. ರಾಜಗೋಪಾಲ್ ಅವರ ಭಾವಚಿತ್ರಕ್ಕೆ ರವೀಂದ್ರನಾಥ ಸಿರಿವರ, ಹಂಪ ನಾಗರಾಜಯ್ಯ, ಕೆ. ಮರುಳಸಿದ್ದಪ್ಪ, ಕೆ.ವಿ. ನಾಗರಾಜಮೂರ್ತಿ, ಜಗದೀಶ್ ಜಾಲ ಹಾಗೂ ಬಿ. ನೀಲಮ್ಮ ಅವರು ಪುಷ್ಪ ನಮನ ಸಲ್ಲಿಸಿದರು

ಸಾಹಿತಿ ಕೆ. ಮರುಳಸಿದ್ದಪ್ಪ, 'ಬೆಂಗಳೂರು ವಿಶ್ವವಿದ್ಯಾಲಯವು ರಂಗಭೂಮಿ, ಸಂಸ್ಕೃತಿ ಹಾಗೂ ನೃತ್ಯದಲ್ಲಿ ಏನಾದರೂ ಹೆಸರುಗಳಿಸಿದ್ದರೆ ಅದಕ್ಕೆ ಕ.ವೆಂ. ರಾಜಗೋಪಾಲ ಅವರ ಕೊಡುಗೆ ಹೆಚ್ಚಿದೆ. ಎಂಇಎಸ್ ಮತ್ತು ನ್ಯಾಷನಲ್ ಕಾಲೇಜಿನಲ್ಲಿ ರಂಗಭೂಮಿಯ ಗೀಳು ಹತ್ತಿಸಿ, ಕಾಲೇಜು ರಂಗಭೂಮಿ ಅತ್ಯಂತ ಸುಭದ್ರವಾಗಿ ರಾಜ್ಯದಲ್ಲಿ ನೆಲೆಯೂರಲು ಕಾರಣರಾದರು' ಎಂದು ಹೇಳಿದರು.

ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, 'ಕ.ವೆಂ. ರಾಜಗೋಪಾಲರ ಶತಮಾನೋತ್ಸವವನ್ನು ಮುಂದಿನ ಒಂದು ವರ್ಷ ಆಚರಿಸಲಾಗುತ್ತಿದ್ದು, ಮುಂದಿನ ತಿಂಗಳು ಕನ್ನಡ ಪುಸ್ತಕ ಪ್ರಾಧಿಕಾರದ ಸಹಯೋಗದಲ್ಲಿ ಕ.ವೆಂ. ರಾಜಗೋಪಾಲರ ಸಮಗ್ರ ನಾಟಕ ಸಾಹಿತ್ಯ ಮತ್ತು ಅನುವಾದ ಸಾಹಿತ್ಯ ಸಂಪುಟ ಅನಾವರಣ ಮಾಡಲಾಗುವುದು. ಮೈಸೂರು, ಗೌರಿಬಿದನೂರು, ಕೋಲಾರ, ಬಳ್ಳಾರಿ, ಮಂಗಳೂರು ಮತ್ತು ಕೊಡಗಿನಲ್ಲಿ ರಾಜಗೋಪಾಲ ಅವರ ಶತಮಾನೋತ್ಸವದ ವಿಶೇಷ ಕಾರ್ಯಕ್ರಮ ಆಯೋಜಿಸಲಾಗುವುದು' ಎಂದರು.

ಸಾರ್ವಜನಿಕ ಪ್ರಕಟಣೆ

ನಾವು, ಈ ಕೆಳಗೆ ವಿವರಿಸಿರುವ ಮಾಲೀಕರಿಗೆ ಸೇರಿದ ಬೆಂಗಳೂರು, ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕು, ಯಲಹಂಕ ಹೋಬಳಿ, ಅಮೃತಹಳ್ಳಿ ಗ್ರಾಮದ ಈ ಕೆಳಗೆ ಐಟಂ ನಂ. 1ರಿಂದ 10 ರಲ್ಲಿ ವಿವರಿಸಿರುವ ಒಟ್ಟು ವಿಸ್ತೀರ್ಣ 4 ಎಕರೆ 12.36 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಹಾಗು ಇನ್ನು ಮುಂದೆ "ಷೆಡ್ಯೂಲ್ ಸ್ವತ್ತು" ಎಂದು ಕರೆಯಲ್ಪಡುವ ಸ್ವತ್ತುಗಳ ಮಾಲೀಕತ್ವದ (ಶೀರ್ಷಿಕೆ) ದಾಖಲೆಗಳನ್ನು ಪರಿಶೀಲಿಸುತ್ತಿದ್ದೇವೆ.

ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಅಥವಾ ಅದರ ಯಾವುದೇ ಭಾಗಶಃ ಸ್ವತ್ತಿನ ಮೇಲೆ ಯಾವುದೇ ರೀತಿಯಲ್ಲಿ ಹಕ್ಕು ಪ್ರತಿಪಾದನೆ, ಮಾಲೀಕತ್ವ, ಆಸಕ್ತಿ ಹೊಂದಿರುವ ಅಥವಾ ಅವುಗಳ ದಾಖಲೆಗಳ ಬಗ್ಗೆ ಅಥವಾ ಮಾಲೀಕರ ವಿರುದ್ಧ ಯಾವುದೇ ರೀತಿಯಲ್ಲಿ ಹಕ್ಕು ಪ್ರತಿಪಾದನೆ ಮಾಡಲಿಚ್ಛಿಸುವ ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳು ಇದ್ದಲ್ಲಿ ಅಥವಾ ಸದರಿ ಸ್ವತ್ತಿನ ವಿರುದ್ಧ ಆಕ್ಷೇಪಣೆ ಇದ್ದಲ್ಲಿ, ತಾವು ಯಾವ ಆಧಾರದ ಮೇಲೆ ಅಂತಹ ಹಕ್ಕು ಪ್ರತಿಪಾದನೆ, ಮಾಲೀಕತ್ವ, ಆಸಕ್ತಿ ಹೊಂದಿದ್ದಾರೆ ಎಂಬುದರ ಬಗ್ಗೆ ಅಸಲಿ ಅಥವಾ ಇನ್ನಾವುದೇ ದಾಖಲೆ/ಗಳ ಸಹಿತ, ಈ ಸಾರ್ವಜನಿಕ ಸೂಚನೆ ಪ್ರಕಟಗೊಂಡ ಹದಿನೈದು (15) ದಿನಗಳೊಳಗೆ ಕೆಳಗೆ ಸಹಿ ಮಾಡಿರುವವರಿಗೆ ಲಿಖಿತ ರೂಪದಲ್ಲಿ ತಿಳಿಸಬೇಕು. ತದನಂತರ, ಯಾವುದೇ ನೈಜವಾದ ಹಾಗು ನ್ಯಾಯಸಮ್ಮತ ಆಕ್ಷೇಪಣೆಗಳು ಇಲ್ಲದಿದ್ದಲ್ಲಿ, ನಾವು ಯಾವುದೇ ಆಕ್ಷೇಪಣೆ ಅಥವಾ ಹಕ್ಕು ಪ್ರತಿಪಾದನೆಗಳು ಬಿಟ್ಟುಬಿಡಲಾಗಿದೆ ಎಂದು ಪರಿಗಣಿಸಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಶೀರ್ಷಿಕೆ ಅಭಿಪ್ರಾಯವನ್ನು (ಲೀಗಲ್ ಒಪಿನಿಯನ್) ನೀಡುತ್ತೇವೆ ಹಾಗು ನಮ್ಮ ಕಕ್ಷಿದಾರರು ಪ್ರಸ್ತಾಪಿತ ವ್ಯವಹಾರವನ್ನು ಅಂತಿಮಗೊಳಿಸಿ ಮುಂದುವರೆಯುವರು.

ಷೆಡ್ಯೂಲ್ ಸ್ವತ್ತು

ಬೆಂಗಳೂರು, ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕು, ಯಲಹಂಕ ಹೋಬಳಿ, ಅಮೃತಹಳ್ಳಿ ಗ್ರಾಮದ ಈ ಕೆಳಗೆ ಐಟಂ ನಂ.1 ರಿಂದ 10 ರವರೆಗೆ ಚೆಕ್ಕುಬಂದಿಯೊಂದಿಗೆ ವಿವರಿಸಿರುವ ಒಟ್ಟು ವಿಸ್ತೀರ್ಣ 4 ಎಕರೆ 12.36 ಗುಂಟೆ ಜಮೀನು:

ಐಟಂ ನಂ.	ಸರ್ವೆ ನಂಬರು	ವಿಸ್ತೀರ್ಣ ಎಕರೆ	ವಿಸ್ತೀರ್ಣ ಗುಂಟೆ	ಮಾಲೀಕರ ಹೆಸರು	ಚೆಕ್ಕುಬಂದಿ ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1.	106/1		4.5	ಎನ್.ಬಿ.ಡಿ.ಆಫೀಸ್ ಪಾರ್ಕ್ ಎಲ್.ಎಲ್.ಪಿ ಹಾಗು ಶ್ರೀಮತಿ ಪ್ರೇಮ	ಸರ್ವೆ ನಂ. 106/10	ಸರ್ವೆ ನಂ. 106/10	ಸರ್ವೆ ನಂ. 106/10	ಸರ್ವೆನಂ. 106/13 ಹಾಗು 106/6
2.	106/10		20.13		ಸರ್ವೆ ನಂ. 106/2	ಬಳ್ಳಾರಿ ರಸ್ತೆ (ಎನ್. ಹೆಚ್.7)	ಸರ್ವೆ ನಂ. 106/11	ಸರ್ವೆ ನಂ. 106/1 ಹಾಗು 106/6
3.	106/11		14.94		ಸರ್ವೆ ನಂ. 106/2	ಬಳ್ಳಾರಿ ರಸ್ತೆ (ಎನ್. ಹೆಚ್.7)	ಸರ್ವೆ ನಂ. 106/12	ಸರ್ವೆ ನಂ. 106/10
4.	106/12		14.94		ಸರ್ವೆ ನಂ. 106/2	ಬಳ್ಳಾರಿ ರಸ್ತೆ (ಎನ್. ಹೆಚ್.7)	ಸರ್ವೆನಂ. 107/8, 107/6, 108/2 ಹಾಗು 108/1	ಸರ್ವೆ ನಂ. 106/10
5.	106/2		14.94	ಸಿ.ವಿ. ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್	ಸರ್ವೆ ನಂ. 106/3	ಸರ್ವೆನಂ. 106/10, 106/11 ಹಾಗು 106/12	ಸರ್ವೆ ನಂ. 108/1	ಸರ್ವೆ ನಂ. 106/6
6.	108/2	1	28	ಸಿಟ್ರಸ್ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್	ಸರ್ವೆ ನಂ. 108/1	ಸರ್ವೆ ನಂ. 107/6 ಹಾಗು 107/7	ಸರ್ವೆ ನಂ. 108/1	ಸರ್ವೆ ನಂ. 106/12
7.	107/5		10		ಸರ್ವೆ ನಂ. 107/6	ಸರ್ವೆ ನಂ. 107/4	ಸರ್ವೆ ನಂ. 107/3	ಸರ್ವೆ ನಂ. 107/8
8.	107/6		17		ಸರ್ವೆನಂ. 107/7 ಹಾಗು 108/2	ಸರ್ವೆ ನಂ. 107/5	ಸರ್ವೆ ನಂ. 107/3	ಸರ್ವೆ ನಂ. 106/12
9.	107/7		16		ಸರ್ವೆ ನಂ. 108/2	ಸರ್ವೆ ನಂ. 107/6	ಸರ್ವೆ ನಂ. 107/3	ಸರ್ವೆ ನಂ. 108/2
10.	107/8		6		ಸರ್ವೆ ನಂ. 106/12	ಬಳ್ಳಾರಿ ರಸ್ತೆ (ಎನ್. ಹೆಚ್.7)	ಸರ್ವೆನಂ. 107/4 ಹಾಗು 107/5	ಸರ್ವೆ ನಂ. 106/12

ದಿನಾಂಕ: 13.12.2025 ಸ್ಥಳ: ಬೆಂಗಳೂರು

ಜೆರಾಲ್ಡ್ ಮನೋಹರನ್, ಪಾಲುದಾರರು, ಜೆ.ಎಸ್.ಎ, ವಕೀಲರು, 18ನೇ ಮಹಡಿ, ಎಸ್.ಕೆ.ಎ.ವಿ 909, ನಂ.9/1, ರೆಸಿಡೆನ್ಸಿ ರಸ್ತೆ, ರಿಚ್ಮಂಡ್ ಸರ್ಕಲ್, ಬೆಂಗಳೂರು – 560 001.
ದೂ: 080–43503600/080–43503610. ಇ–ಮೇಲ್: gerald@jsalaw.com

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business to Business

Business

VENUSCAST
THE POWER OF DIGITAL. BEAUTIFULLY DELIVERED.
Best Branding Solutions
OUR SERVICES
- Branding
- Digital
- Social Media Marketing
- Bus Back & Auto Back
- Hoardings
- No Parking Boards
- Flyers
- Four & Three Wheeler

Branding Solutions for Corporates, Government Dept., Educational Institutions, boutiques, Jewellery and All Business Needs.

CONTACT
VENUSCAST TECHNOLOGIES PVT. LTD.
9482303339
8722123445
9838123445
www.venuscast.com
UAE & INDIA

WANTED INVESTORS For Real Estate Project with immediate Good Returns in Bangalore. Contact:7892876392/ 9480043463

Business Offers

AVIATION COURSES

AVIATION COURSES. Job Guaranteed. Cabin Crew/ Ground Handling/ Cargo. Six Months Classes. Non Graduates Also Eligible. Dr. Swamy 'ARUNANDS AVIATION':- 9342247637.

PERSONAL

Change of Name

I, CARUNIA SELLAVARA, have changed my name to CHELLAVARA CARUNIA, vide affidavit dated 12/12/2025 before notary M. Rajendra, Bangalore.

CHANGE OF NAME
I, **ARVIND SHARMA & ARVIND KUMAR SHARMA** S/o Harindar Sharma, residing at # 09, Sizzle SM Spring Field, Kammasandra Village, Bidarahalli Post, Bengaluru - 560049, declare that the above names pertain to me only. Henceforth I shall be known as **ARVIND SHARMA**, vide affidavit 11.12.2025 before notary Udaykumar K, Bengaluru.

CHANGE OF NAME
I, **Gopadi Subbarao Nagaraj Upadhyaya, G S Nagaraj Upadhyaya** S/o G S Subba Rao, residing at No.1529/1, B S Road, Turuvekere -572227 Tumkur Dist., have changed my name to **G S NAGARAJ UPADHYA** vide affidavit dated 27.11.2025 before notary Eshwaar, Turuvekere.

JOB OPPORTUNITIES

Accounts & Finance

WANTED EXPERIENCED ACCOUNTANTS (Male)for dealing Income Tax Matters. Salary.Rs.25000 to Rs.40000.pm. Contact: G.Subramaniam BIMS Consulting Group Near Shivananda Circle. (9448575683) bimsconsult@yahoo.com

Part-Time Jobs

PART-TIME JOB, Android smart phone mandatory. Only WhatsApp on: 7019246661.

Teachers/ Professors

TEACHER -1) NTT trained-KG section2) DEd/BEd qualified-Primary. Ph-8217227181, mail-imageenglishschool@gmail.com

SJES GROUP OF INSTITUTION, Old Madras, Medahalli, Bengaluru-49 required 1)ASSISTANT PROFESSOR MANAGEMENT 2)ASSISTANT PROFESSOR COMMERCE 3)ASSISTANT PROFESSOR COMPUTER APPLICATION. 4)PROFESSOR MANAGEMENT, Contact: 9774184433 Apply rohitrith@yahoo.co.in

MORE Classifieds Ads on Subsequent Pages

Deccan International School
#11, 18th Main Rd, Brindavan Layout, Padmanabhanagar, Bengaluru, Karnataka 560061

JOB OPPORTUNITY

Positions open

- **Cambridge**
  Qualification - Cambridge Trained & certified teacher with B.Ed.
  - Primary Teachers (English, Maths, Science)
  - Computer Science Teachers (IGCSE, AS & A Level)
  - Economics & Business Studies Teachers (IGCSE, AS & A Level)
- **ICSE**
  Qualification - Bachelors/Masters with B.Ed.
  - Primary Teachers (English, Maths, Science & Kannada)
  - High School English teacher
- **ICSE & Cambridge**
  - Primary & Middle School Hindi Teacher
    Qualification - Bachelors/Masters with B.Ed.
  - Biology Teacher
    Grades - IGCSE, AS & A Level
    Qualification - Cambridge Trained & Certified teacher with B.Ed.
  - Middle & High School Teacher (French and AI & Robotics)
    Grades - 6 to 10
    Qualification - Masters with B.Ed.
  - Senior School History Teacher
    Grades - 9 & Above
    Qualification - Masters with B.Ed.
  - High School Art Teacher
    Qualification - BFA or MFA
- **Early Years, Middle & High School**
  - Physical Education Teacher
    Qualification - Bachelors with B.Ed.
  - Lab Assistant
    Qualification - Graduate with lab experience in school

Minimum 3 to 5 years of relevant experience is mandatory.
✓ Attractive compensation package commensurate with qualification & experience.
✓ We are equal opportunity employer.
Candidates are required to forward the CV with their photograph
work@deccan.edu.in

HIRING
AIMS INSTITUTES Peenya, Bengaluru
AIMS EMPOWERING MINDS

Applications are invited from qualified candidates for the following faculty and non-teaching positions.

*Preferences will be given to SC/ST candidates.

Faulty Members Required in the Department of Business, Commerce, IT, and Hospitality, for the positions of Assistant Professor / Associate Professor / Professor.

Non-Teaching positions are: Procurement Officer, Placement Executive, etc.

Qualifications are as per UGC/AICTE/State Government norms. Interested candidates can send resume to hr@theaims.ac.in.

www.theaims.ac.in

Marketing & Sales

WANTED EXPERIENCED marketing executive Vinayaka digital press Offset digital packaging Doddakallasandra bangalore 9972999959

WANTED: PARTTIME Field Marketing Trainees with Good Communication Skills, Mobile phone &Two Wheeler .Contact :9844019120.

Wanted

WANTED EXPERIENCED Dhobis for a laundry washing unit in Bannerghatta, Bangalore Salary : 18,000 to 25,000 Call: 9880266007 / 8050666007

Multiple Vacancy

REQUIRED
FOR UPCOMING SANITARYWARE SHOWROOM
AT RAJAJI NAGAR, BANGALORE
EXPERIENCED SHOWROOM MANAGER AND SALES PERSONS WITH TALLY KNOWLEDGE
EXPERIENCED STOREKEEPER WITH TALLY KNOWLEDGE
SEND RESUME BY WHATSAPP / EMAIL TO NARESHKUMAR
9500072626
trishlache@gmail.com

रेल विकास निगम लिमिटेड
Rail Vikas Nigam Limited
गुणवत्ता, गति एवं पारदर्शिता
(A Government of India Enterprise)

TENDER NOTICE
Office of Chief Project Manager, Rail Vikas Nigam Ltd., Mylapore, Chennai 600 004.
Tender No: MDUTN_MEJNCJ-FOB-PL-OT-19 Dated : 08-12-2025
e-Procurement

1) Name of Work : **MDU-TN and MEJ-NCJ Doubling Project - Provision of Stainless-Steel FOB at Tutimelur station, Steel FOB & Platform IRS type Shelter at platform no.1, 2 & 3 and Extn. of Passenger FOB to the new PF no.6 at Tirunelveli Junction;** 2) Mode of Bid Submission : e-tendering **https://www.ireps.gov.in;** 3) Estimated Cost: **Rs. 10.58 Cr.** ; 4) Time of completion: **12 months + DLP 180 Days; 5)** EMD to be submitted online: **₹ 21,17,800/- ; 6)** Date / Time of publication of tender on website : **08/12/2025 @ 18:08 ; 7) Last Date / Time of Bid Submission: 30/12/2025 @ 11:00 ; 8)** Date / Time of opening of bid : **30/12/2025 @ 11.30** ; 9) Bid Submission : Through Online only - **https://www.ireps.gov.in** ; 10) Phone No. : **044-24618460**

ಕಲೇಸಂ: ಚುನಾವಣೆ ಇಂದು

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷ ಸ್ಥಾನಕ್ಕೆ ಲೇಖಕಿಯರಾದ ಆರ್. ಸುನಂದಮ್ಮ ಮತ್ತು ನಿರ್ಮಲಾ ಸಿ. ಎಲಿಗಾರ್ ಸ್ಪರ್ಧಿಸಿದ್ದು, ಶಂಕರಪುರದಲ್ಲಿರುವ ಅಶೋಕ ಶಿಶುವಿಹಾರದಲ್ಲಿ ಭಾನುವಾರ ಬೆಳಿಗ್ಗೆ 10ರಿಂದ ಸಂಜೆ 4 ಗಂಟೆಯವರೆಗೆ ಮತದಾನ ನಡೆಯಲಿದೆ.

ರಾಜ್ಯದಾದ್ಯಂತ 1,600 ಮತದಾರರಿದ್ದಾರೆ. ಇವರಲ್ಲಿ ಬೆಂಗಳೂರು ಹೊರತುಪಡಿಸಿ, ಇತರೆ ಜಿಲ್ಲೆಗಳಿಂದ ಅಂಚೆ ಮೂಲಕ ಮತದಾನ ನಡೆದಿದೆ. ಬೆಂಗಳೂರಿನಲ್ಲಿ 700 ಮತದಾರರು ಇದ್ದು, ಭಾನುವಾರ ಮತದಾನ ನಡೆಯಲಿದೆ.

ಸಂಜೆ ಫಲಿತಾಂಶ ಪ್ರಕಟಗೊಳ್ಳಲಿದೆ ಎಂದು ಚುನಾವಣಾಧಿಕಾರಿ ಆರ್. ಪ್ರತಿಭಾ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಚಿಕ್ಕಬಳ್ಳಾಪುರ ವಿಭಾಗ : ಚಿಕ್ಕಬಳ್ಳಾಪುರ

ಸಂ: ಕರಾಸಾ/ಚಿಬವಿ/ಸಂ/ವಾ/2075&2076/2025–26 ದಿನಾಂಕ: 12.12.2025

ಇ–ಟೆಂಡರ್ /ಸಂಧಾನ ಪ್ರಕಟಣೆ

ಚಿಕ್ಕಬಳ್ಳಾಪುರ ವಿಭಾಗದ ವ್ಯಾಪ್ತಿಯ ಚಿಕ್ಕಬಳ್ಳಾಪುರ, ಚಿಂತಾಮಣಿ, ಶಿಡ್ಲಘಟ್ಟ ಮುಖ್ಯ, ಶಿಡ್ಲಘಟ್ಟ ಮಿನಿ, ಬಾಗೇಪಲ್ಲಿ, ಗುಡಿಬಂಡೆ ಹಾಗೂ ಗೌರಿಬಿದನೂರು ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ & ಖಾಲಿಯಾಗುವ ವಾಣಿಜ್ಯ ಮಳಿಗೆಗಳಿಗೆ ಹಾಗೂ ಜಾಹೀರಾತು ಹೋರ್ಡಿಂಗ್ಸ್ ಪ್ಯಾಕೇಜ್‌ಗಳಿಗೆ ಪರವಾನಿಗೆದಾರರನ್ನು ಆಯ್ಕೆ ಮಾಡಲು ದಿನಾಂಕ:15.12.2025 ರಿಂದ ಇ–ಟೆಂಡರ್/ಸಂಧಾನ ಪ್ರಕಟಣೆಯ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಇ–ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್ https://kppp.karnataka.gov.in ನಿಂದ ಡೌನಲೋಡ್ ಮಾಡಿಕೊಳ್ಳಬಹುದಾಗಿದೆ. ದಿನಾಂಕ:05.01.2026 ರ 17:00 ಗಂಟೆಗೆ ಆನ್ ಲೈನ್ ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕವಾಗಿರುತ್ತದೆ ಮತ್ತು ಇ–ಟೆಂಡರ್ ಡಿಡಿ (ಅರ್ಜಿ ಶುಲ್ಕ/ ಇ.ಎಂ.ಡಿ ಮೂಲ ಡಿ.ಡಿ)/ದಾಖಲಾತಿಗಳನ್ನು ದಿನಾಂಕ:06.01.2026 ಮತ್ತು 07.01.2026 ರಂದು ಸಮಯ 10.00 ರಿಂದ ಸಮಯ 17.00 ಗಂಟೆಯವರೆಗಿನ ಅವಧಿಯಲ್ಲಿ ಈ ಕಛೇರಿಯಲ್ಲಿ ಸ್ವೀಕರಿಸಲಾಗುವುದು. ದಿನಾಂಕ:08.01.2026 ರಂದು ಬೆಳಿಗ್ಗೆ 10.01 ಘಂಟೆಗೆ ಇ–ಟೆಂಡರ್‌ನ ತಾಂತ್ರಿಕ ಬಿಡ್ ಹಾಗೂ ದಿನಾಂಕ:09.01.2026 ರಂದು ಬೆಳಿಗ್ಗೆ 10.01 ಘಂಟೆಗೆ ಇ–ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನವಾಗಿರುತ್ತದೆ.

ಸಂಧಾನದ ಅರ್ಜಿ ಫಾರಂ, ಷರತ್ತು / ನಿಯಮಾವಳಿಗಳನ್ನು ದಿನಾಂಕ:05.01.2026 ರ 15.00 ಗಂಟೆಯವರೆಗೆ ಈ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿಗಮ, ಚಿಕ್ಕಬಳ್ಳಾಪುರ ವಿಭಾಗ ಇವರ ಕಛೇರಿಯಲ್ಲಿ ದಿನಾಂಕ:06.01.2026 ರಂದು ಸಮಯ 11.30 ಗಂಟೆಗೆ ನಡೆಯಲಿರುವ ಸಂಧಾನದಲ್ಲಿ ಭಾಗವಹಿಸಿ, ನಿಗಮದ ನಿಯಮಗಳನ್ನು ಪಾಲಿಸಿ ಪರವಾನಿಗೆದಾರರಾಗಿ ಆಯ್ಕೆಯಾಗಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕರಾರಸಾ ನಿಗಮ, ಚಿಕ್ಕಬಳ್ಳಾಪುರ ವಿಭಾಗ ರವರ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ವಿಭಾಗೀಯ ಸಂಚಲನಾಧಿಕಾರಿ ಮೊಬೈಲ್ ಸಂ.7760990352.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿ, ಚಿಕ್ಕಬಳ್ಳಾಪುರ ವಿಭಾಗ

DIPR/CP/4441/NR/2025-26

PUBLIC NOTICE

The General Public is hereby put to Notice that, **MECH INDUSTRIES (P) LTD.,** Represented by its **Chairman / M.D Mr.PANKAJ GARG,** S/o.Sri R.S Agarwal, residing at No.43/1, Kothnur Dinne, B.K Circle, Uttarahalli Hobli, Bangalore – 560076, represents that it is the absolute owner of the below mentioned Schedule Property and my client intends to purchase the Schedule Property from the aforesaid owner.

Any person having any right, title, claim or interest in the Schedule Property must notify the undersigned with documentary proof thereof within Seven (07) days of this publication. In case no such notice is received by us within Seven (07) days from the date of publication of this notice, it shall be presumed that the title of the aforesaid owner with respect to the Schedule Property is clear, marketable and free from encumbrance/s of any kind whatsoever and no person has any right, title or interest of any nature whatsoever in respect of the Schedule Property or any part thereof. Claims or alleged interest, if any, which are not received within Seven (07) days from the date of publication of this notice shall be deemed to have been waived and disregarded for all intents and purposes and shall not be binding on my client.

SCHEDULE PROPERTY

Item No.1: All that piece and parcel of Property bearing No.30, old Katha No.10/3, New Bommanahalli CMC Katha No.320, Property No.30/10/3, measuring East to West 80 feet and North to South 50 feet, in all measuring 4000 Sq feet, situated at Kothanuru Village, Uttarahalli Hobli, Bangalore South Taluk, Bangalore District and bounded on: **East by :** Private Property; **West by :** Road; **North by :** Property No.29; **South by :** Property No.31.

Item No.2: All that piece and parcel of Property bearing No.29, old Katha No.10/3, New Bommanahalli CMC Katha No.182, Property No.29/10/3, measuring East to West 80 feet and North to South 50 feet, in all measuring 4000 Sq feet, situated at Kothanuru Village, Uttarahalli Hobli, Bangalore South Taluk, Bangalore District and bounded on:- **East by :** Private Property; **West by :** Road; **North by :** Property No.28; **South by :** Property No.30.

G.V.Sudhakar, Advocate
No.346, New No.35, 12th Cross, 7th Main,
2nd Block, Jayanagar, Bangalore – 560 011.

‘ಸರ್ಕಾರ ಅಪಾರ್ಟ್‌ಮೆಂಟ್ ನಿವಾಸಿಗಳ ಪರ’

ಅಪಾರ್ಟ್‌ಮೆಂಟ್ ಅಸೋಸಿಯೇಷನ್‌ಗಳ ಪ್ರತಿನಿಧಿಗಳೊಂದಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಂವಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪಾರ್ಟ್‌ಮೆಂಟ್ ನಿವಾಸಿಗಳು ಹಾಗೂ ಮನೆ ಖರೀದಿದಾರರ ಪರವಾಗಿ ಸರ್ಕಾರ ನಿಲ್ಲುತ್ತದೆ. ಅದಕ್ಕಾಗಿ ‘ಕರ್ನಾಟಕ ಅಪಾರ್ಟ್‌ಮೆಂಟ್ ಮಾಲೀಕತ್ವ ಮತ್ತು ನಿರ್ವಹಣೆ ಮಸೂದೆ- 2025’ ಸಿದ್ಧಪಡಿಸಲಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಮಸೂದೆ ಬಗ್ಗೆ ಅಪಾರ್ಟ್‌ಮೆಂಟ್ ಅಸೋಸಿಯೇಷನ್‌ಗಳ ಪ್ರತಿನಿಧಿಗಳೊಂದಿಗೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಶನಿವಾರ ಅವರು ಸಂವಾದ ನಡೆಸಿದರು.

‘ಈ ಸಂವಾದ ಕಾರ್ಯಕ್ರಮದಲ್ಲಿ ಸಲಹೆ ನೀಡಲು ಸಾಧ್ಯವಾಗದವರು ಇ-ಮೇಲ್ ಮಾಡಬಹುದು. 10 ದಿನಗಳಲ್ಲಿ ಸಲಹೆ ಕಳುಹಿಸಿ. ನಾನು ಎಲ್ಲವನ್ನು ಪರಿಶೀಲಿಸುತ್ತೇನೆ. ಇಲ್ಲೂ ಸಲಹೆ, ಸಮಸ್ಯೆಗಳನ್ನು ಆಲಿಸಿದ್ದೇನೆ. ನಿಮ್ಮ ಸಲಹೆಗಳು ಅತ್ಯುತ್ತಮವಾಗಿವೆ. ನಿಮ್ಮ ಸಮಸ್ಯೆಗಳ ಬಗ್ಗೆ ಅರಿವಿದೆ. ನಾನೂ ಅಪಾರ್ಟ್‌ಮೆಂಟ್‌ಗಳನ್ನು ಹೊಂದಿದ್ದೇನೆ. ನಿಮ್ಮ ಜೊತೆ ನಿಂತು, ಸಮಸ್ಯೆ ಪರಿಹರಿಸಲು ಬದ್ಧನಾಗಿದ್ದೇನೆ. ಈ ಸರ್ಕಾರ ನನ್ನದಲ್ಲ, ನಿಮ್ಮದು’ ಎಂದು ತಿಳಿಸಿದರು.

‘ಬೆಂಗಳೂರು ಬಹಳ ದೊಡ್ಡದಾಗಿ ಬೆಳೆದಿದ್ದು, ಉತ್ತಮ ಆಡಳಿತ ನೀಡಬೇಕು ಎಂಬ ಉದ್ದೇಶದಿಂದ ಜಿಬಿಎ ರಚನೆ ಮಾಡಿದ್ದೇವೆ. 25 ವರ್ಷಗಳ ಹಿಂದೆ ನಾನು ನಗರಾಭಿವೃದ್ಧಿ ಸಚಿವನಾಗಿದ್ದಾಗ ಬೆಂಗಳೂರಿನ ಜನಸಂಖ್ಯೆ 70 ಲಕ್ಷ ಇತ್ತು. ಈಗ ಅದು 1.40 ಕೋಟಿಗೆ ಏರಿಕೆಯಾಗಿದೆ. ನಿತ್ಯ ಮೂರು ಸಾವಿರ ವಾಹನಗಳು ನೋಂದಣಿಯಾಗುತ್ತಿವೆ. ನಗರದಲ್ಲಿ ವಾಹನಗಳ ಸಂಖ್ಯೆ 1.30 ಕೋಟಿ ಇದೆ’ ಎಂದು ಹೇಳಿದರು.

‘ನಗರದ ಜನಸಂಖ್ಯೆಯಲ್ಲಿ ಶೇ 19ರಷ್ಟು ಜನ ಅಪಾರ್ಟ್‌ಮೆಂಟ್ ನಿವಾಸಿಗಳಾಗಿದ್ದಾರೆ. ನಗರದಲ್ಲಿ 2 ಲಕ್ಷ ವಿದೇಶಿ ಪಾಸ್ ಪೋರ್ಟ್ ಹೊಂದಿರುವವರು ಇದ್ದಾರೆ. ಕ್ಯಾಲಿಫೋರ್ನಿಯದಲ್ಲಿ 13 ಲಕ್ಷ ಐ.ಟಿ ವೃತ್ತಿಪರರು ಇದ್ದರೆ, ಬೆಂಗಳೂರಿನಲ್ಲಿ 25 ಲಕ್ಷ ಐ.ಟಿ ವೃತ್ತಿಪರರು ಇದ್ದಾರೆ. ಇದರಲ್ಲಿ ಬಹುತೇಕರು ನಿಮ್ಮ ಅಪಾರ್ಟ್‌ಮೆಂಟ್‌ಗಳಲ್ಲಿದ್ದಾರೆ. ಆದರೂ, 1972ರಲ್ಲಿ ಅಪಾರ್ಟ್‌ಮೆಂಟ್ ಕಾಯ್ದೆ ಬಂದ ನಂತರ ಮತ್ತೆ ಯಾವುದೇ ಸರ್ಕಾರಗಳು ಅಪಾರ್ಟ್‌ಮೆಂಟ್‌ಗಳಿಗೆ ಶಕ್ತಿ ತುಂಬಲಿಲ್ಲ’ ಎಂದರು.

‘ಸಂವಾದದಲ್ಲಿ ಡಿ.ಕೆ. ಶಿವಕುಮಾರ್ ಅವರು ನಮ್ಮ ಸಲಹೆಗಳನ್ನು ಆಲಿಸಿದ್ದು, ಅದನ್ನು ಅಳವಡಿಸಿಕೊಂಡು, ಬೆಳಗಾವಿ ಅಧಿವೇಶನದಲ್ಲಿ ಮಸೂದೆ ಮಂಡಿಸಬೇಕು’ ಬೆಂಗಳೂರು ಅಪಾರ್ಟ್‌ಮೆಂಟ್ ಫೆಡರೇಷನ್ ಅಧ್ಯಕ್ಷ ಸತೀಶ್ ಮಲ್ಯ ಹೇಳಿದರು.

‘ಸಮಗ್ರ ಕರ್ನಾಟಕ ಅಪಾರ್ಟ್‌ಮೆಂಟ್ ಮಾಲೀಕತ್ವ ಮತ್ತು ನಿರ್ವಹಣಾ ಕಾಯ್ದೆಯಲ್ಲಿ (ಕೆಎಎಂಎ) ಉತ್ತಮ ಅಂಶಗಳನ್ನು ಅಳವಡಿಸಲಾಗಿದೆ. ಈ ಕಾಯ್ದೆ ಅನುಷ್ಠಾನ ಇಂದಿನ ತುರ್ತು ಅಗತ್ಯವಾಗಿದೆ’ ಎಂದರು.

ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ ಕೆ. ಅರುಣ್ ಕುಮಾರ್, ಖಜಾಂಚಿ ಕಿರಣ್ ಹೆಬ್ಬಾರ್ ಸೇರಿದಂತೆ ವಿವಿಧ ಭಾಗಗಳ ಅಪಾರ್ಟ್‌ಮೆಂಟ್ ಮಾಲೀಕರು, ಫೆಡರೇಷನ್ ಪ್ರತಿನಿಧಿಗಳು ಭಾಗವಹಿಸಿದ್ದರು.

‘ಸಹಾಯ ಮಾಡಿದರೂ ನನ್ನ ತಮ್ಮನನ್ನು ಚುನಾವಣೆಯಲ್ಲಿ ಸೋಲಿಸಿದಿರಿ’

‘ಲೋಕಸಭೆ ಚುನಾವಣೆ ಸಮಯದಲ್ಲಿ 100 ಅಪಾರ್ಟ್‌ಮೆಂಟ್‌ಗಳಿಗೆ ಭೇಟಿ ನೀಡಿ ನಮಗೆ ಬೆಂಬಲ ನೀಡಿ ಎಂದು ಕೇಳಿಕೊಂಡಿದ್ದೆ. ಸುಮಾರು ಆರು ಸಾವಿರ ಕೊಳವೆ ಬಾವಿ ಬತ್ತಿದ್ದಾಗ ಎಷ್ಟೇ ಕಷ್ಟ ಆದರೂ ನಿಮಗೆ ತೊಂದರೆ ಆಗಬಾರದು ಎಂದು ಸಹಾಯ ಮಾಡಿದ್ದೆ. ಆದರೆ ಚುನಾವಣೆ ಫಲಿತಾಂಶ ಬಂದಾಗ ನೀವು ನಮಗೆ ಬೆಂಬಲ ನೀಡಲಿಲ್ಲ. ನನ್ನ ತಮ್ಮನನ್ನು ಒಂದೇ ಕ್ಷೇತ್ರದಲ್ಲಿ ಒಂದು ಲಕ್ಷ ಮತಗಳಿಂದ ಸೋಲಿಸಿದಿರಿ. ನೀವು ನಮಗೆ ಯಾವುದೇ ರೀತಿಯ ಬೆಂಬಲ ನೀಡಲಿಲ್ಲ. ನಾವು ಕಷ್ಟಪಟ್ಟು ಸಹಾಯ ಮಾಡಿದರೂ ನೀವು ನಮಗೆ ಕರುಣೆ ತೋರಲಿಲ್ಲ. ಆಗ ನಾವು ಯಾಕೆ ಸಹಾಯ ಮಾಡಬೇಕು ಎಂದು ಅನಿಸಿದ್ದು ನಿಜ’ ಎಂದು ಡಿ.ಕೆ. ಶಿವಕುಮಾರ್ ಬೇಸರ ವ್ಯಕ್ತಪಡಿಸಿದರು.

‘ನಾನು ನಿಮಗೆ ಸಹಾಯ ಮಾಡುವುದರ ಜೊತೆಗೆ ನಿಮ್ಮ ಸಹಾಯವನ್ನು ಮತಗಳ ಮೂಲಕ ಬಯಸುತ್ತೇನೆ. ಜಿಬಿಎ ಚುನಾವಣೆಯಲ್ಲಿ ನೀವು ನಮ್ಮ ಜತೆ ನಿಲ್ಲಿ ಎಂದು ಕೋರುತ್ತೇನೆ. ನಿಮ್ಮ ಮೇಲೆ ನಂಬಿಕೆ ಇಟ್ಟಿದ್ದೇನೆ. ಅದಕ್ಕಾಗಿ ಯಾರೂ ಜಾರಿಗೆ ತರದ ಕಾನೂನನ್ನು ಜಾರಿಗೆ ತರಲು ಮುಂದಾಗಿದ್ದೇನೆ. ನನಗೆ ನಿರಾಸೆ ಮಾಡಬೇಡಿ’ ಎಂದು ಹೇಳಿದರು.



ಅಪಾರ್ಟ್‌ಮೆಂಟ್ ಅಸೋಸಿಯೇಷನ್‌ಗಳ ಪ್ರತಿನಿಧಿಗಳೊಂದಿಗೆ ಶನಿವಾರ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮವನ್ನು ಡಿ.ಕೆ. ಶಿವಕುಮಾರ್ ಗಿಡಕ್ಕೆ ನೀರುಣಿಸುವ ಮೂಲಕ ಉದ್ಘಾಟಿಸಿದರು. ತುಷಾರ್ ಗಿರಿನಾಥ್, ರಿಜ್ವಾನ್ ಅರ್ಷದ್ ಉಪಸ್ಥಿತರಿದ್ದರು

‘ಸಾವಿರಾರು ಅಪಾರ್ಟ್‌ಮೆಂಟ್ ಕಟ್ಟಿದ್ದೇನೆ’

‘ನಾನು ಸಾವಿರಾರು ಅಪಾರ್ಟ್‌ಮೆಂಟ್ ಕಟ್ಟಿದ್ದೇನೆ. ಅಪಾರ್ಟ್‌ಮೆಂಟ್‌ಗಳಿಗೆ ಜಾಗ ಕೊಟ್ಟಿದ್ದೇನೆ. ನಾವು ಇರುವುದೇ ನಿಮ್ಮ ಸೇವೆ ಮಾಡಲು. ಚುನಾವಣೆಗಳನ್ನು ಹೇಗೆ ನಡೆಸಬೇಕು ಎಂದು ನನಗೆ ಗೊತ್ತಿದೆ. ಪ್ರತಿ ಅಪಾರ್ಟ್‌ಮೆಂಟ್‌ನಲ್ಲಿ ಯಾರಿಗೆ ಎಷ್ಟು ಮತ ಬೀಳುತ್ತದೆ ಎಂದೂ ನನಗೆ ಗೊತ್ತಿದೆ. ಆದರೂ ನಾವು ನಿಮ್ಮ ಸೇವೆ ಮಾಡಿ ನಿಮ್ಮ ವಿಶ್ವಾಸ ಗೆಲ್ಲಲು ಬಯಸುತ್ತೇನೆ. ನೀವು ಬಲಿಷ್ಠವಾಗಿದ್ದರೆ, ನಾವು ಬಲಿಷ್ಠ, ನೀವು ದುರ್ಬಲರಾದರೆ, ನಾವು ದುರ್ಬಲ ಎಂದು ಭಾವಿಸಿದ್ದೇನೆ. ನಾನು ನೇರವಾಗಿ, ಕಟುವಾಗಿ ಹಾಗೂ ದಿಟ್ಟವಾಗಿ ಮಾತನಾಡಿದ್ದೇನೆ. ಇದಕ್ಕೆ ಯಾರೂ ಬೇಸರ ಮಾಡಿಕೊಳ್ಳಬೇಡಿ. ಬೆದರಿಸಿದರೆ ನಡೆಯುತ್ತದೆ ಎಂಬ ಭ್ರಮೆ ಬೇಡ’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

‘ಯಾರೊಂದಿಗೆ ಡೀಲ್ ಮಾಡುತ್ತಿದ್ಯಾ ಗೊತ್ತಾ?’

‘ಈ ದೇಶದ ಪ್ರಧಾನ ಮಂತ್ರಿ, ಗೃಹ ಸಚಿವರಿಗೆ ಹೆದರದೇ ಜೈಲಿಗೆ ಹೋಗಿ ಬಂದಿರುವವನು ನಾನು. ಅವನ್ಯಾರೋ ಹೆಬ್ಬಾರ್ ಎಂಬುವವನಿಗೆ ಹೆದರುತ್ತೇನೆಯೇ? ಯಾರೊಂದಿಗೆ ಡೀಲ್ ಮಾಡುತ್ತಿದ್ಯಾ ಗೊತ್ತಾ? ಯಾರಿಗೂ ಹೆದರುವ, ಜಗ್ಗುವ ಮಾತೇ ಇಲ್ಲ. ಯಾರೇ ಆಗಲಿ ಯಾರ ಜೊತೆ ಮಾತನಾಡುತ್ತಿದ್ದೇವೆ ಎಂಬುದರ ಬಗ್ಗೆ ಕನಿಷ್ಠ ಪರಿಜ್ಞಾನ ಇಟ್ಟುಕೊಳ್ಳಬೇಕು’ ಎಂದು ಡಿ.ಕೆ. ಶಿವಕುಮಾರ್ ಎಚ್ಚರಿಕೆ ನೀಡಿದರು.

‘ಕಿರಣ್ ಹೆಬ್ಬಾರ್ ಎಂಬಾತ ತಾನು ಅಂಪಾರ್ಟ್‌ಮೆಂಟ್ ಮಾಲೀಕ ಎಂದು ಪತ್ರ ಬರೆದಿದ್ದು, ನಮಗೆ ಬೆದರಿಕೆ ಹಾಕಲು ಮುಂದಾಗಿದ್ದಾನೆ. ಸರ್ಕಾರ ನಮ್ಮನ್ನು ನಿರ್ಲಕ್ಷಿಸಿದ್ದು, ಆಡಳಿತ ಪಕ್ಷ ನಮ್ಮ ಮನವಿ ನಿರ್ಲಕ್ಷಿಸಿದರೆ ಸದ್ಯದಲ್ಲೇ ಜಿಬಿಎ ಚುನಾವಣೆ ಬರುತ್ತಿದೆ ಎಂದು ಪತ್ರದಲ್ಲಿ ಎಚ್ಚರಿಕೆ ನೀಡಿದ್ದಾನೆ. ಎಲ್ಲರನ್ನೂ ಆಟ ಆಡಿಸಿದ ಹಾಗೆ ನನ್ನನ್ನು ಆಡಿಸಲು ಸಾಧ್ಯ ಇಲ್ಲ’ ಎಂದರು.

ಎರಡನೇ ವಿಮಾನ ನಿಲ್ದಾಣ: ಕಾರ್ಯಸಾಧ್ಯತಾ ವರದಿಗೆ ಟೆಂಡರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಆಸುಪಾಸು ಎರಡನೇ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣದ ಕಾರ್ಯಸಾಧ್ಯತಾ ವರದಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ರಾಜಧಾನಿಗೆ ಮತ್ತೊಂದು ವಿಮಾನ ನಿಲ್ದಾಣ ನಿರ್ಮಿಸುವತ್ತ ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ಅವರು, ‘ನೂತನ ವಿಮಾನ ನಿಲ್ದಾಣಕ್ಕೆ ಸ್ಥಳದ ಅನುಕೂಲ, ತಾಂತ್ರಿಕ ಹಾಗೂ ಆರ್ಥಿಕ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸಲು ಪರಿಣತ ಸಲಹಾ ಸಂಸ್ಥೆಯ ಆಯ್ಕೆಗಾಗಿ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮವು (ಕೆಎಸ್‌ಐಐಡಿಸಿ) ಟೆಂಡರ್ ಆಹ್ವಾನಿಸಿದೆ. ಅರ್ಜಿ ಸಲ್ಲಿಸಲು 2026ರ ಜ.12 ಕೊನೆಯ ದಿನವಾಗಿದೆ’ ಎಂದಿದ್ದಾರೆ.

‘ಕನಕಪುರ ರಸ್ತೆಯಲ್ಲಿರುವ ಚೂಡಹಳ್ಳಿ, ಸೋಮನಹಳ್ಳಿ ಮತ್ತು ನೆಲಮಂಗಲದ ಬಳಿ ಈಗಾಗಲೇ ಸ್ಥಳಗಳನ್ನು ಗುರುತಿಸಿದೆ. ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಉನ್ನತಮಟ್ಟದ ತಂಡವು ಸ್ಥಳ ಪರಿಶೀಲನೆ ನಡೆಸಿ, ಪ್ರಾಥಮಿಕ ವರದಿ ನೀಡಿದೆ. ಈಗ ಟೆಂಡರಿನಲ್ಲಿ ಆಯ್ಕೆಯಾಗುವ ಸಲಹಾ ಸಂಸ್ಥೆಯು ಐದು ತಿಂಗಳಲ್ಲಿ ಸಮಗ್ರ ತಾಂತ್ರಿಕ ಮತ್ತು ಆರ್ಥಿಕ ಕಾರ್ಯಸಾಧ್ಯತಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕು’ ಎಂದು ಅವರು ಮಾಹಿತಿ ನೀಡಿದ್ದಾರೆ.



ಎಂ.ಬಿ. ಪಾಟೀಲ

ಐದು ವರ್ಷಗಳಲ್ಲಿ ವಾರ್ಷಿಕವಾಗಿ ₹250 ಕೋಟಿ ಮೊತ್ತದ ಕೆಲಸಗಳನ್ನು ನಿರ್ವಹಿಸಿರುವಂಥ ಮತ್ತು ಸದರಿ ಕ್ಷೇತ್ರದಲ್ಲಿ ಕನಿಷ್ಠ ಐದು ಯೋಜನೆಗಳ ನ್ನಾದರೂ ನಿರ್ವಹಿಸಿರುವ, ಸಲಹಾ ವರದಿ ನೀಡಿರುವಂತಹ ಸಂಸ್ಥೆಗಳು ಟೆಂಡರ್‌ನಲ್ಲಿ ಭಾಗವಹಿಸಬಹುದು. ಆಯ್ಕೆಯಾಗುವ ಸಂಸ್ಥೆಯು ಮೂರೂ ಸ್ಥಳಗಳ ಮಳೆ ಪ್ರಮಾಣ, ಭೂಲಕ್ಷಣ, ವಿದ್ಯುತ್, ನೀರು, ಒಳಚರಂಡಿ, ತ್ಯಾಜ್ಯ ನಿರ್ವಹಣೆಯಂಥ ಮೂಲ ಸೌಕರ್ಯಗಳು, ಸುತ್ತಮುತ್ತಲಿನ ಜನಸಂಖ್ಯೆ, ಅಭಿವೃದ್ಧಿ, ಶಬ್ದ ಮತ್ತು ವಿಮಾನ ನಿಲ್ದಾಣದಿಂದ ಉಂಟಾಗುವ ಮಾಲಿನ್ಯ ಕುರಿತು ವರದಿ ಸಿದ್ಧಪಡಿಸಬೇಕು ಎಂದಿದ್ದಾರೆ.

ವಿಮಾನ ನಿಲ್ದಾಣ ಅಭಿವೃದ್ಧಿಗೆ ತಗಲುವ ವೆಚ್ಚ, ಅಗತ್ಯ ಇರುವ ಭೂಮಿ, ರಕ್ಷಣಾ ಸಚಿವಾಲಯ ಮತ್ತು ನಾಗರಿಕ ವಿಮಾನಯಾನ ನಿರ್ದೇಶನಾಲಯ (ಡಿಜಿಸಿಎ) ಸೇರಿದಂತೆ ಹಲವು ಕಡೆಗಳಿಂದ ಪಡೆಯಬೇಕಾಗುವ ಅನುಮೋದನೆಗಳ ವಿವರಗಳನ್ನೂ ಕಾರ್ಯಸಾಧ್ಯತಾ ವರದಿಯಲ್ಲಿ ನೀಡಬೇಕಾಗುತ್ತದೆ. ವಿಮಾನ ನಿಲ್ದಾಣಕ್ಕೆ ಇರುವ ವಿವಿಧ ರೀತಿಯ ಸಂಪರ್ಕ, ನಿರ್ಮಾಣ ನಂತರದ ಮೂಲ ಸೌಕರ್ಯ ಅಭಿವೃದ್ಧಿ, ಸರಕು ಸಾಗಣೆ ಮತ್ತು ಪ್ರಯಾಣಿಕ ಸೇವೆಗಳು ಹಾಗೂ ಅದರಿಂದಾಗುವ ಆರ್ಥಿಕ ಕಾರ್ಯಸಾಧ್ಯತೆ ಬಗ್ಗೆ ಅಧ್ಯಯನ ನಡೆಸಬೇಕು ಎಂದು ಹೇಳಿದ್ದಾರೆ.

ರಾಜ್ಯದಿಂದ 4,500 ಮಂದಿ ಭಾಗಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಮತ ಕಳವು ವಿರುದ್ಧ ಇಲ್ಲಿನ ರಾಮಲೀಲಾ ಮೈದಾನದಲ್ಲಿ ಭಾನುವಾರ ನಡೆಯಲಿರುವ ಬೃಹತ್ ಪ್ರತಿಭಟನೆಯಲ್ಲಿ ರಾಜ್ಯದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರು, ಶಾಸಕರು ಹಾಗೂ 4,500ಕ್ಕೂ ಅಧಿಕ ಕಾರ್ಯಕರ್ತರು ಭಾಗಿಯಾಗಲಿದ್ದಾರೆ.

ಶನಿವಾರ ರಾತ್ರಿ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಡಿ.ಕೆ. ಶಿವಕುಮಾರ್, ‘ಪ್ರಜಾಪ್ರಭುತ್ವ ಹಾಗೂ ಸಂವಿಧಾನದ ಉಳಿವಿಗೆ ಮತ ಕಳ್ಳತನದ ವಿರುದ್ಧ ಹೋರಾಟ ಮಾಡುತ್ತಿದ್ದೇವೆ. ಸಾಂವಿಧಾನಿಕ ಸಂಸ್ಥೆಗಳನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೆ ಬಿಡುವುದಿಲ್ಲ’ ಎಂದರು.

‘ಮತದಾರರ ಪಟ್ಟಿಯಿಂದ ಅಲ್ಪಸಂಖ್ಯಾತರ ಹೆಸರನ್ನು ವ್ಯವಸ್ಥಿತವಾಗಿ ಅಳಿಸುವ ಕೆಲಸ ನಡೆಯುತ್ತಿದೆ. ಮಹದೇವಪುರ, ಆಳಂದ, ಗಾಂಧಿನಗರ ಸೇರಿದಂತೆ ದೇಶದ ಹಲವಾರು ಕ್ಷೇತ್ರದಲ್ಲಿ ಈ ರೀತಿ ನಡೆದಿದೆ. ರಾಹುಲ್ ಗಾಂಧಿ ಅವರು ಪ್ರಶ್ನೆ ಮಾಡಿದರೆ ನಮಗೆ ಮಾಹಿತಿ ನೀಡಿ ಎಂದು ಚುನಾವಣಾ ಆಯೋಗದವರು ಕೇಳುತ್ತಿದ್ದಾರೆ. ಮಾಹಿತಿ ಹಕ್ಕು ಕಾಯ್ದೆ ಅಡಿ ಅರ್ಜಿ ಹಾಕಿದರೂ ಮಾಹಿತಿ ನೀಡಲಿಲ್ಲ. ನಾನೇ ಹೋಗಿ ಮಾಹಿತಿ ನೀಡಿ ಬಂದಿದ್ದೆ. ಸಿಐಡಿ ಅಧಿಕಾರಿಗಳು 18 ಕಾಗದ ಬರೆದಿದ್ದಾರೆ. ದೂರವಾಣಿ ಸಂಖ್ಯೆಗಳು, ಇತರೇ ಮಾಹಿತಿಗಳನ್ನು ಕೇಳಿದರೂ ನೀಡಿಲ್ಲ. ಆದರೂ ತನಿಖಾ ವರದಿ ತಯಾರಿದೆ’ ಎಂದರು.

‘ಬೆಂಗಳೂರಿನಲ್ಲಿ ಚಿಲುಮೆ ಸಂಸ್ಥೆಗೆ ಜವಾಬ್ದಾರಿ ನೀಡಿ, ಬಿಜೆಪಿ ಕಾರ್ಯಕರ್ತರಿಗೆ ಐಡಿ ಕಾರ್ಡ್‌ಗಳನ್ನು ನೀಡಲಾಗಿತ್ತು. ಆಗ ನಾನು ದೊಡ್ಡ ಹೋರಾಟ ರೂಪಿಸಿದ್ದೆ. ಇದನ್ನು ಇಡೀ ದೇಶದ ಜನರಿಗೆ ತಿಳಿಸಬೇಕಾಗಿದೆ. ಇದು ಕೇವಲ ಕರ್ನಾಟಕಕ್ಕೆ ಆಗಿರುವ ತೊಂದರೆಯಲ್ಲ. ಬಿಹಾರ, ಮಹಾರಾಷ್ಟ್ರ ಹೀಗೆ ಅನೇಕ ಕಡೆ ನಡೆದಿದೆ’ ಎಂದರು.

ವಿಶೇಷ ರೈಲು ರದ್ದು: ಮತ ಕಳವು ಹೋರಾಟದಲ್ಲಿ ಭಾಗಿಯಾಗಲು ರಾಜ್ಯದಿಂದ ವಿಶೇಷ ರೈಲಿನ ವ್ಯವಸ್ಥೆ ಮಾಡಲು ರೈಲ್ವೆ ಸಚಿವಾಲಯಕ್ಕೆ ಮನವಿ ಸಲ್ಲಿಸಿದ್ದೆವು. ಇದಕ್ಕೆ ಇಲಾಖೆ ಒಪ್ಪಿತ್ತು. ಕೆಪಿಸಿಸಿಯಿಂದ ₹1 ಕೋಟಿಯಷ್ಟು ಕಟ್ಟಲು ತಯಾರಿದ್ದೆವು. ಆದರೆ, ಕೊನೆಯ ಕ್ಷಣದಲ್ಲಿ ರದ್ದು ಮಾಡಿದ್ದಾರೆ ಎಂದು ಹೇಳಿದರು.

ನೋಟಿಸ್‌ಗೆ ನಾಳೆ ಉತ್ತರ

ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಡಿ.ಕೆ. ಶಿವಕುಮಾರ್ ಹಾಗೂ ಸಹೋದರ ಡಿ.ಕೆ. ಸುರೇಶ್ ಅವರು ದೆಹಲಿ ಪೊಲೀಸರ ಮುಂದೆ ಸೋಮವಾರ ವಿಚಾರಣೆಗೆ ಹಾಜರಾಗಲಿದ್ದಾರೆ. ಆರ್ಥಿಕ ಮತ್ತು ವಹಿವಾಟು ವಿವರಗಳನ್ನು ಕೋರಿ ಡಿ.ಕೆ.ಸಹೋದರರಿಗೆ ದೆಹಲಿ ಪೊಲೀಸರು ನೋಟಿಸ್ ಜಾರಿ ಮಾಡಿದ್ದರು.

‘ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ 19ರ ಒಳಗೆ ಉತ್ತರಿಸಬೇಕು ಎಂದು ಪೊಲೀಸರು ನೋಟಿಸ್ ನೀಡಿದ್ದಾರೆ. ನಮ್ಮ ವಕೀಲರಿಗೆ ಬರಲು ಹೇಳಿರುವೆ. ಕಾನೂನು ತಜ್ಞರ ಸಲಹೆ ಪಡೆದು ಬಹುಶಃ ಸೋಮವಾರ ಹೋಗಬಹುದು. ಹೋಗುವಾಗ ನಿಮಗೆ (ಮಾಧ್ಯಮಗಳಿಗೆ) ತಿಳಿಸುವೆ’ ಎಂದು ಶಿವಕುಮಾರ್ ಪ್ರತಿಕ್ರಿಯಿಸಿದರು.

‘ಪಕ್ಷದ ಕಚೇರಿಯಲ್ಲಿ ನಾಯಕರು ಸಿಗುತ್ತಾರೆ’

ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ ಅವರನ್ನು ಭೇಟಿ ಮಾಡುತ್ತೀರಾ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ‘ಪಕ್ಷದ ಕಚೇರಿ ನಮ್ಮ ಪಾಲಿಗೆ ದೇವಾಲಯ. ಇಂದಿರಾ ಭವನದಲ್ಲಿ ಭಾನುವಾರ ಮಧ್ಯಾಹ್ನ ಊಟಕ್ಕೆ ಆಹ್ವಾನ ನೀಡಲಾಗಿದೆ. ಅಲ್ಲಿಗೆ ಹೋದಾಗ ಎಲ್ಲರೂ ಸಿಕ್ಕೇ ಸಿಗುತ್ತಾರೆ. ನಾನು ದೆಹಲಿಗೆ ಬಂದಿದ್ದೇನೆ ಎಂದು ಗೊತ್ತಾದ ತಕ್ಷಣ ಗೆಳೆಯರು, ನಾಯಕರು ಭೇಟಿಗೆ ಬಂದಿದ್ದಾರೆ. ದೇಶದ ನಾನಾ ಮೂಲೆಯಿಂದ ಬಂದವರು ಇಲ್ಲಿದ್ದಾರೆ’ ಎಂದು ಹೇಳಿದರು.

ಮಸೀದಿಯಲ್ಲಿ ಕನ್ನಡ ಪ್ರವಚನ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: ಮುಸ್ಲಿಮರ ವಾರದ ವಿಶೇಷ ಪ್ರಾರ್ಥನೆಯಲ್ಲಿ ಕರ್ನಾಟಕ ಜಮಾಅತೆ ಇಸ್ಲಾಮಿ ಹಿಂದ್, ರಾಜ್ಯಕಾರ್ಯದರ್ಶಿ ಅಕ್ಬರ್ ಅಲಿ ಉಡುಪಿ ಅವರು ಕನ್ನಡದಲ್ಲಿ ಪ್ರವಚನ ನೀಡಿದರು.

ಮತ್ತಿಕೆರೆಯ ಮಸ್ಜಿದ್. ಎ. ತಾಹದಲ್ಲಿ (ಮಸೀದಿ) ಮುಸ್ಲಿಮರ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡು ‘ನೆರೆಹೊರೆಯವರ ಹಕ್ಕುಗಳ’ ಬಗ್ಗೆ ಕನ್ನಡದಲ್ಲಿ ಪ್ರವಚನ ನೀಡಿದ ಅವರು, ‘ನಾವೆಲ್ಲರೂ ಒಂದೇ ಎಂಬ ಭಾವನೆ ಇರಬೇಕು. ಸಹೋದರ- ಸಹೋದರಿಯರು, ಹಿರಿಯರು, ಸ್ನೇಹಿತರಾಗಿ ಕೂಡಿ ಬಾಳಬೇಕು. ಬೇರೊಬ್ಬರಿಗೆ ದ್ವೇಷ, ಅಸೂಯೆ, ಕೆಡುಕು ಬಯಸಬಾರದು. ಇಸ್ಲಾಂ ಧರ್ಮ ಸೇರಿ ಎಲ್ಲ ಧರ್ಮಗಳು ಇದನ್ನೇ ಹೇಳುತ್ತವೆ’ ಎಂದು ಹೇಳಿದರು.

‘ಮಸೀದಿಯ ಗೋಡೆ ಮತ್ತು ಕಿಟಕಿಗಳಿಗೆ ಕುರ್-ಆನ್ ಹಾಗೂ ಪ್ರವಾದಿಯವರ ವಚನಗಳನ್ನು ಬರೆಯಲಾಗಿದ್ದು, ಮಸೀದಿಯನ್ನು ಕನ್ನಡಮಯಗೊಳಿಸಲಾಗಿದೆ. ಇದು ನಾವೆಲ್ಲರೂ ಒಂದೇ ಎಂಬ ಭಾವನೆಯನ್ನು ತೋರಿಸುತ್ತದೆ’ ಎಂದು ಹೇಳಿದರು.



ಮತ್ತಿಕೆರೆಯ ಮಸೀದಿಯಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಕರ್ನಾಟಕ ಜಮಾಅತೆ ಇಸ್ಲಾಮಿ ಹಿಂದ್ ರಾಜ್ಯಕಾರ್ಯದರ್ಶಿ ಅಕ್ಬರ್ ಅಲಿ ಉಡುಪಿ ಅವರು ಸಂವಾದ ಕಾರ್ಯಕ್ರಮ ನಡೆಸಿಕೊಟ್ಟರು

ಮಸೀದಿಯ ಅಧ್ಯಕ್ಷ ಸಮಿಉಲ್ಲಾಖಾನ್ ಮಾತನಾಡಿ, ‘ಎಲ್ಲ ಸಮುದಾಯಗಳ ಮತ್ತು ಮುಖಂಡರ ಜೊತೆಗೆ ಸೌಹಾರ್ದದ ಜೀವನ ಸಾಗಿಸಬೇಕೆಂದು ಎಲ್ಲ ಧರ್ಮಗಳು ಹೇಳುತ್ತವೆ. ಶಾಂತಿ, ನೆಮ್ಮದಿ ಸಿಗಬೇಕಾದರೆ ನಾವು ಕನ್ನಡಿಗರು, ಈ ಮಣ್ಣಿನ ಮಕ್ಕಳೆಂದು ಜೀವನ ಸಾಗಿಸಬೇಕು’ ಎಂದು ಹೇಳಿದರು.

ಉಪಾಧ್ಯಕ್ಷ ಶಹಜಹಾನ್. ಕಾರ್ಯದರ್ಶಿ ಬಶೀರ್ ಅಹಮ್ಮದ್ ಬೇಗ್, ಕೋಶ್ಯಾಧ್ಯಕ್ಷ ಸಾಗರ್ ಸಮಿವುಲ್ಲಾ, ಬೈತುಲ್ ಮಾಲ್ ಅಧ್ಯಕ್ಷ ನಜೀರ್, ಅಮಿರ್ ಜಾಕಿರ್, ಮುಶೀರ್, ಬ್ಯಾರಿ ಅಸೋಸಿಯೇಷನ್ ಅಧ್ಯಕ್ಷ ಶಮ್ಸುದ್ದಿನ್ ಭಾಗವಹಿಸಿದ್ದರು.

ಅಕ್ಬರ್ ಅಲಿ ಅವರೊಂದಿಗೆ ನಡೆದ ಸಂವಾದದಲ್ಲಿ ಬಿಬಿಎಂಪಿ ಯೋಜನಾ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಮುನಿಸ್ವಾಮಿ, ಉದ್ಯಮಿ ರಮೇಶ್ ಗೌಡ, ಜಗ ಮೆಚ್ಚಿದ ಮಗ ಡಾ.ರಾಜ್ ಕುಮಾರ್ ಸಂಘದ ಶೇಭೋ, ರಾಧಾಕೃಷ್ಣ, ಮುಖಂಡರಾದ ಕಿರಣ್, ಕಾರ್ತಿಕ್ ಅವರು ಪಾಲ್ಗೊಂಡಿದರು.

ನಗರದಲ್ಲಿ ಇಂದು

ಥಂಪ್! ಸೆಲೆಬ್ರೆಷನ್ ಬೆಂಗಳೂರು 1/2 ಮ್ಯಾರಾಥಾನ್, 10ಕೆ ರನ್: ಆಯೋಜನೆ: ಲೈಫ್ ಇಸ್ ಕಾಲಿಂಗ್, ಸ್ಥಳ: ನೈಸ್ ಟೋಲ್ ಪ್ಲಾಜಾ, ಪಿಇಎಸ್ ಕಾಲೇಜಿನ ಹಿಂಭಾಗ, ರಿಂಗ್ ರಸ್ತೆ, ನಾಯಂಡಹಳ್ಳಿ, ಬೆಳಿಗ್ಗೆ 5.30

‘ಸೇ ನೋ ಟು ಡ್ರಗ್’ ಜಾಗೃತಿ ರನ್‌ಗೆ ಚಾಲನೆ: ಸಪ್ತಮಿ ಗೌಡ, ಆಯೋಜನೆ: ಶಾಂತ ಕೃಷ್ಣಮೂರ್ತಿ ಫೌಂಡೇಷನ್, ಸ್ಥಳ: ಜ್ಯೂಬಿಲಿ ಇಂಗ್ಲಿಷ್ ಹೈಸ್ಕೂಲ್, ಎನ್‌ಆರ್‌ಐ ಲೇಔಟ್, ಬೆಳಿಗ್ಗೆ 6



ಸಪ್ತಮಿ ಗೌಡ

ಹಿಂದೂಸ್ತಾನಿ ಸಂಗೀತ ಕಛೇರಿ: ಆನಂದಕುಮಾರ ಕಂಬಳಿಹಾಳ, ಆಯೋಜನೆ: ತೋಟಗಾರಿಕೆ ಇಲಾಖೆ, ಸ್ಥಳ: ಬ್ಯಾಂಡ್‌ಸ್ಟ್ಯಾಂಡ್, ಕಬ್ಬನ್ ಉದ್ಯಾನ, ಬೆಳಿಗ್ಗೆ 7

ಗುರುವಂದನಾ ಕಾರ್ಯಕ್ರಮ: ಗಾಯನ: ಪರಮೇಶ್ವರ ಹೆಗಡೆ, ಅನಂತ ಭಾಗವತ್, ಆಯೋಜನೆ: ಶ್ರೀ ಅನಂತಾನುಗ್ರಹ ಸಂಗೀತ ವಿದ್ಯಾಲಯ, ಸ್ಥಳ: ಇಂದಿರಾಕೃಷ್ಣ ವಿದ್ಯಾಶಾಲೆ, ವಸಂತಪುರ ಮುಖ್ಯರಸ್ತೆ, ಶಾರದಾನಗರ, ಬಿಕಾಸಿಪುರ, ಬೆಳಿಗ್ಗೆ 8.30ರಿಂದ

ಮಹರ್ಷಿ ವಾಲ್ಮೀಕಿ ಜಯಂತಿ, ಪ್ರತಿಭಾ ಪುರಸ್ಕಾರ: ಅಧ್ಯಕ್ಷತೆ: ಬಿ.ಎನ್. ಚಂದ್ರಶೇಖರಯ್ಯ, ಉದ್ಘಾಟನೆ: ಎಂ. ಕೃಷ್ಣಪ್ಪ, ಅತಿಥಿಗಳು: ಪ್ರಿಯಕೃಷ್ಣ, ಪ್ರದೀಪ್ ಕೃಷ್ಣ, ಆಯೋಜನೆ: ವಿಜಯನಗರ ನಾಯಕ ಸಂಘ, ಸ್ಥಳ: ರಾಜಾಜಿನಗರ ಪೇರೆಂಟ್ಸ್ ಅಸೋಸಿಯೇಷನ್, ಬೆಳಿಗ್ಗೆ 10

ಮಲ್ಲೇಪುರಂ ಜಿ. ವೆಂಕಟೇಶ ದಂಪತಿಗೆ ಗುರು ಗೌರವ ಸಮರ್ಪಣೆ ಹಾಗೂ ಪುಸ್ತಕಗಳ ಬಿಡುಗಡೆ: ಅಧ್ಯಕ್ಷತೆ: ಮಂಜುನಾಥ ಪಾಳ್ಯ, ರಾಜಶೇಖರ ಮಠಪತಿ, ಎನ್. ಎಸ್. ಸತೀಶ್, ಆಯೋಜನೆ: ಸುಮೇರು ಟ್ರಸ್ಟ್, ಐಸಿರಿ ಪ್ರಕಾಶನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10

ಕವಿಗೋಷ್ಠಿ, ಗೀತ-ಗಾಯನ, ಪ್ರಶಸ್ತಿ ಪ್ರದಾನ: ವಿ.ಟಿ. ರಾಮಕೃಷ್ಣಯ್ಯ, ಅಧ್ಯಕ್ಷತೆ: ಬಿ. ಶೃಂಗೇಶ್ವರ್, ವಿ. ರೇಣುಕಾ ಪ್ರಸನ್ನ, ವಿ. ಮಲ್ಲಿಕಾರ್ಜುನಯ್ಯ, ಉಪಸ್ಥಿತಿ: ನಾಗೇಶ್ ಡಿ. ಪಾಠಕ್, ಕುವರ ಯಲ್ಲಪ್ಪ, ಆಯೋಜನೆ: ಸಮ್ಮಿಲನ, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ನಾದನೃತ್ಯ ವೈಭವ: ಅತಿಥಿಗಳು: ಎ.ವಿ. ಚಂದ್ರಶೇಖರ್, ಪ್ರಮಿಳಾ ನೇಸರ್ಗಿ, ಪದ್ಮಿನಿ ಓಕ್, ಅಧ್ಯಕ್ಷತೆ: ಪ್ರಭಾ ಮೂರ್ತಿ, ಆಯೋಜನೆ: ಇಂಡಿಯನ್ ಫೆಡರೇಷನ್ ಆಫ್ ವುಮೆನ್ ಲಾಯರ್ಸ್ ಕರ್ನಾಟಕ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಅರಮನೆ ರಸ್ತೆ, ಬೆಳಿಗ್ಗೆ 10.30

ಸಿ. ವೀರಣ್ಣ ಅವರ ‘ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ-3’ ಪುಸ್ತಕ ಬಿಡುಗಡೆ: ವೀರಣ್ಣ ರಾಜೂರ, ಪುಸ್ತಕ ಪರಿಚಯ: ಸಿ. ನಾಗಭೂಷಣ, ಅಧ್ಯಕ್ಷತೆ: ಸಿದ್ಧನಗೌಡ ಪಾಟೀಲ, ಆಯೋಜನೆ: ನವಕರ್ನಾಟಕ ಪ್ರಕಾಶನ, ಸ್ಥಳ: ಬಾಪೂಜಿ ಸಭಾಂಗಣ, ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

‘ಸಂಸ್ಕೃತಿ ಸಿರಿ-2025’ ಪ್ರಶಸ್ತಿ ಪ್ರದಾನ: ಎನ್. ಸಂತೋಷ್ ಹೆಗ್ಡೆ, ಉದ್ಘಾಟನೆ: ಎಂ.ಎ. ಸಲೀಂ, ಅತಿಥಿ: ಷಡಕ್ಷರಿ, ಉಪಸ್ಥಿತಿ: ಹಿ.ಚಿ. ಬೋರಲಿಂಗಯ್ಯ, ಅಧ್ಯಕ್ಷತೆ: ವೇಮಗಲ ನಾರಾಯಣಸ್ವಾಮಿ, ಪ್ರಶಸ್ತಿ ಸ್ವೀಕರಿಸುವವರು: ಗರ್ತಿಕೆರೆ ರಾಘಣ್ಣ, ನರಸಿಂಹಲು ವಡವಾಟಿ, ಸಿ. ಸೋಮಶೇಖರ್, ಟಿ.ಎಸ್. ನಾಗಾಭರಣ, ಕೆ.ಆರ್. ಸಂಧ್ಯಾರೆಡ್ಡಿ, ಆಯೋಜನೆ: ಡಾ. ವೇಮಗಲ್ ನಾರಾಯಣಸ್ವಾಮಿ ಸಾಂಸ್ಕೃತಿಕ ಮತ್ತು ಸೇವಾ ಪ್ರತಿಷ್ಠಾನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11.30

‘ದಿ ರೀಮ್ಸ್ ಆಫ್ ಧರ್ಮ ಆ್ಯಂಡ್ ಆಫ್ ದಿ ಮಹಾಭಾರತ’ ಯು.ಆರ್. ಅನಂತಮೂರ್ತಿ ದತ್ತಿ ಉಪನ್ಯಾಸ: ಫ್ರೆಡೆರಿಕ್ ಎಂ. ಸ್ಮಿತ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಬೆಳಿಗ್ಗೆ 11ರಿಂದ

ಸ್ವರ್ಣ ಭೈರವ ಪ್ರತ್ಯಂಗಿರಾ ಮಹಾಯಜ್ಞ: **ಉಪಸ್ಥಿತಿ:** ಭೈರವಿ ಅಮ್ಮನವರ, ಸ್ಥಳ: ಆಗಮ ಭವನದಲ್ಲಿ ರಾಯರಾಯ ಕಲ್ಯಾಣ ಮಂಟಪ ಆವರಣ, ಚಾಮರಾಜಪೇಟೆ, ಮಧ್ಯಾಹ್ನ 3.16ರಿಂದ ಪ್ರಾರಂಭ



ಬಿ. ಜಯಶ್ರೀ

18ನೇ ವಾರ್ಷಿಕ ಅಜಿತ್‌ಕುಮಾರ್ ಸ್ಮಾರಕ ‘ಅಜಿತಶ್ರೀ’, ‘ನಾಟ್ಯಶ್ರೀ’, ‘ಯೋಗಶ್ರೀ’ ಪ್ರಶಸ್ತಿ ಪ್ರದಾನ: ‘ಮುಖ್ಯಮಂತ್ರಿ’ ಚಂದ್ರು, ಅತಿಥಿ: ಸುಧೀರ, ಪ್ರಶಸ್ತಿ ಸ್ವೀಕರಿಸುವವರು: ಬಿ. ಜಯಶ್ರೀ, ಪದ್ಮಿನಿ ರವಿ, ಗಣಪತಿ ಭಟ್ ಹಾಸಣಗಿ, ಎಂ.ಎಸ್. ಶ್ಯಾಮಸುಂದರ್, ಪೂರ್ಣಿಮಾ ಕೆ. ಗುರುರಾಜ, ಎಚ್.ಎಸ್. ವೇಣುಗೋಪಾಲ್, ಬಾ.ಸು. ಅರವಿಂದ, ಆಯೋಜನೆ: ಅಜಿತ್‌ಕುಮಾರ್ ಸ್ಮಾರಕ ಸಾಂಸ್ಕೃತಿಕ ವೇದಿಕೆ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5.30

ಮಾರ್ಗಶೀರ್ಷೋತ್ಸವ-2025 ಉದ್ಘಾಟನೆ: ಕೆ. ಅಣ್ಣಾಮಲೈ, ಡಿ.ಕೆ. ಸಿಂಗ್, ಡಾ.ಸಿ.ಎನ್. ಅಶ್ವತ್ಥನಾರಾಯಣ, ಬಿ.ಎಸ್. ಶ್ರೀನಾಥ್, ಆರ್.ಕೆ. ಪದ್ಮನಾಭ, ಬಾಲಸುಬ್ರಹ್ಮಣ್ಯಂ ಐಯ್ಯರ್, ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ: ಕಲ್ಯಾಣಪುರಂ ಅರವಿಂದ್, ಪಿಟೀಲು: ಎಚ್.ಎನ್. ಭಾಸ್ಕರ್, ಮೃದಂಗ: ಬಿ.ಎಸ್. ಪ್ರಶಾಂತ್, ಆಯೋಜನೆ ಮತ್ತು ಸ್ಥಳ: ಸುರಭಾರತೀ, ಎಚ್‌ಆರ್‌ಬಿಆರ್ ಲೇಔಟ್, ಸಂಜೆ 4ರಿಂದ

ಸಹಸ್ರ ಕಂಠ ಗಾನ ವೈಭವ, ‘ಕನ್ನಡ ಡಿಂಡಿಮ-2025’ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ವಿಶ್ವ ಸಂತೋಷ ಭಾರತೀ ಸ್ವಾಮೀಜಿ, ವಿನಯ್ ಗುರೂಜಿ, ಪ್ರಕಾಶನಾಥ್ ಸ್ವಾಮೀಜಿ, ಅಧ್ಯಕ್ಷತೆ: ಎಂ. ಕೃಷ್ಣಪ್ಪ, ಉದ್ಘಾಟನೆ: ಪ್ರಿಯಕೃಷ್ಣ, ಅತಿಥಿಗಳು: ವೂಡೇ ಪಿ. ಕೃಷ್ಣ, ಶಿವಾನಂದ ತಗಡೂರು, ಪ್ರಶಸ್ತಿ ಪುರಸ್ಕೃತರು: ರಾಜ್‌ಕುಮಾರ್, ಸ್ವೀಕರಿಸುವವರು: ಶಿವರಾಜ್ ಕುಮಾರ್, ಆಯೋಜನೆ: ಕನ್ನಡ ಡಿಂಡಿಮ ಪ್ರತಿಷ್ಠಾನ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣ, ಅಗ್ರಹಾರ ದಾಸರಹಳ್ಳಿ, ಬಸವೇಶ್ವರನಗರ ಮುಖ್ಯರಸ್ತೆ, ಸಂಜೆ 4ರಿಂದ

ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಗಾಯನ: ಪ್ರಣವ್ ಕಿಕ್ಕೇರಿ, ಪಿಟೀಲು: ಆರ್. ವರಲಕ್ಷ್ಮೀ, ಮೃದಂಗ: ಸಿ. ಚೆಲುವರಾಜು, ಘಟ: ಗುರುಮೂರ್ತಿ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 5.30

ತುಳಸಿ ರಾಮಾಯಣ ಕಾವ್ಯ ಗಮಕ: ವಾಚನ: ಶ್ರಮತಿ ಜಯರಾಮ್, ವ್ಯಾಖ್ಯಾನ: ಜಯಂತಿ ಗೋಪಾಲ್, ಸ್ಥಳ: ಕುಮಾರವ್ಯಾಸ ಮಂಟಪ, ಕನ್ನಡ ಸಹೃದಯರ ಪ್ರತಿಷ್ಠಾನ, ರಾಜಾಜಿನಗರ, ಸಂಜೆ 5.30

‘ಹಾಡು ಹುಟ್ಟಿದ ಸಮಯ’: ಸೌರಭ ಕುಲಕರ್ಣಿ, ಗಾಯನ: ಸಮನ್ವಿತಾ ಶರ್ಮಾ, ಅಜಯ್ ವಾರಿಯರ್, ಮೋಹನ್ ಕೃಷ್ಣ, ಸ್ಥಳ: ದಯಾನಂದ ಸಾಗರ್ ಕಾಲೇಜಿನ ಸಭಾಂಗಣ, ಕುಮಾರಸ್ವಾಮಿ ಲೇಔಟ್, ಸಂಜೆ 6

‘ಕರ್ಣ ಭೇದನ’ ಯಕ್ಷಗಾನ ಪ್ರದರ್ಶನ: ಹಿಮ್ಮೇಳದ ಭಾಗವತರು: ಬಾಲಕೃಷ್ಣ ಹಿಲ್ಲೋಡಿ, ಮದ್ದಳೆ: ರಾಘವೇಂದ್ರ ಭಟ್, ಮುಮ್ಮೇಳ: ರವಿ ಐತುಮನೆ, ಆನಂದ ಶೀಗೇಹಳ್ಳಿ, ಮನೋಜ್ ಭಟ್ ಏಳಗದ್ದೆ, ಆಯೋಜನೆ: ನಿರ್ಮಾಣ್ ಯಕ್ಷಬಳಗ, ಸ್ಥಳ: ಮಾತಿನ ಮನೆ, ನಂ.14, ಐದನೇ ಕ್ರಾಸ್, ಆರನೇ ರಸ್ತೆ, ಚಾಮರಾಜಪೇಟೆ, ಸಂಜೆ 6

‘ರಕ್ತ-ಧ್ವಜ’ ಧ್ವಜ ನಾಟಕ ಪ್ರದರ್ಶನ: ನಿರ್ದೇಶನ: ದಾಕ್ಷಾಯಿಣಿ ಭಟ್ ಎ., ಆಯೋಜನೆ: ದೃಶ್ಯ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಲೈಂಗಿಕ ಕಿರುಕುಳ: ಸ್ವಾಮೀಜಿ ವಿರುದ್ಧ ಮಹಿಳೆ ದೂರು

ದೊಡ್ಡಬಳ್ಳಾಪುರ: ತಾಲ್ಲೂಕಿನ ಮೇಳೇಕೋಟೆಯ ಮಹರ್ಷಿ ವಾಲ್ಮೀಕಿ ಗುರುಕುಲ ಪೀಠದ ಬ್ರಹ್ಮಾನಂದ ಸ್ವಾಮೀಜಿ ವಿರುದ್ಧ ಮಹಿಳೆಯೊಬ್ಬರು ನಗರದ ಮಹಿಳಾ ಪೊಲೀಸ್ ಠಾಣೆಯಲ್ಲಿ ಶನಿವಾರ ಲೈಂಗಿಕ ಕಿರುಕುಳ ದೂರು ನೀಡಿದ್ದಾರೆ. ಮಹಿಳೆ ವಿರುದ್ಧ ಸ್ವಾಮೀಜಿಯೂ ಪ್ರತಿ ದೂರು ದಾಖಲಿಸಿದ್ದಾರೆ.

ಹಲವು ಬಾರಿ ಆಡಿಯೊ ಹಾಗೂ ವಿಡಿಯೊ ಕರೆ ಮಾಡಿ ಸ್ವಾಮೀಜಿ ಲೈಂಗಿಕ ಕಿರುಕುಳ ನೀಡಿದ್ದಾರೆ. ತನ್ನ ಬಳಿ ಇರುವ ವಿಡಿಯೊ ಹಾಗೂ ಆಡಿಯೊಗಳನ್ನು ಅಳಿಸಿ ಹಾಕಿದರೆ ₹50 ಸಾವಿರ ನೀಡುವುದಾಗಿ ಸ್ವಾಮೀಜಿ ಆಮಿಷ ಒಡ್ಡಿದ್ದಾರೆ ಎಂದು ಮಹಿಳೆ ಆರೋಪಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Anjanapura

BDA-SITES BANASHANKARI 6th Stage, Anjanapura BCC/BCMC Sosity Sites 30x40, 40x60, 50x80 Buying & Selling Rajesh: 9945610779

Airport Road

"**SALE SITE** 40x60 BIAAPA approved before International Airport close to Defence & Aero park Rs.5900/-P.Sft. 9845286505"

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES, BRINDAVAN ASSOCIATES:- 9980863245/ 9945333993

BANASHANKARI VI 30x40, 40x60, 50x80 and Commercial Sites, Rajarajeshwari Nagar 30x40, 40x60, 50x80, 55x120. 9448483699

50X80 EAST NORTH Corner BDA Site Sale Banashankari 6th Stage, 3rd Block, Genuine Buyers Call: 9008418631.

ANJANAPURA 8TH Block, BSK 7th Block, Commercial Property for Sale: Contact: 9972720488/ 9880448478.

Hebbal

HEBBAL 30X35 House Sale, Ground 1 BHK, Two Carparking, 1st 2 BHK, 2nd 2 BHK 9845623970/ 9739400838

HSR Layout

"**HSR LAYOUT 20X30** Commercial Building with Rental Income under ₹1,60,000/-per Month, 30x40,40x60, Residential, Commercial sites for sale "Krishna" 9886294610"

Intl Airport Road

EMBASSY SPRINGS 50X80, Jade Gardens 60X100, Century Eden 40X50, Hollywood Town 4800-14500sft, Supreme Estates 9632974714

Kempegowda Layout

40 x 60 Site for Sale BDA Rs. 8500/-
East facing, 40 ft/rd, Nadaprabhu Kempegowda Layout near Kengeri Metro Station.
Contact: **9916826976**

COMERCIAL PROPERTY KEMPEGOWDA LAYOUT BDA Site 50x80, A Sector 6th Block 100 feet Road Genuine Buyers Only, Broker Excuse: 8884709409

NADAPRABHU KEMPEGOWDA LAYOUT BDA SITES SELLING/ BUYING 20x30, 30x40, 40x60, 50x80, Genuine Buyers Call: 9632146784, 9731162167.

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar:- 9945119449

BDA SITE South facing, measuring 50x80, 1st K Sector, 60 ft Double Road (Commercial), Connects Business Corridor, Kempegowda Layout, Site Sale. 13000/- psqft. +919353534340.

J P Nagar

"**J.P.NAGAR, SRINIDHI LAYOUT** 30x51 Residential Site, East Facing, BBMP A Katha, Full White. Direct Owner: 9845249799/ 9845088449"

J.P.NAGAR 3RD, near Mini Forest, Jayadev Metro, 60' Road, suitable Residential/ Semi-commercial, 45x75, 10,80,00000/- 9739995042

Jakkur

MCECHS 1ST PHASE, Jakkur 30x50 West Semi Commercial 'A' Katha site on 100ft Road. Good Location. Behind Manyata Techpark. For Sale. 9901339191

Mysore Road

PRICE 1900SFT Only Mysore road kengeri Greater Bangalore 40x60 Ekhatha Only Immediately Settlement Contact: 8892731813

Nelamangala

30X40 SITE Available Brundavana Layout Near Vishwashanti Aashram 200 meter from Tumkur Road Arishinakunte: 9590009797

Nagarabhavi

"**NAGARBHAVI/ VISHVESHWARAIAH / KEMPEGOWDA LAYOUT** 30x40,40x60 OR ANY MEASUREMENT SITES REQUIRED & AVAILABLE PREFERABLY OWNER/`ALLOTTE SITES. 9845268611"

Out-Station

PENUKONDA NEAR KIA Car-Factory Madakasira Highway 50X100 (2-SITES) Residential Converted, Gated Community, 499/- PSft: 8310681025

Rajajinagar

TOTAL SQFT 1100, 19th main, 1st Block (East) Rajajanagar Ground/ 1st, old house. Contact: 9845720810.

RMV

DOLLARS COLONY RMV 2nd Stage 50X90 West With Old House BDA Excellent Location For-Sale Call:7829203369

Vijayanagar

SITE FOR SALE: 60X90 WEST FACING WOC ROAD RPC LAYOUT ONLY GENUINE BUYERS: 6363250343/ 9845038343

Vishweshwariah Layout

DIRECT OWNER 30x40 BDA Site Sale VISHWESHWARAIAH LAYOUT/ KEMPEGWODA LAYOUT. Rs.8100/-. Sreenidhi: 9742681666, 9886634578

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616

BDA SITE SALE VISHWESHWARAIAH LAYOUT 6TH BLOCK 30X40 WEST NEAR OXFORD COLLEGE 40X60 NEAR KLE COLLEGE: 8892901567

BDA SITE Sale 30x40 South Facing Very Good Location Rs. 2Cr Negotiable Vishweshwaraiah Layout 8th Block: 9611577666

'DIRECT OWNER' 20x30 N/F Vishveswaraiah Layout 2nd Block, Near Kommagatta, Full Developed Area: 8496030007/ 8310885235

Vidyaranyapura

INDEPENDENT 60'X40' BEL 2 Block Prime Location (4 BHK Duplex Semi Furnished) 16000/- S/F:: 9844264852

Bannerghatta Road

BANNERGHATTA ROAD, Bilekahalli, near Vega City Mall 60x50 East, A Katha Site, suitable for Apartment, 4,65,00,000/- 9739995042

Jayanagar

40X60 WEST- FACING Site with Building for Sale, Jayanagar 1st Block. Contact: 9611880033.

Magadi Road

"**BEL 2ND STAGE** Magadi Main Road 1425 Sqft x 2 Sites South West Corner 60`ft Road, 9845500019/ 7019314962"

Mysore

SITES SALE AT KBL SILICON CITY PH3 Mysore EAST & WEST FACING @ RS. 3800 NO NEGOTIATION CHANDRU 9844754873

Flat

Kanakapura Road

HIGH RENTAL INCOME PROPERTIES FOR SALE NEAR METRO STATIONS ON KANAKAPURA ROAD. SARAKKI HOMES: 9663676464

Nagarabhavi

FLATS FOR-SALE @ Nagarabhavi Chandra Layout 2 & 3BHK Ready to Move In Good Location Call:9538472420 9845066608

R T Nagar

2 BHK Semi-Furnished Flat Near White House First Floor For Sale. 61 Lakhs Contact: 9845575731

Uttarahalli

4BHK NEW FLATS SALE Ready to Move A Khatha, E-swathu, Carparking, Lift, Vaasthu, Maruthi Layout. Rs.1.10.Cr. 9945224058, 6363181276.

PROPERTY CORNER
ಕ್ಲಾಸಿಫೈಡ್ಸ್

VION PROPERTIES PVT. LTD.
(Builders, Devlopers, Promoters)
No 205, 2nd Floor, 6, Salapuria Money Chambers, KH Road, Shanthinagar, Bangalore 560027

PRIME OPPORTUNITY !!!

Invest Rs.800/- Per SQFT In Bangalore south district, next to Bannerghatta National Forest, excellent forest view for Eco nature lovers, Hill Climb- Hilltop- Forest view, Agriculture Farmland plots, close to Bangalore city, Quarter acre (10,000 sqft) & Half acre(20,000 sqft) adjacent to Bannerghatta Forest off Jigani /Anekal - Harohalli main 80 feet road

VICINITY
- 500 Mtrs to Main Road
- 750 Mtrs to Thatekere
- 800 Mtrs to Proposed STRR (Satellite Town Ring Road) 120: Feet
- 4 Kms To IIM (Indian Institute Of Management) New Campus 250 Acres
- 5 Kms To KHB (Karnataka Housing Board) Suryacity
- 5.5 Kms to Proposed International Standard Sports Stadium By Govt Of Karnataka
- 15 Kms to Jigani and Anekal
- 17 Kms to Harohalli
- 38 Kms to Bangalore Via Bannerghatta
- 49 Kms To Bangalore Via Harohalli

ONLY FEW PLOTS AVAILABLE !!!
CONTACT
7411692219 / 9632642940
E-mail: vionproperties@gmail.com

FOR SALE
BDA SITE No. 90, BTM 1st Stage, North facing 40 x 60, 60 ft Road, Adjacent to JALA BHAVAN, Between Bannerghatta Road to Jayanagar East End Road, Approx 100 mtr to Bannerghatta Main Road.
Genuine Buyers Call: Muralidhar
98453 01599

PRM/KA/RERA/1251/308/PR/160824/006973
DS MAX SKY SANMAN
SUPER LUXURIOUS 2 & 3-BHK APARTMENTS
DS MAX
BANNERGHATTA ROAD
NEAR KOPPA GATE
2-BHK HOMES STARTS @
₹ 62.42 L*
BDA APPROVED | G+14 FLOORS



*T & C Apply
8880 013 310
www.dsmaxproperties.com

House

Jayanagar

SALE 35X45 Jayanagar 4th T Block North Facing With old House on 40feet Road Excellent Location Ct: 9844134068

J P Nagar

J.P.NAGAR 1ST Phase 45x60, South, 40' Road 3BHK 3 unit House, 32,000/-, Excellent Residential -9845144365

Mysore Road

SALE BEAUTIFUL HOUSE Mysore Road, Near RRHospital, Under Construction Site`30x50,Facing East in a Gated Community BDA`Approved Layout Basement Parking 1st&2nd Floor Independent 3`BHK. 3&4`Floor Duplex with,Open Terrace, Lift,Till Top`Floor. Call:9632224247

Nagarabhavi

NAGARABHAVI RENT Independent Triplex 4BHK Luxurious House Lift. 4-Car-Parks Borewell Master Bedrooms 1.1 Lakhs: 9036207777

"**NAGARABHAVI NEAR** BDA Complex 40x60 North East Door 40`ft Road, Newly Highend Duplex House. 9448432633"

SALE DUPLEX built-up 2300sft, Site 758sft, East, Furnished NGEF Layout, Mallathahalli, 60ft road Adjacent 9901552147

Nelamangala

SALE SITE 9120 sqft, Buildup Area 18000 sqft, Total 10 Houses Near Thomas School. 9845527196.

Vijayanagar

DIRECT OWNER LAVISH HOME 40×65 West Facing BDA Property For Sale 5BHK TRIPLEX HOUSE 9739396969

Vidyaranyapura

4-STORY HOUSE FOR SALE in Ramchandrapura, Jalahalli (Post) Bangalore 13. Size: 20X30. Built area 2700 Sqft: 1,75,00,000/- 9880450523.

Varthur

4BHK VILLA 3400 sq.ft. in BDA approved layout at Varthur. Urgent Sale. Owner moving abroad. Plot size 2180 sq.ft. Price 3.25 Cr. negotiable. Ph 9620067580

Kanakapura Road

KANAKAPURA ROAD, BCC Layout,30x50, G+3 Brand New House 4.60 Cr/ 900 Sqft,3BHK Duplex 2.50Cr: 9845704509

BTM Layout

HOUSE AND Site For Sale 30×40,40×60 East &North Facing For sale BTM 2nd Stage 9945377119/ 9844099557

Industrial & Factory

Hoskote

INDUSTRIAL LAND for SALE, At Pillagumpe Industrial Area, Hoskote. Dimension: 40x100 square meter, East facing. Contact: 8310098500

Commercial Building

Malleshwaram

SALE OFFICE SPACE 3600Sq.ft, Furnished 4th Floor,Vishnupriya Towers, Beside Srirampura Metro Station Price: 15,000/Sq.ft. Call:9900029200

Commercial Land

Bangalore North

KOCHOHALLI-10000 (100 X 100) Sqft Commercial vacant land for Sale-opposite Sri Vani School- call-8778666035-South West Corner-100 Mts from Magadi Mainroad

Commerical

M G Road And Around

A DISTRESS SALE:1465Sft North facing, 2 Adjacent OFFICE UNITS, with view of RACE COURSE Swiss Complex. 570Sft- 95Lac 900Sft-1.67Cr Call: 97404-15657

Vijayanagar

450-SQFT COMMERCIAL Office Space Floor Wise For Sale Opposite to Vijayanagar Metro Station Contact: 7676900174 9945569909

Vishweshwariah Layout

SMV LAYOUT 4th Block 875.Sqft. BDA Commercial North East`Corner Site`Sale Near 100`Feet Road, 1.30cr. Negotiable. Call:9164089633 9663226688.

REAL ESTATE BUYING

Agricultural Land

Kanakapura Road

5 ACRES LAND REQUIRED between Kaggalipura to Harohalli on NH/ Closer to NH with Good Connectivity Tar Road: 8088600872

General

General

WE DO FUNDING & Solutions/ Settlements for disputed properties under High Court,Civil/ DC/AC/ Tribunal/ Tahsildar Courts Pending cases. Contact Verna Developers, Barton Centre, MG Road, Bangalore. 9620253180.

Sites

Banashankari

BDA SITES WANTED ARKAVATHY ANJANAPURA BANASHANKARI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

Vishweshwariah Layout

WANTED BDA Sites NRI, Vishweshwaraiah Layout, Kempegowda Layout, Nagarbhavi, Magadi Road, Banashankari Contact: 9620696913/ 9880781399

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

FOR RENT/ SALE Fully Furnished Office Old Airport Road VDB TOUCHDOWN Next to HAL Museum 7447Sqft 96 Work Stations 5 Cabins 3 Meeting Room1 Board 1 MD Cabin 6 Carparks. No PHONE CALLS WHATS APP MESSAGE ONLY TO: 9845031550

SHOWROOMS FOR RENT available at Brookefield Kundalahalli adjacent to Brigade Tech Park, BSNL office main road circle.900 sqft and 700 sqft. Suitable for showrooms and shops. 1st floor of Indian Overseas Bank commercial building. Shared bathrooms available. Contact: 8310818291

RESIDENTIAL/ OFFICE rental place 2550 sqft, ground floor, available at Royal Manor apartment, Cunningham road, Bangalore. Contact owners: Prasad 9845269809, Suresh 9880237987

1700.SQFT COMMERCIAL Space for Rent, ITI Layout Main Road,Sector-7, HSR, Prime Location, Party Hall,Garment Textile Wholesaler, Coaching Academy, Diagnostics Center, Consultation Chambers. Contact: Owner: 9343594249/ 8217449006.

COMMERCIAL PLACE AVAILABLE ON RENT-4000 Square feet is available for Rent at 2nd_floor Uluchukamme Brahmana Mahasabha, Commercial Complex, Siddaiah Road, Wilson Garden Bangalore. Suitable for Office, Showroom, IT hub, Gym, Warehouse, Diagnostic Laboratory etc. Rent Rs.45 Per Sq.ft Negotiable. Interested Company/ Person may Contact Lakshminarayanrao 9448466920 Muralidhara -9448802178 Suresh -9880237987

AUTOMOBILE 1000 Square feet Rental Commercial Building, Ground Floor, Ready Setup Available for Two Wheeler Dealership at 2nd Block, Rajajinagar, Contact: 7348951555/ 9845143415

House

KUMARAPARK WEST- For Rent only2200 sqft, 3BHK, 1st floor, East facing property, 100% vastu, Looking for Residencial, Office or Company guest houses.Contact 8884096146

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

MORE Classifieds Ads on Subsequent Pages

ಚಿಟಿಕೆ ಸುದ್ದಿ

ಬಾಲಿವುಡ್ ನಟಿ ಒಡೆತನದ ಪಬ್‌ನಲ್ಲಿ ಗಲಾಟೆ

ಬೆಂಗಳೂರು: ಬಾಲಿವುಡ್ ನಟಿಯೊಬ್ಬರ ಒಡೆತನದಲ್ಲಿರುವ ನಗರದ ಲ್ಯಾಂಗ್‌ಫೋರ್ಡ್ ರಸ್ತೆಯ ಪಬ್‌ನಲ್ಲಿ ಎರಡು ದಿನಗಳ ಹಿಂದೆ ಗಲಾಟೆ ನಡೆದಿದೆ.

ಗಲಾಟೆಯ ವಿಡಿಯೊ ಜಾಲತಾಣದಲ್ಲಿ ಹರಿದಾಡುತ್ತಿದೆ. ಆ ವಿಡಿಯೊ ಆಧರಿಸಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಪಬ್‌ನಲ್ಲಿ ಸರ್ವಿಸ್ ವಿಚಾರಕ್ಕೆ ಸಂಬಂಧಿಸಿದಂತೆ ಸಿಬ್ಬಂದಿ ಹಾಗೂ ಉದ್ಯಮಿಯ ನಡುವೆ ವಾಗ್ವಾದ ನಡೆದಿದೆ. ಗಲಾಟೆಯ ವೇಳೆ ಪಬ್ ಸಿಬ್ಬಂದಿಯ ಮೇಲೆ ಹಲ್ಲೆ ಮಾಡಲಾಗಿದೆ. ಗಲಾಟೆಯ ಬಗ್ಗೆ ದೂರು ದಾಖಲಾಗಿಲ್ಲ.

ಕಬ್ಬನ್‌ಪಾರ್ಕ್ ಠಾಣೆ ಪೊಲೀಸರಿಗೆ ವಿಡಿಯೊ ಸಿಕ್ಕಿದ್ದು ಅದರ ಪರಿಶೀಲನೆ ನಡೆಸುತ್ತಿದ್ದಾರೆ ಎಂದು ಗೊತ್ತಾಗಿದೆ.

ಬಾಲಕ ಆತ್ಮಹತ್ಯೆ

ಬೆಂಗಳೂರು: ಆರ್‌.ಟಿ. ನಗರ ಠಾಣಾ ವ್ಯಾಪ್ತಿಯ ರಹಮತ್ ನಗರದಲ್ಲಿ ಬಾಲಕನೊಬ್ಬ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಸಮೀರ್(16) ಆತ್ಮಹತ್ಯೆ ಮಾಡಿಕೊಂಡ ಬಾಲಕ.

‘ಶುಕ್ರವಾರ ಸಂಜೆ ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ಕೊಠಡಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಕೆಲಸಕ್ಕೆ ತೆರಳಿದ್ದ ಪೋಷಕರು ಮನೆಗೆ ಬಂದು ನೋಡಿದಾಗ ಬಾಲಕ ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿದೆ. ಪೋಷಕರು ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಲಾಯಿತು’ ಎಂದು ಪೊಲೀಸರು ಹೇಳಿದರು.

‘ಪೋಷಕರು ನೀಡಿದ ದೂರಿನ ಮೇರೆಗೆ ಅಸಹಜ ಸಾವು ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ತ್ವರಿತ ವಿಲೇವಾರಿಗೆ ಎಸ್‌ಒಪಿ

ಬೆಂಗಳೂರು: ರಾಜ್ಯದ ಭೂ ನ್ಯಾಯಮಂಡಳಿಯಲ್ಲಿರುವ ಅರೆ ನ್ಯಾಯಿಕ ವಿಚಾರಣೆ ವ್ಯಾಪ್ತಿಗೆ ಒಳಪಟ್ಟ ಪ್ರಕರಣಗಳ ತ್ವರಿತ ವಿಲೇವಾರಿ ಮಾಡಲು ಪ್ರಮಾಣಿತ ಕಾರ್ಯಚರಣೆ ವಿಧಾನವೊಂದನ್ನು (ಎಸ್‌ಒಪಿ) ಸಿದ್ಧಪಡಿಸಲು ಕಂದಾಯ ಇಲಾಖೆ ಉನ್ನತ ಮಟ್ಟದ ಸಮಿತಿ ರಚನೆ ಮಾಡಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕಿನ ಭೂ ನ್ಯಾಯಮಂಡಳಿ ಆದೇಶ ರದ್ದು ಕೋರಿ ಕೆ.ವೀರಣ್ಣ ಸಲ್ಲಿಸಿದ್ದ ಅರ್ಜಿ ವಿಚಾರಣೆಯಲ್ಲಿ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ, ನ್ಯಾಯಮೂರ್ತಿ ಕೆ.ರಾಜೇಶ್ ರೈ ಅವರಿದ್ದ ಏಕಸದಸ್ಯ ನ್ಯಾಯಪೀಠಕ್ಕೆ ಈ ವಿಷಯ ತಿಳಿಸಿದ್ದಾರೆ.

‘ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಕುಲಸಚಿವ ಸಂತೋಷ್ ಕಾಮಗೌಡ, ಕಂದಾಯ ಇಲಾಖೆ ಭೂಮಿ ಉಸ್ತುವಾರಿ ಕೋಶದ ವಿಶೇಷ ಜಿಲ್ಲಾಧಿಕಾರಿ ಆರ್. ಜಿ.ಚಂದ್ರಶೇಖರ್ ಮತ್ತು ತಹಶೀಲ್ದಾರ್ ಬಿ.ಎನ್.ಸ್ವಾಮಿ ಸಮಿತಿಯ ಸದಸ್ಯರಾಗಿದ್ದಾರೆ’ ಎಂದು ವಿವರಿಸಲಾಗಿದೆ.

ಅರಕೆರೆ ಗ್ರಾ.ಪಂಗೆ ಉಪಾಧ್ಯಕ್ಷರ ಆಯ್ಕೆ


ರಾಮೆಲ್ಲಪ್ಪ

ಯಲಹಂಕ: ಅರಕೆರೆ ಗ್ರಾಮ ಪಂಚಾಯಿತಿಯ ನೂತನ ಉಪಾಧ್ಯಕ್ಷರಾಗಿ ರಾಮೆಲ್ಲಪ್ಪ ಅವಿರೋಧವಾಗಿ ಆಯ್ಕೆ ಆಗಿದ್ದಾರೆ. ಚನ್ನಪ್ಪ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕಾಗಿ ಇತ್ತೀಚೆಗೆ ಚುನಾವಣೆ ನಡೆಯಿತು. ಒಟ್ಟು 22 ಸದಸ್ಯಬಲ ಹೊಂದಿರುವ ಪಂಚಾಯಿತಿಯಲ್ಲಿ ಉಪಾಧ್ಯಕ್ಷ ಸ್ಥಾನಕ್ಕಾಗಿ ರಾಮೆಲ್ಲಪ್ಪ ಅವರೊಬ್ಬರೇ ನಾಮಪತ್ರ ಸಲ್ಲಿಸಿದ್ದರು.

700 ನಾಮನಿರ್ದೇಶಿತ ಸದಸ್ಯರು

ಐದೂ ನಗರ ಪಾಲಿಕೆಗಳಲ್ಲಿ ಪ್ರತಿ 20 ಸಾವಿರ ಜನರಿಗೊಬ್ಬ ಮತದಾನ ಹಕ್ಕಿಲ್ಲದ ಸದಸ್ಯ

ಐದು ನಗರ ಪಾಲಿಕೆಯಲ್ಲಿರುವ ಮತದಾರರು

ಪೂರ್ವ ನಗರ ಪಾಲಿಕೆ	ಉತ್ತರ ನಗರ ಪಾಲಿಕೆ	ದಕ್ಷಿಣ ನಗರ ಪಾಲಿಕೆ	ಕೇಂದ್ರ ನಗರ ಪಾಲಿಕೆ	ಪೂರ್ವ ನಗರ ಪಾಲಿಕೆ
26,69,573	17,92,900	16,27,807	14,57,065	8,55,445

• ಆರ್‌.ಮಂಜುನಾಥ್

1.40 ಕೋಟಿ ನಗರದಲ್ಲಿರುವ ಅಂದಾಜು ಜನಸಂಖ್ಯೆ

700 ಪ್ರತಿ 20 ಸಾವಿರ ಜನಸಂಖ್ಯೆಯಂತೆ ನಾಮ ನಿರ್ದೇಶಿತ ಸದಸ್ಯರು

369 ವಾರ್ಡ್‌ಗಳಿಗೆ ಚುನಾಯಿತರಾಗುವ ಕಾರ್ಪೊರೇಟರ್‌ಗಳು

ಬೆಂಗಳೂರು: ನಗರ ಪಾಲಿಕೆಗಳ ಚುನಾವಣೆಯ ಅನಿಶ್ಚಿತತೆಯಲ್ಲಿರುವ ಸಂದರ್ಭದಲ್ಲಿ ಐದೂ ನಗರ ಪಾಲಿಕೆಗಳಿಗೆ 700ಕ್ಕೂ ಹೆಚ್ಚು ನಾಮ ನಿರ್ದೇಶಿತ ಸದಸ್ಯರನ್ನು ನೇಮಕ ಮಾಡಲು ಸರ್ಕಾರ ಮುಂದಾಗಿದೆ.

ಬಿಬಿಎಂಪಿಯಲ್ಲಿ ಜನಪ್ರತಿನಿಧಿಗಳ ಅವಧಿ ಮುಗಿದು ಐದು ವರ್ಷ ಚುನಾವಣೆ ನಡೆಸಿರಲಿಲ್ಲ. 2025ರ ಸೆಪ್ಟೆಂಬರ್ 2ರಂದು ಬಿಬಿಎಂಪಿ ಅಸ್ತಿತ್ವ ಕಳೆದುಕೊಂಡು, ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ–2024ರಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಅಸ್ತಿತ್ವಕ್ಕೆ ಬಂದಿತು. ಅದೇ ದಿನ ಐದು ನಗರ ಪಾಲಿಕೆಗಳೂ ರಚನೆಯಾದವು.

ಐದೂ ನಗರ ಪಾಲಿಕೆಗಳಿಗೆ ವಾರ್ಡ್‌ಗಳ ಮರುವಿಂಗಡಣೆ ಅಂತಿಮವಾಗಿದ್ದರೂ, ಇನ್ನೂ ಮೀಸಲಾತಿಯನ್ನು ನಿಗದಿ ಮಾಡಿಲ್ಲ. ಈ ಸಂದರ್ಭದಲ್ಲಿ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಗೆ ತಿದ್ದುಪಡಿ ತಂದು, ನಗರ ಪಾಲಿಕೆಗಳಿಗೆ ಚುನಾವಣೆ ನಡೆಯುವವರೆಗೂ ನಾಮ ನಿರ್ದೇಶಿತ ಸದಸ್ಯರನ್ನು ನೇಮಕ ಮಾಡಲು ಮುಂದಾಗಿದೆ. ಇದರಿಂದ, ಒಟ್ಟಾರೆ ಚುನಾಯಿತ ಕಾರ್ಪೊರೇಟರ್‌ಗಳಿಗಿಂತ 300ಕ್ಕೂ ಹೆಚ್ಚು ನಾಮ ನಿರ್ದೇಶಿತ ಕಾರ್ಪೊರೇಟರ್‌ಗಳೇ ಇರಲಿದ್ದಾರೆ.

ಬಿಬಿಎಂಪಿಯ ಅವಧಿಯಲ್ಲಿ 198 ಚುನಾಯಿತ ಕಾರ್ಪೊರೇಟರ್‌ಗಳಿದ್ದರೆ, 20 ನಾಮ ನಿರ್ದೇಶಿತ ಸದಸ್ಯರಿದ್ದರು.

ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆಯುತ್ತಿರುವ ವಿಧಾನಸಭೆಯಲ್ಲಿ ಮಸೂದೆಯನ್ನು ಡಿ.12ರಂದು ಮಂಡಿಸಲಾಗಿದೆ. ಚುನಾಯಿತ ಸದಸ್ಯರಿಲ್ಲದ ಸಂದರ್ಭದಲ್ಲಿ ನಾಮನಿರ್ದೇಶಿತ ಸದಸ್ಯರನ್ನು ನೇಮಿಸಲು ಹೊರಟಿರುವುದು ಸಂವಿಧಾನ ವಿರೋಧಿ ಎಂಬ ಆರೋಪ ವ್ಯಕ್ತವಾಗಿದೆ.

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಯ ಪ್ರಕರಣ 30ಕ್ಕೆ ತಿದ್ದುಪಡಿ ತಂದು, ಐದನೇ ಅಂಶವನ್ನು ಸೇರಿಸಲು ಮಸೂದೆ ಮಂಡಿಸಲಾಗಿದೆ. ‘ಗ್ರೇಟರ್ ಬೆಂಗಳೂರು ಪ್ರದೇಶಕ್ಕೆ ಸೇರಿದಂಥ ಸ್ಥಳೀಯ ಪ್ರದೇಶದಲ್ಲಿ ಸಾಮಾನ್ಯ ನಿವಾಸಿಯನ್ನು ಆ ಸ್ಥಳೀಯ ಪ್ರದೇಶಕ್ಕೆ ಚುನಾವಣೆ ನಡೆಸುವವರೆಗೆ ಪ್ರತಿ 20 ಸಾವಿರ ಜನಸಂಖ್ಯೆಗೆ ಕನಿಷ್ಠ ಒಬ್ಬ ವ್ಯಕ್ತಿಯಂತೆ ಆ ನಿರ್ದಿಷ್ಟ ನಗರ ಪಾಲಿಕೆಗೆ ಹೆಚ್ಚುವರಿ ಸದಸ್ಯನಾಗಿ ನಾಮ ನಿರ್ದೇಶಿಸತಕ್ಕದ್ದು’. ‘ಅಂಥ ನಾಮ ನಿರ್ದೇಶಿತ ವ್ಯಕ್ತಿಯು ನಗರ ಪಾಲಿಕೆಯಲ್ಲಿ ಮತದಾನ ಮಾಡುವ ಅಧಿಕಾರವನ್ನು ಹೊಂದಿರುವುದಿಲ್ಲ’ ಎಂದು ತಿದ್ದುಪಡಿ ತರುವ ಅಂಶಗಳಲ್ಲಿ ಹೇಳಲಾಗಿದೆ.

ಐದು ನಗರ ಪಾಲಿಕೆಗಳಲ್ಲಿ 369 ವಾರ್ಡ್‌ಗಳನ್ನು ಅಂತಿಮಗೊಳಿಸಿ ನವೆಂಬರ್ 19ರಂದು ನಗರಾಭಿವೃದ್ಧಿ ಇಲಾಖೆ ಅಂತಿಮ ಅಧಿಸೂಚನೆ ಹೊರಡಿಸಿದೆ. ಇದಾದ ನಂತರವೂ, 20 ವಾರ್ಡ್‌ಗಳ ಗಡಿ ಮತ್ತು ಹೆಸರು ಬದಲಾಯಿಸಿ ಅಧಿಸೂಚಿಸಲಾಗಿದೆ. ಚುನಾವಣೆಗೆ ಸಂಬಂಧಿಸಿದಂತೆ ಮತದಾರರ ಪಟ್ಟಿ ತಯಾರಿಸುವ ಪ್ರಕ್ರಿಯೆ ನಡೆಯುತ್ತಿದ್ದು, ಫೆಬ್ರುವರಿಯಲ್ಲಿ ಚುನಾವಣೆ ನಡೆಸುವುದಾಗಿ ಹೇಳಲಾಗುತ್ತದೆ. ಆದರೆ, ಇದೀಗ ಕಾಯ್ದೆಗೆ ತಿದ್ದುಪಡಿ ತಂದು ನಾಮ ನಿರ್ದೇಶಿತ ಸದಸ್ಯರನ್ನು ನೇಮಕ ಮಾಡುವ ಸರ್ಕಾರದ ಪ್ರಕ್ರಿಯೆಯಿಂದ ಚುನಾವಣೆ ಸದ್ಯಕ್ಕೆ ನಡೆಯುವುದಿಲ್ಲ ಎಂಬ ಸಂಶಯ ಮೂಡಿದೆ.



ಪಾಲಿಕೆ ಸದಸ್ಯರಾಗುವ ಆಕಾಂಕ್ಷೆ ಹೊಂದಿರುವವರನ್ನು ತಕ್ಷಣಕ್ಕೆ ಸಮಾಧಾನಪಡಿಸಲು ನಾಮನಿರ್ದೇಶನದ ಅಸ್ತ್ರ ಉಪಯೋಗಿಸಲಾಗುತ್ತಿದೆ
ಪದ್ಮನಾಭ ರೆಡ್ಡಿ, ಬಿಬಿಎಂಪಿಯ ವಿರೋಧ ಪಕ್ಷದ ಮಾಜಿ ನಾಯಕ

ನಗರದ ಸುತ್ತಲಿನ ನಗರಸಭೆ, ಪಟ್ಟಣ ಪಂಚಾಯಿತಿ ಹಾಗೂ ಕೆಲವು ಗ್ರಾಮ ಪಂಚಾಯಿತಿಗಳನ್ನು ಗ್ರೇಟರ್ ಬೆಂಗಳೂರು ಪ್ರದೇಶಕ್ಕೆ ಸೇರಿಸಿಕೊಳ್ಳಬೇಕೆಂಬ ಉದ್ದೇಶ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗಿದೆ. ಜನಪ್ರತಿನಿಧಿಗಳೂ ಅದನ್ನೇ ಬಯಸುತ್ತಿದ್ದಾರೆ. ಆ ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರ ಅವಧಿ ಈಗಾಗಲೇ ಬಹುತೇಕ ಮುಗಿದಿದ್ದು, ಯಾವ ಸ್ಥಳೀಯ ಸಂಸ್ಥೆಗಳ ಅವಧಿ ಮುಗಿದಿದೆಯೋ ಅವುಗಳನ್ನು ಜಿಬಿಎಗೆ ಸೇರಿಸಿಕೊಳ್ಳುವ ನಿರೀಕ್ಷೆ ಇದೆ.

ಹೊಸ ಪ್ರದೇಶಗಳು ಸೇರಿಕೊಂಡರೆ ಮೂರು ತಿಂಗಳಲ್ಲಿ ಅವುಗಳ ವಾರ್ಡ್‌ಗಳನ್ನು ಮರು ವಿಂಗಡಿಸಿ, ನಗರ ಪಾಲಿಕೆಗಳಿಗೆ ಸೇರಿಸಬೇಕು. ಅಂದರೆ, ಮೂರು ತಿಂಗಳು ಚುನಾವಣೆಗೆ ಸಂಬಂಧಿಸಿದಂತೆ ಯಾವುದೇ ಪ್ರಕ್ರಿಯೆಗಳೂ ನಡೆಯುವುದಿಲ್ಲ. ನಗರ ಪಾಲಿಕೆಗಳ ಚುನಾವಣೆ ಇನ್ನಾರು ತಿಂಗಳು ಮುಂದಕ್ಕೆ ಹೋದದಂತಾಗುತ್ತದೆ ಎಂದು ಹೇಳಲಾಗಿದೆ.

ಸಂವಿಧಾನ ಬಾಹಿರ: ಪದ್ಮನಾಭ ರೆಡ್ಡಿ

‘ಪ್ರತಿ 20 ಸಾವಿರ ಜನಸಂಖ್ಯೆಗೆ 700ಕ್ಕೂ ಹೆಚ್ಚು ನಾಮ ನಿರ್ದೇಶಿತ ಸದಸ್ಯರನ್ನು ನೇಮಕ ಮಾಡಲು ಹೊರಟಿರುವುದು, ಸಂವಿಧಾನಕ್ಕೆ ವಿರುದ್ಧವಾದುದು. ಕಡ್ಡಾಯ ಚುನಾವಣೆಗಳನ್ನು ನಡೆಸುವ ಬದಲು ಎಲ್ಲ ವಾರ್ಡ್‌ಗಳಿಗೆ ಕಾರ್ಪೊರೇಟರ್‌ಗಳನ್ನು ನಾಮ ನಿರ್ದೇಶನ ಮಾಡುವುದಕ್ಕೆ ಸಂವಿಧಾನದಲ್ಲಿ ಅವಕಾಶವಿಲ್ಲ’ ಎಂದು ಬಿಬಿಎಂಪಿಯ ಮಾಜಿ ವಿರೋಧ ಪಕ್ಷದ ನಾಯಕ ಪದ್ಮನಾಭ ರೆಡ್ಡಿ ಹೇಳಿದರು.

‘74ನೇ ಸಾಂವಿಧಾನಿಕ ತಿದ್ದುಪಡಿ ಕಾಯ್ದೆ, 1992 (ಭಾಗ 11ಎ)ದಿಂದ ಸ್ಥಾಪಿಸಲಾದ ಪುರಸಭೆಗಳನ್ನು ನಿಯಂತ್ರಿಸುವ ಮೂಲಭೂತ ತತ್ವ ಎಂದರೆ ಎಲ್ಲ ವಾರ್ಡ್ ಪ್ರತಿನಿಧಿಗಳಿಗೆ ನೇರ ಚುನಾವಣೆ ನಡೆಸುವುದು. ಆರ್ಟಿಕಲ್ 243ಆರ್ (1) ಇದನ್ನು ಸ್ಪಷ್ಟವಾಗಿ ಹೇಳುತ್ತದೆ. ನಗರ ಪಾಲಿಕೆಗಳಿಗೆ ಚುನಾವಣೆಯವರೆಗೆ ನಾಮನಿರ್ದೇಶನ ಸದಸ್ಯರನ್ನು ಮಾಡುವುದು ಸಂವಿಧಾನದ ಆಶಯವನ್ನೇ ಬೈಪಾಸ್ ಮಾಡಿದಂತಾಗುತ್ತದೆ. ಇದು ಪ್ರಜಾಪ್ರಭುತ್ವದ ಪ್ರಮುಖ ರಚನೆಯನ್ನು ನೇರವಾಗಿ ವಿರೋಧಿಸುತ್ತದೆ’ ಎಂದರು.

‘ನಗರ ಪಾಲಿಕೆಗಳ ಹೊಸ ವಾರ್ಡ್‌ಗಳಿಗೆ ಚುನಾವಣೆ ಮಾಡದೆ, ನಾಮ ನಿರ್ದೇಶನ ಮಾಡಲು ಸರ್ಕಾರಕ್ಕೆ ಯಾವುದೇ ಅವಕಾಶ ಇಲ್ಲದಿದ್ದರೂ, ಕಾಯ್ದೆ ತಿದ್ದುಪಡಿ ಮಾಡಿ ಅದನ್ನು ಮಾಡಲು ಹೊರಟಿರುವುದು ಸಂವಿಧಾನ 74ನೇ ತಿದ್ದುಪಡಿಯ ಉಲ್ಲಂಘನೆಯಾಗಿದೆ. ಹೀಗಾಗಿ, ಪ್ರಜಾಪ್ರಭುತ್ವದ ಕಗ್ಗೊಲೆ ಮಾಡುವ ತಿದ್ದುಪಡಿ ಮಸೂದೆಯನ್ನು ವಾಪಸ್ ಪಡೆಯಬೇಕು’ ಎಂದು ಆಗ್ರಹಿಸಿದರು.

ಸುಕೃತ್, ಸುವಿಕ್ ದಾಳಿಗೆ ಕುಸಿದ ಉತ್ತರಾಖಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೆಗ್ ಸ್ಪಿನ್ನರ್ ಸುಕೃತ್ ಜೆ ಮತ್ತು ಎಡಗೈ ಸ್ಪಿನ್ನರ್ ಸುವಿಕ್ ಗಿಲ್ ಅವರು ತಲಾ ನಾಲ್ಕು ವಿಕೆಟ್ ಗಳಿಸುವುದರೊಂದಿಗೆ ಕರ್ನಾಟಕ ತಂಡ, ವಿಜಯ್ ಮರ್ಚೆಂಟ್ ಟ್ರೋಫಿ (16 ವರ್ಷದೊಳಗಿನವರ) ಕ್ರಿಕೆಟ್ ಟೂರ್ನಿ ಎಲೀಟ್ ಗುಂಪಿನ ಪಂದ್ಯದ ಎರಡನೇ ದಿನವಾದ ಶನಿವಾರ ಉತ್ತರಾಖಂಡ ವಿರುದ್ಧ ಮೇಲುಗೈ ಸಾಧಿಸಿತು.

ಛತ್ತೀಸಗಢದ ಭಿಲಾಯಿಯಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಶುಕ್ರವಾರ 9 ವಿಕೆಟ್‌ಗೆ 275 ರನ್ ಗಳಿಸಿದ್ದ ಕರ್ನಾಟಕ 287 ರನ್ ಗಳಿಸಿತು. ಇದಕ್ಕೆ ಉತ್ತರವಾಗಿ ಉತ್ತರಾಖಂಡ 150 ರನ್‌ಗಳಿಗೆ ಆಲೌಟ್ ಆಯಿತು. ಆರಂಭ ಆಟಗಾರ ಅನನ್ಯ ನೇಗಿ (45, 58ಎ, 4x7) ಮತ್ತು ಸಿದ್ಧಾರ್ಥ ತೋಮಾರ್ (35, 88ಎ) ಮಾತ್ರ ಸ್ವಲ್ಪ ಪ್ರತಿರೋಧ ತೋರಿದರು. ಲೆಗ್ ಸ್ಪಿನ್ನರ್ ಸುಕೃತ್ 48 ರನ್ನಿಗೆ 4 ವಿಕೆಟ್ ಪಡೆದು ಬ್ಯಾಟಿಂಗ್ ಬೆನ್ನೆಲುಬು ಮುರಿದರು. ಎಡಗೈ ಸ್ಪಿನ್ನರ್ ಗಿಲ್ (11ಕ್ಕೆ4) ಕೆಳ ಕ್ರಮಾಂಕದ ಆಟಗಾರರ ವಿಕೆಟ್‌ಗಳನ್ನು ಪಡೆದು ಕರ್ನಾಟಕ 137 ರನ್‌ಗಳ ಮುನ್ನಡೆ ಪಡೆಯಲು ನೆರವಾದರು.

ಕರ್ನಾಟಕ ಎರಡನೇ ಇನಿಂಗ್ಸ್‌ನಲ್ಲಿ 22 ಓವರುಗಳಲ್ಲಿ 1 ವಿಕೆಟ್‌ಗೆ 83 ರನ್ ಗಳಿಸಿದ್ದು ಒಟ್ಟಾರೆ ಮುನ್ನಡೆಯನ್ನು 220 ರನ್‌ಗಳಿಗೆ ಹೆಚ್ಚಿಸಿದೆ. ರೋಹಿತ್ (ಅಜೇಯ 43, 68ಎ, 4x5) ಮತ್ತು ಅರುಷ್ ಜೈನ್ (ಔಟಾಗದೇ 37, 60ಎ) ಮುರಿಯದ ಎರಡನೇ ವಿಕೆಟ್‌ಗೆ 82 ರನ್ ಸೇರಿಸಿದ್ದಾರೆ.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 95 ಓವರುಗಳಲ್ಲಿ 287 (ಆರುಷ್ ಜೈನ್ 135, ಸುಕೃತ್ ಜೆ. 39, ಅಭಿಮನ್ಯ 91ಕ್ಕೆ5, ಆರವ್ ಗುಪ್ತಾ 63ಕ್ಕೆ2, ಶೌರ್ಯ ಎಂ. 32ಕ್ಕೆ2) ಮತ್ತು 22 ಓವರುಗಳಲ್ಲಿ 1 ವಿಕೆಟ್‌ಗೆ 83 (ರೋಹಿತ್ ಎಂ. ಔಟಾಗದೇ 43, ಆರುಷ್ ಜೈನ್ ಔಟಾಗದೇ 37); ಉತ್ತರಾಖಂಡ: 59.4 ಓವರುಗಳಲ್ಲಿ 150 (ಅನಯ ನೇಗಿ 45, ಸಿದ್ಧಾರ್ಥ ತೋಮಾರ್ 35, ರಾಕೇಶ್ 26; ಸುಕೃತ್ ಜೆ. 48ಕ್ಕೆ4, ಸುವಿಕ್ ಗಿಲ್ 11ಕ್ಕೆ4).

ಸ್ಕೇಟಿಂಗ್: ರಿಹಾನ್‌ಗೆ 3 ಪದಕ

ಬೆಂಗಳೂರು: ಕರ್ನಾಟಕದ ರಿಹಾನ್ ರಾಜು ಅವರು ರೋಲರ್ ಸ್ಕೇಟಿಂಗ್ ಫೆಡರೇಷನ್ ಆಫ್ ಇಂಡಿಯಾ ವಿಶಾಖಪಟ್ಟಣದಲ್ಲಿ ಆಯೋಜಿಸಿದ್ದ 63ನೇ ರಾಷ್ಟ್ರೀಯ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಎರಡು ಬೆಳ್ಳಿ ಮತ್ತು ಒಂದು ಕಂಚಿನ ಪದಕ ಗೆದ್ದಿದ್ದಾರೆ.

ರಿಹಾನ್ ಅವರು ಕರ್ನಾಟಕ ರೋಲರ್ ಸ್ಕೇಟಿಂಗ್ ಸಂಸ್ಥೆ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಸ್ಪರ್ಧೆಯಲ್ಲಿ (8ರಿಂದ 10 ವರ್ಷ ವಯೋಮಾನ) ಮೂರು ಚಿನ್ನದ ಪದಕಗಳನ್ನು ಗೆದ್ದು, ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗೆ ಆಯ್ಕೆಯಾಗಿದ್ದರು.



ರಿಹಾನ್


ಸಂಗೀತ ನಿರ್ದೇಶಕ ರಿಕಿ ಕೇಜ್ ಮನೆಯಲ್ಲಿ ಕಳ್ಳತನ ಮಾಡಿದ ದೃಶ್ಯ

ಸಂಗೀತ ನಿರ್ದೇಶಕ ರಿಕಿ ಕೇಜ್ ಮನೆಯಲ್ಲಿ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಗೀತ ನಿರ್ದೇಶಕ ರಿಕಿ ಕೇಜ್ ಅವರ ಬೆಂಗಳೂರಿನ ಮನೆಯಲ್ಲಿ ಕಳ್ಳತನ ನಡೆದಿದ್ದು, ಆರೋಪಿಗಳು ಕೃತ್ಯ ಎಸಗುತ್ತಿರುವ ದೃಶ್ಯಾವಳಿ ವಿಡಿಯೊಗಳನ್ನು ಅವರು ತಮ್ಮ ‘ಎಕ್ಸ್’ ಖಾತೆಯಲ್ಲಿ ಹಾಕಿದ್ದಾರೆ.

ಜೊಮ್ಯಾಟೊ ಡೆಲಿವರಿ ಯುವಕರು ಕೃತ್ಯ ಎಸಗಿದ್ದಾರೆ ಎಂದು ಅವರು ಆರೋಪಿಸಿದ್ದಾರೆ. ಮನೆಯ ಹೊರಗಡೆ ಇರುವ ಸಂಪ್‌ಗೆ ಅಳವಡಿಸಿದ್ದ ಕಬ್ಬಿಣದ ಮುಚ್ಚಳವನ್ನು ಯುವಕರು ಕಳವು ಮಾಡಿ ಕೊಂಡೊಯ್ದ ದೃಶ್ಯವು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಶುಕ್ರವಾರ ಸಂಜೆ 6 ಗಂಟೆಯ ಸುಮಾರಿಗೆ ಈ ಘಟನೆ ನಡೆದಿದೆ. ಇಬ್ಬರು ಯುವಕರು ಬಂದು ಗೇಟ್ ಎದುರು ಸ್ಕೂಟರ್ ನಿಲುಗಡೆ ಮಾಡುತ್ತಾರೆ. ಆದಾದ ಮೇಲೆ ಒಬ್ಬ ನಿಧಾನವಾಗಿ ಗೇಟ್ ತೆರೆದು, ಒಳಗೆ ಹೋಗಿ ಸಂಪ್‌ಗೆ ಅಳವಡಿಸಿದ್ದ ಕಬ್ಬಿಣದ ಮುಚ್ಚಳವನ್ನು ಕಳವು ಮಾಡಿಕೊಂಡು ಪರಾರಿ ಆಗುತ್ತಾನೆ.

ರಿಕಿ ಕೇಜ್ ತಮ್ಮ ‘ಎಕ್ಸ್’ ಖಾತೆಯಲ್ಲಿ ಎರಡು ವಿಡಿಯೊ ಹಾಗೂ ಸ್ಕ್ರೀನ್‌ಶಾಟ್‌ನ್ನು ಹಂಚಿಕೊಂಡಿದ್ದಾರೆ. ಅದರಲ್ಲಿ ನಂಬರ್ ಪ್ಲೇಟ್ ಸಹ ಇದೆ. ಕಳ್ಳರನ್ನು ಪತ್ತೆ ಮಾಡಲು ಸಹಾಯ ಮಾಡಿ ಎಂದೂ ಮನವಿ ಮಾಡಿದ್ದಾರೆ. ನಗರದ ಜನರು ಎಚ್ಚರಿಕೆ ವಹಿಸುವಂತೆಯೂ ಮನವಿ ಮಾಡಿದ್ದಾರೆ. ‘ಈ ರೀತಿಯ ಘಟನೆಯನ್ನು ನಾವು ಪ್ರೋತ್ಸಾಹಿಸುವುದಿಲ್ಲ. ಅಗತ್ಯ ಕ್ರಮ ತೆಗೆದುಕೊಳ್ಳುತ್ತೇವೆ. ತನಿಖೆಯನ್ನು ನಡೆಸು ತ್ತೇವೆ’ ಎಂದು ಜೊಮ್ಯಾಟೊ ಸಂಸ್ಥೆಯು ಪ್ರತಿಕ್ರಿಯಿಸಿದೆ.

ಇನ್‌ಸ್ಟಾಗ್ರಾಂ ‘ರೀಲ್ಸ್’ ವೀಕ್ಷಿಸಿ ಚಿಗುರೊಡೆದ ಪ್ರೇಮ • ಎರಡನೇ ಪತಿಯನ್ನು ಬಿಟ್ಟ ಮೋನಿಕಾ

ಚಿನ್ನ ದೋಚಿ ಕಾನ್‌ಸ್ಟೆಬಲ್ ಜತೆ ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡನೇ ಪತಿಯನ್ನು ಬಿಟ್ಟು ಇನ್‌ಸ್ಟಾಗ್ರಾಂನಲ್ಲಿ ಪರಿಚಯವಾದ ಪೊಲೀಸ್ ಕಾನ್‌ಸ್ಟೆಬಲ್ ಜತೆಗೆ ಮಹಿಳೆ ತೆರಳಿದ್ದು, ಈ ಸಂಬಂಧ ಚಂದ್ರಾಲೇಔಟ್ ಪೊಲೀಸ್ ಠಾಣೆಯಲ್ಲಿ ಇತ್ತೀಚೆಗೆ ಪ್ರಕರಣ ದಾಖಲಾಗಿದೆ.

ಮೂಡಲಪಾಳ್ಯದ ನಿವಾಸಿ ನೀಡಿದ ದೂರಿನ ಮೇರೆಗೆ ಕಾನ್‌ಸ್ಟೆಬಲ್ ರಾಘವೇಂದ್ರ ಹಾಗೂ ಎಚ್.ಮೋನಿಕಾ ಅವರ ವಿರುದ್ಧ ಚಿನ್ನ ಹಾಗೂ ನಗದು ಕಳ್ಳತನ ಮಾಡಿದ ಆರೋಪದ ಅಡಿ ಚಂದ್ರಾಲೇಔಟ್ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಪ್ರಕರಣ ದಾಖಲಾದ ಮೇಲೆ ಸಿಎಆರ್ ಘಟಕದ ಕಾನ್‌ಸ್ಟೆಬಲ್ ಎಚ್.ರಾಘವೇಂದ್ರ ಅವರನ್ನು ಅಮಾನತು ಮಾಡಲಾಗಿದೆ.

‘ರಾಘವೇಂದ್ರ ಅವರು ಎಚ್‌ಎಸ್‌ಆರ್ ಲೇಔಟ್ ಠಾಣೆಯ ಹೊಯ್ಸಳ ವಾಹನದ ಚಾಲಕರಾಗಿ ಕೆಲಸ ಮಾಡುತ್ತಿದ್ದರು. ಅವರಿಗೆ ಮದುವೆಯಾಗಿ ಮಗು ಇದೆ. ಮೋನಿಕಾ ಅವರಿಗೆ ‘ರೀಲ್ಸ್’ ಮಾಡುವ ಹವ್ಯಾಸವಿತ್ತು. ಆ ರೀಲ್ಸ್ ವೀಕ್ಷಿಸಿದ್ದ ರಾಘವೇಂದ್ರ ಅವರು ಸಾಮಾಜಿಕ ಜಾಲತಾಣದಲ್ಲಿ ಫ್ರೆಂಡ್ ರಿಕ್ವೆಸ್ಟ್ ಕಳುಹಿಸಿದ್ದರು. ಮೊದಲ ಪತಿಯಿಂದ ದೂರವಾಗಿ ಎರಡನೇ ಮದುವೆಯಾಗಿದ್ದ ಮೋನಿಕಾ ಅವರು ಕಾನ್‌ಸ್ಟೆಬಲ್ ಕಳುಹಿಸಿದ್ದ ರಿಕ್ವೆಸ್ಟ್‌ಗೆ ಒಪ್ಪಿಗೆ ಸೂಚಿಸಿದ್ದರು. ಕೆಲವೇ ದಿನಗಳಲ್ಲಿ ಪರಿಚಯ ಪ್ರೀತಿಯಾಗಿ ಇಬ್ಬರು ಜೊತೆಯಾಗಿ ತಿರುಗಾಡಲು ಆರಂಭಿಸಿದ್ದರು. ಇಬ್ಬರೂ ರೀಲ್ಸ್ ಮಾಡಲು ಆರಂಭಿಸಿದ್ದರು. ಬಳಿಕ ಇಬ್ಬರೂ ಪ್ರತ್ಯೇಕವಾಗಿ ನೆಲಸಲು ನಿರ್ಧರಿಸಿದ್ದರು. ಪತಿ ಹಾಗೂ ಮಗನನ್ನು ಬಿಟ್ಟು ಮೋನಿಕಾ ತೆರಳಿದ್ದಾರೆ’ ಎಂದು ದೂರು ನೀಡಲಾಗಿದೆ.

‘ಮೋನಿಕಾ ಅವರು ಮನೆಬಿಟ್ಟು ಹೋಗುವಾಗ ಮನೆಯಲ್ಲಿದ್ದ 160 ಗ್ರಾಂ ಚಿನ್ನಾಭರಣ, ₹1.80 ಲಕ್ಷ ನಗದು ಕಳ್ಳತನ ಮಾಡಿಕೊಂಡು ತೆರಳಿದ್ದಾರೆ. ದೂರು ದಾಖಲಿಸಿಕೊಂಡು ತನಿಖೆ ನಡೆಸಿದ್ದ ಪೊಲೀಸರು, ಎಚ್‌ಎಸ್‌ಆರ್ ಲೇಔಟ್ ಕಾನ್‌ಸ್ಟೆಬಲ್ ರಾಘವೇಂದ್ರ ಮತ್ತು ಮೋನಿಕಾ ಅವರ ಕಥೆಯನ್ನು ಮೇಲಿನ ಅಧಿಕಾರಿಗಳ ಗಮನಕ್ಕೆ ತಂದಿದ್ದರು. ನಂತರ, ರಾಘವೇಂದ್ರ ಅವರನ್ನು ಅಮಾನತು ಮಾಡಲಾಗಿದೆ’ ಎಂದು ಮೂಲಗಳು ಹೇಳಿವೆ.

ಪುತ್ರನ ಮೇಲೆ ಹಲ್ಲೆ: ‘ನಗದು ಹಾಗೂ ಚಿನ್ನವನ್ನು ಕಳ್ಳತನ ಮಾಡಿಕೊಂಡು ಹೋಗುವ ಜತೆಗೆ ಬೀರುವಿನ ಕೀಯನ್ನು ತೆಗೆದುಕೊಂಡು ಹೋಗಿದ್ದಾರೆ. ಮೋನಿಕಾ ಹಾಗೂ ರಾಘವೇಂದ್ರ ಅವರು ನನ್ನ ಮಗನನ್ನು ಲುಲುಮಾಲ್‌ಗೆ ಕರೆದೊಯ್ದು ವಿಷಯವನ್ನು ತಂದೆಗೆ ಹೇಳಿದರೆ ಸಾಯಿಸುವುದಾಗಿ ಬೆದರಿಕೆ ಹಾಕಿದ್ದರು. ಎಚ್‌ಎಸ್‌ಆರ್ ಲೇಔಟ್‌ಗೆ ಕರೆದೊಯ್ದು ಅಲ್ಲಿಯೂ ಬೆದರಿಕೆ ಹಾಕಿದ್ದರು ಎಂದು ದೂರುದಾರರು ಆರೋಪಿಸಿ ದೂರು ನೀಡಿದ್ದು, ಅಂಶಗಳನ್ನು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.


ಸ್ನೇಹಿತೆಯ ಜತೆಗೆ ಅಮಾನತುಗೊಂಡ ಸಿಎಆರ್ ಕಾನ್‌ಸ್ಟೆಬಲ್

ಕಾನ್‌ಸ್ಟೆಬಲ್ ಸೇರಿ 9 ಜನರ ವಿರುದ್ಧ ಎಫ್‌ಐಆರ್

ದಾಬಸ್ ಪೇಟೆ: ನಕಲಿ ದಾಖಲೆ ಸೃಷ್ಟಿಸಿ ಜಮೀನು ಕಬಳಿಸಿರುವ ಆರೋಪ ಮೇಲೆ ನೆಲಮಂಗಲ ಗ್ರಾಮಾಂತರ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಸೇರಿ ಒಂಬತ್ತು ಜನರ ವಿರುದ್ಧ ದಾಬಸ್ ಪೇಟೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ನಾಗರಬಾವಿಯ ಎನ್‌ಜಿಇಎಫ್ ಬಡಾವಣೆ ನಿವಾಸಿ ಥಾಂಪಿ ಮ್ಯಾಥ್ಯೂ ಅವರ ದೂರಿನ ಮೇರೆಗೆ ಕಾನ್‌ಸ್ಟೆಬಲ್ ಗಿರಿಜೇಶ್, ಮನೋಜ್, ರೋಹಿಣಿ ಕುಮಾರ್, ಥಾಂಪಿ ಮ್ಯಾಥ್ಯೂ ಹೆಸರಿನ ನಕಲಿ ವ್ಯಕ್ತಿ, ತರುಣ್, ಹಿರಿಯ ಉಪ ನೋಂದಣಾಧಿಕಾರಿ ಡಿ.ಪಿ.ಸತೀಶ್, ಪತ್ರ ಬರಹಗಾರ ವೆಂಕಟೇಶ್, ಸಾಕ್ಷಿಗಳಾದ ಹನುಮಂತು ಮತ್ತು ರಾಜು ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

‘ನನ್ನ ಹೆಸರಿನಲ್ಲಿ ನೆಲಮಂಗಲ ತಾಲ್ಲೂಕಿನ ಸೋಂಪುರ ಹೋಬಳಿಯ ಮಾಚನಹಳ್ಳಿ ಗ್ರಾಮದ ಸರ್ವೆ ನಂಬರ್ 56/5ರಲ್ಲಿ 5 ಎಕರೆ ಖರಾಬು ಹಾಗೂ ಕಂಬಾಳು ಗ್ರಾಮದ ಸರ್ವೆ ನಂಬರ್ 47ರಲ್ಲಿ 2 ಎಕರೆ 13 ಗುಂಟೆ ಮತ್ತು 1 ಎಕರೆ 7 ಗುಂಟೆ ಖರಾಬು ಜಮೀನು ಇದೆ. ಈ ಜಮೀನಿಗೆ ನಕಲಿ ಕಯಪತ್ರವನ್ನು ಸೃಷ್ಟಿಸಿ, ಕೆಐಎಡಿಬಿ ಭೂ ಪರಿಹಾರ ಪಡೆಯಲು ಆರೋಪಿಗಳು ಸಂಚು ರೂಪಿಸಿದ್ದಾರೆ’ ಎಂದು ಥಾಂಪಿ ಮ್ಯಾಥ್ಯೂ ದೂರು ನೀಡಿದ್ದಾರೆ.

‘ನಿವೃತ್ತಿ ಬಳಿಕ ಒಂದು ವರ್ಷದಿಂದ ವ್ಯವಸಾಯ ಮಾಡುತ್ತಿದ್ದೇನೆ. ಈ ಜಮೀನುಗಳನ್ನು ಸೀರಜ್ ಎಸ್ ಸಬರ್‌ವಾಲ್ ಅವರಿಂದ 2007ರಲ್ಲಿ ಶುದ್ಧ ಕ್ರಯಕ್ಕೆ ಖರೀದಿ ಮಾಡಿದ್ದು, ಕ್ರಯಪತ್ರವು ನೆಲಮಂಗಲ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಣಿಯಾಗಿದೆ. ಈ ಜಮೀನುಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ ಸ್ವಾಧೀನ ಪಡಿಸಿಕೊಂಡಿದೆ. ಭೂ ಪರಿಹಾರಕ್ಕೆ ಅರ್ಜಿ ಸಲ್ಲಿಸಲು ಪಹಣಿ ಮತ್ತು ಇತರೆ ದಾಖಲೆಗಳನ್ನು ಪರಿಶೀಲಿಸಿದಾಗ, ಜಮೀನಿನ ಖಾತೆಯು ಮತ್ತೊಬ್ಬರ ಹೆಸರಿನಲ್ಲಿ ಬಂದಿದೆ’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ರಾಜ್ಯದಲ್ಲಿ ತೃತೀಯರಂಗ ಉದಯ: ಇಬ್ರಾಹಿಂ

ಪ್ರಜಾವಾಣಿ ವಾರ್ತೆ


ಸಿ.ಎಂ. ಇಬ್ರಾಹಿಂ

ಬೆಂಗಳೂರು: ‘ಹೈಕಮಾಂಡ್ ಸಂಸ್ಕೃತಿಯಿಂದ ರಾಜ್ಯದ ಜನರು ರೋಸಿ ಹೋಗಿದ್ದಾರೆ. ನಾಡಿನ ಜನರ ಹಿತದೃಷ್ಟಿಯಿಂದ ಜೆಡಿಎಸ್, ಕಾಂಗ್ರೆಸ್ ಮತ್ತು ಬಿಜೆಪಿ (ಜೆಸಿಬಿ) ಪಕ್ಷಗಳಿಗೆ ಪರ್ಯಾಯವಾಗಿ ತೃತೀಯ ರಂಗ ಉದಯವಾಗಲಿದೆ’ ಎಂದು ಕೇಂದ್ರದ ಮಾಜಿ ಸಚಿವ ಸಿ.ಎಂ. ಇಬ್ರಾಹಿಂ ಹೇಳಿದರು.

ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಇದೇ 14ರಂದು ಕಲಬುರಗಿಯಲ್ಲಿ ಆಯೋಜಿಸಿರುವ ಸಭೆಯಲ್ಲಿ ನೂತನ ಪಕ್ಷದ ಹೆಸರು ಮತ್ತು ಚಿಹ್ನೆ ನಿರ್ಧರಿಸಲಾಗುತ್ತದೆ’ ಎಂದು ತಿಳಿಸಿದರು.

ಮಾರಸಂದ್ರ ಮುನಿಯಪ್ಪ, ಕರ್ನಾಟಕ ವಾಲ್ಮೀಕಿ ಪರಿಷತ್ತಿನ ಅಧ್ಯಕ್ಷ ಬಸವರಾಜ ನಾಯ್ಕ್, ರೈತ ಸಂಘದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್, ಕೋಳಿ ಸಮಾಜ ಮುಖಂಡ ಮಣ್ಣೂರು ನಾಗರಾಜ್, ಬಹುಜನ ಸಂಘರ್ಷ ಸಮಿತಿಯ ರಮೇಶ್ ಸುದ್ದಿಗೋಷ್ಠಿಯಲ್ಲಿದ್ದರು.

ಕಾನ್‌ಸ್ಟೆಬಲ್ ಬಳಿ ಐಷಾರಾಮಿ ಬಂಗಲೆ

ಲಖನೌ (ಪಿಟಿಐ): ಹಲವು ಮಕ್ಕಳ ಸಾವಿಗೆ ಕಾರಣವಾಗಿರುವ ‘ಕೋಲ್ಡ್‌ರಿಫ್’ ಎಂಬ ಕೆಮ್ಮಿನ ಸಿರಪ್‌ನ ಕಲಬೆರಕೆಗೆ ಸಂಬಂಧಿಸಿದಂತೆ ವಜಾಗೊಂಡಿರುವ ಪೊಲೀಸ್ ಕಾನ್‌ಸ್ಟೆಬಲ್‌ಗೆ ಸೇರಿದ ಆಸ್ತಿಗಳ ಮೇಲೆ ದಾಳಿ ನಡೆಸಿದ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಐಷರಾಮಿ ಬಂಗಲೆಯ ವೈಭವ ಕಂಡು ದಿಗ್ಭ್ರಮೆಗೊಂಡಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಉತ್ತರ ಪ್ರದೇಶ ವಿಶೇಷ ಟಾಸ್ಕ್‌ಫೋರ್ಸ್ ತಂಡವು ಕಾನ್‌ಸ್ಟೆಬಲ್ ಅಲೋಕ್ ಪ್ರತಾಪ್ ಸಿಂಗ್ ಕಳೆದ ತಿಂಗಳು ಬಂಧಿಸಿತ್ತು. ಡಿಸೆಂಬರ್ 2ರಂದು ಅವರನ್ನು ಹುದ್ದೆಯಿಂದ ವಜಾಗೊಳಿಸಲಾಗಿತ್ತು. ‘ಲಖನೌ– ಸುಲ್ತಾನ್‌ಪುರ ಹೆದ್ದಾರಿ ಅಹಮೌನಲ್ಲಿ 7 ಸಾವಿರ ಚದರ ಅಡಿ ವಿಸ್ತೀರ್ಣದಲ್ಲಿ ಈ ಬಂಗಲೆಯಿದ್ದು, ಯುರೋಪಿಯನ್ ಶೈಲಿಯ ಒಳಾಂಗಣ, ಸುರುಳಿಯಾಕಾರದ ಮೆಟ್ಟಿಲುಗಳು, ವಿಂಟೇಜ್ ದೀಪ ಹಾಗೂ ಲಕ್ಸುರಿ ವಸ್ತುಗಳು ಸಿಕ್ಕಿವೆ. ಮನೆ ನಿರ್ಮಾಣಕ್ಕೆ ಸುಮಾರು ₹5 ಕೋಟಿ ವೆಚ್ಚವಾಗಿರುವ ಸಾಧ್ಯತೆಯಿದ್ದು, ಒಳಾಂಗಣದ ವಿನ್ಯಾಸಕ್ಕೆ ₹1.5– ₹2 ಕೋಟಿ ಖರ್ಚು ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ನಿವೇಶನ ಮೌಲ್ಯವು ಇದರಲ್ಲಿ ಸೇರಿಲ್ಲ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಿದ್ಯಾರ್ಥಿ ಬಂಧನ, 3 ಏರ್‌ಗನ್ ವಶ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಬಸವನಗುಡಿಯ ಎಂ.ಎನ್. ಕೃಷ್ಣರಾವ್ ಉದ್ಯಾನದಲ್ಲಿ ವಾಯುವಿಹಾರ ಮಾಡುತ್ತಿದ್ದ ಉದ್ಯಮಿ ಒಬ್ಬರ ಮೇಲೆ ಏರ್‌ಗನ್‌ನಿಂದ ನಕಲಿ ಗುಂಡು ಹಾರಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾನೂನು ಕಾಲೇಜಿನ ವಿದ್ಯಾರ್ಥಿಯನ್ನು ಬಸವನಗುಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೃಷ್ಣರಾವ್ ಪಾರ್ಕ್ ಬಳಿ ನಿವಾಸಿ ಮೊಹಮ್ಮದ್ ಅಫ್ಜಲ್ ಎಂಬಾತನನ್ನು ಬಂಧಿಸಿ, ಮೂರು ಏರ್‌ಗನ್ ವಶಪಡಿಸಿಕೊಂಡಿದ್ದಾರೆ.

ಡಿ.10ರ ರಾತ್ರಿ ನರ್ತಕಿ, ಕಾರ್ಗಿಲ್ ಬಾರ್ ಆ್ಯಂಡ್ ರೆಸ್ಟೋರೆಂಟ್ ಮಾಲೀಕ ರಾಜಗೋಪಾಲ್ ಅವರು ಸ್ನೇಹಿತರೊಂದಿಗೆ ಉದ್ಯಾನದಲ್ಲಿ ವಾಯುವಿಹಾರ ಮಾಡುತ್ತಿದ್ದರು. ಆಗ ಉದ್ಯಾನ ಬಳಿಯ ನಿವಾಸಿ ಅಫ್ಜಲ್ ಏರ್‌ಗನ್ ಅಭ್ಯಾಸ ಮಾಡುತ್ತಿದ್ದಾಗ ಆಕಸ್ಮಿಕವಾಗಿ ಗುಂಡು ರಾಜಗೋಪಾಲ ಅವರ ಕುತ್ತಿಗೆಗೆ ಹೊಕ್ಕಿ ಗಂಭೀರ ಗಾಯಗೊಂಡಿದ್ದಾರೆ. ತಕ್ಷಣ ಸ್ನೇಹಿತರು ಸಮೀಪದ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದರು.

ರಾಜಗೋಪಾಲ್ ಅವರ ದೂರಿನ ಮೇರೆಗೆ ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು, ಸಿಸಿಟಿವಿ ಕ್ಯಾಮೆರಾಗಳ ದೃಶ್ಯಾವಳಿ ಪರಿಶೀಲನೆ ನಡೆಸಿದಾಗ ಉದ್ಯಾನ ಸಮೀಪದ ಮನೆಯಿಂದ ಗುಂಡು ಹಾರಿರುವುದು ಗೊತ್ತಾಗಿದೆ.

ಕನಕಪುರ ರಸ್ತೆಯ ಪ್ರೆಸ್ಟೀಜ್ ಸುಕ್ರಿ ಸೆರೆನಿಟಿ ಅಪಾರ್ಟ್‌ಮೆಂಟ್ ಬಳಿ ವಿದ್ಯಾರ್ಥಿಯನ್ನು ಬಂಧಿಸಿ, ಮೂರು ಏರ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

‘ಮನೆಯೊಳಗೆ ಏರ್‌ಗನ್‌ನಿಂದ ಶೂಟಿಂಗ್ ಅಭ್ಯಾಸ ಮಾಡುವ ವೇಳೆ ಗುರಿ ತಪ್ಪಿ ಕಿಟಕಿಯಿಂದ ಗುಂಡು ಹೊರ ಹೋಗಿದೆ ಎಂದು ಆರೋಪಿ ಹೇಳಿಕೆ ನೀಡಿದ್ದಾನೆ. ವಿಚಾರಣೆ ಮುಂದುವರಿದಿದೆ ಎಂದು ಹೇಳಿದ್ದಾರೆ.

ಓಲಾ ಸಿಇಒ ವಿರುದ್ಧದ ಪ್ರಕರಣ ಸಿಸಿಬಿ ತೆಕ್ಕೆಗೆ

ಬೆಂಗಳೂರು: ‘ಓಲಾ ಎಲೆಕ್ಟ್ರಿಕ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಮೃತ ಉದ್ಯೋಗಿ ಕೆ.ಅರವಿಂದ್ ಸಾವಿಗೆ ಸಂಬಂಧಿಸಿದಂತೆ ಕಂಪನಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ (ಸಿಇಒ) ಭವಿಶ್ ಅಗರವಾಲ್ ವಿರುದ್ಧದ ತನಿಖೆಯನ್ನು ಸಿಸಿಬಿಗೆ ವರ್ಗಾವಣೆ ಮಾಡಲಾಗಿದೆ’ ಎಂದು ರಾಜ್ಯ ಸರ್ಕಾರ, ಹೈಕೋರ್ಟ್‌ಗೆ ತಿಳಿಸಿದೆ.

‘ಅರವಿಂದ್ ಸಾವಿನ ಆರೋಪದಡಿ ನಮ್ಮ ವಿರುದ್ಧ ದಾಖಲಿಸಿರುವ ಎಫ್‌ಐಆರ್ ಮತ್ತು ಈ ಸಂಬಂಧ 30ನೇ ಎಸಿಎಂಎಂ ಕೋರ್ಟ್‌ನಲ್ಲಿ ನಡೆಯುತ್ತಿರುವ ನ್ಯಾಯಿಕ ವಿಚಾರಣೆ ರದ್ದುಗೊಳಿಸಬೇಕು’ ಎಂದು ಕೋರಿ ಕಂಪನಿಯ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಸುಬ್ರತ್ ಕುಮಾರ್ ದಾಸ್, ಕಂಪನಿಯ ಸಿಇಒ ಭವಿಶ್ ಅಗರವಾಲ್ ಮತ್ತು ಓಲಾ ಕಂಪನಿ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಮೊಹಮ್ಮದ್ ನವಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು, ‘ಪ್ರಕರಣದ ತನಿಖೆಯನ್ನು ಸಿಸಿಬಿಗೆ ವರ್ಗಾವಣೆ ಮಾಡಲಾಗಿದೆ’ ಎಂದು ನ್ಯಾಯಪೀಠಕ್ಕೆ ಅರುಹಿದರು. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ ವಿಚಾರಣೆಯನ್ನು 2026ರ ಜನವರಿ 21ಕ್ಕೆ ಮುಂದೂಡಿತು. ಮುಂದಿನ ವಿಚಾರಣೆಯವರೆಗೂ ಅರ್ಜಿದಾರರ ವಿರುದ್ಧ ಆತುರದ ಕ್ರಮ ಕೈಗೊಳ್ಳದಂತೆ ಪ್ರಾಸಿಕ್ಯೂಷನ್‌ಗೆ ನೀಡಿದ್ದ ಮಧ್ಯಂತರ ಆದೇಶವನ್ನು ಮುಂದುವರಿಸಿದ ನ್ಯಾಯಪೀಠ, ‘ಅರ್ಜಿದಾರರು ತನಿಖೆಗೆ ಎಲ್ಲ ರೀತಿಯ ಸಹಕಾರ ನೀಡಬೇಕು’ ಎಂದು ಸೂಚಿಸಿತು.

ಚಿತ್ರಾವಳಿ


ನಗರದ ಎಚ್‌ಎಸ್‌ಆರ್ ಲೇಔಟ್‌ನಲ್ಲಿ ಕಾಂಪೋಸ್ಟ್ ಯೋಜನೆಯನ್ನು ಶಾಸಕ ಕೆ. ಸತೀಶ್ ರೆಡ್ಡಿ ಉದ್ಘಾಟಿಸಿದರು


ಯೂತ್ ಫಾರ್ ನೇಷನ್, ಸ್ವದೇಶಿ ಜಾಗರಣ ಸಹಯೋಗದಲ್ಲಿ ಆಯೋಜಿಸಿರುವ ಸ್ವದೇಶಿ ಉದ್ಯಮ ಜಾಗೃತಿ ಮಿಷನ್ ಅಡಿಯಲ್ಲಿ 3,500 ಕಿ.ಮೀ ಸೈಕಲ್ ಜಾಥಾಗೆ ಪರಿಪೂರ್ಣ ಸನಾತನ ಚಾರಿಟಬಲ್ ಟ್ರಸ್ಟ್‌ನ ಮುಖ್ಯಸ್ಥ ಎ. ವಿ. ಶ್ರೀನಿವಾಸನ್ ಅವರು ಶನಿವಾರ ಚಾಲನೆ ನೀಡಿದರು

ಬಸವರಾಜ ಹೊರಟ್ಟಿಗೆ ಗೌರವ ಸನ್ಮಾನ ಕಾರ್ಯಕ್ರಮ

ಸ್ನೇಹ, ರಾಜಕಾರಣ ಬೇರೆ: ಸಿ.ಎಂ

ಪ್ರಜಾವಾಣಿ ವಾರ್ತೆ


ಹುಬ್ಬಳ್ಳಿಯಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸನ್ಮಾನಿಸಿದರು. ಶಾಸಕರಾದ ಎಂ.ಆರ್‌.ಪಾಟೀಲ, ಎನ್‌.ಎಚ್‌.ಕೋನರಡ್ಡಿ, ಸಂಸದ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ವಿಧಾನಸಭಾ ಅಧ್ಯಕ್ಷ ಯು.ಟಿ.ಖಾದರ್, ಶಾಸಕರಾದ ಪ್ರಸಾದ್ ಅಬ್ಬಯ್ಯ, ಅರವಿಂದ ಬೆಲ್ಲದ ಮತ್ತು ಮಹೇಶ ಟೆಂಗಿನಕಾಯಿ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಹುಬ್ಬಳ್ಳಿ: ‘ಮುಂಬರುವ ಪಶ್ಚಿಮ ಶಿಕ್ಷಕರ ಮತಕ್ಷೇತ್ರದ ಚುನಾವಣೆಯಲ್ಲಿ ಬಸವರಾಜ ಹೊರಟ್ಟಿ ಅವರು ನಮ್ಮ ಪಕ್ಷವಲ್ಲದೆ ಬೇರೆ ಪಕ್ಷದಿಂದ ಸ್ಪರ್ಧಿಸಿದರೆ, ಅವರ ವಿರುದ್ಧ ಪ್ರಚಾರ ನಡೆಸುವೆ. ವೈಯಕ್ತಿಕವಾಗಿ ಅವರ ಗೆಲುವಿಗೆ ಹಾರೈಸುತ್ತೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

‘ಪಶ್ಚಿಮ ಶಿಕ್ಷಕರ ಮತಕ್ಷೇತ್ರದಿಂದ ಸತತ ಎಂಟು ಬಾರಿ ಗೆದ್ದು 45 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ನಗರದ ನೆಹರೂ ಮೈದಾನದಲ್ಲಿ ಶನಿವಾರ ಆಯೋಜಿಸಲಾಗಿದ್ದ ಬಸವರಾಜ ಹೊರಟ್ಟಿ ಅವರಿಗೆ ಗೌರವ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಹೊರಟ್ಟಿ ಅವರು ಕಳೆದ ಬಾರಿ ಬಿಜೆಪಿಯಿಂದ ಸ್ಪರ್ಧಿಸಿ ವಿಧಾನ ಪರಿಷತ್ ಸದಸ್ಯರಾಗಿ, ಸಭಾಪತಿ ಆಗಿದ್ದಾರೆ. ಅವರ ಮೇಲೆ ಶಿಕ್ಷಕರಿಗೆ ಪ್ರೀತಿ–ವಿಶ್ವಾಸ ಇದ್ದ ಕಾರಣಕ್ಕೆ ಎಂಟು ಬಾರಿ ನಿರಂತರವಾಗಿ ಆಯ್ಕೆಯಾಗಿದ್ದು, ಅವರು ಮತ್ತೊಮ್ಮೆ ವಿಧಾನ ಪರಿಷತ್ ಸದಸ್ಯರಾಗಲಿ ಎಂದು ನಾನು ವೈಯಕ್ತಿಕವಾಗಿ ಹಾರೈಸುವೆ. ಆದರೆ, ರಾಜಕಾರಣವೇ ಬೇರೆ, ಸ್ನೇಹವೇ ಬೇರೆ’ ಎಂದರು. ‘ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ಗೆ ಬಹುಮತಕ್ಕೆ ಒಂದು ಮತ ಮಾತ್ರ ಕಡಿಮೆಯಿದೆ. ಮುಂದಿನ ಚುನಾವಣೆಯಲ್ಲಿ ಅದು ಸಿಗಬಹುದು ಎಂದುಕೊಂಡಿದ್ದೇನೆ. ಅಲ್ಲಿವರೆಗೆ ಹೊರಟ್ಟಿ ಅವರೇ ಸಭಾಪತಿಯಾಗಿ ಮುಂದುವರಿಯುತ್ತಾರೆ. ಸಭಾಪತಿಯಾಗಿ ಅವರು ನಿರ್ವಹಿಸುತ್ತಿರುವ ಕಾರ್ಯವೈಖರಿಗೆ ಎಲ್ಲ ಸದಸ್ಯರು ಖುಷಿಯಾಗಿದ್ದಾರೆ. ಸರ್ಕಾರಕ್ಕೆ ಮುಜಗರ ಮಾಡುವ ಕೆಲಸವನ್ನು ಅವರು ಎಂದಿಗೂ ಮಾಡಿಲ್ಲ. ನಮ್ಮ ಪಕ್ಷದವರೇ ಸಭಾಪತಿಯಾಗಿದ್ದಾರೆ ಎನ್ನುವ ಭಾವ ನಮ್ಮಲ್ಲಿದೆ’ ಎಂದರು.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮಾತನಾಡಿ, ‘ಹೊರಟ್ಟಿ ಅವರು ಚುನಾವಣೆಯಲ್ಲಿ ಸ್ಪರ್ಧಿಸಲು ನಾಮಪತ್ರ ಸಲ್ಲಿಸಿದರೆ ಸಾಕು, ಅವರೇ ಎಂಎಲ್‌ಸಿ ಎನ್ನುವುದು ಪಕ್ಕಾ. 45 ವರ್ಷಗಳವರೆಗೆ ವಿಧಾನಪರಿಷತ್‌ನಲ್ಲಿ ಕೆಲಸ ನಿರ್ವಹಿಸಿ ರಾಜಕೀಯದಲ್ಲಿ ಲಿಮ್ಕಾ ದಾಖಲೆ ಮಾಡಿದ್ದಾರೆ. ಶೀಘ್ರ ಕೋಪಿ, ದೀರ್ಘ ದ್ವೇಷಿಯಲ್ಲದ ವ್ಯಕ್ತಿತ್ವ ಅವರದ್ದಾಗಿದ್ದು, ಸಿದ್ದರಾಮಯ್ಯ ಅವರ ಅವಧಿಯಲ್ಲಿ ಅವರು ಸಭಾಪತಿಯಾಗಿ ಮುಂದುವರಿಯುತ್ತಾರೆ ಎನ್ನುವ ಆಶಯ ನಮ್ಮದು’ ಎಂದರು.

ಯುಕೆಪಿಗೆ ಇಚ್ಛಾಶಕ್ತಿ ಕೊರತೆ



ನಾರಾಯಣಪುರದ ಬಸವಸಾಗರ ಜಲಾಶಯ

ಯೋಜನೆಗೆ ಅಗತ್ಯವಿರುವ ಜಮೀನು

1,33,867 ಎಕರೆ ಒಟ್ಟು ಅಗತ್ಯವಿರುವ ಜಮೀನು

75,563 ಎಕರೆ ಮುಳುಗಡೆ ಆಗುವ ಜಮೀನು

51,837 ಎಕರೆ ಕಾಲುವೆ ನಿರ್ಮಾಣಕ್ಕೆ ಜಮೀನು

6469 ಎಕರೆ ರೈತರ ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆಗೆ ಬೇಕಿರುವ ಜಮೀನು

20 ಮುಳುಗಡೆ ಆಗುವ ಗ್ರಾಮಗಳು, ಪಟ್ಟಣ ವಾರ್ಡ್‌ಗಳು

ಒಂದನೇ ಪುಟದಿಂದ...

2013ರ ನವೆಂಬರ್‌ನಲ್ಲಿ ಪೂರಕ ವರದಿ ನೀಡಿತ್ತು.

ನ್ಯಾಯಮಂಡಳಿಯ ತೀರ್ಪು ಪ್ರಕಟವಾಗುತ್ತಿದ್ದಂತೆ ವಿಜಯಪುರ, ಬಾಗಲಕೋಟೆ, ಯಾದಗಿರಿ, ಕಲಬುರಗಿ, ಗದಗ, ಕೊಪ್ಪಳ, ರಾಯಚೂರು ಭಾಗದ ಬಹುತೇಕ ರೈತರು, ತಮ್ಮ ಹೊಲಗಳಿಗೆ ನೀರು ಹರಿಯುವ ಮತ್ತು ತಾವು ಚಿನ್ನದ ಬೆಲೆಯ ಬೆಳೆ ಬೆಳೆಯುವ ಕನಸು ಕಂಡಿದ್ದರು. ರಾಜ್ಯ ಸರ್ಕಾರವು ಭೂಸ್ವಾಧೀನಕ್ಕೆ ತಯಾರಿ ನಡೆಸುತ್ತಿದ್ದಂತೆ ತಕರಾರುಗಳು ಆರಂಭವಾಗಿದ್ದವು.

2013ರಲ್ಲಿ ಅಂದಾಜಿಸಿದ್ದಂತೆ, ಅಣೆಕಟ್ಟೆಯ ಎತ್ತರವನ್ನು 524.25 ಮೀಟರ್‌ಗಳಿಗೆ ಹೆಚ್ಚಿಸಿದರೆ 75,000 ಎಕರೆಯಷ್ಟು ಜಮೀನು ಮುಳುಗಡೆಯಾಗಲಿದೆ. ಕಾಲುವೆ ನಿರ್ಮಾಣ ಮತ್ತಿತರ ಕಾಮಗಾರಿಯೂ ಒಳಗೊಂಡು ಒಟ್ಟು 1.33 ಲಕ್ಷ ಎಕರೆ ಪ್ರದೇಶವನ್ನು ಭೂಸ್ವಾಧೀನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ರಾಜ್ಯದಲ್ಲೇ ಆವರೆಗಿನ ಅತ್ಯಂತ ದೊಡ್ಡ ನೀರಾವರಿ ಯೋಜನೆ ಅದಾಗಿತ್ತು. ಅಂತೆಯೇ ಭೂಸ್ವಾಧೀನ ಪ್ರಕ್ರಿಯೆ ವಿರುದ್ಧ ಮತ್ತು ಹೆಚ್ಚಿನ ಪರಿಹಾರ ಕೋರಿ ವಿವಿಧ ನ್ಯಾಯಾಲಯಗಳಲ್ಲಿ 28,000ಕ್ಕೂ ಹೆಚ್ಚು ಪ್ರಕರಣಗಳು ದಾಖಲಾದವು. ಬೃಹತ್ ಯೋಜನೆ ಎಂಬ ಹೆಗ್ಗಳಿಕೆ ಜತೆಗೇ ಅತಿಹೆಚ್ಚು ಪ್ರಕರಣಗಳನ್ನು ಎದುರಿಸಿದ ಯೋಜನೆ ಎಂಬ ಅಪಖ್ಯಾತಿಗೂ ಕೃಷ್ಣಾ ಮೇಲ್ದಂಡೆ –3ನೇ ಹಂತವು ಗುರಿಯಾಗಬೇಕಾಯಿತು.

ಹತ್ತಾರು ಸಾವಿರ ಪ್ರಕರಣಗಳು ಇದ್ದ ಕಾರಣಕ್ಕೆ, ಭೂಸ್ವಾಧೀನ ಪ್ರಕ್ರಿಯೆ ವಿಳಂಬವಾಯಿತು. 'ಈ ಸಮಸ್ಯೆಯ ಗಂಭೀರತೆಯನ್ನು ಅರಿಯದ ಸರ್ಕಾರಗಳು, ಪ್ರಕರಣಗಳನ್ನು ನಿರ್ಲಕ್ಷ್ಯ ಮಾಡುತ್ತಾ ಬಂದವು. 2013ರಿಂದ ಈವರೆಗೆ ಆಡಳಿತ ನಡೆಸಿದ ಎಲ್ಲ ಪಕ್ಷಗಳ ಸರ್ಕಾರಗಳೂ ಯೋಜನೆಯನ್ನು ಕಡೆಗಣಿಸಿಯೇ ಇದ್ದವು. ಈ ಕಾರಣದಿಂದಲೇ 100 ರೂಪಾಯಿ ಪರಿಹಾರ ಕೊಡಬೇಕಾಗಿದ್ದೆಡೆ, 1,000 ರೂಪಾಯಿ ಕೊಡಬೇಕಾದ ಸ್ಥಿತಿ ಬಂದಿದೆ' ಎಂಬುದು ನೀರಾವರಿ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರ ಟೀಕೆ.

ಯೋಜನೆಯ ರೂಪುರೇಷೆ ಸಿದ್ಧಪಡಿಸಿದ್ದಾಗ ₹17,600 ಕೋಟಿ ವೆಚ್ಚವನ್ನು ಅಂದಾಜು ಮಾಡಲಾಗಿತ್ತು. ಪ್ರಕರಣಗಳು ವಿಳಂಬವಾದಂತೆ ಒಮ್ಮೆ ವೆಚ್ಚವನ್ನು ₹24,000 ಕೋಟಿಗೆ, ಇನ್ನೊಮ್ಮೆ ₹51,148 ಕೋಟಿಗೆ, ಈಗ ಮತ್ತೆ ₹1 ಲಕ್ಷ ಕೋಟಿಗೆ ಪರಿಷ್ಕರಿಸಲಾಗಿದೆ. ಇದರಲ್ಲಿ ಭೂಸ್ವಾಧೀನ ಪ್ರಕ್ರಿಯೆಗೇ ಸುಮಾರು ₹80,000 ಕೋಟಿ ಬೇಕಾಗುತ್ತದೆ ಎಂಬುದು ಸರ್ಕಾರದ ಅಂದಾಜು. ಒಂದು ಹಂತದಲ್ಲಿ ಭೂಸ್ವಾಧೀನದ ವೆಚ್ಚವೇ ₹2.10 ಲಕ್ಷ ಕೋಟಿಗೆ ಮುಟ್ಟುವಂತಹ ಸ್ಥಿತಿ ಎದುರಾಗಿತ್ತು. 'ಬಾಗಲಕೋಟೆಯ ಒಂದು ಜಮೀನಿಗೆ ಪ್ರತಿ ಎಕರೆಗೆ ₹23 ಕೋಟಿ, ವಿಜಯಪುರದಲ್ಲಿ ಒಂದು ಎಕರೆಗೆ ₹11.92 ಕೋಟಿ ಪರಿಹಾರ ನೀಡುವಂತೆ ವಿವಿಧ ನ್ಯಾಯಾಲಯಗಳು ಆದೇಶ ನೀಡಿದ್ದವು. ಆ ಪ್ರಕಾರ ಒಟ್ಟು 75,000 ಎಕರೆ ಭೂಸ್ವಾಧೀನಕ್ಕೆ ₹2.10 ಲಕ್ಷ ಕೋಟಿ ಬೇಕಾಗುತ್ತದೆ' ಎಂದು ನೀರಾವರಿ ಸಚಿವರೂ ಆದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವಿಧಾನಸಭೆಗೆ ಉತ್ತರ ನೀಡಿದ್ದರು.

ಭೂಸ್ವಾಧೀನದ ವೆಚ್ಚವೇ ₹2 ಲಕ್ಷ ಕೋಟಿ ದಾಟುತ್ತದೆ ಎಂಬುದು ಗೊತ್ತಾದಾಗ, ಇನ್ನು ಈ ಯೋಜನೆ ಸಂಪೂರ್ಣವಾಗಿ ನನೆಗುದಿಗೆ ಬಿದ್ದಹಾಗೆ ಎಂಬುದು ಉತ್ತರ ಕರ್ನಾಟಕದ ರೈತರು ಕೈಚೆಲ್ಲಿದ್ದರು. ವಿರೋಧ ಪಕ್ಷಗಳು ಮತ್ತು ಆಡಳಿತ ಪಕ್ಷದ ಕೆಲ ಶಾಸಕರು, ಈ ಯೋಜನೆ ಅನುಷ್ಠಾನ ಸಾಧ್ಯವೇ ಇಲ್ಲ ಎಂಬಂತಹ ಹೇಳಿಕೆಗಳನ್ನು ನೀಡಿದರು. ಯೋಜನೆ ಕೈತಪ್ಪುವ ಅಪಾಯವನ್ನು ಅರಿತ ಸರ್ಕಾರ ತಡವಾಗಿಯಾದರೂ ಎಚ್ಚೆತ್ತುಕೊಂಡಿತು.

ಭೂಮಿ ಕಳೆದುಕೊಳ್ಳಲಿರುವ ರೈತರ ಜಮೀನಿಗೆ ಏಕರೀತಿಯ ಪರಿಹಾರ ನಿಗದಿ ಮಾಡಲು ಮತ್ತು ನ್ಯಾಯಾಲಯಗಳಲ್ಲಿ ಇರುವ ಪ್ರಕರಣಗಳನ್ನು ಹಿಂಪಡೆಯುವಂತೆ ರೈತರ ಮನವೊಲಿಸಲು ಮುಂದಾಯಿತು. ರೈತ ಮುಖಂಡರ ಜತೆಗೆ, ಸಂಬಂಧಿತ ಜಿಲ್ಲೆಯ ಜನಪ್ರತಿನಿಧಿಗಳ ಜತೆಗೆ ಸಾಲು–ಸಾಲು ಸಭೆ ನಡೆಸಿತು. ಕಡೆಗೆ ಪ್ರತಿ ಎಕರೆ ಖುಷ್ಕಿ ಜಮೀನಿಗೆ ₹25 ಲಕ್ಷ ಮತ್ತು ಪ್ರತಿ ಎಕರೆ ನೀರಾವರಿ ಜಮೀನಿಗೆ ₹30 ಲಕ್ಷ ನಿಗದಿ ಮಾಡುವುದಾಗಿ ಘೋಷಿಸಿತು. ಈ ಮೊತ್ತದ ಪರಿಹಾರಕ್ಕೆ ರೈತರಿಂದ ಮತ್ತೆ ವ್ಯಾಪಕ ವಿರೋಧ ವ್ಯಕ್ತವಾಯಿತು. ಮತ್ತಷ್ಟು ಸುತ್ತಿನ ಸಭೆ ನಡೆಸಿದ ಸರ್ಕಾರವು ಪ್ರತಿ ಎಕರೆ ಖುಷ್ಕಿ ಜಮೀನಿಗೆ ₹30 ಲಕ್ಷ ಮತ್ತು ಪ್ರತಿ ಎಕರೆ ನೀರಾವರಿ ಜಮೀನಿಗೆ ₹40 ಲಕ್ಷ ಪರಿಹಾರವನ್ನು ನಿಗದಿಪಡಿಸಿತು.

ಇಷ್ಟಕ್ಕೇ, ಈ ಯೋಜನೆಯ ಕಾಮಗಾರಿ ಆರಂಭವಾಗುತ್ತದೆ ಎಂದುಕೊಂಡರೆ ತಪ್ಪಾಗುತ್ತದೆ. ಏಕೆಂದರೆ ಇನ್ನು 13,900ಕ್ಕೂ ಹೆಚ್ಚು ಪ್ರಕರಣಗಳು ನ್ಯಾಯಾಲಯದಲ್ಲಿ ಇವೆ. ರೈತರು ಆ ಎಲ್ಲ ಪ್ರಕರಣಗಳನ್ನು ವಾಪಸ್ ಪಡೆಯಬೇಕು. ಆನಂತರವೇ ಸರ್ಕಾರ ಭೂಸ್ವಾಧೀನ ಪ್ರಕ್ರಿಯೆ ಆರಂಭಿಸಲು ಸಾಧ್ಯವಾಗುತ್ತದೆ. ಆದರೆ ಈ ಕೆಲಸ ಅಷ್ಟು ಸುಲಭದಂತೆ ಕಾಣುತ್ತಿಲ್ಲ. ಭೂಸ್ವಾಧೀನ ವಿಳಂಬವಾದರೆ, ವೆಚ್ಚ ಇನ್ನಷ್ಟು ಹೆಚ್ಚಾಗಲಿದೆ ಎಂಬ ಅಪಾಯವೂ ಇದ್ದೇ ಇದೆ. ಒಟ್ಟಿನಲ್ಲಿ ಭೂಸ್ವಾಧೀನ ವಿರೋಧಿಸಿ ಮತ್ತು ಹೆಚ್ಚಿನ ಪರಿಹಾರ ಕೋರಿ ದಾಖಲಿಸಲಾದ ಪ್ರಕರಣಗಳ ನಿರ್ವಹಣೆಯಲ್ಲಿ ಎಲ್ಲ ಸರ್ಕಾರಗಳು ಹಾಗೂ ಸಂಬಂಧಿತ ಅಧಿಕಾರಿಗಳು ಎಡವಿದ ಕಾರಣಕ್ಕೆ ₹17,600 ಕೋಟಿ ವೆಚ್ಚದ ಯೋಜನೆ, ಈಗ ₹1 ಲಕ್ಷ ಕೋಟಿಯಷ್ಟಾಗಿದೆ.

ಕೇಂದ್ರದ ಜಾಣ ಕಡೆಗಣನೆ

ಒಂದನೇ ಪುಟದಿಂದ...

'ಮುಂದಿನ ಆದೇಶದವರೆಗೆ, ನ್ಯಾಯಮಂಡಳಿಯ ತೆಗೆದುಕೊಳ್ಳಬಹುದಾದ ಯಾವುದೇ ನಿರ್ಧಾರಗಳಿಗೆ ಅಧಿಸೂಚನೆ ಹೊರಡಿಸಬಾರದು' ಎಂದು ತಡೆಯಾಜ್ಞೆ ನೀಡಿದೆ. ಇದು ಪೂರ್ವಾನ್ವಯ ಆಗದೇ ಇದ್ದರೂ, ಕೇಂದ್ರ ಸರ್ಕಾರದ ಪ್ರತಿನಿಧಿಗಳು ಕೃಷ್ಣಾ ಮೇಲ್ದಂಡೆ ಯೋಜನೆಗೆ ಅಧಿಸೂಚನೆ ಹೊರಡಿಸದೇ ಇರಲು ಈ ತಡೆಯಾಜ್ಞೆಯನ್ನು ಮುಂದು ಮಾಡಿದ್ದಿದೆ. ಈ ತಡೆಯಾಜ್ಞೆ ವಿರುದ್ಧ ಮೇಲ್ಮನವಿ ಸಲ್ಲಿಸಿ ಎಂದು ರಾಜ್ಯ ಸರ್ಕಾರವು ಕೋರಿದ್ದರೂ, 14 ವರ್ಷದಲ್ಲಿ ಕೇಂದ್ರ ಸರ್ಕಾರವು ಅಂತಹದ್ದೊಂದು ಕ್ರಮ ತೆಗೆದುಕೊಂಡಿಲ್ಲ.

ಕೃಷ್ಣಾ ನದಿಯ ನೀರನ್ನು ಮಹಾರಾಷ್ಟ್ರ, ಕರ್ನಾಟಕ ಮತ್ತು ಆಂಧ್ರಪ್ರದೇಶ ರಾಜ್ಯಗಳು ಅವಲಂಬಿಸಿರುವ ಕಾರಣಕ್ಕೆ ನದಿಯ ಪಾತ್ರದಲ್ಲಿ ಕೈಗೊಳ್ಳುವ ಯಾವುದೇ ಕಾಮಗಾರಿಗೆ ಕೇಂದ್ರ ಸರ್ಕಾರವು ಅಧಿಸೂಚನೆ ಹೊರಡಿಸುವುದು ಕಡ್ಡಾಯ. ಬೃಹತ್ ಯೋಜನೆ ಆಗಿರುವ ಕಾರಣಕ್ಕೆ ಇದನ್ನು 'ರಾಷ್ಟ್ರೀಯ ಯೋಜನೆ' ಎಂದೂ ಘೋಷಿಸಬೇಕಾಗುತ್ತದೆ. ಕೃಷ್ಣಾ ಮೇಲ್ದಂಡೆ ಯೋಜನೆ–3ನೇ ಹಂತ ಅನುಷ್ಠಾನಕ್ಕೆ ಬಂದರೆ ಮಹಾರಾಷ್ಟ್ರಕ್ಕೂ ಹೆಚ್ಚು ನೀರು ಲಭ್ಯವಾಗುತ್ತದೆ ಮತ್ತು ಆಂಧ್ರಪ್ರದೇಶಕ್ಕೂ ಜಲಾಶಯದಿಂದ ಹೆಚ್ಚು ನೀರು ಬಿಡಬೇಕಾಗುತ್ತದೆ. ಆದರೆ ಪ್ರಮುಖ ಕಾಮಗಾರಿಗಳೆಲ್ಲವೂ ಕರ್ನಾಟಕ ನೆಲದಲ್ಲಿ ನಡೆಯುತ್ತದೆ ಹಾಗೂ ಪೂರ್ಣ ವೆಚ್ಚವನ್ನು ಕರ್ನಾಟಕವೇ ಭರಿಸಬೇಕಾಗುತ್ತದೆ. ಇದೊಂದು ರೀತಿಯಲ್ಲಿ ಕರ್ನಾಟಕವು ಹೊರೆ ಹೊತ್ತುಕೊಂಡು ಮಹಾರಾಷ್ಟ್ರಕ್ಕೆ ಮತ್ತು ಆಂಧ್ರಪ್ರದೇಶಕ್ಕೆ ನೀರಿನ ಅನುಕೂಲ ಮಾಡಿಕೊಡುವ ಕೆಲಸವಾಗುತ್ತದೆ.

ಕರ್ನಾಟಕಕ್ಕೆ ಆಗುವ ಈ ಹೆಚ್ಚಿನ ಹೊರೆಯನ್ನು ತಪ್ಪಿಸಲು ಕೇಂದ್ರ ಸರ್ಕಾರವೂ ಒಂದಷ್ಟು ಹಣ ಬಿಡುಗಡೆ ಮಾಡಬೇಕಾಗುತ್ತದೆ. ಕೇಂದ್ರವು ಹಾಗೆ ಹಣ ಬಿಡುಗಡೆ ಮಾಡಲು ಅಧಿಸೂಚನೆ ಹೊರಡಿಸಿದ್ದರಷ್ಟೇ ಸಾಧ್ಯ.

'ಜಲ ವ್ಯವಹಾರಗಳ ಸಂಸದೀಯ ಸಮಿತಿಯು 2018ರಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದ ವರದಿಯ ಪ್ರಕಾರ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು 'ರಾಷ್ಟ್ರೀಯ ಯೋಜನೆ' ಎಂದು ಘೋಷಿಸಿದರೆ, ಕೇಂದ್ರವು ಅಂದಾಜು ₹29,000 ಕೋಟಿಯನ್ನು ರಾಜ್ಯಕ್ಕೆ ನೀಡಬೇಕಾಗುತ್ತದೆ. ₹19,000 ಕೋಟಿಯಷ್ಟು ನೇರವಾಗಿ ಯೋಜನೆಗೆ ನೀಡಿದರೆ, ಕೇಂದ್ರ ಪ್ರಾಯೋಜಿತ ವಿವಿಧ ನೀರಾವರಿ ಯೋಜನೆಗಳ ಅಡಿಯಲ್ಲಿ ಸುಮಾರು ₹10,000 ಕೋಟಿಯನ್ನು ಕರ್ನಾಟಕಕ್ಕೆ ಒದಗಿಸಬೇಕಾಗುತ್ತದೆ. ಇದು ರಾಜ್ಯ ಸರ್ಕಾರದ ವೆಚ್ಚವನ್ನು ಶೇ 30ರಷ್ಟು ಕಡಿಮೆ ಮಾಡುವ ಸಂಭವವಿತ್ತು. ಆದರೆ ಈ ವರದಿಯನ್ನು ಕೇಂದ್ರವು ಗಂಭೀರವಾಗಿ ಪರಿಗಣಿಸಲೇ ಇಲ್ಲ. ಸಮಿತಿ ಮತ್ತೊಮ್ಮೆ ಅಂತಹ ವರದಿ ನೀಡಲಿಲ್ಲ. ಯೋಜನೆ ಕುರಿತಾಗಿ ಅಧಿಸೂಚನೆ ಹೊರಡಿಸುವ ಬಗ್ಗೆ ಕೇಂದ್ರ ಸರ್ಕಾರ ಯಾವ ತರಹದ ಕ್ರಮವನ್ನೂ ತೆಗೆದುಕೊಂಡಿಲ್ಲ' ಎಂಬುದು ಕರ್ನಾಟಕ ನೀರಾವರಿ ನಿಗಮದ ಅಧಿಕಾರಿಯೊಬ್ಬರ ಆರೋಪ.

2010ರಿಂದ 2023ರವರೆಗೆ ರಾಜ್ಯದಲ್ಲಿ ಐದು ಸರ್ಕಾರಗಳು ಆಡಳಿತ ನಡೆಸಿದ್ದು, ಕೇಂದ್ರದಿಂದ ಅಧಿಸೂಚನೆ ಪಡೆಯುವಂತೆ ಮಾಡುವಲ್ಲಿ ವಿಫಲವಾಗಿವೆ. ಈಗಿನ ಕಾಂಗ್ರೆಸ್ ಸರ್ಕಾರವು, 'ಅಧಿಸೂಚನೆ ಹೊರಡಿಸಿ' ಎಂದು ಕೇಂದ್ರಕ್ಕೆ ಹಲವು ಬಾರಿ ಪತ್ರ ಬರೆದಿದೆ. ಮುಖ್ಯಮಂತ್ರಿ, ನೀರಾವರಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಪತ್ರ ಬರೆದಿದ್ದಾರೆ. ಆದರೆ ಕೇಂದ್ರ ಸರ್ಕಾರವು ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಈ ಸಂಬಂಧ ಕೇಂದ್ರಕ್ಕೆ ಸರ್ವಪಕ್ಷ ನಿಯೋಗ ಕರೆದೊಯ್ಯುವುದಾಗಿ ರಾಜ್ಯ ಸರ್ಕಾರವು ಹಲವು ಬಾರಿ ಹೇಳಿದೆ. ಆದರೆ, ಅದೂ ಸಾಧ್ಯವಾಗಿಲ್ಲ.

ಕೇಂದ್ರದ ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟದ ಪಕ್ಷಗಳ ಸಂಸದರು ಈವರೆಗೆ ಈ ವಿಷಯದ ಬಗ್ಗೆ ಪ್ರಸ್ತಾಪಿಸಿಲ್ಲ.

'ಬದ್ಧತೆಯೇ ಕೊರತೆ'

ಕೃಷ್ಣಾ ಮೇಲ್ದಂಡೆ ಯೋಜನೆಯ ಮೂರನೇ ಹಂತವು ವಿಳಂಬವಾಗುವಲ್ಲಿ ರಾಜಕೀಯ ಪಕ್ಷಗಳಲ್ಲಿ ಇಚ್ಛಾಶಕ್ತಿ ಇಲ್ಲದಿರುವುದೇ ಕಾರಣ. ಕೃಷ್ಣಾ ನೀರು ಹಂಚಿಕೆ ಐತೀರ್ಪು ಬಂದ ನಂತರ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ರಾಜ್ಯದಲ್ಲಿ ಆಡಳಿತ ನಡೆಸಿವೆ. ಕೇಂದ್ರದಲ್ಲೂ ಈ ಎಲ್ಲ ಪಕ್ಷಗಳು ಸರ್ಕಾರ ನಡೆಸಿವೆ ಇಲ್ಲವೇ ಸರ್ಕಾರದ ಭಾಗವಾಗಿವೆ. ಹೀಗಿದ್ದೂ ಯೋಜನೆ ಅನುಷ್ಠಾನಕ್ಕೆ ಅಧಿಸೂಚನೆ ಪಡೆದುಕೊಳ್ಳಲು ಸಾಧ್ಯವಾಗಿಲ್ಲ. ನೀರಾವರಿ ವಿಚಾರದಲ್ಲಿ ನಾವು, ತಮಿಳುನಾಡಿನವರನ್ನು ನೋಡಿ ಕಲಿಯುವುದು ಬಹಳಷ್ಟಿದೆ. ಕಾವೇರಿ ವಿಚಾರ ಬಂದಾಗ ಅಲ್ಲಿನ ಎಲ್ಲ ರಾಜಕಾರಣಿಗಳು ಪಕ್ಷಭೇದ ಮರೆತು ಒಂದಾಗುತ್ತಾರೆ. ಅಲ್ಲಿನ ಎಲ್ಲ ಸಂಸದರು ಪಕ್ಷಾತೀತವಾಗಿ ಕೇಂದ್ರದ ಮೇಲೆ ಒತ್ತಡ ತಂದು, ತಮ್ಮ ರಾಜ್ಯದ ಕೆಲಸ ಮಾಡಿಸಿಕೊಳ್ಳುತ್ತಾರೆ. ನಮ್ಮ ಸಂಸದರಲ್ಲಿ ಇಂತಹ ಬದ್ಧತೆ ಇಲ್ಲ. ಈ ಕಾರಣದಿಂದಲೇ ನಮ್ಮ ಪಾಲಿನ ನೀರು, ನಮಗೆ ಸಿಗದಂತಾಗಿದೆ. ರೈತರಿಗೆ ಅನ್ಯಾಯವಾಗಿದೆ.

ಟಿ.ಎನ್.ಪ್ರಕಾಶ್ ಕಮ್ಮರಡಿ, ರಾಜ್ಯ ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ

ಯುಕೆಪಿ ಯೋಜನೆಗೆ ಸಂಬಂಧಿಸಿದ ಪ್ರತಿಕ್ರಿಯೆಗಳು

ಕೇಂದ್ರದ ರಾಜಕೀಯ: ಡಿಕೆಶಿ

ಕೇಂದ್ರ ಸರ್ಕಾರವು ಈ ಯೋಜನೆಗೆ ಸಂಬಂಧಿಸಿದಂತೆ ರಾಜಕೀಯ ಮಾಡುತ್ತಿದೆ. ಅಧಿಸೂಚನೆ ಹೊರಡಿಸುವುದು ಇರಲಿ, 15 ವರ್ಷದಲ್ಲಿ ಈ ಬಗ್ಗೆ ಚರ್ಚೆಯನ್ನೇ ಎತ್ತಿಕೊಂಡಿಲ್ಲ. ರಾಜ್ಯದಿಂದ ಏನಾದರೂ ಸಮಸ್ಯೆ ಆಗಿದೆಯೇ ಎಂಬ ತಮ್ಮ ಪ್ರಶ್ನೆಗೆ ಉತ್ತರಿಸಿಯೂ ಇಲ್ಲ. ಆಂಧ್ರಪ್ರದೇಶದ ಅರ್ಜಿ ಆಧಾರದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತಡೆಯನ್ನು ಮುಂದು ಮಾಡುತ್ತಿದೆ. ಅದನ್ನು ತೆರವು ಮಾಡಿಸುವ ಯತ್ನವನ್ನೂ ಮಾಡಿಲ್ಲ ಎಂಬುದನ್ನು ಡಿ.ಕೆ. ಶಿವಕುಮಾರ್ ತಮ್ಮ 'ನೀರಿನ ಹೆಜ್ಜೆ' ಪುಸ್ತಕದಲ್ಲಿ ಹೇಳಿದ್ದಾರೆ.

'ಲೋಕಸಭೆಯಲ್ಲಿ ರಾಜ್ಯವನ್ನು 28 ಸಂಸದರು ಪ್ರತಿನಿಧಿಸುತ್ತಿದ್ದು, ಸಂಸತ್ ಅಧಿವೇಶನದ ವೇಳೆ ಒಮ್ಮೆಯೂ ಈ ಯೋಜನೆಯ ಬಗ್ಗೆ ಚರ್ಚೆ ಸಾಧ್ಯವಾಗಿಲ್ಲ. ಕೇಂದ್ರ ಸರ್ಕಾರದ್ದೇ 19 ಸಂಸದರು ಇದ್ದಾರೆ. ಸರ್ವಪಕ್ಷ ನಿಯೋಗಕ್ಕೆ ಕರೆದರೆ, ಒಬ್ಬರೂ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿಲ್ಲ. ಪ್ರಧಾನಿ ನರೇಂದ್ರ ಮೋದಿ ಎದುರು ಹೋಗಿ, 'ನಮ್ಮ ರಾಜ್ಯದ ಪಾಲಿನ ನೀರನ್ನು ನಮಗೆ ಕೊಡಿ' ಎಂದು ಕೇಳುವ ಧೈರ್ಯ ಬಿಜೆಪಿ ಮತ್ತು ಜೆಡಿಎಸ್ ಸಂಸದರಿಗೆ ಇಲ್ಲ. ಆದರೆ ರಾಜಕೀಯ ಮಾತ್ರ ಮಾತನಾಡುತ್ತಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹಲವು ಬಾರಿ ನೇರಾನೇರ ಆರೋಪ ಮಾಡಿದ್ದಾರೆ.

ಸರ್ಕಾರದ ಬಳಿ ಹಣವಿಲ್ಲ: ಅಶೋಕ

ಉತ್ತರ ಕರ್ನಾಟಕಕ್ಕೆ ಸರ್ಕಾರ ಘೋಷಿಸಿರುವ ಯಾವ ಯೋಜನೆಗಳೂ ಸರಿಯಾದ ಸಮಯಕ್ಕೆ ಆರಂಭವಾಗಿಲ್ಲ. ಎಲ್ಲವೂ ವಿಳಂಬವಾಗಿವೆ. ಕೃಷ್ಣಾ ಮೇಲ್ದಂಡೆ ಯೋಜನೆಯೂ ಇದಕ್ಕೆ ಹೊರತಲ್ಲ. ಯೋಜನೆ ಅನುಷ್ಠಾನಕ್ಕೆ ತರಲು ರಾಜ್ಯ ಸರ್ಕಾರದ ಬಳಿ ಹಣವಿಲ್ಲ. ಹೀಗಾಗಿ ಅದು ಇನ್ನಷ್ಟು ವಿಳಂಬವಾಗುತ್ತದೆ ಎಂಬುದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರ ಆರೋಪ.

ಈ ಯೋಜನೆಗೆ 75,000 ಎಕರೆಗಳಷ್ಟು ಜಮೀನು ಅಗತ್ಯವಿದ್ದು, ಒಂದೇ ಬಾರಿಗೆ ಅವನ್ನು ಭೂಸ್ವಾಧೀನ ಮಾಡಿಕೊಳ್ಳುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2024ರ ಡಿಸೆಂಬರ್‌ನಲ್ಲಿ ನಡೆದಿದ್ದ ಚಳಿಗಾಲದ ಅಧಿವೇಶನದಲ್ಲಿ ಹೇಳಿದ್ದರು. ಆದರೆ ಈಗ ಮತ್ತೊಂದು ಚಳಿಗಾಲದ ಅಧಿವೇಶನ ಬಂದಿದೆ. ಯೋಜನೆ ಯಾವ ಹಂತಕ್ಕೆ ಬಂದಿದೆ ಎಂಬುದು ಅವರ ಪ್ರಶ್ನೆ.

ಯೋಜನೆಗೆ ಹಣ ಹೊಂದಿಸಿ ಎಂದು ಆರ್ಥಿಕ ಇಲಾಖೆಗೆ ಸೂಚಿಸಿದರೆ, 'ಉಚಿತ ಯೋಜನೆಗಳನ್ನು ನಿಲ್ಲಿಸಿ. ಆಗ ಈ ಯೋಜನೆಗೆ ಹಣ ಹೊಂದಿಸುತ್ತೇವೆ' ಎಂದು ಹಿಂಬರಹ ಬಂದಿದೆಯಂತೆ. ಇನ್ನೆಲ್ಲಿ ಈ ಯೋಜನೆ ಜಾರಿಗೆ ತರುತ್ತಾರೆ ಎಂಬುದು ಅಶೋಕ ಅವರ ಪ್ರತಿಪಾದನೆ.

ಕಾಮಗಾರಿ ನನೆಗುದಿಗೆ



ರಾಯಚೂರು ಜಿಲ್ಲೆಯಲ್ಲಿ ಕೃಷ್ಣ ಭಾಗ್ಯ ಜಲ ನಿಗಮದ 'ಬಿ' ಸ್ಕೀಮ್ (ಅಣೆಕಟ್ಟು ಎತ್ತರ ಕಾಮಗಾರಿ ನಡೆದಾಗ ನೀರು ಹರಿಸುವುದು) ಯೋಜನೆಯಡಿ ನಾರಾಯಣಪುರ ಬಲದಂಡೆ 9 (ಎ) ವಿತರಣಾ ಕಾಲುವೆ ಕಾಮಗಾರಿ 13 ವರ್ಷಗಳಿಂದ ನನೆಗುದಿಗೆ ಬಿದ್ದಿದೆ. ಕಾಮಗಾರಿ ಪುನರಾರಂಭಕ್ಕೆ ಶೀಘ್ರ ಕ್ರಮ ಕೈಗೊಳ್ಳಬೇಕು.

ಕಾಲುವೆ ನಿರ್ಮಾಣಕ್ಕೆ ಅಗತ್ಯ ಭೂಮಿ ನೀಡಿದ ರೈತರಿಗೆ ಸೂಕ್ತ ಪರಿಹಾರ ನೀಡದ ಹಿನ್ನೆಲೆಯಲ್ಲಿ ರೈತರು ಕಾಮಗಾರಿ ತಡೆದಿದ್ದಾರೆ. 9ಎ ಕಾಲವೆ ಕಾಮಗಾರಿ ಪೂರ್ಣಗೊಂಡರೆ ಜಿಲ್ಲೆಯ 30ಕ್ಕೂ ಹೆಚ್ಚು ಗ್ರಾಮಗಳ ರೈತರಿಗೆ ನೀರಾವರಿ ಸೌಲಭ್ಯ ದೊರೆಯಲಿದೆ.

ಹನುಮಂತರಾಯ ನಾಯಕ, ಜೆಡಿಎಸ್ ಮುಖಂಡ, ದೇವದುರ್ಗ, ರಾಯಚೂರು ಜಿಲ್ಲೆ

ಯೋಜನೆ ಪೂರ್ಣಗೊಳ್ಳಲು ಇನ್ನೆಷ್ಟು ವರ್ಷ ಬೇಕು?



ಯಾವುದೇ ಯೋಜನೆಯಾದರೂ 10 ಅಥವಾ 20 ವರ್ಷಗಳಲ್ಲಿ ಪೂರ್ಣಗೊಳ್ಳಬೇಕು. ಯುಕೆಪಿ ಯೋಜನೆಯೂ ಆರಂಭವಾಗಿ ಆರು ದಶಕಗಳೇ ಕಳೆದಿದೆ.

ಭೂಸ್ವಾಧೀನ ಪ್ರಕ್ರಿಯೆಯು ಸರಿಯಾಗಿ ಆಗುತ್ತಿಲ್ಲ. ಜಮೀನು ಕಳೆದುಕೊಂಡವರಿಗೆ ಪರಿಹಾರ ಸಿಗುತ್ತಿಲ್ಲ. ಜಮೀನು ಕೊಡಲು ಸಿದ್ಧರಿರುವವರಿಗೆ ಸಮರ್ಪಕ ಮಾಹಿತಿ ಸಿಗುತ್ತಿಲ್ಲ. ಹೀಗಾಗಿ ಯೋಜನೆ ಅನುಷ್ಠಾನ ಪ್ರಕ್ರಿಯೆಗೆ ಹಿನ್ನಡೆಯಾಗಿದೆ.

ಯೋಜನೆ ಪೂರ್ಣಗೊಳಿಸುವ ಬದ್ಧತೆಯಿದ್ದಲ್ಲಿ ರಾಜ್ಯ ಸರ್ಕಾರವು ಕೂಡಲೇ ಅಗತ್ಯ ಪ್ರಮಾಣದಷ್ಟು ಅನುದಾನ ಬಿಡುಗಡೆ ಮಾಡಬೇಕು. ಸಿಬ್ಬಂದಿ ನೇಮಕಾತಿ ಮಾಡಿಕೊಳ್ಳಲು ಕೂಡಲೇ ಕ್ರಮ ತೆಗೆದುಕೊಳ್ಳಬೇಕು.

ಪ್ರಕಾಶ ಅಂತರಗೊಂಡ, ಪ್ರಧಾನ ಕಾರ್ಯದರ್ಶಿ, ಯುಕೆಪಿ ಮುಳುಗಡೆ ಹಿತರಕ್ಷಣಾ ಸಮಿತಿ, ಬಾಗಲಕೋಟೆ

3ನೇ ಹಂತ ಎಂಬುದೇ ಕ್ಲೀಷೆ



ಯುಕೆಪಿ ಎರಡನೇ ಹಂತದ ಕಾರ್ಯವೇ ಇನ್ನೂ ಪೂರ್ಣವಾಗದೇ ಇರುವ ಕಾರಣ ಮೂರನೇ ಹಂತದ ಬಗ್ಗೆ ಮಾತನಾಡುವುದು ಕ್ಲೀಷೆ ಅನ್ನಿಸುತ್ತದೆ. ಎರಡನೇ ಹಂತದಲ್ಲಿ ಪೂರ್ಣಪ್ರಮಾಣದಲ್ಲಿ ಪರಿಹಾರ, ಪುನರ್ವಸತಿ ಆಗಿಲ್ಲ. ಎರಡು ದಶಕಗಳಿಂದ ಸಂತ್ರಸ್ತರು ಭೂಮಿ, ಮನೆ ಕಳೆದುಕೊಂಡು, ಸಮರ್ಪಕ ಪರಿಹಾರವೂ ಸಿಗದೇ ಪರಿತಪಿಸುತ್ತಿದ್ದಾರೆ.

ಅದರ ಶಾಪ ಈವರೆಗೆ ಯಾರಿಗೂ ತಟ್ಟಿಲ್ಲ. ಅಧಿಕಾರಕ್ಕೆ ಬರುವ ಎಲ್ಲರೂ ಕೃಷ್ಣಾ ಮೇಲ್ದಂಡೆ ಯೋಜನೆ ಅನುಷ್ಠಾನಕ್ಕೆ ಬದ್ಧರಿದ್ದೇವೆ ಎನ್ನುತ್ತಾರೆ. ಬದ್ಧತೆ ಇದ್ದಿದ್ದರೇ ಯೋಜನೆ ಅನುಷ್ಠಾನವಾಗಿ 25 ವರ್ಷಗಳು ಆಗಬೇಕಿತ್ತು.

ರಾಜ್ಯ ಸರ್ಕಾರ ಆದಷ್ಟು ಬೇಗ ಯುಕೆಪಿ 2ನೇ ಹಂತವನ್ನು ಪೂರ್ಣಗೊಳಿಸಿ, ಮುಂದಿನ ಆರ್ಥಿಕ ವರ್ಷದಲ್ಲಿ ಮೂರನೇ ಹಂತದ ಅನುಷ್ಠಾನಕ್ಕೆ ಆದ್ಯತೆ ನೀಡಲಿ.

ಪ್ರೊ.ಕೃಷ್ಣಕೊಲ್ಹಾರ ಕುಲಕರ್ಣಿ, ನೀರಾವರಿ ತಜ್ಞ, ವಿಜಯಪುರ

ಸರ್ಕಾರ ಸ್ಪಷ್ಟ ನಿರ್ಧಾರ ಮಾಡಲಿ



ಆಲಮಟ್ಟಿ ಜಲಾಶಯ ಎತ್ತರವನ್ನು 519.60 ಮೀಟರ್‌ನಿಂದ 524.256 ಮೀಟರಿಗೆ ಏರಿಸಬೇಕು. ಈ ನಿಟ್ಟಿನಲ್ಲಿ ಮೊದಲು ಸುಪ್ರೀಂ ಕೋರ್ಟ್‌ನಲ್ಲಿ ಆಂಧ್ರಪ್ರದೇಶ ಹೂಡಿರುವ ದಾವೆ ತೆರವಾಗಬೇಕು.

ಅದೇ ರೀತಿ ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಇಲಾಖೆಗೆ ಈಗಿರುವ ಆಯುಕ್ತರಿಗೆ ಪೂರ್ಣ ಪ್ರಮಾಣದ ಅಧಿಕಾರ ನೀಡಬೇಕು ಹಾಗೂ ಈ ಇಲಾಖೆಗೆ ಪೂರ್ಣ ಪ್ರಮಾಣದ ಸಿಬ್ಬಂದಿ ನೀಡಬೇಕು.

ಜಿ.ಸಿ.ಮುತ್ತಲದಿನ್ನಿ, ಸಂಚಾಲಕ, ಕೃಷ್ಣಾ ತೀರ ಮುಳುಗಡೆ ಕ್ಷೇಮಾಭಿವೃದ್ಧಿ ಸಂಸ್ಥೆ, ಆಲಮಟ್ಟಿ, ವಿಜಯಪುರ


'ಅಂತಿಮ ಗೆಜೆಟ್ ಆಗಲಿ'



ಕೃಷ್ಣಾ ನ್ಯಾಯಾಧೀಕರಣ ಪ್ರಾಧಿಕಾರದ ಅಂತಿಮ ತೀರ್ಪಿನ ಗೆಜೆಟ್ ನೋಟಿಫಿಕೇಶನ್ ಹೊರಡಿಸುವ ಬಗ್ಗೆ ರಾಜ್ಯದ ಎಲ್ಲಾ ಸಂಸದರು, ವಿಶೇಷವಾಗಿ ಕೇಂದ್ರ ಸಚಿವರಾದ ಪ್ರಹ್ಲಾದ ಜೋಶಿ, ವಿ.ಸೋಮಣ್ಣ ಹಾಗೂ ರಾಜ್ಯದ ಜಲಸಂಪನ್ಮೂಲ ಸಚಿವರು ಮುತುವರ್ಜಿ ವಹಿಸಿ ಗೆಜೆಟ್ ನೋಟಿಫಿಕೇಶನ್ ಆಗುವಂತೆ ಕ್ರಮ ಕೈಗೊಳ್ಳಬೇಕು.

ಬಸವರಾಜ ಕುಂಬಾರ, ಅಧ್ಯಕ್ಷ, ಕೃಷ್ಣಾ ಕಣಿವೆ ರೈತ ಹಿತರಕ್ಷಣಾ ಸಮಿತಿ, ವಿಜಯಪುರ

ಹೊಲಗಾಲುವೆ ನಿರ್ಮಿಸಿ



ರಾಯಚೂರು ಜಿಲ್ಲೆಯ ನದಿ ತೀರದ ಗ್ರಾಮಗಳ ರೈತರ ಹೊಲಗಳಿಗೆ ಪ್ರಸ್ತುತ ಮಾರ್ಚ್ 30ರವರೆಗೆ ಮಾತ್ರ ನೀರು ಪೂರೈಕೆ ಆಗುತ್ತಿದೆ. ಆಲಮಟ್ಟಿ ಅಣೆಕಟ್ಟು ಎತ್ತರಿಸಿದರೆ ಏಪ್ರಿಲ್ 15ರವರೆಗೂ ನೀರು ಲಭಿಸಲಿದೆ. ಇದರಿಂದ ಬೇಸಿಗೆಯಲ್ಲಿನ ನೀರಿನ ಕೊರತೆ ನೀಗಿಸಲು ಸಾಧ್ಯವಾಗಲಿದೆ. ರಾಯಚೂರು ಜಿಲ್ಲೆಯಲ್ಲಿ ಮುಖ್ಯ ಕಾಲುವೆಗಳು ನಿರ್ಮಾಣವಾಗಿವೆ. ಇದರ ಜತೆಗೆ ಹೊಲಗಾಲುವೆಗಳೂ ನಿರ್ಮಾಣವಾಗಬೇಕು. ಇದರಿಂದ ರೈತರಿಗೆ ಹೆಚ್ಚು ಅನುಕೂಲವಾಗಲಿದೆ.

ಚಾಮರಸ ಮಾಲೀಪಾಟೀಲ, ಗೌರವಾಧ್ಯಕ್ಷ, ಕರ್ನಾಟಕ ರಾಜ್ಯ ರೈತ ಸಂಘ, ರಾಯಚೂರು

ಲೂಟಿ ಮಾಡಲು ವರದಾನ




ನಾರಾಯಣಪುರ ಜಲಾಶಯ ದಶಕಗಳ ಹಿಂದೆಯೇ ನಿರ್ಮಾಣವಾಗಿದ್ದರೂ ಇದುವರೆಗೂ ಕೊನೆಯ ಭಾಗದ ರೈತರ ಜಮೀನಿಗೆ ನೀರು ತಲುಪಿಲ್ಲ. ಯೋಜನೆಯ ಮೊತ್ತ ಎರಡು ಪಟ್ಟು ಆಗಿದ್ದರೂ ನಿರ್ಮಾಣ ಆಗಿರುವ ಕಾಲುವೆಯಲ್ಲಿನ ಮುಳ್ಳು ಕಂಟಿಗಳಲ್ಲಿನ ಒಂದು ಮುಳ್ಳು ಸಹ ತೆಗೆಯಲು ಆಗಿಲ್ಲ. ಕಾಲುವೆಯಲ್ಲಿ ಭ್ರಷ್ಟಾಚಾರ ಹಣದ ಹೊಳೆಯೇ ಹರಿದಿದೆ.

ಮಲ್ಲಿಕಾರ್ಜುನ ಸತ್ಯಂಪೇಟೆ, ಉಪಾಧ್ಯಕ್ಷ, ಕರ್ನಾಟಕ ರಾಜ್ಯ ರೈತ ಸಂಘಟನೆ, ಯಾದಗಿರಿ

ಪರಿಕಲ್ಪನೆ: ಯತೀಶ್ ಕುಮಾರ್ ಜಿ.ಡಿ.,
ಪೂರಕ ಮಾಹಿತಿ: ಬಸವರಾಜ ಹವಾಲ್ದಾರ, ಬಸವರಾಜ್ ಸಂಪಳ್ಳಿ

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 14-12-2000

- **'ಎಸ್ಮಾ' ಬಳಕೆಗೆ ಅವಕಾಶ: ಅಂಚೆ ಸಿಬ್ಬಂದಿಗೆ ಎಚ್ಚರಿಕೆ**

ನವದೆಹಲಿ, ಡಿ13 (ಯುಎನ್ಐ)– ಮುಷ್ಕರ ನಿಲ್ಲಿಸಿ ಕೆಲಸಕ್ಕೆ ಹಾಜರಾಗಿ ಅಥವಾ ಪರಿಣಾಮಗಳನ್ನು ಎದುರಿಸಿ ಎಂದು ಕೇಂದ್ರ ಸಂಪರ್ಕ ಖಾತೆಯ ಮಂತ್ರಿ ರಾಮ ವಿಲಾಸ್ ಪಾಸ್ವಾನ್ ಅವರು ಇಂದು ಕಳೆದ ಒಂಬತ್ತು ದಿನಗಳಿಂದ ಕೆಲಸ ನಿಲ್ಲಿಸಿ ಚಳವಳಿಯಲ್ಲಿ ನಿರತರಾಗಿರುವ ಆರು ಲಕ್ಷ ಮಂದಿ ಅಂಚೆ ಇಲಾಖೆ ಸಿಬ್ಬಂದಿಗೆ ಎಚ್ಚರಿಕೆ ನೀಡಿದರು.

ಕ್ರಮ ಕೈಗೊಳ್ಳಲು ಸಮಯ ಸನ್ನಿಹಿತವಾಗುತ್ತಿದೆ. ಇನ್ನೆರಡು ದಿನಗಳಲ್ಲಿ ಅಂಚೆ ಕೆಲಸ ಸಹಜ ಸ್ಥಿತಿಗೆ ಮರಳುವುದು ಎಂದ ಪಾಸ್ವಾನ್, ಮುಷ್ಕರ ನಿಲ್ಲಿಸಲು 'ಎಸ್ಮಾ' ಕಾಯ್ದೆ ಜಾರಿ ಮಾಡಲಾಗುವುದೆ ಎಂಬುದನ್ನು ಸ್ಪಷ್ಟ ಪಡಿಸಲಿಲ್ಲ.

75 ವರ್ಷಗಳ ಹಿಂದೆ

ಗುರುವಾರ, 14-12-1950

- **ಬೆಂಗಳೂರು ಬಿಟ್ಟ ಏರ್–ಇಂಡಿಯಾ ವಿಮಾನ ಪತ್ತೆಯಿಲ್ಲ**

ಕೊಯಮತ್ತೂರು, ಡಿ.13– ಮದರಾಸಿನಿಂದ ತಿರುವನಂತಪುರಕ್ಕೆ ಹೊರಟ ಏರ್ ಇಂಡಿಯಾ ವಿಮಾನವೊಂದು ಬೆಂಗಳೂರಿನಿಂದ ಹೊರಟು ಬೆಳಿಗ್ಗೆ 10–20ಕ್ಕೆ ಕೊಯಮತ್ತೂರಿಗೆ ಬರಬೇಕಾಗಿದ್ದುದು ಇನ್ನೂ ಪತ್ತೆಯಾಗಿಲ್ಲವಾಗಿದೆ.

ವಿಮಾನದಲ್ಲಿ 16 ಮಂದಿ ಪ್ರಯಾಣಿಕರೂ, ನಾಲ್ವರು ಚಾಲಕ ವರ್ಗದವರೂ ಇದ್ದರು. ಎಂಟು ಸಾವಿರ ಅಡಿಗಳ ನೀಲಗಿರಿ ಬೆಟ್ಟ ಪ್ರದೇಶದಲ್ಲಿ ಮೋಡಗಳು ದಟ್ಟವಾಗಿದ್ದು ಸ್ಪಷ್ಟವಾಗಿ ಕಾಣದೆ, ವಿಮಾನಯಾನ ಅಪಾಯಕರವಾಗಿ, ನಾಪತ್ತೆಯಾದ ಡಕೋಟವನ್ನು ಕಂಡು ಹಿಡಿಯುವ ಪ್ರಯತ್ನ ವಿಫಲವಾಗಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

14 ಡಿಸೆಂಬರ್ 2025 ಭಾನುವಾರ ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ದಶಮಿ ಗಂ. 18-50 **ನಕ್ಷತ್ರ:** ಹಸ್ತ ಗಂ. 8-19 **ಯೋಗ:** ಸೌಭಾಗ್ಯ ಗಂ. 11-45 **ಕರಣ:** ವಿಷ್ಟಿ ಗಂ. 18-50 ವೃಶ್ಚಿಕ ಮಾಸದ 28 ನೇ ದಿನ. **ಮಳೆ ನಕ್ಷತ್ರ:** ಜ್ಯೇಷ್ಠ 4 ನೇ ಪಾದ. **ರಾಹುಕಾಲ:** ಸಾಯಂಕಾಲ 04-30 - 06-00 **ಸೂರ್ಯೋದಯ:** 06-48 **ಸೂರ್ಯಾಸ್ತ:** 06-02 **ಮುಸ್ಲಿಂ ದಿನಾಂಕ:** 22 ಜುಮಾದುಸ್ಸಾನಿ **ಅದೃಷ್ಟ ಸಂಖ್ಯೆ:** 1, 4

ಮೇಷ: ಧನಾಗಮನದಲ್ಲಿ ವಿಳಂಬ ತೋರಿಬರಲಿದೆ. ಸಂಘ-ಸಂಸ್ಥೆಗಳ ಹುದ್ದೆಯನ್ನು ಅಲಂಕರಿಸುವ ಅವಕಾಶ ಎದುರಾಗಲಿದೆ. ಸಣ್ಣ ಪ್ರಮಾಣದಲ್ಲಿ ನಿಮ್ಮ ವಾಹನಕ್ಕೆ ಅವಘಡಗಳಾಗುವ ಸಾಧ್ಯತೆ ಇದೆ.

ವೃಷಭ: ರಸ ಪದಾರ್ಥಗಳ ವ್ಯಾಪಾರಸ್ಥರಿಗೆ ಅಧಿಕ ಲಾಭ ಸಿಗುತ್ತದೆ. ಕೃಷಿ ಕೆಲಸಗಳು ಸಮರ್ಪಕವಾಗಿ ನಡೆದು ಮನಸ್ಸಿಗೆ ನೆಮ್ಮದಿ ಉಂಟಾಗುವುದು. ನಟ ನಟಿಯರಿಗೆ ವಿಪುಲ ಅವಕಾಶಗಳು ದೊರೆಯಲಿವೆ.

ಮಿಥುನ: ಸಿದ್ಧ ಉಡುಪುಗಳ ರಫ್ತು ವ್ಯಾಪಾರಗಳನ್ನು ನಡೆಸುವವರು ಲಾಭ ಹೊಂದುವಿರಿ. ನಿಮ್ಮ ವೃತ್ತಿ ಕ್ಷೇತ್ರದಲ್ಲಿನ ಪ್ರಸಿದ್ಧಿಗಾಗಿ ಹೆಚ್ಚಿನ ತರಬೇತಿಯನ್ನು ಪಡೆಯಲು ಬೇಕಾದ ಮಾರ್ಗ ಹುಡುಕಿ, ಅಳವಡಿಸಿಕೊಳ್ಳುವುದು ಉತ್ತಮ.

ಕರ್ಕಾಟಕ: ಜಾಣ್ಮೆಯಿಂದ ವ್ಯವಹರಿಸಿದರೆ ಪರಿಸ್ಥಿತಿಯ ಲಾಭ ಪಡೆಯಬಹುದು. ಮನೆ ಜಾಗದ, ಪಿತ್ರಾರ್ಜಿತ ಆಸ್ತಿಯ ಹಂಚಿಕೆಯ ವಿಷಯದಲ್ಲಿ ಕೆಲವೊಂದು ಬದಲಾವಣೆ ಮಾಡಿಕೊಳ್ಳುವ ಪರಿಸ್ಥಿತಿ ಬರುವುದು.

ಸಿಂಹ: ಕಾರಣಾಂತರದಿಂದ ಸಿಕ್ಕಂತಹ ಬಿಡುವಿನ ಸಮಯವನ್ನು ಸದುಪಯೋಗ ಪಡಿಸಿಕೊಳ್ಳುವುದು ನಿಮ್ಮ ಜಾಣತನಕ್ಕೆ ಬಿಟ್ಟಿರುವ ವಿಚಾರ. ಅಪರಿಚಿತರ ಹತ್ತಿರ ನಿಮ್ಮ ಯಾವುದೇ ಗೌಪ್ಯತೆಯನ್ನು ಹಂಚಿಕೊಳ್ಳಬೇಡಿ.

ಕನ್ಯಾ: ಲೇವಾದೇವಿ ವ್ಯವಹಾರ ನಡೆಸುವವರು ವ್ಯವಹಾರದಲ್ಲಿ ಸ್ವಲ್ಪ ಪ್ರಮಾಣದ ನಷ್ಟ ಸಂಭವಿಸಿ ಹಿನ್ನಡೆಯನ್ನು ಕಾಣುವಂತಾಗಲಿದೆ. ರಾಜಕೀಯವಾಗಿ ಪ್ರಬಲಗೊಳ್ಳುವ ಅವಕಾಶಗಳು ಈ ದಿನದಂದು ಹೆಚ್ಚಲಿದೆ.

ತುಲಾ: ನಿಮ್ಮ ಏಕಾಗ್ರತೆಯ ಕೊರತೆಯಿಂದಾಗಿ ಕೆಲಸ ಕಾರ್ಯಗಳಲ್ಲಿ ತಪ್ಪುಗಳು ಉಂಟಾಗುತ್ತವೆ, ಅದರಿಂದಾಗಿ ನಷ್ಟ ಅನುಭವಿಸುವಿರಿ. ಆತ್ಮೀಯನಿಗೆ ಸಾಂತ್ವನ ಹೇಳ ಬೇಕಾಗಬಹುದು. ಉದ್ಯೋಗದ ವಿಷಯದ ಚಿಂತೆ ದೂರಾಗುವುದು.

ವೃಶ್ಚಿಕ: ಹಿರಿಯರು ನಿಮ್ಮ ಗಹನವಾದ ಸಮಸ್ಯೆಗಳಿಗೆ ತಕ್ಷಣ ಸುಲಭವಾದ ಪರಿಹಾರಗಳನ್ನು ತಿಳಿಸಿ ಕೊಡುವರು. ಸಹೋದರರಿಂದ ಬರಬೇಕಿದ್ದ ಹಣ ಹಿಂತಿರುಗಿ ಬರುವುದು. ಸೌಂದರ್ಯ ವಿನ್ಯಾಸಕರಿಗೆ ಇದು ಉತ್ತಮ ದಿನ.

ಧನು: ಕೆಲಸದ ಒತ್ತಡದಿಂದ ದೇಹಾಯಾಸ ತೋರಿಬಂದು ಆರೋಗ್ಯದ ಮೇಲೆ ಪರಿಣಾಮ ಬೀರಲಿದೆ. ನಿಮ್ಮಲ್ಲಿರುವ ಅಗಾಧ ಜ್ಞಾನ ಶಕ್ತಿ ಹೊರ ಹೊಮ್ಮಿ ಬರಲು ಸೂಕ್ತ ಕಾಲವಿದು. ಮನೆಯ ದಿನ ನಿತ್ಯದ ಖರ್ಚಿನಲ್ಲಿ ಹಿಡಿತವಿರಲಿ.

ಮಕರ: ಭೋಜನ ನಿಮಿತ್ತ ಮಾಡುವ ವೃತ್ತಿಗಿಂತ ಪ್ರವೃತ್ತಿಯಲ್ಲಿ ಆಸಕ್ತಿ ಹೆಚ್ಚಲಿದೆ ಅದರಲ್ಲಿಯೆ ನಿಮಗೆ ಹೆಚ್ಚಿನ ಲಾಭ. ಬೆಂಕಿ ಅನಾಹುತ ಸಂಭವಿಸಬಹುದು, ಜಾಗೃತರಾಗಿರಿ. ಸಾಮಾಜಿಕ ವಿಷಯಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ.

ಕುಂಭ: ರಿಯಲ್ ಎಸ್ಟೇಟ್ ವ್ಯವಹಾರ ನಡೆಸುವ ವ್ಯಕ್ತಿಗಳಿಗೆ ನಿಮ್ಮ ಕಲ್ಪನೆಗಿಂತ ಅಧಿಕ ಕಮಿಶನ್ ದೊರೆಯಲಿದೆ. ಹೊಸ ಮನೆಯ ನಿರ್ಮಾಣ ಕಾರ್ಯಗಳು ಚುರುಕುಗತಿಯಲ್ಲಿ ಸಾಗುವುದು. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ ಸಾಧ್ಯ.

ಮೀನ: ಸಣ್ಣ ಪುಟ್ಟ ವಿಚಾರವಾಗಿ ಅತ್ತೆ ಸೊಸೆಯ ಸಂಬಂಧದಲ್ಲಿ ಭಿನ್ನಾಭಿಪ್ರಾಯ ಮೂಡಲಿದೆ. ವಾಹನ ರಿಪೇರಿಗಾಗಿ ಖರ್ಚು ಮಾಡಬೇಕಾಗುವುದು. ದ್ವಿಚಕ್ರ ವಾಹನ ಮಾರಾಟಗಾರರಿಗೆ ಲಾಭವಿದೆ.

ಪದಬಂಧ 6253


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಇದು ಬರೀ ಊಹೆ (3)
3.ಎಲ್ಲಕ್ಕಿಂತ ಮುಖ್ಯವಾದುದು (3)
5.ಮನುಷ್ಯನನ್ನು ತಿನ್ನುವ ಪ್ರಾಣಿ (5)
6.ಚಿಲಿಪಿಲಿ ಪದದಲ್ಲಿರುವ ವರ್ಣ (2)
8.ಸಂತತಿಯಲ್ಲಿರುವ ಸಾಧು (2)
9.ರಂಧ್ರ ಇಲ್ಲಿ ಕಾಣುತ್ತಿದೆ (2)
10.ನಾಯಿ ಜಾತಿಗೆ ಸೇರಿದ ಕಾಡುಮೃಗ ಉಲ್ಟಾ ನಿಂತಿದೆ (2)
11.ನಾಗರಿಕತೆ ಸಾರುತ್ತಿರುವ ಸ್ತ್ರೀ (2)
12.ದಾಖಲೆ,ಪತ್ರಗಳ ಕೊನೆಯಲ್ಲಿ ಸೇರಿಸುವ ವಿಶೇಷಾಂಶ (2)
16.ಮತ ಧರ್ಮವನ್ನು ಅನುಸರಿಸದವ (5)
17.ಯಾವ ವಸ್ತುವೂ ಸಿಗದ ಹಳ್ಳಿ (3)
18.ಸರವಿಟ್ಟು ಮಾಡಿರುವ ಉಪಚಾರ (3)

ಮೇಲಿಂದ ಕೆಳಕ್ಕೆ

1.ಅತ್ಯಂತ ಪರಾಕ್ರಮಿ (4)
2.ಆಗಿಹೋಗಿದ್ದನ್ನು ಮನಸ್ಸಿಗೆ ತಂದುಕೊಳ್ಳುವುದು (3)
3.ಮುಚ್ಚುಮರೆ ಇಲ್ಲದೆ ನಿಚ್ಚಳವಾದುದು (3)
4.ಅದೇ ತಾನೆ ಹುಟ್ಟಿದುದು (4)
7.ತೂರಿಕೊಂಡು ನಡೆಸಿರುವ ಸಂಚು (3)
8.ಆನಂದ ಹೀಗೆ ಬಂದಿದೆ (3)
11.ಹೆಸರು ಮುಂದಿಟ್ಟುಕೊಂಡು ಮೋಸಮಾಡು! (4)
13.ಕೊನೆಗೆ ಒಜ್ಜೆಯೆನಿಸಿದ ಸಂಧಾನ (4)
14.ಅಲ್ಲಿದ್ದು ಧಮಕಿ ಹಾಕುತ್ತಿರುವ ನೀಚ (3)
15. ವಿರಸದ ವಿರುದ್ಧ ಪದ (3)



6252ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1. 1.ದಾಹ 3.ನದೀಜ 6.ಸುರಾಸುರ 8.ಮಾರ್ದವ 9.ಕಾಸು 10.ತಪಾಸಣೆ 13.ಮನೋರಥ 15.ಅಣ್ಣ 16.ಪರಾತ 17.ನಸುನಗು 18.ರಗಡು 19.ಣಜಾ

ಮೇಲಿಂದ ಕೆಳಕ್ಕೆ: 2.ಹಸುಗೂಸು 3.ನರ 4.ಜಮಾವಣೆ 5.ಭಾವ 7.ಸುಶ್ರುತ 9.ಕಾರ್ಮುಕ 11.ಪಾಮರ 12.ಹೊಂಬಣ್ಣ 13.ಮನ್ವಂತರ 14.ಥಪಸು 15.ಅವಗುಣ 16.ಪತ್ರ 17.ನಡು

ಸುಡೊಕು 6637

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	8			7			4	
		4	6		8			9
7				1		8		
					4	6	7	
6		1	7		2			4
								1
				6		5		
	3	6	2		5			7
8		5		4			6	

6636 ಸುಡೊಕು

4	8	1	6	9	7	5	2	3
6	7	5	3	2	4	9	1	8
3	9	2	1	8	5	4	7	6
9	6	4	8	1	3	2	5	7
7	5	3	4	6	2	1	8	9
2	1	8	7	5	9	3	6	4
1	2	7	9	4	6	8	3	5
5	3	9	2	7	8	6	4	1
8	4	6	5	3	1	7	9	2

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಶಾಲೆಗೆ ಕಂಪ್ಯೂಟರ್: ₹109 ಕೋಟಿ ನಷ್ಟ

ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮಕ್ಕೆ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಶಿಫಾರಸು

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯದಲ್ಲಿನ ಸರ್ಕಾರಿ ಶಾಲೆಗಳಿಗೆ 2009–10ರಲ್ಲಿ (ಬಿಜೆಪಿ ಸರ್ಕಾರದ ಅವಧಿ) ಖರೀದಿಸಿದ್ದ ಕಂಪ್ಯೂಟರ್, ಯುಪಿಎಸ್ ಸೇರಿದಂತೆ ವಿವಿಧ ಎಲೆಕ್ಟ್ರಾನಿಕ್ಸ್ ಉಪಕರಣಗಳಲ್ಲಿ ₹109.19 ಕೋಟಿ ಅವ್ಯವಹಾರ ನಡೆದಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಸಿ.ಸಿ.ಪಾಟೀಲ ಅಧ್ಯಕ್ಷತೆಯ ವಿಧಾನ ಮಂಡಲದ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಶಿಫಾರಸು ಮಾಡಿದೆ.

ಅಂದಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ವ್ಯವಹಾರಗಳ ಪರಿಶೋಧನೆ ನಡೆಸಿದ್ದ ಭಾರತೀಯ ಮಹಾ ಲೇಖಪಾಲರು (ಸಿಎಜಿ) 2013ರಲ್ಲಿ ಸಿದ್ಧಪಡಿಸಿದ್ದ ವರದಿಯಲ್ಲಿ, ಖರೀದಿಯಲ್ಲಾದ ಅವ್ಯವಹಾರಗಳ ಬಗ್ಗೆ ಉಲ್ಲೇಖಿಸಿದ್ದರು. ಅದನ್ನು ಪರಿಶೀಲಿಸಿದ್ದ ಸಾರ್ವಜನಿಕ ಲೆಕ್ಕಪತ್ರ ಸಮಿತಿ (ಪಿಎಸಿ), ಬೆಳಗಾವಿಯಲ್ಲಿ ನಡೆಯುತ್ತಿರುವ ವಿಧಾನ ಮಂಡಲದಲ್ಲಿ ತನ್ನ ವರದಿಯನ್ನು ಮಂಡಿಸಿದೆ.

‘ಸರ್ಕಾರಕ್ಕೆ ಆರ್ಥಿಕ ನಷ್ಟ ಮಾಡಿದ ಹಾಗೂ ಪ್ರಕರಣದ ತನಿಖೆ ನಡೆಸಲು ವಿಳಂಬ ಮಾಡಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕು’ ಎಂದು ಪಿಎಸಿ ತನ್ನ ವರದಿಯಲ್ಲಿ ಶಿಫಾರಸು ಮಾಡಿದೆ.

ಬಿ.ಎಸ್. ಯಡಿಯೂರಪ್ಪ ಅವಧಿಯ ಪ್ರಕರಣ

ಐಸಿಟಿ–3 ಯೋಜನೆಯಡಿ ಪ್ರೌಢಶಾಲೆಗಳಲ್ಲಿ ಆಧುನಿಕ ತಂತ್ರಜ್ಞಾನ ಅಳವಡಿಸಲು ಕೇಂದ್ರ ಸರ್ಕಾರ ಅನುದಾನ ನೀಡಿದಾಗ ರಾಜ್ಯದಲ್ಲಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಅಸ್ತಿತ್ವದಲ್ಲಿತ್ತು. ಈಗ ಉತ್ತರ ಕನ್ನಡ ಕ್ಷೇತ್ರದ ಬಿಜೆಪಿ ಸಂಸದರಾಗಿರುವ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಾಗಿದ್ದರು. ಕಿಯೋನಿಕ್ಸ್ ಮೂಲಕ ಖರೀದಿಗೆ ಅವಕಾಶ ನೀಡಿದ ಬಗ್ಗೆ ಆಗ ಆಕ್ಷೇಪವೂ ವ್ಯಕ್ತವಾಗಿತ್ತು.

ಕೇಂದ್ರ ಸರ್ಕಾರದ ಪ್ರಾಯೋಜಿತ ಮಾಹಿತಿ ಸಂಪರ್ಕ ತಂತ್ರಜ್ಞಾನ ಘಟ್ಟ–3 (ಐಸಿಟಿ) ಯೋಜನೆಯನ್ನು ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಇಲಾಖೆ ಮೂಲಕ ಅನುಷ್ಠಾನಗೊಳಿಸಲಾಗಿತ್ತು. ಸರ್ಕಾರಿ ಹಾಗೂ ಅನುದಾನಿತ 4,396 ಪ್ರೌಢಶಾಲೆಗಳಲ್ಲಿ ಯೋಜನೆ ಅನುಷ್ಠಾನಕ್ಕೆ ಕೇಂದ್ರ ಸರ್ಕಾರ ₹426.68 ಕೋಟಿ ನೀಡಿತ್ತು.

ಯೋಜನೆ ಅನುಷ್ಠಾನದ ಹೊಣೆಯನ್ನು ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮಕ್ಕೆ (ಕಿಯೋನಿಕ್ಸ್) ವಹಿಸಲಾಗಿತ್ತು. ಆದರೆ, ಕಿಯೋನಿಕ್ಸ್ ನಿರ್ಲಕ್ಷ್ಯ ತೋರಿದ್ದರಿಂದ ಹೊರಗುತ್ತಿಗೆ ಸಂಸ್ಥೆಗಳ ಮೂಲಕ ಖರೀದಿಸಲಾಗಿತ್ತು. ಶಾಲೆಗಳಲ್ಲಿ ಯೋಜನೆಯ ಅನುಷ್ಠಾನಕ್ಕೆ ಪೂರ್ವಸಿದ್ಧತೆ ಮಾಡಿಕೊಳ್ಳದೆ, ಅಗತ್ಯ ಶಿಕ್ಷಕರನ್ನು ನೇಮಿಸದೆ ಸಾಮಗ್ರಿಗಳನ್ನು ಖರೀದಿಸಿದ ಫಲವಾಗಿ ಯೋಜನೆ ವಿಫಲವಾಗಿತ್ತು. ಖರೀದಿಸಿದ ಕೆಲ ಸಾಮಗ್ರಿಗಳು ವ್ಯರ್ಥವಾಗಿದ್ದವು. ಇದರಿಂದ ಸರ್ಕಾರಕ್ಕೆ ₹109 ಕೋಟಿ ನಷ್ಟವಾಗಿತ್ತು. ಹಲವು ವಿದ್ಯಾರ್ಥಿಗಳು ಕಂಪ್ಯೂಟರ್ ಶಿಕ್ಷಣದಿಂದ ವಂಚಿತರಾಗಿದ್ದರು.

ಈ ಬಗ್ಗೆ ಅಂದಿನ ವಿರೋಧ ಪಕ್ಷ ಕಾಂಗ್ರೆಸ್, ಆಗ ಅಧಿವೇಶನದಲ್ಲಿ ಪ್ರಸ್ತಾಪಿಸಿ ತನಿಖೆಗೆ ಆಗ್ರಹಿಸಿತ್ತು. ಪ್ರಕರಣದ ವಿಚಾರಣೆ ನಡೆಸಿ ವರದಿ ನೀಡಲು ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿ ನೇತೃತ್ವದಲ್ಲಿ ಸಮಿತಿ ರಚಿಸಲಾಗಿತ್ತು. ಸಮಿತಿಯು 2023ರಲ್ಲಿ ವರದಿ ನೀಡಿತ್ತು. ಸರ್ಕಾರದ ಕಾರ್ಯದರ್ಶಿ ಹಾಗೂ ಬೆಂಗಳೂರು ನಗರ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಂಶುಪಾಲರು ಈ ನಷ್ಟಕ್ಕೆ ಕಾರಣ ಎಂದು ಉಲ್ಲೇಖಿಸಲಾಗಿತ್ತು. ಆದರೆ, ಈ ಪ್ರಕರಣದಲ್ಲಿ ಭಾಗಿಯಾದವರು 2022ರಲ್ಲೇ ನಿವೃತ್ತರಾಗಿದ್ದರು. ಆ ನಂತರ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯ ವರದಿ ಆಧರಿಸಿ, ಆರೋಪಿತರ ಮೇಲೆ ಶಿಸ್ತು ಕ್ರಮ ಜರುಗಿಸಲು ನಿವೃತ್ತ ಜಿಲ್ಲಾ ನ್ಯಾಯಾಧೀಶ ಎಸ್.ಎಸ್. ಸಾರಂಗಮಠ ಅವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಲಾಗಿತ್ತು.

ವಿಮಾನದಲ್ಲೇ ಚಿಕಿತ್ಸೆ: ಮಹಿಳೆ ಪ್ರಾಣ ಉಳಿಸಿದ ಡಾ.ಅಂಜಲಿ ನಿಂಬಾಳ್ಕರ್


ಪ್ರಜಾವಾಣಿ ವಾರ್ತೆ

ಬೆಳಗಾವಿ: ಗೋವಾದಿಂದ ನವದೆಹಲಿಗೆ ತೆರಳುತ್ತಿದ್ದ ಇಂಡಿಗೊ ವಿಮಾನದಲ್ಲಿ ಶನಿವಾರ, ಪ್ರಾಣಾಪಾಯದಲ್ಲಿದ್ದ ಜೆನ್ನಿ ಎಂಬ ಅಮೆರಿಕನ್ ಮಹಿಳೆಗೆ, ಖಾನಾಪುರದ ಮಾಜಿ ಶಾಸಕಿ, ಎಐಸಿಸಿ ಗೋವಾ ಪ್ರಭಾರಿ ಡಾ.ಅಂಜಲಿ ನಿಂಬಾಳ್ಕರ್ ತುರ್ತು ಚಿಕಿತ್ಸೆ ನೀಡಿ ಉಳಿಸಿದ್ದಾರೆ.

ವಿಮಾನ ಹಾರಾಟ ಆರಂಭಿಸಿದ ಕೆಲವೇ ನಿಮಿಷಗಳಲ್ಲಿ ಅಮೆರಿಕದ ಕ್ಯಾಲಿಫೋರ್ನಿಯಾದ ಮಹಿಳೆ ಜೆನ್ನಿ ತೀವ್ರ ಅಸ್ವಸ್ಥರಾದರು. ಮೈ ನಡುಕ ಆರಂಭವಾಯಿತು. ರಕ್ತದೊತ್ತಡ ಕುಸಿದು, ನಾಡಿಮಿಡಿತ ನಿಲ್ಲುವ ಹಂತಕ್ಕೆ ತಲುಪಿತು. ಕಣ್ಣು ಮುಚ್ಚಿ ನರಳಿ, ನಿತ್ರಾಣಗೊಂಡರು. ಅದೇ ವಿಮಾನದಲ್ಲಿದ್ದ ಡಾ.ಅಂಜಲಿ ತಕ್ಷಣವೇ ನೆರವಾದರು.

ಹೃದಯ ಸಮಸ್ಯೆಗೆ ನೀಡುವ ‘ಕಾರ್ಡಿಯೋ ಪಲ್ಮನರಿ ರಿಸಸ್ಸಿಟೇಶನ್ (ಸಿಪಿಆರ್)’ ಎಂಬ ತುರ್ತು ಚಿಕಿತ್ಸೆ ನಡೆಸಿದರು.

ಇದರಿಂದ ತುಸು ಸುಧಾರಿಸಿಕೊಂಡ ಜೆನ್ನಿ ಸೀಟಿನಲ್ಲೇ ಒರಗಿಕೊಂಡರು. ಅರ್ಧ ಗಂಟೆ ಬಳಿಕ ಮತ್ತೆ ಸಮಸ್ಯೆ ಕಾಣಿಸಿತು. ಆಗ ಡಾ.ಅಂಜಲಿ ಪಕ್ಕದಲ್ಲೇ ನಿಂತು ಚಿಕಿತ್ಸೆ ನೀಡಿದರು. ವಿಮಾನ ಇಳಿಯುವಾಗ ರನ್‌ವೇಯಲ್ಲಿ ಆಂಬುಲೆನ್ಸ್ ಸಿದ್ಧವಾಗಿರುವಂತೆ ವಿಮಾನ ಸಿಬ್ಬಂದಿಯೊಂದಿಗೆ ಸಮನ್ವಯ ಸಾಧಿಸಿ, ಜೆನ್ನಿ ಅವರನ್ನು ತಕ್ಷಣ ಆಸ್ಪತ್ರೆಗೆ ಕರೆದೊಯ್ಯಲು ವ್ಯವಸ್ಥೆ ಮಾಡಿದರು.



ಪ್ರಾಣಾಪಾಯದಲ್ಲಿದ್ದ ಅಮೆರಿಕನ್ ಮಹಿಳೆಗೆ ಡಾ.ಅಂಜಲಿ ನಿಂಬಾಳ್ಕರ್ ತುರ್ತು ಚಿಕಿತ್ಸೆ ನೀಡಿದರು

‘30 ಸಾವಿರ ಅಡಿ ಎತ್ತರದಲ್ಲಿ ಅಮೂಲ್ಯ ಜೀವವನ್ನು ಉಳಿಸಿದ ಡಾ.ಅಂಜಲಿ ನಿಂಬಾಳ್ಕರ್ ಅವರು ವೈದ್ಯೋ ನಾರಾಯಣೋ ಹರಿ’ ಎಂಬ ಮಾತಿಗೆ ಸಾಕ್ಷಿಯಾದರು ಎಂದು ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೊಗಳು ಹರಿದಾಡಿದವು. ಮಾನವೀಯತೆ ಮೆರೆದ ಅವರಿಗೆ ವಿಮಾನದ ಪೈಲಟ್, ಸಿಬ್ಬಂದಿ ಹಾಗೂ ಸಹ ಪ್ರಯಾಣಿಕರು ಪ್ರಶಂಸೆ ವ್ಯಕ್ತಪಡಿಸಿದರು.

‘ವಿಮಾನಗಳಲ್ಲಿ ಇರಲಿ ಕನಿಷ್ಠ ವೈದ್ಯಕೀಯ ಸಲಕರಣೆ’

‘ಜೆನ್ನಿ ಪ್ರಾಣಾಪಾಯದ ಅಂಚಿಗೆ ತಲುಪಿದ್ದರು. ಒಂದು ಕ್ಷಣ ನನಗೂ ಭಯವಾಯಿತು. ಆದರೆ, ಪ್ರಾಣ ಉಳಿಸಲು ಏನು ಬೇಕೋ ಅದನ್ನು ಮಾಡಿದೆ. ತುಸು ಚೇತರಿಸಿಕೊಂಡ ಜೆನ್ನಿ ‘ನೀವು ನನ್ನಪಾಲಿಗೆ ಮೇರಿ ಮಾತೆ ಆಗಿ ಬಂದಿರಿ ಎಂದರು’ ಎಂದು ಡಾ.ಅಂಜಲಿ ನಿಂಬಾಳಕರ ‘ಪ್ರಜಾವಾಣಿ’ಗೆ ತಿಳಿಸಿದರು.

‘ನಿರ್ಜಲೀಕರಣ, ಆಹಾರ ಸಮಸ್ಯೆ ಅಥವಾ ಯಾವುದೋ ಮಾತ್ರೆ ಸೇವಿಸಿದಾಗ ಇಂಥ ಸಮಸ್ಯೆ ಆಗುತ್ತದೆ. ಕೆಲವೇ ಸೆಕೆಂಡುಗಳಲ್ಲಿ ಚಿಕಿತ್ಸೆ ಕೊಡದಿದ್ದರೆ ಹೃದಯ ಬಡಿತ ನಿಲ್ಲುತ್ತದೆ. ಇಂಥ ತುರ್ತು ಸಂದರ್ಭಗಳಲ್ಲಿ ವಿಮಾನಗಳಲ್ಲಿ ಕನಿಷ್ಠ ವೈದ್ಯಕೀಯ ಸಲಕರಣೆಗಳು ಇರಬೇಕು’ ಎಂದು ಅಂಜಲಿ ಹೇಳಿದರು.

‘ಜೆನ್ನಿ ಅವರ ಅತ್ತೆ ದೆಹಲಿಯಲ್ಲಿ ತಜ್ಞ ವೈದ್ಯೆ. ಅವರ ಹೆಸರೂ ಅಂಜಲಿ. ಜೆನ್ನಿ ಅವರನ್ನು ದೆಹಲಿಯಲ್ಲಿ ಆಂಬುಲೆನ್ಸ್‌ಗೆ ಸೇರಿಸಿದ ಮೇಲೆ ಅವರ ಅತ್ತೆಗೆ ಕರೆ ಮಾಡಿ ವಿಷಯ ಮುಟ್ಟಿಸಿದ ನಂತರವೇ ನನ್ನ ಕೆಲಸಕ್ಕೆ ಹೋದೆ’ ಎಂದರು.

ಯತ್ನಾಳ ವಿರುದ್ಧ ಮಾನನಷ್ಟ: ಬಿವೈವಿ

ಶಿವಮೊಗ್ಗ: ‘ಶಾಸಕ ಬಸನಗೌಡ ಪಾಟೀಲ ಯತ್ನಾಳ ನನ್ನ ವಿರುದ್ಧ ಪದೇಪದೇ ಸುಳ್ಳು ಆರೋಪ ಮಾಡುತ್ತಿದ್ದಾರೆ. ಅವರ ವಿರುದ್ಧ ₹1 ಇಲ್ಲವೇ ₹1 ಕೋಟಿ ಪರಿಹಾರ ಕೋರಿ ಮಾನನಷ್ಟ ಮೊಕದ್ದಮೆ ಹೂಡಲು ಚಿಂತನೆ ನಡೆಸಿದ್ದೇನೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

‘ಪರಮೇಶ್ವರ 2013ರಲ್ಲೇ ಸಿ.ಎಂ ಆಗಬೇಕಿತ್ತು’

ತುಮಕೂರು: ‘2013ರಲ್ಲಿಯೇ ಜಿ.ಪರಮೇಶ್ವರ ಮುಖ್ಯಮಂತ್ರಿ ಆಗಬೇಕಿತ್ತು’ ಎಂದು ಸಚಿವ ಡಾ.ಎಚ್.ಸಿ.ಮಹದೇವಪ್ಪ ಶನಿವಾರ ಇಲ್ಲಿ ಅಭಿಪ್ರಾಯಪಟ್ಟರು.

ಬಂಜಾರ ಭವನ ಉದ್ಘಾಟನಾ ಕಾರ್ಯಕ್ರಮದ ವೇದಿಕೆಗೆ ಸಚಿವ ಪರಮೇಶ್ವರ ಬರುತ್ತಿದ್ದಂತೆ ‘ಮುಂದಿನ ಸಿ.ಎಂ ಪರಮೇಶ್ವರ ಅವರಿಗೆ ಜೈ’ ಎಂದು ಮುಖಂಡರು ಘೋಷಣೆ ಕೂಗಿದರು.

ಆಗ ಮಹದೇವಪ್ಪ, ‘ಆಗ ಸುಮ್ಮನಿದ್ದ ನೀವೆಲ್ಲ ಈಗ ಪರಮೇಶ್ವರ ಅವರನ್ನು ಮುಖ್ಯಮಂತ್ರಿ ಮಾಡಿ ಎಂದು ಕೇಳುತ್ತಿದ್ದೀರಿ’ ಎಂದರು. ‘ಲಂಬಾಣಿಗರ ಬೇಡಿಕೆಗೆ ಜಯವಾಗಲಿ’ ಎಂದು ಧ್ವನಿಗೂಡಿಸಿದರು.

ಸಿದ್ದರಾಮಯ್ಯ ಪರ ತುಂಬಾ ಶಾಸಕರು ಇದ್ದಾರೆ. ಅವರು ರಾಜ್ಯದ ನಾಯಕ. ಅವಕಾಶ ಸಿಕ್ಕರೆ ರಾಷ್ಟ್ರೀಯ ನಾಯಕರೂ ಆಗಬಹುದು

ಕೆ.ವೈ. ನಂಜೇಗೌಡ, ಮಾಲೂರು ಕಾಂಗ್ರೆಸ್ ಶಾಸಕ

ಬೇಡ್ತಿ– ಅಘನಾಶಿನಿ ಜಾಗೃತಿ ಕಾರ್ಯಕ್ರಮದಲ್ಲಿ ಸ್ವಾಮೀಜಿ ಅಭಿಮತ

‘ಚಿಂತನೆ ಇಲ್ಲದ ಯೋಜನೆ ಪತನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀರ್ಘಕಾಲದ ಚಿಂತನೆ ಇಲ್ಲದಿರುವ ಅಭಿವೃದ್ಧಿ ಯೋಜನೆಗಳು ಪತನಗೊಳ್ಳುತ್ತವೆ ಎಂದು ಸೋಂದಾ ಸ್ವರ್ಣವಲ್ಲಿ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಹೇಳಿದರು.

ಬೇಡ್ತಿ–ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ಶನಿವಾರ ಹಮ್ಮಿಕೊಂಡಿದ್ದ ಪಶ್ಚಿಮ ಘಟ್ಟದ ನದಿ ತಿರುವು ಯೋಜನೆಗಳು ‘ಬೇಡ್ತಿ–ಅಘನಾಶಿನಿ ಕಣ್ಣೀರು’ ಜನಜಾಗೃತಿ ಚಿಂತನ ಮಂಥನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಉತ್ತರ ಕನ್ನಡದ ಸ್ವಲ್ಪ ಭಾಗವನ್ನು ಹೊರತುಪಡಿಸಿ ಬಹುತೇಕ ಪ್ರದೇಶಗಳಲ್ಲಿ ಯಾವುದೇ ನೀರಾವರಿ ಯೋಜನೆ ಇಲ್ಲ. ಕುಡಿಯುವ ನೀರಿನ ಕೊರತೆ ಇದೆ. ಈ ಬಗ್ಗೆ ಯಾರೂ ಚಿಂತನೆ ನಡೆಸುತ್ತಿಲ್ಲ. ಹಸಿರು ನೆಲದಿಂದ ಬರಡು ನೆಲಕ್ಕೆ ನೀರು ಒಯ್ಯುವ ಯೋಜನೆಯು ಬರಡು ನೆಲಕ್ಕೂ ನೀರು ಕೊಡದೇ ಹಸಿರು ನೆಲವನ್ನೂ ಬರಡು ಮಾಡಲಿದೆ. ಎತ್ತಿನ ಹೊಳೆ ಯೋಜನೆಯಂತೆ ಇದೂ ಆಗಲಿದೆ’ ಎಂದು ಕಳವಳ ವ್ಯಕ್ತಪಡಿಸಿದರು.

‘ಬೇಡ್ತಿ–ಅಘನಾಶಿನಿ ನದಿ ತಿರುವು ಯೋಜನೆಗಳ ವಿರುದ್ಧ ವೈಚಾರಿಕ ಚಿಂತನಾ ಹೋರಾಟ, ಕಾನೂನು ಹೋರಾಟ, ಜನಾಂದೋಲನ, ಅಧಿಕಾರಸ್ಥರಿಗೆ ಮನವರಿಕೆ ಮಾಡುವ ಕೆಲಸ ಹೀಗೆ ನಾಲ್ಕು ವಿಧದ ಹೋರಾಟ ನಡೆಸಲಾಗುತ್ತಿದೆ. ಜ.11ರಂದು ಶಿರಸಿಯಲ್ಲಿ ಜನಾಂದೋಲನ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಎಲ್ಲರೂ ಪಾಲ್ಗೊಳ್ಳುವ ಮೂಲಕ ಈ ಯೋಜನೆ ಜಾರಿಯಾಗದಂತೆ ಧ್ವನಿ ಎತ್ತಬೇಕು’ ಎಂದು ತಿಳಿಸಿದರು.

ಸಮಿತಿ ಅಧ್ಯಕ್ಷ ಅನಂತ ಹೆಗಡೆ ಅಶೀಸರ ಪ್ರಾಸ್ತಾವಿಕವಾಗಿ ಮಾತನಾಡಿ, ‘ಬೇಡ್ತಿ–ವರದಾ ನದಿ ಜೋಡಣೆ ಯೋಜನೆಗೆ ₹ 15 ಸಾವಿರ ಕೋಟಿ, ಅಘನಾಶಿನಿ–ವೇದಾವತಿ ನದಿ ಜೋಡಣೆಗೆ ₹25 ಸಾವಿರ ಕೋಟಿ ನಿಗದಿಪಡಿಸಿ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಾಗಿದೆ. ಇದು ಅನುಷ್ಠಾನಗೊಳ್ಳದಂತೆ ತಡೆಯಬೇಕು’ ಎಂದು ಹೇಳಿದರು.

ಅದಮ್ಯ ಚೇತನ ಸಂಸ್ಥೆ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್, ನ್ಯಾಯವಾದಿ ಅಶೋಕ ಹಾರನಹಳ್ಳಿ, ಪರಿಸರವಾದಿಗಳಾದ ಸುರೇಶ ಹೆಬ್ಳೀಕರ್, ಎ.ಕೆ. ವರ್ಮ, ಯು.ವಿ. ಸಿಂಗ್ ಮಾತನಾಡಿದರು.



ಶ್ರೀ ಸೋಂದಾ ಸ್ವರ್ಣವಲ್ಲಿ ಮಠದ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ನೇತೃತ್ವದಲ್ಲಿ ನಡೆದ ಜನಜಾಗೃತಿ ಚಿಂತನ ಮಂಥನ ಕಾರ್ಯಕ್ರಮದಲ್ಲಿ ತೇಜಸ್ವಿನಿ ಅನಂತಕುಮಾರ್, ಅಶೋಕ ಹಾರನಹಳ್ಳಿ, ವಿಶ್ವೇಶ್ವರ ಹೆಗಡೆ ಕಾಗೇರಿ ಮತ್ತು ಅನಂತ ಹೆಗಡೆ ಆಶೀಸರ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಯಾರು ಏನಂದರು?

ನಾವೇ ಪರಿಸರ, ಅರಣ್ಯ ಸಂರಕ್ಷಣೆಯ ಕಾನೂನು ಮಾಡುತ್ತೇವೆ. ಅದನ್ನು ಉಲ್ಲಂಘಿಸುವ ಯೋಜನೆಗಳನ್ನೂ ನಾವೇ ರೂಪಿಸುತ್ತಿದ್ದೇವೆ. ಸೂಟ್‌ಕೇಸ್‌ಗೆ ಅನುಕೂಲ ಮಾಡಲು ಇದೆಲ್ಲ ನಡೆಯುತ್ತಿದೆ. ಉತ್ತರ ಕನ್ನಡದ ಧಾರಣಾ ಸಾಮರ್ಥ್ಯದ ಬಗ್ಗೆ ವರದಿ ನೀಡಿ ಹತ್ತು ವರ್ಷ ಕಳೆದಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಎಲ್ಲ ಯೋಜನೆಗಳು ಸೂಕ್ಷ್ಮ ಪರಿಸರ ಪ್ರದೇಶದಲ್ಲಿಯೇ ಬರುತ್ತಿರುವುದು ಆಘಾತಕಾರಿ

ಟಿ.ವಿ. ರಾಮಚಂದ್ರ, ಪರಿಸರ ವಿಜ್ಞಾನಿ, ಐಐಎಸ್‌ಸಿ

ಪಶ್ಚಿಮ ಘಟ್ಟಗಳಲ್ಲಿ ಶೇ 20ರಷ್ಟು ಮಳೆ ಕಡಿಮೆಯಾದರೆ ಎಲ್ಲ ಜಲಾಶಯಗಳಲ್ಲಿ ಶೇ 40ರಷ್ಟು ನೀರಿನ ಕೊರತೆ ಉಂಟಾಗುತ್ತದೆ. ಪಶ್ಚಿಮ ಘಟ್ಟ ಇರುವ ಜಿಲ್ಲೆಗಳಲ್ಲಿ ನಿತ್ಯ ನೀರಿರುತ್ತದೆ ಎಂಬುದು ಸತ್ಯವಲ್ಲ. ಇಂಥ ಯೋಜನೆಗಳು ಬರಡು ಭೂಮಿಯನ್ನು ಸೃಷ್ಟಿಸಲಿದೆ

ಶ್ರೀನಿವಾಸ ರೆಡ್ಡಿ, ಜಲತಜ್ಞ

ಅರಣ್ಯ ಸಂರಕ್ಷಣೆ ಮತ್ತು ಅಭಿವೃದ್ಧಿ ಒಟ್ಟಿಗೆ ಮಾಡಲು ಸಾಧ್ಯವಿಲ್ಲ. ಆದರೆ, ಅಭಿವೃದ್ಧಿಯೂ ಬೇಕು. ಪರಿಸರವೂ ಉಳಿಯಬೇಕು. ಅದಕ್ಕಾಗಿ ಸೂಕ್ಷ್ಮವಲ್ಲದ ಕೆಲವು ಪ್ರದೇಶಗಳನ್ನು ಅಭಿವೃದ್ಧಿ ಯೋಜನೆಗಳಿಗೆ ಮೀಸಲಿಡಬೇಕು. ಇನ್ನು ಕೆಲವು ಪ್ರದೇಶಗಳಲ್ಲಿ ಸ್ವಲ್ಪ ಮಟ್ಟಿಗೆ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಳ್ಳಬಹುದು. ಸೂಕ್ಷ್ಮ ಪ್ರದೇಶಗಳಲ್ಲಿ ಯಾವುದೇ ಬೇರೆ ಯೋಜನೆ ಹಮ್ಮಿಕೊಳ್ಳಬಾರದು

ಉಲ್ಲಾಸ ಕಾರಂತ, ವನ್ಯಜೀವಿ ತಜ್ಞ

ಜೀವನದ ಗ್ಯಾರಂಟಿ, ಮಕ್ಕಳ, ಮೊಮ್ಮಕ್ಕಳ ಗ್ಯಾರಂಟಿ ಬೇಕಾ ಅಥವಾ ಸದ್ಯದ ಗ್ಯಾರಂಟಿಗಳು ಬೇಕಾ? ಎಂಬುದರ ಬಗ್ಗೆ ನಾವು ಉತ್ತರ ಕಂಡುಕೊಳ್ಳಬೇಕು. ಅಭಿವೃದ್ಧಿಗೆ ಉತ್ತರ ಕನ್ನಡ ಜಿಲ್ಲೆ ಎಲ್ಲ ಕೊಡುಗೆ ನೀಡಿದೆ. ಇನ್ನು ಅಲ್ಲಿಗೆ ಹೊಸ ಯೋಜನೆ ಬೇಡ. ಅಗತ್ಯ ಮೂಲಸೌಕರ್ಯ ಮಾತ್ರ ಕಲ್ಪಿಸಬೇಕು

ವಿಶ್ವೇಶ್ವರ ಹೆಗಡೆ ಕಾಗೇರಿ, ಉತ್ತರ ಕನ್ನಡದ ಬಿಜೆಪಿ ಸಂಸದ

ಸಂಕ್ಷಿಪ್ತ ಸುದ್ದಿ

ನಾನು ಸಿದ್ದರಾಮ, ಮೌಢ್ಯತೆ ಇಲ್ಲ –ಮುಖ್ಯಮಂತ್ರಿ



ಮೆಕ್ಕೆಜೋಳದ ಬೆಂಬಲ ಬೆಲೆ ಖರೀದಿ ಕೇಂದ್ರ ತೆರೆಯಲು ಆದೇಶ ನೀಡಿದ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರನ್ನು ಶನಿವಾರ ಲಕ್ಷ್ಮೇಶ್ವರದಲ್ಲಿ ತಾಲ್ಲೂಕು ಸಮಗ್ರ ರೈತಪರ ಹೋರಾಟ ವೇದಿಕೆ ರೈತರು ಸನ್ಮಾನಿಸಿದರು.

ಲಕ್ಷ್ಮೇಶ್ವರ (ಗದಗ): ‘ಸಿದ್ದ ಅಂದರೆ ಶಿವ; ರಾಮ ಅಂದರೆ ವಿಷ್ಣು. ಶಿವ ಮತ್ತು ವಿಷ್ಣು ಎರಡೂ ಸೇರಿ ಸಿದ್ದರಾಮ ಆಗಿದ್ದೇನೆ. ಆದರೆ, ನನ್ನಲ್ಲಿ ಕಂದಾಚಾರ, ಮೌಢ್ಯ ಇಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಶನಿವಾರ ಇಲ್ಲಿ ನಡೆದ ಸಿ.ಎನ್.ಆರ್.ರಾವ್ 10ನೇ ವರ್ಷದ ವಿಜ್ಞಾನ ವಿಸ್ತೃತ ಕಾರ್ಯಕ್ರಮದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಬಿ.ಎಸ್.ಪಾಟೀಲ ಅವರಿಗೆ 2025ನೇ ಸಾಲಿನ ‘ಚಂದನ ಶ್ರೀ’ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

‘ಶಿಕ್ಷಣವಂತರಿಂದಲೇ ಜಾತಿ ವ್ಯವಸ್ಥೆ ಬೇರೂರುತ್ತಿದೆ. ಬಸವಣ್ಣನವರು ಅಂದೇ ಕರ್ಮ ಸಿದ್ಧಾಂತ ವಿರೋಧಿಸಿದ್ದರು. ಜಾತಿ ವ್ಯವಸ್ಥೆ ನಿರ್ಮೂಲನೆಗೆ ಮನುಷ್ಯ ಕಂದಾಚಾರ, ಮೌಢ್ಯಗಳನ್ನು ಬಿಡಬೇಕು. ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಬೇಕು’ ಎಂದರು.

‘ರಸ್ತೆ, ಚರಂಡಿಯಿಂದ ಜನರ ಉದ್ಧಾರ ಸಾಧ್ಯವೇ?’

ತುಮಕೂರು: ಹಳ್ಳಿಯಲ್ಲಿ ಕೂಲಿ ಮಾಡುವ ಮಹಿಳೆಯರ ಬದುಕು ಸುಧಾರಿಸಲು ಪ್ರತಿ ತಿಂಗಳು ₹2 ಸಾವಿರ ನೀಡಲಾಗುತ್ತಿದೆ. ಗ್ಯಾರಂಟಿ ಕಾರ್ಯಕ್ರಮ ಕೊಡದಿದ್ದರೆ ಜನ ಏನಾಗಬೇಕು? ರಸ್ತೆ, ಚರಂಡಿ ನಿರ್ಮಾಣದಿಂದ ಜನರ ಜೀವನ ಉದ್ಧಾರ ಆಗುತ್ತದೆಯೇ ಎಂದು ಗೃಹ ಸಚಿವ ಜಿ.ಪರಮೇಶ್ವರ ಪ್ರಶ್ನಿಸಿದ್ದಾರೆ.

ಶನಿವಾರ ಇಲ್ಲಿ ಬಂಜಾರ ಭವನ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು, ‘ಜನರ ಶೋಷಣೆ ಮುಂದುವರಿಯಬಾರದು ಎಂದೇ ಐದು ಗ್ಯಾರಂಟಿಗಳಿಗೆ ವರ್ಷಕ್ಕೆ ₹58 ಸಾವಿರ ಕೋಟಿ ನೀಡಲಾಗುತ್ತಿದೆ. ಕೊಡುವುದು ನಿಲ್ಲಿಸಿದರೆ ಜನರು ಬದುಕು ಏನಾಗಬೇಕು’ ಎಂದು ಕೇಳಿದರು.

ಬುಲ್ಡೋಜರ್ ಹರಿಸುವ ಉದ್ದೇಶವಿಲ್ಲ: ಪರಮೇಶ್ವರ



ತುಮಕೂರು: ‘ಡ್ರಗ್ಸ್ ಮಾಫಿಯಾದಲ್ಲಿ ತೊಡಗಿರುವ ವಿದೇಶಿ ಪ್ರಜೆಗಳಿಗೆ ಮನೆ ಬಾಡಿಗೆ ನೀಡಿದರೆ ಬುಲ್ಡೋಜರ್‌ನಿಂದ ಮನೆ ನೆಲಸಮ ಮಾಡಲು ಹಿಂಜರಿಯುವುದಿಲ್ಲ ಎಂದು ಎಚ್ಚರಿಕೆ ನೀಡಿದ್ದೇನೆಯೇ ಹೊರತು, ಹಾಗಂತ ಬುಲ್ಡೋಜರ್ ಹರಿಸುವ ಯಾವುದೇ ಉದ್ದೇಶವಿಲ್ಲ’ ಎಂದು ಗೃಹ ಸಚಿವ ಜಿ.ಪರಮೇಶ್ವರ ಸ್ಪಷ್ಟನೆ ನೀಡಿದ್ದಾರೆ.

ಶನಿವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ನನ್ನ ಹೇಳಿಕೆಯನ್ನು ತಪ್ಪಾಗಿ ಗ್ರಹಿಸಿದ್ದು ದುರದೃಷ್ಟಕರ’ ಎಂದರು.

‘ಡ್ರಗ್ಸ್ ವಿರುದ್ಧ ಕ್ರಮ ಕೈಗೊಳ್ಳಬೇಕಾದರೆ ಮನೆ ನೆಲಸಮ ತನಕ ಹೋಗಬೇಕಾಗುತ್ತದೆ ಎಂದು ಎಚ್ಚರಿಕೆ ಕೊಟ್ಟಿದ್ದೇನೆ. ಹಾಗಂತ ನಾಳೆ ಬೆಳಗ್ಗೆಯೇ ಹೋಗಿ ಮನೆ ಒಡೆದು ಬಿಡುತ್ತೇವೆ ಅಂತಲ್ಲ’ ಎಂದು ಸ್ಪಷ್ಟಪಡಿಸಿದರು.

ಶಾಸಕ ಇಕ್ಬಾಲ್‌ಗೆ ಮಾತಿನ ಚಟ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇಕ್ಬಾಲ್ ಹುಸೇನ್ ಮಾತನ್ನು ಯಾರೂ ಗಣನೆಗೆ ತೆಗೆದುಕೊಳ್ಳಬೇಡಿ. ಅವನಿಗೆ ಮಾತಿನ ಚಟ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ರಾಮನಗರದಲ್ಲಿ ಶನಿವಾರ ಮಾತನಾಡಿದ ಕಾಂಗ್ರೆಸ್ ಶಾಸಕ ಇಕ್ಬಾಲ್, ‘ಶಿವಕುಮಾರ್ ಅವರಿಗೆ 6 ಮತ್ತು 9 ಅದೃಷ್ಟ ಸಂಖ್ಯೆ. ಹಾಗಾಗಿ ಬಹುತೇಕ ಜ.6ರಂದೇ ಅವರಿಗೆ ಹುದ್ದೆ ಸಿಗಲಿದೆ’ ಎಂದು ಹೇಳಿದ್ದರು.

ಈ ಬಗ್ಗೆ ದೇವನಹಳ್ಳಿಯಲ್ಲಿ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, ‘ಅವನ ತಲೆ ಕೆಟ್ಟಿದ್ದು, ಆತನ ವಿರುದ್ಧ ಕ್ರಮ ಕೈಗೊಳ್ಳಲಾಗುವುದು’ ಎಂದರು.

ಗದಗ ಜಿಲ್ಲೆಯ ಲಕ್ಷ್ಮೇಶ್ವರದಲ್ಲಿ ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸುದ್ದಿಗಾರರು ಕೇಳಿದಾಗ, ಅವರು ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

‘ಮುಖ್ಯಮಂತ್ರಿಯಾಗಬೇಕೆಂಬ ಶಿವಕುಮಾರ್ ಬೇಡಿಕೆಗೆ ಹೈಕಮಾಂಡ್ ಒಪ್ಪಿಲ್ಲ. ಹೀಗಾಗಿ ನಾಯಕತ್ವ ಬದಲಾವಣೆಯ ಪ್ರಶ್ನೆಯೇ ಇಲ್ಲ’ ಎಂದು ಸಿದ್ದರಾಮಯ್ಯ ಮಗ ಯತೀಂದ್ರ ಅವರ ಹೇಳಿಕೆ ನೀಡಿದ ಬಳಿಕ ರಾಜ್ಯ ರಾಜಕಾರಣದಲ್ಲಿ ಮತ್ತೆ ಅಧಿಕಾರ ಹಂಚಿಕೆ ವಿಷಯ ಮುನ್ನೆಲೆಗೆ ಬಂದಿತ್ತು.

ಬೆಳಗಾವಿ ಅಧಿವೇಶನದ ವೇಳೆ, ಅಲ್ಲಿ ನಡೆಯುತ್ತಿರುವ ಔತಣಕೂಟವು ನಾಯಕತ್ವ ಬದಲಾವಣೆಯ ವಿಷಯವನ್ನು ಮತ್ತಷ್ಟು ರಂಗೇರಿಸಿತ್ತು. ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಆಪ್ತ ಶಾಸಕರು, ತಮ್ಮ ನಾಯಕರ ಪರ ಪ್ರತಿನಿತ್ಯ ಹೇಳಿಕೆ ನೀಡುತ್ತಿದ್ದು, ದೊಡ್ಡ ಮಟ್ಟದ ಚರ್ಚೆಗೂ ಕಾರಣವಾಗಿದೆ.

7 ಅಥವಾ 8ರಂದು ಶಿವಕುಮಾರ್ ಮುಖ್ಯಮಂತ್ರಿಯಾಗುತ್ತಾರೆ ಎಂದು ಈಚೆಗೆ ಹೇಳಿದ್ದ ಅವರ ಅತ್ಯಾಪ್ತ ಶಾಸಕ ಇಕ್ಬಾಲ್, ಶನಿವಾರ ಮತ್ತೊಂದು ದಿನಾಂಕವನ್ನು ಹೇಳಿದ್ದಾರೆ.

ಶಿವಕುಮಾರ್ ಮುಖ್ಯಮಂತ್ರಿ ಆಗಬೇಕು ಎನ್ನುವುದೆಲ್ಲ ಸೆಕೆಂಡರಿ. ಅವರ ನಡವಳಿಕೆಯೂ ಮುಖ್ಯವಾಗುತ್ತದೆ. ಸಚಿವ ಪರಮೇಶ್ವರ ಮುಂದಿನ ಮುಖ್ಯಮಂತ್ರಿಯಾಗಲಿ ಎಂದು ಹಾರೈಸುವೆ

ವಿ. ಸೋಮಣ್ಣ, ರೈಲ್ವೆ ಖಾತೆ ರಾಜ್ಯ ಸಚಿವ

ಉತ್ತರ ಪ್ರದೇಶದಂತೆ ಅಕ್ರಮ ಹಾದಿ ತುಳಿಯದಿರಲಿ: ಚಿದಂಬರಂ



ಚಿದಂಬರಂ

ನವದೆಹಲಿ (ಪಿಟಿಐ): ಡ್ರಗ್ಸ್ ಮಾಫಿಯಾದಲ್ಲಿ ತೊಡಗಿರುವವರ ಆಸ್ತಿಗಳನ್ನು ಬುಲ್ಡೋಜರ್ ಮೂಲಕ ಹೊಡೆದುರುಳಿಸಲಾಗುವುದು ಎಂಬ ಕರ್ನಾಟಕ ಸರ್ಕಾರದ ನಿರ್ಧಾರಕ್ಕೆ ಕಾಂಗ್ರೆಸ್ ನಾಯಕ ಪಿ. ಚಿದಂಬರಂ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

‘ಕರ್ನಾಟಕದ ಕಾಂಗ್ರೆಸ್ ಸರ್ಕಾರವು ಉತ್ತರ ಪ್ರದೇಶದಂತೆ ಅಕ್ರಮ ಹಾದಿಯನ್ನು ತುಳಿಯದಿರಲಿ’ ಎಂದು ಸಲಹೆ ನೀಡಿದ್ದಾರೆ.

‘ಮಾದಕ ವಸ್ತುಗಳ ಮಾರಾಟದಲ್ಲಿ ತೊಡಗಿರುವವರ ಮನೆಗಳ ಮೇಲೆ ಬುಲ್ಡೋಜರ್ ಹರಿಸಲಾಗುವುದು ಎಂದು ಕರ್ನಾಟಕ ಗೃಹ ಸಚಿವರು ನೀಡಿದ ಹೇಳಿಕೆ ಕುರಿತಂತೆ ಆತಂಕಗೊಂಡಿದ್ದೇನೆ. ನನ್ನ ಪ್ರಕಾರ, ಇದು ತಪ್ಪು ನಿರ್ಧಾರ’ ಎಂದು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಕಾನೂನಿನ ಸರಿಯಾದ ಪ್ರಕ್ರಿಯೆ ಇಲ್ಲದೇ, ಮನೆಗಳನ್ನು ಒಡೆದು ಹಾಕುವುದು ಕಾನೂನುಬಾಹಿರ ಎಂದು ಸುಪ್ರೀಂ ಕೋರ್ಟ್ ಕೂಡ ಘೋಷಿಸಿದೆ. ಮನೆಗಳನ್ನು ಒಡೆದು ಹಾಕಿದರೆ, ಅದರಲ್ಲಿ ಆಶ್ರಯ ಪಡೆದ ಕುಟುಂಬದ ಸದಸ್ಯರ ಮೂಲಭೂತ ಹಾಗೂ ಮಾನವ ಹಕ್ಕುಗಳನ್ನು ಉಲ್ಲಂಘಿಸಿದಂತಾಗುತ್ತದೆ’ ಎಂದು ಹೇಳಿದ್ದಾರೆ.

ಮೀಸಲು: ಖಚಿತ ತೀರ್ಮಾನಕ್ಕೆ ಅಲೆಮಾರಿ ಸಮುದಾಯ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಅಲೆಮಾರಿ ಸಮುದಾಯಕ್ಕೆ ಪ್ರತ್ಯೇಕ ಒಳಮೀಸಲಾತಿ ನೀಡುವ ಕುರಿತು ಸರ್ಕಾರ ಸ್ಪಷ್ಟ ತೀರ್ಮಾನ ಕೈಗೊಳ್ಳದೇ ಇದ್ದರೆ, ಹೈಕೋರ್ಟ್‌ನಲ್ಲಿ ಇರುವ ಅರ್ಜಿಯನ್ನು ಹಿಂಪಡೆಯಲು ಸಾಧ್ಯವಿಲ್ಲ. ತಡೆ ಆದೇಶವೂ ತೆರವಾಗುವುದಿಲ್ಲ’ ಎಂದು ಕರ್ನಾಟಕ ಅಸ್ಪೃಶ್ಯ ಅಲೆಮಾರಿ ಸಮುದಾಯಗಳ ಮಹಾಸಂಘ ಹೇಳಿದೆ.

ತಮ್ಮ ಸಮುದಾಯಕ್ಕೆ ಒಳಮೀಸಲಾತಿಯಲ್ಲಿ ಪ್ರತ್ಯೇಕ ಪಾಲು ನೀಡುವ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಜತೆಗೆ ಸಂಘದ ಪ್ರತಿನಿಧಿಗಳು, ಸಾಮಾಜಿಕ ಹೋರಾಟಗಾರರು ಚರ್ಚೆ ನಡೆಸಿದರು.

ಬಳಿಕ ಮಾತನಾಡಿದ ಸಮುದಾಯದ ಮುಖಂಡ ಎ.ಎಸ್. ಪ್ರಭಾಕರ್, ‘ಸರ್ಕಾರದ ಮುಂದೆ ಕೆಲ ಆಯ್ಕೆಗಳನ್ನು ಇಡಲಾಗಿದೆ. ಸರ್ಕಾರ ಅಂತಿಮವಾಗಿ ಯಾವ ತೀರ್ಮಾನ ಕೈಗೊಳ್ಳಲಿದೆ ಎಂಬುದರ ಮೇಲೆ ಮುಂದಿನ ಹೆಜ್ಜೆ ಇಡಲು ನಿರ್ಧಾರ ಮಾಡಿದ್ದೇವೆ’ ಎಂದರು.

‘ಅಲೆಮಾರಿ ಸಮುದಾಯಗಳು ದಶಕಗಳಿಂದ ಅನುಭವಿಸುತ್ತಿರುವ ಐತಿಹಾಸಿಕ ಅನ್ಯಾಯವನ್ನು ಪರಿಹರಿಸುವಲ್ಲಿ ಸರ್ಕಾರ ನಿರಂತರ ನಿರ್ಲಕ್ಷ್ಯ ವಹಿಸಿದೆ. ಈ ಕಾರಣದಿಂದಾಗಿ ಈಗ ಗಂಭೀರ ಪರಿಸ್ಥಿತಿ ನಿರ್ಮಾಣವಾಗಿದೆ. ಅಲೆಮಾರಿ ಸಮುದಾಯಗಳ ಮೀಸಲಾತಿಗೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿರುವ ತಡೆ ಆದೇಶದಿಂದಾಗಿ, ಆಂತರಿಕ ಮೀಸಲಾತಿಯಷ್ಟೇ ಅಲ್ಲ, ಎಲ್ಲ ನೇಮಕಾತಿ ಪ್ರಕ್ರಿಯೆಗಳೂ ಸ್ಥಗಿತಗೊಂಡಿವೆ’ ಎಂದು ಹೇಳಿದರು.

ಸಭೆಯಲ್ಲಿ ಸಮಾಜಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ, ಕಾನೂನು ಸಚಿವ ಎಚ್.ಕೆ.ಪಾಟೀಲ, ಆಹಾರ ಸಚಿವ ಕೆ.ಎಚ್.ಮುನಿಯಪ್ಪ, ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಭಾಗವಹಿಸಿದ್ದರು.

‘ಮಸೂದೆಯಲ್ಲೇ ಪ್ರತ್ಯೇಕ ಮೀಸಲು ಸೇರಿಸಿ’

‘ಒಳಮೀಸಲಾತಿ ರಕ್ಷಣೆಗಾಗಿ ಸಿದ್ಧಪಡಿಸಿರುವ ಮಸೂದೆ ಮಂಡಿಸುವ ವೇಳೆ ಈ ಬಗ್ಗೆ ನಿಖರ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಮುಖ್ಯಮಂತ್ರಿಗೆ ಒತ್ತಾಯಿಸಲಾಗಿದೆ’ ಎಂದು ಪ್ರಭಾಕರ್ ಹೇಳಿದ್ದಾರೆ.

‘ಅಲೆಮಾರಿ ಸಮುದಾಯಗಳನ್ನು ವರ್ಗ ‘ಸಿ’ಯಿಂದ ಬೇರ್ಪಡಿಸಿ, ಪ್ರತ್ಯೇಕವಾಗಿ ವರ್ಗ ‘ಎ’ಯಲ್ಲಿ ಶೇ 1 ಮೀಸಲಾತಿ ನೀಡಬೇಕು. ರಾಜಕೀಯವಾಗಿ ಈ ನಿರ್ಧಾರ ಅಸಾಧ್ಯವೆನಿಸಿದರೆ ವರ್ಗ ‘ಎ’, ‘ಬಿ’ ಮತ್ತು ‘ಸಿ’ಗಳಿಂದ ಸಮಾನ ಪ್ರಮಾಣದಲ್ಲಿ ಮೀಸಲಾತಿ ಕಡಿತಗೊಳಿಸಿ ಶೇ 1.5 ಮೀಸಲಾತಿ ನೀಡಬೇಕು. ಜನವರಿ 30ರ ಒಳಗೆ ನ್ಯಾಯಾಲಯದಲ್ಲಿ ವಾದ ಮಂಡಿಸಿ, ಹೈಕೋರ್ಟ್ ನೀಡುವ ತೀರ್ಪನ್ನು ಅಂಗೀಕರಿಸಬೇಕು ಎಂದು ಬೇಡಿಕೆ ಮಂಡಿಸಲಾಗಿದೆ. ಸರ್ಕಾರ ಈ ಮೂರು ಮಾರ್ಗಗಳಲ್ಲೊಂದು ಆಯ್ಕೆ ಮಾಡಲೇಬೇಕಿದೆ’ ಎಂದರು.

ಸ್ಥಳೀಯ ಸಂಸ್ಥೆ ಚುನಾವಣೆ: ಯುಡಿಎಫ್ ಮೇಲುಗೈ

ಕೇರಳ: ಎಲ್‌ಡಿಎಫ್‌ಗೆ ಹಿನ್ನಡೆ ತಂದ ಶಬರಿಮಲೆ ಚಿನ್ನ ಕಳವು ಪ್ರಕರಣ • ತಿರುವನಂತಪುರದಲ್ಲಿ ಬಿಜೆಪಿ ಬಲ ವೃದ್ಧಿ

ತಿರುವನಂತಪುರ (ಪಿಟಿಐ): ಕೇರಳದ ಸ್ಥಳೀಯ ಸಂಸ್ಥೆಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮೇಲುಗೈ ಸಾಧಿಸಿದೆ. ಆಡಳಿತಾರೂಢ ಸಿಪಿಎಂ ನೇತೃತ್ವದ ಎಲ್‌ಡಿಎಫ್ ಕೊನೆಯ ಕ್ಷಣದಲ್ಲಿ ಘೋಷಿಸಿದ್ದ ಕಲ್ಯಾಣ ಕಾರ್ಯಕ್ರಮಗಳು ಮತದಾರರನ್ನು ಸೆಳೆಯುವಲ್ಲಿ ವಿಫಲವಾಗಿವೆ.

2026ರಲ್ಲಿ ನಡೆಯಲಿರುವ ಕೇರಳ ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಯುಡಿಎಫ್‌ಗೆ ಈ ಗೆಲುವು ದೊಡ್ಡ ಮಟ್ಟದಲ್ಲಿ ಬಲ ತುಂಬಿದೆ. ಇನ್ನೊಂದೆಡೆ ಎಲ್‌ಡಿಎಫ್ ತನ್ನ ಕಾರ್ಯತಂತ್ರದ ಕುರಿತು ಮರು ಚಿಂತನೆ ನಡೆಸಬೇಕಾದ ಸಂದರ್ಭ ಎದುರಾಗಿದೆ ಎಂದು ರಾಜಕೀಯ ತಜ್ಞರು ವಿಶ್ಲೇಷಿಸಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ಕೇರಳದ ಮತದಾರರ ಒಲವು ಯುಡಿಎಫ್‌ನತ್ತ ಬದಲಾಗುತ್ತಿರುವುದು ಸ್ಥಳೀಯ ಸಂಸ್ಥೆಗಳ ಚುನಾವಣಾ ಫಲಿತಾಂಶದಲ್ಲಿ ಕಂಡು ಬಂದಿದೆ. ಕಳೆದ ಎರಡು ಲೋಕಸಭಾ ಚುನಾವಣೆಗಳಲ್ಲಿ ಯುಡಿಎಫ್ ಮೇಲುಗೈ ಸಾಧಿಸಿತ್ತು. ಆಡಳಿತ ವಿರೋಧಿ ಅಲೆ ಮತ್ತು ಇತ್ತೀಚಿನ ಶಬರಿಮಲೆ ಚಿನ್ನ ಕಳವು ಪ್ರಕರಣ ಕೂಡ ಯುಡಿಎಫ್‌ನ ಗೆಲುವಿನಲ್ಲಿ ನಿರ್ಣಾಯಕ ಅಂಶಗಳಾಗಿವೆ.

ಚುನಾವಣೆಗೆ ಕೆಲವೇ ದಿನಗಳ ಹಿಂದಷ್ಟೇ ಎಲ್‌ಡಿಎಫ್ ಸರ್ಕಾರ ಸಾಮಾಜಿಕ ಭದ್ರತಾ ಪಿಂಚಣಿ ಮತ್ತು ಆಶಾ ಕಾರ್ಯಕರ್ತೆಯರ ವೇತನವನ್ನು ಹೆಚ್ಚಿಸಿತ್ತು. ಮಹಿಳೆಯರಿಗಾಗಿ ಹೊಸ ಸಾಮಾಜಿಕ ಭದ್ರತಾ ಯೋಜನೆಯನ್ನು ಜಾರಿಗೊಳಿಸಿತ್ತು. ಅತ್ಯಾಚಾರದ ಆರೋಪ ಎದುರಿಸುತ್ತಿರುವ ಕೇರಳದ ಪಾಲಕ್ಕಾಡ್‌ನ ಕಾಂಗ್ರೆಸ್ ಶಾಸಕ ರಾಹುಲ್ ಮಾಂಕೂಟತ್ತಿಲ್ ಅವರನ್ನೇ ಗುರಿಯಾಗಿಸಿಕೊಂಡು ಎಲ್‌ಡಿಎಫ್ ಪ್ರಚಾರ ನಡೆಸಿತ್ತು. ಆದರೆ, ಚುನಾವಣಾ ಫಲಿತಾಂಶದ ಮೇಲೆ ಇದು ಯಾವುದೇ ಪರಿಣಾಮ ಬೀರಿದಂತಿಲ್ಲ.

ರಾಜ್ಯ ಚುನಾವಣಾ ಆಯೋಗ (ಎಸ್‌ಇಸಿ) ಬಿಡುಗಡೆ ಮಾಡಿದ ಅಂಕಿ ಅಂಶದಂತೆ ಯುಡಿಎಫ್ ಕೊಲ್ಲಂ, ತ್ರಿಶ್ಶೂರ್ ಮತ್ತು ಕೊಚ್ಚಿ ಪಾಲಿಕೆಗಳನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡಿದೆ. ಕೊಲ್ಲಂ ಪಾಲಿಕೆ 25 ವರ್ಷಗಳಿಂದ ಮತ್ತು ತ್ರಿಶ್ಶೂರ್ ಪಾಲಿಕೆ 10 ವರ್ಷಗಳಿಂದ ಎಲ್‌ಡಿಎಫ್ ವಶದಲ್ಲಿತ್ತು.



ತಿರುವನಂತಪುರದಲ್ಲಿ ಮತ ಎಣಿಕೆ ಕೇಂದ್ರದ ಹೊರಗೆ ಬಿಜೆಪಿ ಕಾರ್ಯಕರ್ತರು ಸಂಭ್ರಮಾಚರಣೆ ನಡೆಸಿದರು – ಪಿಟಿಐ ಚಿತ್ರ

ಕೇರಳ ಸ್ಥಳೀಯ ಸಂಸ್ಥೆ ಚುನಾವಣೆ ಯಾರಿಗೆ ಎಷ್ಟು ಸ್ಥಾನ

ಪಕ್ಷ	ಗ್ರಾ.ಪಂ	ನಗರಸಭೆ	ಪಾಲಿಕೆ
ಯುಡಿಎಫ್	8021	1458	187
ಎಲ್‌ಡಿಎಫ್	6568	1100	125
ಎನ್‌ಡಿಎ	1447	324	93
ಇತರ	1299	323	15

> ಸ್ಥಳೀಯ ಸಂಸ್ಥೆಗಳ ಚುನಾವಣಾ ಫಲಿತಾಂಶದಲ್ಲಿ ಪಕ್ಷಕ್ಕೆ ಅನಿರೀಕ್ಷಿತ ಹಿನ್ನಡೆ ಆಗಿದೆ. ಈ ಬಗ್ಗೆ ಪರಿಶೀಲನೆ ನಡೆಸಿ, ಕ್ರಮ ತೆಗೆದುಕೊಳ್ಳುತ್ತೇವೆ
> **ಎಂ.ವಿ.ಗೋವಿಂದನ್,** ಸಿಪಿಎಂ ರಾಜ್ಯಕಾರ್ಯದರ್ಶಿ

> ದೇವರ ಸ್ವಂತ ನಾಡು ಕೇರಳದಲ್ಲಿ ದೇವರ ಕೃಪೆ ಬಿಜೆಪಿ, ಎನ್‌ಡಿಎ ಮೇಲೆ ಹರಿದು ಬಂದಿದೆ ಎಂದು ಹೇಳಬಲ್ಲೆ
> **ಸುಧಾಂಶು ತ್ರಿವೇದಿ,** ಬಿಜೆಪಿ ರಾಷ್ಟ್ರೀಯ ವಕ್ತಾರ

'ಕೆಂಪು ಕೋಟೆ'ಯಲ್ಲಿ ಅರಳಿದ ಕಮಲ

ಕೇರಳದ ರಾಜಧಾನಿ, ಎಲ್‌ಡಿಎಫ್‌ನ ಭದ್ರಕೋಟೆ ಎನಿಸಿದ್ದ ತಿರುವನಂತಪುರದಲ್ಲಿ ಕಮಲ ಅರಳಿದೆ. 45 ವರ್ಷಗಳಿಂದ ಎಲ್‌ಡಿಎಫ್ ಆಡಳಿತದಲ್ಲಿದ್ದ ತಿರುವನಂತಪುರ ಪಾಲಿಕೆ ಬಿಜೆಪಿ ವಶಕ್ಕೆ ಬಂದಿದೆ. 101 ಸದಸ್ಯ ಬಲದ ಪಾಲಿಕೆಯಲ್ಲಿ 50 ಸ್ಥಾನಗಳಲ್ಲಿ ಬಿಜೆಪಿ, 29 ಸ್ಥಾನಗಳಲ್ಲಿ ಎಲ್‌ಡಿಎಫ್, 19 ಸ್ಥಾನಗಳಲ್ಲಿ ಯುಡಿಎಫ್ ಮತ್ತು 2 ಸ್ಥಾನಗಳಲ್ಲಿ ಪಕ್ಷೇತರ ಅಭ್ಯರ್ಥಿಗಳು ಜಯಗಳಿಸಿದ್ದಾರೆ. ಐತಿಹಾಸಿಕವಾಗಿ ಬಿಜೆಪಿಗೆ ಒಂದು ನಿರ್ಣಾಯಕ ಸ್ಥಾನದ ಕೊರತೆ ಇದೆ.

ತಿರುವನಂತಪುರ ಪಾಲಿಕೆಯನ್ನು ವಶಕ್ಕೆ ಪಡೆಯುವ ಮೂಲಕ 2026ರ ಕೇರಳ ವಿಧಾನಸಭಾ ಚುನಾವಣೆಗೆ ಬಿಜೆಪಿ ವೇದಿಕೆ ಸಜ್ಜುಗೊಳಿಸಿದೆ. ಪಾಲಕ್ಕಾಡ್ ಪಾಲಿಕೆಯನ್ನು ಉಳಿಸಿಕೊಂಡು ಯುಡಿಎಫ್ ವಶದಲ್ಲಿದ್ದ ತ್ರಿಪ್ಪೂಣಿತ್ತುರ ನಗರಸಭೆಯನ್ನೂ ವಶಕ್ಕೆ ತೆಗೆದುಕೊಳ್ಳುವಲ್ಲಿ ಬಿಜೆಪಿ ಯಶಸ್ವಿಯಾಗಿದೆ.

ನಿವೃತ್ತ ಐಪಿಎಸ್ ಅಧಿಕಾರಿ ಮೇಯರ್?

ತಿರುವನಂತಪುರ ಪಾಲಿಕೆಯಲ್ಲಿ ಕಮಲ ಅರಳಿದ ಬೆನ್ನಲ್ಲೇ, ಕೇರಳದ ಮೊದಲ ಮಹಿಳಾ ಐಪಿಎಸ್ ಅಧಿಕಾರಿ ಆರ್. ಶ್ರೀಲೇಖಾ (65) ಈ ನಗರದ ಮೇಯರ್ ಆಗಲಿದ್ದಾರೆಯೇ ಎಂಬ ಚರ್ಚೆಗಳು ಮುನ್ನೆಲೆಗೆ ಬಂದಿವೆ.

ತಿರುವನಂತಪುರ ಪಾಲಿಕೆಯ ಶಾಸ್ತಮಂಗಲಂ ವಿಭಾಗದಿಂದ ಜಯಗಳಿಸಿರುವ ಶ್ರೀಲೇಖಾ ಅವರನ್ನು, ಬಿಜೆಪಿಯು ಮೇಯರ್ ಅಭ್ಯರ್ಥಿ ಎಂದೇ ಬಿಂಬಿಸಿ ಚುನಾವಣಾ ಕಣಕ್ಕಿಳಿಸಿತ್ತು. 'ನನ್ನನ್ನು ಗೆಲ್ಲಿಸಿರುವ ಮತದಾರರಿಗೆ ಧನ್ಯವಾದಗಳು. ಮೇಯರ್ ಆಯ್ಕೆಯ ವಿಚಾರವು ಪಕ್ಷಕ್ಕೆ ಬಿಟ್ಟದ್ದು' ಎಂದು ಶ್ರೀಲೇಖಾ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

> ಎಲ್‌ಡಿಎಫ್ ಮತ್ತು ಯುಡಿಎಫ್‌ನಿಂದ ಕೇರಳದ ಜನರು ಬೇಸತ್ತಿದ್ದಾರೆ. ಉತ್ತಮ ಆಡಳಿತ, ವಿಕಸಿತ ಕೇರಳಕ್ಕಾಗಿ ಅವರಿಗಿರುವ ಆಯ್ಕೆ ಎನ್‌ಡಿಎ ಆಗಿದೆ
> **ನರೇಂದ್ರ ಮೋದಿ,** ಪ್ರಧಾನಿ, ಎಕ್ಸ್‌ಪೋಸ್ಟ್‌ನಲ್ಲಿ

> ಯುಡಿಎಫ್ ಮೇಲೆ ನಂಬಿಕೆ ಇರಿಸಿದ ಕೇರಳದ ಜನರಿಗೆ ಧನ್ಯವಾದಗಳು. ಈ ನಿರ್ಣಾಯಕ, ಭರವಸೆಯ ಫಲಿತಾಂಶವು 2026ರ ವಿಧಾನಸಭಾ ಚುನಾವಣೆಗೆ ದಿಕ್ಸೂಚಿ
> **ರಾಹುಲ್ ಗಾಂಧಿ,** ಕಾಂಗ್ರೆಸ್ ಮುಖಂಡ(ಎಕ್ಸ್‌ಪೋಸ್ಟ್‌ನಲ್ಲಿ)

> ಇದೇ ಪ್ರಜಾಪ್ರಭುತ್ವದ ಸೌಂದರ್ಯ. ತಿರುವನಂತಪುರ ಕ್ಷೇತ್ರದಲ್ಲಿ ಜನರು ನೀಡಿರುವ ತೀರ್ಪನ್ನು ಗೌರವಿಸಬೇಕು
> **ಶಶಿ ತರೂರ್,** ಕಾಂಗ್ರೆಸ್ ಸಂಸದ

ನಟ ಸುರೇಶ್ ಗೋಪಿ ಕಳೆದ ವರ್ಷ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿ ಜಯಗಳಿಸಿದ್ದ ತ್ರಿಶ್ಶೂರ್‌ನ ಕೊಡುಂಗಲ್ಲೂರ್ ನಗರಸಭೆಯ 46 ವಾರ್ಡ್‌ಗಳಲ್ಲಿ 18ರಲ್ಲಿ ಬಿಜೆಪಿ ಜಯಗಳಿಸಿದೆ. ತ್ರಿಶ್ಶೂರ್ ಪಾಲಿಕೆಯಲ್ಲಿ 8 ಸ್ಥಾನ, ಗುರುವಾಯೂರು ಮತ್ತು ವಡಕ್ಕಾನ್‌ಚ್ಚೇರಿ ನಗರಸಭೆಗಳಲ್ಲಿ ತಲಾ ಎರಡು ಸ್ಥಾನ, ಕುನ್ನಂಕುಳಂ ನಗರಸಭೆಯಲ್ಲಿ 7 ಹಾಗೂ ಇರಿಜ್ಞಾಲಿಕ್ಕುಡ ನಗರಸಭೆಯಲ್ಲಿ 6 ಹಾಗೂ ಚಾಲಕ್ಕುಡಿ ನಗರಸಭೆಯಲ್ಲಿ 1 ಸ್ಥಾನವನ್ನು ಬಿಜೆಪಿ ಗೆದ್ದಿದೆ.

ಶಬರಿಮಲೆ ಪ್ರಕರಣ: ಶಬರಿಮಲೆ ಅಯ್ಯಪ್ಪ ದೇವಸ್ಥಾನವಿರುವ ಪತ್ತನಂತಿಟ್ಟ ಜಿಲ್ಲೆಯಲ್ಲಿ, ಶಬರಿಮಲೆ ಚಿನ್ನ ಕಳವು ಪ್ರಕರಣದ ವಿರುದ್ಧ ನಡೆದ ಅಭಿಯಾನವು ಬಿಜೆಪಿಗೆ ಹೆಚ್ಚು ಸ್ಥಾನಗಳು ಗೆಲ್ಲುವಂತೆ ಮಾಡಿದೆ. ಇಲ್ಲಿ ಗ್ರಾಮ ಪಂಚಾಯಿತಿಗಳ 142 ವಾರ್ಡ್‌ಗಳಲ್ಲಿ, ನಗರಸಭೆಯ 21 ವಾರ್ಡ್‌ಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಜಯಗಳಿಸಿದ್ದಾರೆ. ಪಂದಳಂ ನಗರಸಭೆ ವ್ಯಾಪ್ತಿಯ 9 ವಾರ್ಡ್‌ಗಳಲ್ಲಿ ಕಮಲ ಅರಳಿದೆ.

ಕೇರಳದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಡಿ.9 ಹಾಗೂ 11ರಂದು ಎರಡು ಹಂತಗಳಲ್ಲಿ ಚುನಾವಣೆ ನಡೆದಿತ್ತು. ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರ ಪ್ರಮಾಣ ವಚನ ಸ್ವೀಕಾರ ಡಿ. 21ರಂದು ನಿಗದಿಯಾಗಿದೆ.

ಸುದ್ದಿ 2 ನಿಮಿಷ

ಮೋದಿ ವಿರುದ್ಧ ಕಾಂಗ್ರೆಸ್ ಟೀಕೆ


ನವದೆಹಲಿ (ಪಿಟಿಐ): ಭಾರತವು, ಸಿಲಿಕಾನ್ ಪೂರೈಕೆ ಅಬಾಧಿತವಾಗಿರುವುದನ್ನು ಖಾತ್ರಿಪಡಿಸಲು ಅಮೆರಿಕ ನೇತೃತ್ವದಲ್ಲಿ ರಚನೆಯಾಗಲಿರುವ ಗುಂಪಿನ(ಪ್ಯಾಕ್ಸ್ ಸಿಲಿಕಾ) ಭಾಗವಾಗಿಲ್ಲ ಎಂಬ ವಿಚಾರ ಮುಂದಿಟ್ಟುಕೊಂಡು ಕಾಂಗ್ರೆಸ್ ಪಕ್ಷವು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಶನಿವಾರ ಟೀಕಾಪ್ರಹಾರ ನಡೆಸಿದೆ.

'ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಪ್ರಧಾನಿ ಮೋದಿ ನಡುವಿನ ಒಪ್ಪಂದಕ್ಕೆ ತೀವ್ರ ಹಿನ್ನಡೆಯಾದಂತಾಗಿದೆ. ಒಂದು ವೇಳೆ ಈ ಗುಂಪಿನ ಭಾಗವಾಗಿದ್ದಲ್ಲಿ ಭಾರತಕ್ಕೆ ಸಾಕಷ್ಟು ಅನುಕೂಲವಾಗುತ್ತಿತ್ತು' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಟೀಕಿಸಿದ್ದಾರೆ.

ಹಲವು ಉದ್ದಿಮೆಗಳಿಗೆ ಅಗತ್ಯವಿರುವ ಸಿಲಿಕಾನ್ ಧಾತುವಿನ ತಡೆರಹಿತ ಪೂರೈಕೆ ಉದ್ದೇಶದಿಂದ ಅಮೆರಿಕ ಸೇರಿ ಒಂಬತ್ತು ದೇಶಗಳು ಒಪ್ಪಂದ ಮಾಡಿಕೊಂಡಿವೆ. ಇದನ್ನು 'ಪ್ಯಾಕ್ಸ್ ಸಿಲಿಕಾ' ಎಂದು ಕರೆಯಲಾಗುತ್ತದೆ. ಈ ಕ್ಷೇತ್ರದಲ್ಲಿ ಚೀನಾ ಪ್ರಾಬಲ್ಯ ಹೊಂದಿದ್ದು, ಅದಕ್ಕೆ ಪ್ರತಿಯಾಗಿ ಈ ವ್ಯವಸ್ಥೆಯನ್ನು ರೂಪಿಸಲಾಗುತ್ತಿದೆ.

ಅಮೆರಿಕ, ಜಪಾನ್, ದಕ್ಷಿಣ ಕೊರಿಯಾ, ಸಿಂಗಪುರ, ನೆದರ್ಲೆಂಡ್ಸ್, ಬ್ರಿಟನ್, ಇಸ್ರೇಲ್, ಯುಎಇ ಹಾಗೂ ಆಸ್ಟ್ರೇಲಿಯಾ ಈ ಗುಂಪಿನ ಸದಸ್ಯ ರಾಷ್ಟ್ರಗಳಾಗಿವೆ.

ಈ ಕುರಿತು ಜೈರಾಮ್ ರಮೇಶ್ ಅವರು 'ಎಕ್ಸ್'ನಲ್ಲಿ ವಿಸ್ತಾರವಾದ ಹೇಳಿಕೆಯನ್ನು ಹಂಚಿಕೊಂಡಿದ್ದಾರೆ.



'ಟ್ರಂಪ್ ಅವರೊಂದಿಗೆ ದೂರವಾಣಿ ಮೂಲಕ ಮಾತುಕತೆ ನಡೆಸಿದ ಬಗ್ಗೆ ಮೋದಿ ಸಾಮಾಜಿಕ ಮಾಧ್ಯಮಗಳಲ್ಲಿ ಬಹಳ ಉತ್ಸಾಹದಿಂದಲೇ ಮಾಹಿತಿ ಹಂಚಿಕೊಂಡಿದ್ದಾರೆ. ಅಹಮದಾಬಾದ್, ಹ್ಯೂಸ್ಟನ್ ಹಾಗೂ ವಾಷಿಂಗ್ಟನ್‌ನಲ್ಲಿ ತಮ್ಮ ಆಪ್ತ ಸ್ನೇಹಿತನನ್ನು ಮೋದಿ ಹಲವು ಬಾರಿ ಆಲಿಂಗನ ಮಾಡಿದ್ದಾರೆ. ಇಷ್ಟಾದರೂ, ಭಾರತ ಈ ಗುಂಪಿನ ಭಾಗವಾಗಿಲ್ಲ' ಎಂದು ಜೈರಾಮ್ ರಮೇಶ್ ಕುಟುಕಿದ್ದಾರೆ.

'ಮಿದುಳು ಸ್ಟೆಂಟ್'ನ ಕ್ಲಿನಿಕಲ್ ಟ್ರಯಲ್ ಯಶಸ್ವಿ

ನವದೆಹಲಿ(ಪಿಟಿಐ): ತೀವ್ರ ಸ್ವರೂಪದ ಪಾರ್ಶ್ವವಾಯು ಚಿಕಿತ್ಸೆಗಾಗಿ ಅಭಿವೃದ್ಧಿಪಡಿಸಿರುವ 'ಮಿದುಳು ಸ್ಟೆಂಟ್'ನ ಕ್ಲಿನಿಕಲ್ ಟ್ರಯಲ್‌ಅನ್ನು ಯಶಸ್ವಿಯಾಗಿ ನಡೆಸುವ ಮೂಲಕ ದೆಹಲಿಯ ಅಖಿಲ ಭಾರತ ವೈದ್ಯ ವಿಜ್ಞಾನಗಳ ಸಂಸ್ಥೆ (ಎಐಐಎಂಎಸ್) ವೈದ್ಯರು ಗಮನ ಸೆಳೆದಿದ್ದಾರೆ.

ಇದು, ದೇಶದಲ್ಲಿ ನಡೆಸಿದ 'ಮಿದುಳು ಸ್ಟೆಂಟ್'ನ ಮೊದಲ ಕ್ಲಿನಿಕಲ್ ಟ್ರಯಲ್ ಆಗಿದೆ. ಈ ಸ್ಟೆಂಟ್ ಸುರಕ್ಷಿತ ಹಾಗೂ ಪಾರ್ಶ್ವವಾಯು ಚಿಕಿತ್ಸೆಯಲ್ಲಿ ಪರಿಣಾಮಕಾರಿ ಎಂಬುದು ಟ್ರಯಲ್‌ನಿಂದ ದೃಢಪಟ್ಟಿದೆ ಎಂದು ಸಂಸ್ಥೆಯ ನ್ಯೂರೊ ಇಮೇಜಿಂಗ್ ವಿಭಾಗದ ಮುಖ್ಯಸ್ಥ ಡಾ.ಶೈಲೇಶ್ ಬಿ.ಗಾಯಕ್ವಾಡ್ ತಿಳಿಸಿದ್ದಾರೆ.

ಈ ಟ್ರಯಲ್‌ನ ಫಲಿತಾಂಶವು 'ಜರ್ನಲ್ ಆಫ್ ನ್ಯೂರೊಇಂಟರ್‌ವೆನ್‌ಷನಲ್ ಸರ್ಜರಿ' ನಿಯತಕಾಲಿಕೆಯಲ್ಲಿ ಪ್ರಕಟವಾಗಿದೆ. 'ಸೂಪರ್‌ನೊವಾ ಸ್ಟೆಂಟ್' ಎಂದು ಕರೆಯಲಾಗುವ ಇದನ್ನು ಗ್ರ್ಯಾವಿಟಿ ಮೆಡಿಕಲ್ ಟೆಕ್ನಾಲಜಿ ಅಭಿವೃದ್ಧಿಪಡಿಸಿದೆ.

ರಾಜ್ ಕುಮಾರ್ ಗೋಯಲ್ ನೂತನ ಮುಖ್ಯ ಮಾಹಿತಿ ಆಯುಕ್ತ

ಪ್ರಜಾವಾಣಿ ವಾರ್ತೆ



ರಾಜ್ ಕುಮಾರ್ ಗೋಯಲ್

ನವದೆಹಲಿ: ಕೇಂದ್ರ ಮಾಹಿತಿ ಆಯೋಗದ ಮುಖ್ಯ ಮಾಹಿತಿ ಆಯುಕ್ತರನ್ನಾಗಿ (ಸಿಐಸಿ) ಮಾಜಿ ಕಾನೂನು ಕಾರ್ಯದರ್ಶಿ ರಾಜ್ ಕುಮಾರ್ ಗೋಯಲ್ ಅವರನ್ನು ನೇಮಕ ಮಾಡಲಾಗಿದೆ. ಇವರೊಂದಿಗೆ 8 ಆಯುಕ್ತರನ್ನೂ ನೇಮಿಸಲಾಗಿದೆ.

ಆಯೋಗದಲ್ಲಿ ಖಾಲಿ ಇದ್ದ ಎಲ್ಲ ಸ್ಥಾನಗಳು ಕಳೆದ 7 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಭರ್ತಿಯಾಗಿವೆ. ಇದೇ ಸೆಪ್ಟೆಂಬರ್‌ನಲ್ಲಿ ನಿವೃತ್ತರಾದ ಹೀರಾಲಾಲ್ ಸಮಾರಿಯಾ ಅವರ ಬಳಿಕ ಆಯೋಗಕ್ಕೆ ಮುಖ್ಯ ಮಾಹಿತಿ ಆಯುಕ್ತರೇ ಇಲ್ಲದಂತಾಗಿತ್ತು. ಈವರೆಗೆ ಆಯೋಗದಲ್ಲಿ ಇಬ್ಬರೇ ಆಯುಕ್ತರು ಕಾರ್ಯನಿರ್ವಹಿಸುತ್ತಿದ್ದರು.

ಸೋಮವಾರ ಬೆಳಿಗ್ಗೆ 11 ಗಂಟೆಗೆ ಗೋಯಲ್ ಅವರು ಪ್ರಮಾಣವಚನ ಸ್ವೀಕರಿಸಲಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಮಾಣವಚನ ಬೋಧಿಸಲಿದ್ದಾರೆ. ಬಳಿಕ, ಗೋಯಲ್ ಅವರು 8 ಆಯುಕ್ತರಿಗೆ ಪ್ರಮಾಣವಚನ ಬೋಧಿಸಲಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಆಯ್ಕೆ ಸಮಿತಿಯು ಖಾಲಿ ಇದ್ದ ಹುದ್ದೆಗಳಿಗೆ ನೇಮಕಾತಿ ಮಾಡಿದೆ. ಸಮಿತಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಇದ್ದರು.

'ಆಯುಕ್ತರ ಆಯ್ಕೆಯಲ್ಲಿ ಬಹುಜನ ಸಮಾಜಕ್ಕೆ ಮನ್ನಣೆ ನೀಡಲಾಗಿಲ್ಲ' ಎಂದು ರಾಹುಲ್ ತಮ್ಮ ಆಕ್ಷೇಪ ಮುಂದಿಟ್ಟಿದ್ದರು. ಆದರೆ, ಈ ಆಕ್ಷೇಪವನ್ನು ಕೇಂದ್ರ ತಳ್ಳಿ ಹಾಕಿದೆ. ಹೀರಾಲಾಲ್ ಅವರು ದಲಿತ ಸಮುದಾಯಕ್ಕೆ ಸೇರಿದ ಮೊದಲ ಮುಖ್ಯ ಮಾಹಿತಿ ಆಯುಕ್ತರಾಗಿದ್ದರು.

ಮೂವರು ಮಹಿಳಾ ಆಯುಕ್ತರು

ರೈಲ್ವೆ ಮಂಡಳಿಯ ಮಾಜಿ ಮುಖ್ಯಸ್ಥೆ ಜಯಾ ವರ್ಮಾ ಸಿನ್ಹಾ, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ನಿಯಂತ್ರಕ ಮಂಡಳಿಯ ಸದಸ್ಯರಾಗಿದ್ದ ಸುಧಾ ರಾಣಿ ರೇಲಂಗಿ ಅವರನ್ನು ಹೊಸದಾಗಿ ನೇಮಕ ಮಾಡಲಾಗಿದೆ. ಈ ಮೂಲಕ ಆಯೋಗದಲ್ಲಿ ಸದ್ಯ ಮೂವರು ಮಹಿಳಾ ಮಾಹಿತಿ ಆಯುಕ್ತರಾಗಿದ್ದಾರೆ. ಸತರ್ಕ್ ನಾಗರಿಕ್ ಸಂಘಟನ್ ಅವರ ಅಧ್ಯಯನದ ಪ್ರಕಾರ, ಮಾಹಿತಿ ಆಯುಕ್ತರಲ್ಲಿ ನೇಮಕವಾಗುವ ಒಟ್ಟು ಅಧಿಕಾರಿಗಳ ಪೈಕಿ ಶೇ 9ರಷ್ಟು ಮಾತ್ರ ಮಹಿಳೆಯಾಗಿರುತ್ತಾರೆ.

ಅರ್ಧದಷ್ಟು ಮಂದಿ ಅಧಿಕಾರಿ ವರ್ಗದವರು: ಆಯೋಗಕ್ಕೆ ನೇಮಕ ಆಗಿರುವವರಲ್ಲಿ ಅರ್ಧದಷ್ಟು ಮಂದಿ ಮಾಜಿ ಅಧಿಕಾರಿಗಳಾಗಿದ್ದಾರೆ. ಮಾಹಿತಿ ಆಯುಕ್ತರಾಗಿ ನೇಮಕವಾಗುವವರಲ್ಲಿ ಶೇ 58ರಷ್ಟು ಮಂದಿ ಸರ್ಕಾರದ ನಿವೃತ್ತ ಅಧಿಕಾರಿಗಳಾಗಿರುತ್ತಾರೆ ಎಂದು ಇದೇ ಸಂಘಟನೆಯ ಅಧ್ಯಯನ ತಿಳಿಸಿದೆ.

'ಮರುನಾಮಕರಣ: ಮೋದಿ ಮಾಸ್ಟರ್'

ನರೇಗಾಗೆ 'ಪೂಜ್ಯ ಬಾಪು ಗ್ರಾಮೀಣ ರೋಜಗಾರ್ ಯೋಜನೆ' ಹೆಸರು: ಟೀಕೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: 'ಕೇಂದ್ರದ ಯೋಜನೆಗಳನ್ನು ಮರುನಾಮಕರಣ ಮಾಡುವುದರಲ್ಲಿ ಪ್ರಧಾನಿ ನರೇಂದ್ರ ಮೋದಿ ಮಾಸ್ಟರ್' ಎಂದು ಕಾಂಗ್ರೆಸ್ ಶನಿವಾರ ಟೀಕಿಸಿದೆ.

ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಜಾರಿಗೊಳಿಸಿದ್ದ 32 ಯೋಜನೆಗಳಿಗೆ ಬಿಜೆಪಿ ಸರ್ಕಾರ ಮರುನಾಮಕರಣ ಮಾಡಿರುವ ಪಟ್ಟಿಯನ್ನೂ ಅದು ಹಂಚಿಕೊಂಡಿದೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ (ಎಂಎನ್‌ಆರ್‌ಇಜಿಎ) 'ಪೂಜ್ಯ ಬಾಪು ಗ್ರಾಮೀಣ ರೋಜಗಾರ್ ಯೋಜನೆ' ಎಂದು ಮರುನಾಮಕರಣ ಮಾಡುವ, ಕೆಲಸದ ದಿನಗಳನ್ನು ಹೆಚ್ಚಿಸುವ ಮಸೂದೆಗೆ ಕೇಂದ್ರ ಸಚಿವ ಸಂಪುಟ ಶುಕ್ರವಾರ ಅನುಮೋದನೆ ನೀಡಿತ್ತು.

'ನರೇಂದ್ರ ಮೋದಿ ಅವರು ಪಂಡಿತ್ ಜವಾಹರಲಾಲ್ ನೆಹರೂ ಅವರನ್ನು ದ್ವೇಷಿಸುತ್ತಾರೆ. ಹಾಗೆಯೇ ಮಹಾತ್ಮ ಗಾಂಧಿ ಅವರನ್ನೂ ದ್ವೇಷಿಸುತ್ತಿರುವಂತೆ ತೋರುತ್ತಿದೆ. ಮಹಾತ್ಮ ಗಾಂಧಿ ಹೆಸರಿನಲ್ಲಿ ಏನು ತಪ್ಪಿದೆ? ಎಂಎನ್‌ಆರ್‌ಇಜಿಎ ಯೋಜನೆಗೆ 'ಪೂಜ್ಯ ಬಾಪು ಗ್ರಾಮೀಣ ರೋಜಗಾರ್ ಯೋಜನೆ' ಎಂದು ಏಕೆ ಮರುನಾಮಕರಣ ಮಾಡಬೇಕು' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಪ್ರಶ್ನಿಸಿದ್ದಾರೆ.

ಮುಖ್ಯಾಂಶಗಳು

- ಜನರ ಮನಸ್ಸಿನಿಂದ ಗಾಂಧಿ ಅಳಿಸಿ ಹಾಕುವ ಹುನ್ನಾರ: ಕಾಂಗ್ರೆಸ್
- ನರೇಗಾ ಯೋಜನೆಗೆ ಅನುದಾನ ಕಡಿತ: ಆರೋಪ



> ನರೇಗಾ ಕಾರ್ಮಿಕರು ಹೆಚ್ಚಿನ ಕೂಲಿ ಕೇಳುತ್ತಿದ್ದಾರೆ. ಯೋಜನೆಗೆ ನಿಗದಿಪಡಿಸಿದ ಹಣವನ್ನು ಕೇಂದ್ರವು ಕಡಿಮೆ ಮಾಡುತ್ತಿದೆ. ಯೋಜನೆಗೆ ಅಂತ್ಯ ಹಾಡಲು ನಿರ್ಧರಿಸಿದಂತಿದೆ
> **ಕೆ.ಸಿ. ವೇಣುಗೋಪಾಲ್,** ಕಾಂಗ್ರೆಸ್ ಪ್ರಧಾನಕಾರ್ಯದರ್ಶಿ

'ಎಂಎನ್‌ಆರ್‌ಇಜಿಎ ಯೋಜನೆಗೆ ಮರುನಾಮಕರಣ ಮಾಡುತ್ತಿರುವುದರ ಹಿಂದೆ ಗಾಂಧಿ ಅವರನ್ನು ಜನರ ಮನಸ್ಸಿನಿಂದ ಅಳಿಸಿಹಾಕುವ ಹುನ್ನಾರ ಅಡಗಿದೆ. ಕ್ರಾಂತಿಕಾರಿ ಯೋಜನೆಯ ಶ್ರೇಯಸ್ಸನ್ನು ಪಡೆಯಲು ಪ್ರಧಾನಿ ನರೇಂದ್ರ ಮೋದಿ ಮುಂದಾಗಿದ್ದಾರೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಆರೋಪಿಸಿದ್ದಾರೆ.

'ಒಂದು ಕಾಲದಲ್ಲಿ ನರೇಗಾ ಯೋಜನೆಯು ವೈಫಲ್ಯದ ಪ್ರತೀಕ ಎಂದು ಕರೆದಿದ್ದ ಪ್ರಧಾನಿ, ಈಗ ಕ್ರಾಂತಿಕಾರಿ ಯೋಜನೆಯ ಕೀರ್ತಿಯನ್ನು ಪಡೆಯಲು ಅದರ ಹೆಸರನ್ನು ಬದಲಾಯಿಸುತ್ತಿದ್ದಾರೆ. ಇದು ನಮ್ಮ ಜನರ ಮನಸ್ಸಿನಿಂದ, ವಿಶೇಷವಾಗಿ 'ಭಾರತದ ಆತ್ಮ' ವಾಸಿಸುವ ಹಳ್ಳಿಗಳಿಂದ ಮಹಾತ್ಮ ಗಾಂಧಿ ಅವರ ಹೆಸರನ್ನು ಅಳಿಸಿಹಾಕುವ ಮತ್ತೊಂದು ಮಾರ್ಗವಾಗಿದೆ' ಎಂದಿದ್ದಾರೆ.

'ವಾಸ್ತವದಲ್ಲಿ, ಈ ಸರ್ಕಾರಕ್ಕೆ ಜನರ ಕಲ್ಯಾಣದ ಉದ್ದೇಶವಿಲ್ಲ. ಮೋದಿ ಅವರೇ ನೀವು ಬಯಸಿದಂತೆ ಮರು ನಾಮಕರಣ ಮಾಡಿ. ಆದರೆ, ಈ ಯೋಜನೆಯನ್ನು ಭಾರತದ ಪ್ರತಿಯೊಂದು ಹಳ್ಳಿಗೂ ತಂದವರು ಮನಮೋಹನ್ ಸಿಂಗ್, ಸೋನಿಯಾ ಗಾಂಧಿ ಎಂಬುದು ಜನರಿಗೆ ತಿಳಿದಿದೆ' ಎಂದಿದ್ದಾರೆ.

ಈ ಹುಡುಗನಿಗೆ ಪಾಠ ಕಲಿಸಬೇಕು: 'ಸುಪ್ರೀಂ'

ನವದೆಹಲಿ(ಪಿಟಿಐ): 2024ರಲ್ಲಿ ನಡೆದ ಬಿಎಂಡಬ್ಲ್ಯು ಹಿಟ್ ಆ್ಯಂಡ್ ರನ್ ಪ್ರಕರಣಕ್ಕೆ ಸಂಬಂಧಿಸಿದಂತೆ ಶಿವಸೇನಾ ಮಾಜಿ ನಾಯಕ ರಾಜೇಶ್ ಶಾ ಅವರ ಮಗ ಮಿಹಿರ್ ಶಾ ಸಲ್ಲಿಸಿದ್ದ ಜಾಮೀನು ಅರ್ಜಿ ಪರಿಗಣಿಸಲು ಸುಪ್ರೀಂಕೋರ್ಟ್ ನಿರಾಕರಿಸಿದೆ. 'ಈ ಹುಡುಗನಿಗೆ ಪಾಠ ಕಲಿಸಬೇಕು' ಎಂದು ತಿಳಿಸಿದೆ.

'ಆರೋಪಿಯು ಶ್ರೀಮಂತ ಕುಟುಂಬಕ್ಕೆ ಸೇರಿದ್ದಾನೆ. ಅವರ ತಂದೆ ರಾಜೇಶ್ ಶಾ ಅವರು ಉಪ ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಶಿವಸೇನಾ ಪಕ್ಷದ ಜೊತೆ ನಂಟು ಹೊಂದಿದ್ದಾರೆ. ಆರೋಪಿಯು ಬಿಎಂಡಬ್ಲ್ಯು ಕಾರು ಕೊಂಡೊಯ್ದು ಅಪಘಾತ ಮಾಡಿ ನಂತರ ಪರಾರಿಯಾಗಿದ್ದಾನೆ. ಸ್ವಲ್ಪ ದಿನ ಜೈಲಿನಲ್ಲಿರಲಿ, ಆ ಹುಡುಗನಿಗೆ ಪಾಠ ಕಲಿಸಬೇಕು' ಎಂದು ನ್ಯಾಯಮೂರ್ತಿ ದೀಪಾಂಕರ್ ದತ್ತಾ, ಎ.ಜಿ.ಮಸಿಹ್ ನೇತೃತ್ವದ ನ್ಯಾಯಪೀಠ ತಿಳಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಸಾಕ್ಷಿಗಳ ಹೇಳಿಕೆ ದಾಖಲಿಸಿಕೊಂಡ ಬಳಿಕ ಹೈಕೋರ್ಟ್ ಜಾಮೀನು ಪಡೆಯಲು ಅವಕಾಶ ನೀಡಿದೆ ಎಂದು ಹಿರಿಯ ವಕೀಲ ರೆಬೆಕಾ ಜಾನ್ ಅವರು ನ್ಯಾಯಾಲಯದ ಗಮನಕ್ಕೆ ತಂದರು. ನ್ಯಾಯಾಲಯದ ಅವಲೋಕನವನ್ನು ಗಮನಿಸಿದ ಅವರು, ಜಾಮೀನು ಅರ್ಜಿ ಹಿಂದಕ್ಕೆ ಪಡೆಯಲು ಅನುಮತಿ ಕೋರಿದರು. ಇದಕ್ಕೆ ನ್ಯಾಯಪೀಠವು ಅನುಮತಿ ನೀಡಿತು.



ಹುತಾತ್ಮರಿಗೆ ನಮನ

ಪಿಟಿಐ ಚಿತ್ರ

2001ರ ಸಂಸತ್ ದಾಳಿ ವೇಳೆ ಹುತಾತ್ಮರಾದ ಭದ್ರತಾ ಸಿಬ್ಬಂದಿಗೆ ಗೌರವ ಸಲ್ಲಿಸಲು ಸಂವಿಧಾನ ಸದನದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಹುತಾತ್ಮರ ಭಾವಚಿತ್ರಗಳಿಗೆ ಪುಷ್ಪನಮನ ಸಲ್ಲಿಸಿದರು. ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರೂ ವೇದಿಕೆಯಲ್ಲಿದ್ದರು

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಮತ ಕಳವು: ಗುತ್ತೇದಾರ್, ಮಗ ಭಾಗಿ- ಎಸ್‌ಐಟಿ

ಒಂದನೇ ಪುಟದಿಂದ...

ಕಲಬುರಗಿ ಜಿಲ್ಲೆಯ ಆಳಂದ ವಿಧಾನ ಸಭಾ ಕ್ಷೇತ್ರದಲ್ಲಿ 5,994 ಮತ ಗಳನ್ನು ಅಳಿಸಿ ಹಾಕಲು ಅಲ್ಲಿನ ಕಾಲ್ ಸೆಂಟರ್‌ವೊಂದನ್ನು ಸುಭಾಷ್ ಗುತ್ತೇದಾರ್, ಹರ್ಷಾನಂದ ಬಳಸಿ ಕೊಂಡಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ.

ಕೃತ್ಯಕ್ಕೆ ಸಂಬಂಧಪಟ್ಟಂತೆ ಸುಭಾಷ್ ಗುತ್ತೇದಾರ್ ಮನೆ, ಕಚೇರಿ ಹಾಗೂ ಇನ್ನಿತರ ಆರೋಪಿಗಳ ಮನೆಗಳ ಮೇಲೂ ದಾಳಿ ನಡೆಸಿದ್ದ ಎಸ್‌ಐಟಿ ಮಾಹಿತಿ ಕಲೆ ಹಾಕಿತ್ತು. ಸಾಕಷ್ಟು ದಾಖಲೆಗಳನ್ನು ಜಪ್ತಿ ಮಾಡಿಕೊಂಡಿತ್ತು.

2023ರಲ್ಲಿ ಮತ ಕಳವು ನಡೆದಿತ್ತು ಎಂದು ಆರೋಪಿಸಿ ಕಾಂಗ್ರೆಸ್ ಶಾಸಕ ಬಿ.ಆರ್.ಪಾಟೀಲ ಅವರು ಸ್ಥಳೀಯ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಆ ದೂರು ಆಧರಿಸಿ, ರಾಜ್ಯ ಸರ್ಕಾರವು ವಿಶೇಷ ತನಿಖಾ ದಳ ರಚಿಸಿತ್ತು.



ಸುಭಾಷ್ ಗುತ್ತೇದಾರ್



ಹರ್ಷಾನಂದ

ಪತ್ತೆಯಾಗಿದ್ದೇನು?: ಕಲಬುರಗಿಯಲ್ಲಿ ಅಕ್ರಮ್ ಪಾಷಾ ಅವರು ಕಾಲ್ ಸೆಂಟರ್ ನಡೆಸುತ್ತಿದ್ದರು. ಅವರಿಗೆ ಆಳಂದ ಕ್ಷೇತ್ರದಲ್ಲಿ ಮತದಾರರ ಪಟ್ಟಿಯಿಂದ ಕೈ ಬಿಡಬೇಕಾದ ಮತದಾರರ ವಿವರವನ್ನು ಸುಭಾಷ್ ಗುತ್ತೇದಾರ್ ಹಾಗೂ ಅವರ ಮಗ ಹರ್ಷಾನಂದ್ ನೀಡಿದ್ದರು. ಮತದಾರರ ಹೆಸರು ತೆಗೆದುಹಾಕುವ ಕೆಲಸವನ್ನು ಅಕ್ರಮ್ ಪಾಷಾ ನೇತೃತ್ವದ ತಂಡ ನಡೆಸಿತ್ತು. ಮಾಜಿ ಶಾಸಕರಿಂದ ಪ್ರತಿ ಅರ್ಜಿಗೆ ₹80 ಅನ್ನು ಅಕ್ರಮ್ ಪಾಷಾ ಪಡೆದುಕೊಂಡಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ.

ಕಾಲ್ ಸೆಂಟರ್ ತಂಡಕ್ಕೆ ₹4.6 ಲಕ್ಷ ಪಾವತಿ ಆಗಿದೆ. ಇದರಲ್ಲಿ ಒಟಿಪಿ ಪಡೆಯಲು, ತಲಾ ಒಂದು ಒಟಿಪಿಗೆ ₹10 ಅನ್ನು ಪಶ್ಚಿಮ ಬಂಗಾಳದ ಆರೋಪಿ ಆದ್ಯನ ಬ್ಯಾಂಕ್ ಖಾತೆಗೆ ಜಮೆ ಮಾಡಿರುವುದು ತನಿಖೆ ವೇಳೆ ದೃಢಪಟ್ಟಿದೆ.

ತನಿಖೆ ವೇಳೆ ಸಿಕ್ಕಿದ ಪುರಾವೆಗಳು

- ಎಸ್‌ಐಟಿ ದಾಳಿಗೂ ಮುನ್ನ ಆರೋಪಿಗಳು ಕೆಲವು ದಾಖಲೆಗಳನ್ನು ಸುಟ್ಟು ಹಾಕಿರುವುದು ಪತ್ತೆ
- ಮತ ಕಳವು ಯತ್ನ ನಡೆಸಿದ್ದಕ್ಕೆ ಅಕ್ರಮ್ ಪಾಷಾ ಮನೆಯಲ್ಲಿ ಪತ್ತೆಯಾದ ಲ್ಯಾಪ್‌ಟಾಪ್‌ನಲ್ಲಿ ಸಿಕ್ಕಿದ ಪುರಾವೆ
- ಅಕ್ರಮ ಪಾಷಾ, ಪಶ್ಚಿಮ ಬಂಗಾಳದ ನಾದಿಯಾ ಜಿಲ್ಲೆಯ ಬಾಪಿ ಆದ್ಯ ನಡುವೆ ನಡೆದಿದ್ದ ಹಣದ ವ್ಯವಹಾರ
- ಮೊಬೈಲ್ ಕರೆಗಳ ವಿವರ ಪರಿಶೀಲನೆ ನಡೆಸಿದಾಗ ಆರೋಪಿಗಳ ನಡುವೆ ಸಂಭಾಷಣೆ ನಡೆದಿರುವುದು ಪತ್ತೆ
- ದೋಷಾರೋಪಪಟ್ಟಿಯ ಜತೆಗೆ ವಿಧಿ ವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ವರದಿ ಸೇರಿಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಕೆ

'ವೋಟ್ ಚೋರಿ ಆರೋಪ ಕಟ್ಟುಕಥೆ'

ಕಲಬುರಗಿ: 'ವೋಟ್ ಚೋರಿ ಆರೋಪ ಕಟ್ಟುಕಥೆ. ಹಿಂದೆ ನನ್ನ ಮೇಲೆ 23 ಮರ್ಡರ್ ಕೇಸ್ ಕೂಡ ಹಾಕಿದ್ದರು. ನ್ಯಾಯಾಲಯಕ್ಕೆ ಹೋದ ಮೇಲೆ ನ್ಯಾಯ ಸಿಕ್ಕಿದೆ. ಈ ಪ್ರಕರಣದಲ್ಲೂ ನಾವು ಕೋರ್ಟ್‌ಗೆ ಹೋಗುತ್ತೇವೆ' ಎಂದು ಮಾಜಿ ಶಾಸಕ ಸುಭಾಷ್ ಗುತ್ತೇದಾರ್ ಶನಿವಾರ ಹೇಳಿದ್ದಾರೆ.

'ಮುಂದಿನ ಚುನಾವಣೆಯಲ್ಲಿ ಗೆಲ್ಲುವುದಿಲ್ಲ ಎಂದುಕೊಂಡು ನಾನು, ಮಗ (ಹರ್ಷಾನಂದ) ಸಹ ಸ್ಪರ್ಧಿಸದಂತೆ ಮಾಡುವುದು ಬಿ.ಆರ್. ಪಾಟೀಲರ ಉದ್ದೇಶವಾಗಿದೆ' ಎಂದು ಅವರು ಪ್ರತಿಕ್ರಿಯಿಸಿದರು.

'2023ರಲ್ಲಿ ಚುನಾವಣೆ ನಡೆದಿದೆ. ಎರಡೂವರೆ ವರ್ಷ ಮಾತನಾಡಿಲ್ಲ. ಈಗ ರಾಹುಲ್ ಗಾಂಧಿ ಹೇಳಿದ ಮೇಲೆ ನಮ್ಮಲ್ಲಿಯೂ ವೋಟ್ ಚೋರಿ ಆಗಿದೆ ಎಂದಿದ್ದಾರೆ' ಎಂದು ಹೇಳಿದರು.

'ಎಸ್‌ಐಟಿಯವರು ನನಗೆ, ಮಗನಿಗೆ ಕರೆಯಿಸಿ ಹೇಳಿಕೆ ಪಡೆದಿದ್ದಾರೆ. ರಾಜ್ಯದ ಕಾಂಗ್ರೆಸ್ ಸರ್ಕಾರದ ಮಾತು ಕೇಳಿ ನಮ್ಮ ವಿರುದ್ಧ ಚಾರ್ಜ್ ಶೀಟ್ ಹಾಕಿದ್ದಾರೆ' ಎಂದು ಆರೋಪಿಸಿದರು.

> ಆಳಂದ ಕ್ಷೇತ್ರದಲ್ಲಿ ಮತಗಳವು ಆರೋಪ ಕುರಿತು ಚುನಾವಣಾ ಆಯೋಗ ಸ್ಪಷ್ಟನೆ ನೀಡಿದೆ. ದೋಷಾರೋಪ ಪಟ್ಟಿಯಲ್ಲಿ ಏನಿದೆ ಎಂದು ತಿಳಿದಿಲ್ಲ.
> **ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

'ಮತಕಳವಿನ ಬಿಜೆಪಿ ಸಂಚು ದೃಢ'

ಬೆಂಗಳೂರು: ಆಳಂದ ವಿಧಾನ ಸಭಾ ಕ್ಷೇತ್ರದಲ್ಲಿ ನಡೆದ ಮತ ಕಳವು ಪ್ರಕರಣ ತನಿಖೆ ನಡೆಸಿರುವ ಸಿಐಡಿಯ ವಿಶೇಷ ತನಿಖಾ ತಂಡ ದೋಷಾರೋಪ ಪಟ್ಟಿ ಸಲ್ಲಿಸಿದ್ದು, ಬಿಜೆಪಿಯು ಮತ ಕಳವು ಮಾಡಿರುವುದು ದೃಢಪಟ್ಟಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಆಳಂದ ಕ್ಷೇತ್ರದ ಬಿಜೆಪಿ ಪರಾಜಿತ ಅಭ್ಯರ್ಥಿ ಸುಭಾಷ್ ಗುತ್ತೇದಾರ್ ಮತ್ತು ತಂಡ ಅಕ್ರಮ ನಡೆಸಿರುವುದು ಸತ್ಯ. ಈ ಕುರಿತು ಕಾಂಗ್ರೆಸ್ ಶಾಸಕರು ಬೆಳಗಾವಿ ಅಧಿವೇಶನದಲ್ಲೂ ದನಿ ಎತ್ತಲಿದ್ದಾರೆ. ಇದು ಕೇವಲ ಕರ್ನಾಟಕದ ದನಿಯಲ್ಲ. ಇಡೀ ಭಾರತದ ದನಿ. ಕರ್ನಾಟಕದಲ್ಲೂ ಚಿಲುಮೆ ಸಂಸ್ಥೆ ಮೂಲಕ ಸಾವಿರಾರು ಮತಗಟ್ಟೆ ಅಧಿಕಾರಿಗಳನ್ನು ನೇಮಕ ಮಾಡಿ ಅಕ್ರಮ ಎಸಗಲಾಗಿತ್ತು. ಬಿಜೆಪಿ ಸಂಚಿನ ನಡುವೆಯೂ ಜನರ ಕೃಪೆಯಿಂದ ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ' ಎಂದು ಹೇಳಿದರು.

'ಬಿಜೆಪಿ ಮತಕಳವಿನ ಕಾರ್ಖಾನೆ': 'ಬಿಜೆಪಿಯ ವ್ಯವಸ್ಥಿತ 'ಮತಕಳವಿನ ಕಾರ್ಖಾನೆ' ಸಾಕ್ಷಿ ಸಮೇತ ರುಜುವಾತಾಗಿದೆ. ಆಳಂದ ಕ್ಷೇತ್ರದ ಮತದಾರರ ಹೆಸರನ್ನು ತೆಗೆದುಹಾಕಲು ನಡೆಸಲಾಗಿದ್ದ ವ್ಯವಸ್ಥಿತ ಸಂಚು ಬಯಲಾಗಿದೆ' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಮುಂಬೈ ಧಾರಣೆ (ಶೇಂಗಾ)
13-12-2025

ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7600-7700
ದಪ್ಪ ಗುಜರಾತ್ (ಹೊಸ)	8900-9000
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆಗೆದ ಬಿಟ್ಟು)	1530 (1530)
ಒಂದು ವಾರದ ಡೆಲಿವರಿ	1525 (1525)
ಎರಡು ವಾರದ ಡೆಲಿವರಿ	1243 (1248)
ಸೂರ್ಯಕಾಂತಿ ಎಣ್ಣೆ ಕಚ್ಚಾ	1435 (1430)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,31,450 (1,32,500)
ಬೆಳ್ಳಿ ಕೆ.ಜಿಗೆ	1,88,500 (1,95,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹180
ಆರ್‌ಎಸ್‌ಎಸ್-5	₹175
ಗುಡ್ ಲಾಟ್	₹163

ಮುದ್ರೆ-ಮನೆ ಕಾಫಿ (50 ಕೆಜಿಗೆ)

ಎಪಿ	₹28,600
ಎಸಿ	₹15,680
ಆರ್‌ಪಿ	₹18,900
ಆರ್‌ಸಿ	₹10,325

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	
100 ಕ್ಕೆ	₹685
12 ಕ್ಕೆ	₹96
ಮೈಸೂರು:	
100 ಕ್ಕೆ	₹685

ರಷ್ಯಾದಿಂದ ಕಚ್ಚಾ ತೈಲ ಆಮದು ಏರಿಕೆ

ರಷ್ಯಾ ರಫ್ತು ಮಾಡಿದ ಕಚ್ಚಾ ತೈಲದಲ್ಲಿ ಭಾರತದ ಪಾಲು ಶೇಕಡ 38ರಷ್ಟು

ನವದೆಹಲಿ (ಪಿಟಿಐ): ಭಾರತವು ರಷ್ಯಾದಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುವ ಪ್ರಮಾಣವು ನವೆಂಬರ್‌ನಲ್ಲಿ ಶೇ 4ರಷ್ಟು ಹೆಚ್ಚಾಗಿದ್ದು ಐದು ತಿಂಗಳ ಗರಿಷ್ಠ ಮಟ್ಟವನ್ನು ತಲುಪಿದೆ. ಈ ಕಚ್ಚಾ ತೈಲದಿಂದ ಉತ್ಪಾದಿಸಿದ ಇಂಧನದಲ್ಲಿ ಬಹುಪಾಲನ್ನು ಆಸ್ಟ್ರೇಲಿಯಾಕ್ಕೆ ರಫ್ತು ಮಾಡಲಾಗಿದೆ.

ರಷ್ಯಾದಿಂದ ಕಚ್ಚಾ ತೈಲ ಖರೀದಿಸುವ ದೇಶಗಳ ಸಾಲಿನಲ್ಲಿ ಭಾರತವು ನವೆಂಬರ್‌ನಲ್ಲಿ ಎರಡನೇ ಸ್ಥಾನದಲ್ಲಿ ಇದೆ. ಚೀನಾ ಮೊದಲ ಸ್ಥಾನದಲ್ಲಿ ಮುಂದುವರಿದಿದೆ ಎಂದು ಯುರೋಪಿನ 'ಇಂಧನ ಮತ್ತು ಶುದ್ಧ ಗಾಳಿ ಕುರಿತ ಸಂಶೋಧನಾ ಕೇಂದ್ರ' (ಸಿಆರ್‌ಇಎ) ಹೇಳಿದೆ.

ಭಾರತವು ಅಕ್ಟೋಬರ್‌ನಲ್ಲಿ ರಷ್ಯಾದಿಂದ ಕಚ್ಚಾ ತೈಲ ಖರೀದಿಸಲು 2.5 ಬಿಲಿಯನ್ ಯೂರೊ (ಅಂದಾಜು ₹26 ಸಾವಿರ ಕೋಟಿ) ವೆಚ್ಚ ಮಾಡಿತ್ತು. ನವೆಂಬರ್‌ನಲ್ಲಿ 2.5 ಬಿಲಿಯನ್ ಯೂರೊ (ಅಂದಾಜು ₹27 ಸಾವಿರ ಕೋಟಿ) ವ್ಯಯಿಸಿದೆ.

ನವೆಂಬರ್‌ನಲ್ಲಿ ರಷ್ಯಾ ರಫ್ತು ಮಾಡಿದ ಒಟ್ಟು ಕಚ್ಚಾ ತೈಲದಲ್ಲಿ ಶೇ 47ರಷ್ಟನ್ನು ಚೀನಾ ಖರೀದಿಸಿದೆ. ಶೇ 38ರಷ್ಟನ್ನು ಭಾರತ ಖರೀದಿ ಮಾಡಿದೆ. ಟರ್ಕಿ (ಶೇ 6ರಷ್ಟು) ಮತ್ತು ಐರೋಪ್ಯ ಒಕ್ಕೂಟ (ಶೇ 6ರಷ್ಟು) ನಂತರದ ಸ್ಥಾನಗಳಲ್ಲಿವೆ.

'ಅಕ್ಟೋಬರ್ ಆಮದಿಗೆ ಹೋಲಿಸಿದರೆ ನವೆಂಬರ್‌ನಲ್ಲಿ ಭಾರತವು ರಷ್ಯಾದಿಂದ ಆಮದು ಮಾಡಿಕೊಂಡಿರುವ ಕಚ್ಚಾ ತೈಲದ ಪ್ರಮಾಣವು ಶೇ 4ರಷ್ಟು ಹೆಚ್ಚು' ಎಂದು ಸಿಆರ್‌ಇಎ ಹೇಳಿದೆ.

'ವಾಸ್ತವದಲ್ಲಿ, ಡಿಸೆಂಬರ್‌ನಲ್ಲಿ ಭಾರತದ ಆಮದು ಪ್ರಮಾಣವು ಇನ್ನಷ್ಟು ಹೆಚ್ಚಾಗಬಹುದು. ಏಕೆಂದರೆ ಅಮೆರಿಕವು ರಷ್ಯಾದ ಮೇಲೆ ವಿಧಿಸಿದ ನಿರ್ಬಂಧಗಳು ಜಾರಿಗೆ ಬರುವುದಕ್ಕಿಂತ ಮೊದಲು ಹಡಗುಗಳಿಗೆ ಹೇರಲಾದ ಸರಕುಗಳು ಡಿಸೆಂಬರ್‌ನಲ್ಲಿ ಭಾರತಕ್ಕೆ ಬರುತ್ತವೆ' ಎಂದು ಅದು ಹೇಳಿದೆ.

ಅಮೆರಿಕವು ರಷ್ಯಾದ ಲುಕಾಯಿಲ್ ಮತ್ತು ರೋಸ್ನೆಫ್ಟ್ ಕಂಪನಿಗಳ ಮೇಲೆ ಅಕ್ಟೋಬರ್ 22ರಂದು ನಿರ್ಬಂಧಗಳನ್ನು ವಿಧಿಸಿದೆ. ಇದರ ಪರಿಣಾಮವಾಗಿ ರಿಲಯನ್ಸ್ ಇಂಡಸ್ಟ್ರೀಸ್, ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್, ಎಚ್‌ಪಿಸಿಎಲ್-ಮಿತ್ತಲ್ ಎನರ್ಜಿ, ಎಂಆರ್‌ಪಿಎಲ್ ಕಂಪನಿಗಳು ರಷ್ಯಾದಿಂದ ಆಮದನ್ನು ಸದ್ಯಕ್ಕೆ ನಿಲ್ಲಿಸಿವೆ. ಆದರೆ 'ಇಂಡಿಯನ್ ಆಯಿಲ್ ಕಂಪನಿಯು ನಿರ್ಬಂಧಕ್ಕೆ ಗುರಿಯಾಗದ ರಷ್ಯಾ ಕಂಪನಿಗಳಿಂದ ಆಮದು ಮುಂದುವರಿಸಿದೆ.

'ಖಾಸಗಿ ಕಂಪನಿಗಳಿಂದ ಆಗುವ ಆಮದು ಪ್ರಮಾಣ ತುಸು ತಗ್ಗಿದೆ. ಸರ್ಕಾರಿ ಕಂಪನಿಗಳಿಂದ ಆಗುವ ಆಮದು ಪ್ರಮಾಣ ಶೇ 22ರಷ್ಟು ಹೆಚ್ಚಾಗಿದೆ' ಎಂದು ಸಿಆರ್‌ಇಎ ಹೇಳಿದೆ.

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1520 (1520)
ಸೋಯಾ (ರಿಫೈನ್ಡ್)	₹1275 (1280)
ಸೂರ್ಯಕಾಂತಿ (ರಿಫೈನ್ಡ್)	₹1495 (1490)
ಪಾಮೋಲಿನ್	₹1245 (1250)

ಕಾಂಬೋಡಿಯಾ, ಥಾಯ್ಲೆಂಡ್ ಸಂಘರ್ಷ

ಸುರಿನ್/ಬ್ಯಾಂಕಾಕ್ (ಎಎಫ್‌ಪಿ/ಎಪಿ): ಥಾಯ್ಲೆಂಡ್ ಮತ್ತು ಕಾಂಬೋಡಿಯಾ ನಡುವಿನ ಸಂಘರ್ಷ ಮತ್ತೆ ತೀವ್ರಗೊಂಡಿದೆ. 'ಕಾಂಬೋಡಿಯಾ ಶನಿವಾರ ನಡೆಸಿದ ದಾಳಿಯಲ್ಲಿ ನಮ್ಮ ನಾಲ್ವರು ಸೈನಿಕರು ಹುತಾತ್ಮರಾಗಿದ್ದಾರೆ' ಎಂದು ಥಾಯ್ಲೆಂಡ್ ಹೇಳಿದೆ.

ಇದೇ ಜುಲೈನಲ್ಲಿ ಈ ಎರಡೂ ದೇಶಗಳ ಮಧ್ಯೆ ಸಂಘರ್ಷ ನಡೆದಿತ್ತು. ಅಮೆರಿಕ ಅಧ್ಯಕ್ಷ ಟ್ರಂಪ್ ಮಧ್ಯಸ್ಥಿಕೆಯಲ್ಲಿ ಕದನ ವಿರಾಮ ಒಪ್ಪಂದ ಏರ್ಪಟ್ಟಿತ್ತು.

ಜಾರಿ ನಿರ್ದೇಶನಾಲಯದ ಅಧಿಕಾರ: 'ಸುಪ್ರೀಂ' ಕಳವಳ

ಪ್ರಜಾವಾಣಿ ವಾರ್ತೆ

ನವದೆಹಲಿ: ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ನ್ಯಾಯಾಂಗ ಪರಿಶೀಲನೆಯಿಲ್ಲದೆ ಆಸ್ತಿ ವಶಪಡಿಸಿಕೊಳ್ಳುವ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರ ಪ್ರಶ್ನಿಸಿ ಚಿತ್ರದುರ್ಗದ ಕಾಂಗ್ರೆಸ್ ಶಾಸಕ ಕೆ.ಸಿ. ವೀರೇಂದ್ರ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯ ಕುರಿತು ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಶುಕ್ರವಾರ ಸೂಚಿಸಿದೆ.



ಕೆ.ಸಿ.ವೀರೇಂದ್ರ

ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಎ.ಎಸ್. ಚಂದೂರ್‌ಕರ್ ಅವರ ಪೀಠವು ನೋಟಿಸ್ ಜಾರಿಗೊಳಿಸಿದೆ. ಪಿಎಂಎಲ್‌ಎಯ ತೀರ್ಪಿನ ಸಾಂವಿಧಾನಿಕತೆ ಪ್ರಶ್ನಿಸಿ ಸಲ್ಲಿಕೆಯಾಗಿರುವ ಇತರ ಅರ್ಜಿಗಳ ಜತೆಗೆ ಈ ಅರ್ಜಿಯನ್ನು ಒಟ್ಟಿಗೆ ವಿಚಾರಣೆ ನಡೆಸಲಾಗುವುದು ಎಂದೂ ತಿಳಿಸಿದೆ.

ನ್ಯಾಯಮೂರ್ತಿ ನರಸಿಂಹ, 'ಕಾಯ್ದೆಯಲ್ಲಿ (ಪಿಎಂಎಲ್‌ಎ) ದೋಷವಿದೆ ಎಂಬುದು ಕಂಡುಬಂದಿದೆ. ನ್ಯಾಯಾಂಗೇತರ ಸದಸ್ಯರು ಆಸ್ತಿ ಹಕ್ಕುಗಳು, ಸಾಂವಿಧಾನಿಕ ರಕ್ಷಣೆಗಳನ್ನು ಒಳಗೊಂಡ ಸಂಕೀರ್ಣ ವಿಷಯಗಳ ಬಗ್ಗೆ ಹೇಗೆ ನಿರ್ಣಯ ತೆಗೆದುಕೊಳ್ಳಲು ಸಾಧ್ಯ' ಎಂದು ಪ್ರಶ್ನಿಸಿದರು.

ಪಿಎಂಎಲ್‌ಎಯ ಸೆಕ್ಷನ್ 20 ಮತ್ತು 21ರ ಸಿಂಧುತ್ವ ಪ್ರಶ್ನಿಸಿ ಅರ್ಜಿದಾರರು ಮಾಡಿದ ಎಲ್ಲ ಅರ್ಜಿಗಳ ಕುರಿತು ಪೀಠವು ನೋಟಿಸ್ ಜಾರಿ ಮಾಡಿತು. ಪಿಎಂಎಲ್‌ಎ ಸೆಕ್ಷನ್ 6ರ ಸಿಂಧುತ್ವದ ಕುರಿತು ಬಾಕಿ ಇರುವ ಪ್ರಕರಣಗಳ ಜತೆಗೆ ಈ ಅರ್ಜಿ ವಿಚಾರಣೆ ನಡೆಸಲು ಪೀಠ ನಿರ್ದೇಶಿಸಿದೆ.

ವೀರೇಂದ್ರ ಪರ ವಾದ ಮಂಡಿಸಿದ ಹಿರಿಯ ವಕೀಲರಾದ ಮುಕುಲ್ ರೋಹಟಗಿ ಹಾಗೂ ರಂಜಿತ್ ಕುಮಾರ್, 'ಈ ಕಾನೂನಿನ ನಿಯಮಗಳು ಹೊಣೆಗಾರಿಕೆಯಿಲ್ಲದೆ ವರ್ತಿಸಲು ಇ.ಡಿ.ಗೆ ಅವಕಾಶ ನೀಡುತ್ತವೆ. ಇದರಿಂದ ವ್ಯಾಪಕ ಅಧಿಕಾರ ದುರುಪಯೋಗ ಆಗುತ್ತಿದೆ' ಎಂದು ದೂರಿದರು.

'ಪಿಎಂಎಲ್‌ಎಯ ಸೆಕ್ಷನ್ 20 ಮತ್ತು 21 ಅಡಿಯಲ್ಲಿ ಇ.ಡಿಗೆ 180 ದಿನ ಯಾವುದೇ ಕಾರಣ ನೀಡದೆ ಸ್ವತ್ತು ಮತ್ತು ದಾಖಲೆಗಳನ್ನು ಜಪ್ತಿಯಲ್ಲಿರಿಸಿಕೊಳ್ಳಲು ಅಧಿಕಾರ ಇದೆ. ಪಿಎಂಎಲ್‌ಎನ ತೀರ್ಪು ನೀಡುವ ಪ್ರಾಧಿಕಾರದಲ್ಲಿ ಸದ್ಯ ಏಕಸದಸ್ಯರಿದ್ದಾರೆ ಮತ್ತು ಅವರಿಗೆ ನ್ಯಾಯಾಂಗದ ಹಿನ್ನೆಲೆಯಿಲ್ಲ. ಇಡೀ ದೇಶಕ್ಕೆ ಒಬ್ಬ ವೆಚ್ಚ ಪರಿಶೋಧಕರು ತೀರ್ಪು ನೀಡುವ ಪ್ರಾಧಿಕಾರವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇ.ಡಿ. ಅಧಿಕಾರಿಗಳು ಇದುವರೆಗೆ ಮಾಡಿರುವ ಜಪ್ತಿಗಳ ಪೈಕಿ ಶೇ 99 ಅವರೇ ದೃಢೀಕರಿಸಿದ್ದಾರೆ' ಎಂದು ಪೀಠದ ಗಮನಕ್ಕೆ ತಂದರು. ಈ ಅಂಕಿ ಅಂಶಗಳನ್ನು ಇ.ಡಿ.ವೆಬ್‌ಸೈಟ್‌ನಿಂದಲೇ ಪಡೆಯಲಾಗಿದೆ. ಪ್ರಾಧಿಕಾರವು ವಿವೇಚನೆ ಬಳಸದೆ ಕೇವಲ ಅನುಮೋದಿಸುವ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ ಎಂಬುದಕ್ಕೆ ಇದು ಸಾಕ್ಷಿ ಎಂದರು.

2016ರಲ್ಲಿ ವೀರೇಂದ್ರ (ಪಪ್ಪಿ) ಅವರ ಚಳ್ಳಕೆರೆ ಮನೆಯಲ್ಲಿ ಶೋಧ ನಡೆಸಿದ್ದ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು, ಅಪಾರ ಪ್ರಮಾಣದ ನಗದು ಮತ್ತು ಚಿನ್ನಾಭರಣ ಪತ್ತೆ ಮಾಡಿದ್ದರು. ಘೋಷಿತ ಆದಾಯಕ್ಕಿಂತ ಹೆಚ್ಚು ಆಸ್ತಿ ಗಳಿಸಿದ ಆರೋಪದಲ್ಲಿ ಪ್ರಕರಣ ದಾಖಲಾಗಿತ್ತು. ಇದೇ ಪ್ರಕರಣ ಮತ್ತು ಪೂರಕ ದೂರುಗಳ ಆಧಾರದಲ್ಲಿ ಇ.ಡಿ. ವೀರೇಂದ್ರ ಅವರಿಗೆ ಸೇರಿದ ಮನೆ ಮತ್ತು ದೇಶದ ವಿವಿಧೆಡೆ ಇರುವ ಕ್ಯಾಸಿನೊಗಳಲ್ಲಿ ಈ ವರ್ಷ ಶೋಧ ನಡೆಸಿತ್ತು. ಆನ್‌ಲೈನ್ ಮತ್ತು ಆಫ್‌ಲೈನ್‌ನಲ್ಲಿ ಬೆಟ್ಟಿಂಗ್ ನಡೆಸಿದ ಆರೋಪದಲ್ಲಿ ವೀರೇಂದ್ರ ಅವರನ್ನು ಬಂಧಿಸಿತ್ತು.

ಟ್ರಂಪ್ ಆಡಳಿತದ ವಿರುದ್ಧ ಮೊಕದ್ದಮೆ

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): ಎಚ್-1ಬಿ ವೀಸಾಕ್ಕೆ ಹೊಸದಾಗಿ ಸಲ್ಲಿಸುವ ಅರ್ಜಿಗಳಿಗೆ ಶುಲ್ಕವನ್ನು 1 ಲಕ್ಷ ಡಾಲರ್‌ಗೆ (ಸುಮಾರು ₹90 ಲಕ್ಷ) ಹೆಚ್ಚಿಸಿರುವ ಟ್ರಂಪ್ ಆಡಳಿತದ ವಿರುದ್ಧ ಅಮೆರಿಕದ 19 ರಾಜ್ಯಗಳು ಮೊಕದ್ದಮೆ ದಾಖಲಿಸಿವೆ.

'ಎಚ್-1ಬಿ ವೀಸಾ ಶುಲ್ಕ ಹೆಚ್ಚಳವು ಕಾನೂನುಬಾಹಿರ ನಿರ್ಧಾರ. ದೇಶದ ಆರೋಗ್ಯ, ಶಿಕ್ಷಣ ಮತ್ತು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಇದರಿಂದ ಕಾರ್ಮಿಕರ ಕೊರತೆ ಸಮಸ್ಯೆ ಇನ್ನಷ್ಟು ಹೆಚ್ಚಲಿದೆ' ಎಂದು ರಾಜ್ಯಗಳು ಎಚ್ಚರಿಕೆ ನೀಡಿವೆ.

ನ್ಯೂಯಾರ್ಕ್‌ನ ಅಟಾರ್ನಿ ಜನರಲ್ ಲೆಟಿಟಿಯಾ ಜೇಮ್ಸ್ ಮತ್ತು ಇತರೆ 18 ಮಂದಿ ಅಟಾರ್ನಿ ಜನರಲ್‌ಗಳು ಶುಕ್ರವಾರ ಅಮೆರಿಕದ ಮೆಸ್ಸಾಚುಸೆಟ್ಸ್‌ನ ಜಿಲ್ಲಾ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸಿದ್ದಾರೆ. ಕಾನೂನು ಪ್ರಕ್ರಿಯೆ ಅನುಸರಿಸದೆ ಭಾರಿ ಪ್ರಮಾಣದಲ್ಲಿ ಶುಲ್ಕ ಹೆಚ್ಚಿಸಿರುವುದನ್ನು ಪ್ರಶ್ನಿಸಿದ್ದಾರೆ.

ಕೌಶಲ ಹೊಂದಿರುವ, ನುರಿತ ವಿದೇಶಿ ವೃತ್ತಿಪರರಿಗೆ ತಾತ್ಕಾಲಿಕವಾಗಿ ಅಮೆರಿಕದಲ್ಲಿ ಕೆಲಸ ಮಾಡಲು ಎಚ್-1ಬಿ ವೀಸಾ ಕಾರ್ಯಕ್ರಮವು ಅವಕಾಶ ಕಲ್ಪಿಸುತ್ತದೆ. ಎಚ್-1ಬಿ ವೀಸಾದ ಸೌಲಭ್ಯ ಪಡೆದಿರುವವರಲ್ಲಿ ಹೆಚ್ಚಿನವರು ಭಾರತೀಯರೇ ಇದ್ದಾರೆ.

ಎಚ್-1ಬಿ ವೀಸಾ ಕಾರ್ಮಿಕರನ್ನೇ ಅವಲಂಬಿಸಿರುವ ಆರೋಗ್ಯ, ಶಿಕ್ಷಣ ಕ್ಷೇತ್ರದಲ್ಲಿ ವೈದ್ಯರು, ದಾದಿಯರು, ಶಿಕ್ಷಕರ ಕೊರತೆ ಉಂಟಾಗಲಿದೆ. ನ್ಯೂಯಾರ್ಕ್‌ನ ಜನರು ಗುಣಮಟ್ಟದ ಆರೋಗ್ಯ ಸೇವೆ ಮತ್ತು ಮಕ್ಕಳ ಶಿಕ್ಷಣಕ್ಕಾಗಿ ಪರದಾಡಬೇಕಾಗುತ್ತದೆ. ಟ್ರಂಪ್ ಆಡಳಿತದ ನಿರ್ಧಾರವು ಅಮೆರಿಕದ ಆರ್ಥಿಕತೆಗೆ ಪೆಟ್ಟು ನೀಡುತ್ತದೆ. ವಲಸಿಗ ಸಮುದಾಯವನ್ನು ಗುರಿಯಾಗಿಸಿಕೊಂಡು ನಡೆಸುತ್ತಿರುವ ಈ ಕ್ರಮವನ್ನು ನಾವು ಖಂಡಿಸುತ್ತೇವೆ' ಎಂದು ಲೆಟಿಟಿಯಾ ಜೇಮ್ಸ್ ಹೇಳಿದ್ದಾರೆ. ಎಚ್-1ಬಿವೀಸಾ ಶುಲ್ಕ ಹೆಚ್ಚಿಸಿ, ಟ್ರಂಪ್ ಅವರು ಸೆಪ್ಟೆಂಬರ್ 19ರಂದು ಆದೇಶ ಹೊರಡಿಸಿದ್ದರು.

'ಹೆಚ್ಚುವರಿ ಸುಂಕ ರದ್ದುಗೊಳಿಸಿ'

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತದ ಮೇಲೆ ಹೇರಿರುವ ಹೆಚ್ಚುವರಿ ಸುಂಕವನ್ನು ರದ್ದು ಮಾಡಬೇಕು ಎಂದು ಭಾರತ ಮೂಲದ ರಾಜಾ ಕೃಷ್ಣಮೂರ್ತಿ ಸೇರಿ ಮೂವರು ಪ್ರಭಾವಿ ಸಂಸದರು ಶುಕ್ರವಾರ ಸಂಸತ್ತಿನಲ್ಲಿ ನಿರ್ಣಯ ಮಂಡಿಸಿದ್ದಾರೆ.

ರಾಷ್ಟ್ರೀಯ ತುರ್ತು ಸಂದರ್ಭಗಳಲ್ಲಿ ಇತರೆ ದೇಶಗಳ ಮೇಲೆ ಶೇ 50ರಷ್ಟು ಸುಂಕ ಹೇರುವ ವಿಶೇಷ ಅಧಿಕಾರವನ್ನು ಬಳಸಿಕೊಂಡು ಟ್ರಂಪ್ ಅವರು ಭಾರತವೂ ಸೇರಿದಂತೆ ಹಲವು ದೇಶಗಳ ಮೇಲೆ ಸುಂಕ ಹೇರಿದ್ದಾರೆ. ಈ ಅಧಿಕಾರವನ್ನು ಕೊನೆಗೊಳಿಸಲು ನಿರ್ಣಯ ಮಂಡಿಸಲಾಗಿದೆ.

'ಈ ರೀತಿಯ ಸುಂಕ ಹೇರಿಕೆಯಿಂದ ಭಾರತದಂಥ ಮುಖ್ಯ ಪಾಲುದಾರ ದೇಶದೊಂದಿಗಿನ ಸಂಬಂಧವು ಹಳಸಲಿದೆ ಮತ್ತು ಇದು ಅಮೆರಿಕಕ್ಕೆ ಮಾರಕವಾಗಲಿದೆ' ಎಂದು ಕೃಷ್ಣಮೂರ್ತಿ ಅಭಿಪ್ರಾಯಪಟ್ಟಿದ್ದಾರೆ.

'ಮೆಕ್ಸಿಕೊ ಜೊತೆ ಮಾತುಕತೆ'

ನವದೆಹಲಿ (ಪಿಟಿಐ): ಮೆಕ್ಸಿಕೊ ದೇಶವು ಭಾರತದ ಹಲವು ಸರಕುಗಳ ಮೇಲೆ ಏಕಪಕ್ಷೀಯವಾಗಿ ತೆರಿಗೆ ಹೆಚ್ಚು ಮಾಡಿರುವ ಕ್ರಮದ ವಿಚಾರವಾಗಿ ಆ ದೇಶದ ಜೊತೆ ಮಾತುಕತೆ ನಡೆದಿದೆ ಎಂದು ಕೇಂದ್ರ ಸರ್ಕಾರ ಶನಿವಾರ ತಿಳಿಸಿದೆ.

ಎರಡೂ ದೇಶಗಳಿಗೆ ಅನುಕೂಲ ಆಗುವಂತೆ ಪರಿಹಾರ ಕಂಡುಕೊಳ್ಳಲು ಮಾತುಕತೆ ನಡೆದಿದೆ. ದೇಶದ ರಫ್ತುದಾರರ ಹಿತವನ್ನು ಕಾಯಲು ಸೂಕ್ತವಾದ ಕ್ರಮಗಳನ್ನು ಕೈಗೊಳ್ಳುವ ಹಕ್ಕು ಭಾರತಕ್ಕೆ ಇದ್ದೇ ಇದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೆಕ್ಸಿಕೊ ಜೊತೆ ಮುಕ್ತ ವ್ಯಾಪಾರ ಒಪ್ಪಂದ ಇಲ್ಲದ ದೇಶಗಳಾದ ಭಾರತ, ಚೀನಾ, ದಕ್ಷಿಣ ಕೊರಿಯಾ, ಥಾಯ್ಲೆಂಡ್ ಮತ್ತು ಇಂಡೊನೇಷ್ಯಾದ ಸರಕುಗಳ ಮೇಲೆ ಹೆಚ್ಚಿನ ಸುಂಕ ವಿಧಿಸಲಾಗಿದೆ.

'ಭಾರತವು ಮೆಕ್ಸಿಕೊ ಜೊತೆಗಿನ ಪಾಲುದಾರಿಕೆಗೆ ಗೌರವ ನೀಡುತ್ತದೆ, ಎರಡೂ ದೇಶಗಳ ಉದ್ದಿಮೆಗಳು ಹಾಗೂ ಗ್ರಾಹಕರಿಗೆ ಪ್ರಯೋಜನಕಾರಿ ಆಗುವಂತಹ ಸಮತೋಲನದ ವ್ಯಾಪಾರ ಸಂಬಂಧವನ್ನು ಹೊಂದಲು ಜೊತೆಯಾಗಿ ಕೆಲಸ ಮಾಡಲು ಸಿದ್ಧವಿದೆ' ಎಂದರು.

ರೆಡ್ ನೈಟ್ ಪ್ರೀಮಿಯಂ ವಿಸ್ಕಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖೋಡೆ ಇಂಡಿಯಾ ಲಿಮಿಟೆಡ್‌ನಿಂದ 'ರೆಡ್ ನೈಟ್ ಪ್ರೀಮಿಯಂ ಬ್ಲೆಂಡೆಡ್ ವಿಸ್ಕಿ' ಅನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಾಗಿದೆ.

ಖೋಡೆ ಗ್ರೂಪ್‌ನ ನಿರ್ದೇಶಕ ಆದಿತ್ಯ ಖೋಡೆ ಮತ್ತು ಕಂಪನಿಯ ಸಿಒಒ ಸತ್‌ಪಾಲ್ ಚೌಧರಿ ಅವರು 'ರೆಡ್ ನೈಟ್ ಪ್ರೀಮಿಯಂ ಬ್ಲೆಂಡೆಡ್ ವಿಸ್ಕಿ' ಬಾಟಲ್ ಅನ್ನು ಶನಿವಾರ ಅನಾವರಣ ಮಾಡಿದರು.

ಈ ವೇಳೆ ಮಾತನಾಡಿದ ಆದಿತ್ಯ ಖೋಡೆ, 'ಖೋಡೆ ಕಂಪನಿಯು 1950ರಲ್ಲಿ ರಮ್ ಮತ್ತು ಬ್ರ್ಯಾಂಡಿ ತಯಾರಿಸಲು ಆರಂಭಿಸಿತು. 1967ರಲ್ಲಿ ರೆಡ್ ನೈಟ್ ಮಾಲ್ಟ್ ವಿಸ್ಕಿ ಬಿಡುಗಡೆ ಮಾಡಲಾಗಿತ್ತು. ಈಗ ಹೊಸ ತಲೆಮಾರಿನವರನ್ನು ಆಕರ್ಷಿಸಲು ಸುವಾಸನೆ ಭರಿತ, ವಿಭಿನ್ನ ರುಚಿ ಹೊಂದಿರುವ ಹಾಗೂ ಗುಣಮಟ್ಟದ ಬ್ಲೆಂಡೆಡ್ ವಿಸ್ಕಿಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಾಗಿದೆ. ಇದನ್ನು ಹೆಚ್ಚಾಗಿ ಸೇನಾ ಕ್ಯಾಂಟೀನ್ ಗಳಲ್ಲೂ ಬಳಸಲಾಗುತ್ತದೆ' ಎಂದು ಹೇಳಿದರು.

'ಈಗಾಗಲೇ ಮಾರುಕಟ್ಟೆಯಲ್ಲಿ ಕಂಪನಿಯ ಹಲವು ಬ್ರ್ಯಾಂಡ್‌ನ ವಿಸ್ಕಿಗಳು ಲಭ್ಯ ಇವೆ. ಇವುಗಳ ಸಾಲಿಗೆ ರೆಡ್ ನೈಟ್ ಸೇರ್ಪಡೆಯಾಗಲಿದೆ. ಗುಣಮಟ್ಟಕ್ಕೆ ಆದ್ಯತೆ ನೀಡಲಾಗುತ್ತದೆ. ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು, ಕಂಪನಿಯು ಭಾರತ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಸ್ಥಿರ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ತನ್ನ ಉತ್ಪಾದನಾ ಸಾಮರ್ಥ್ಯವನ್ನು ವಿಸ್ತರಿಸಿದೆ. ಕಂಪನಿಯ ವಿಸ್ಕಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ಇದೆ. ಫೆಬ್ರುವರಿಯಲ್ಲಿ ಸಿಂಗಲ್ ಮಾಲ್ಟ್ ವಿಸ್ಕಿಯನ್ನು ಬಿಡುಗಡೆ ಮಾಡಲಾಗುವುದು' ಎಂದು ಮಾಹಿತಿ ನೀಡಿದರು.

ಮದ್ಯ ಮಾರಾಟ ಮಳಿಗೆಗಳಲ್ಲಿ ವಿಸ್ಕಿಯು 750 ಎಂ.ಎಲ್ ಬಾಟಲ್‌ಗೆ ₹1,425 ಹಾಗೂ 180 ಎಂ.ಎಲ್‌ನ ಬಾಟಲ್‌ಗೆ ₹345ಕ್ಕೆ ಲಭ್ಯವಿದೆ ಎಂದರು.

ದುರ್ಗಮ ಹಾದಿಯ ಓಟದ ಸಂಭ್ರಮ

ಅಲ್ಟ್ರಾ ಟ್ರೇಲ್ ರನ್ ಎಂಬ ಕಾಡಂಚಿನ, ಕಾಫಿ ತೋಟಗಳ ಕಾಲುದಾರಿಯಂಥ ದುರ್ಗಮ ಹಾದಿಯಲ್ಲಿನ ಓಟದ ನೋಟ. -11





ಬಹುರೂಪಿ ಅಡಿಕೆ!

ಮಹಿಳೆಯೊಬ್ಬರು ಅಡಿಕೆಯನ್ನು ಒಣಗಿಸುತ್ತಿರುವುದು

ಚಿತ್ರ: ಸತೀಶ್ ಬಡಿಗೇರ್



ಅಡಿಕೆ ಹಾಳೆಯಿಂದ ತಯಾರಿಸಿದ ಸಸ್ಯಜನ್ಯ ಚರ್ಮದ ಹ್ಯಾಂಡ್‌ಬ್ಯಾಗ್

ಅಡಿಕೆಮರದ ಸೋಗೆಯಿಂದ ಹಿಡಿದು ಹಾಳೆ, ಅಡಿಕೆಯ ರಸ/ಚೊಗರು, ಸಿಪ್ಪೆ, ಮರದ ಕಾಂಡ ಸೇರಿದಂತೆ ಅದರ ಭಾಗಗಳನ್ನು ಯಾವೆಲ್ಲಾ ರೀತಿಯಲ್ಲಿ ಉಪಯೋಗ ಮಾಡಬಹುದು ಎಂಬುದನ್ನು ಕಂಡುಕೊಳ್ಳುವುದರಲ್ಲಿ ಸಂಶೋಧಕರು, ಉದ್ಯಮಿಗಳು ಮತ್ತು ಕರಕುಶಲಿಗಳು ತೊಡಗಿದ್ದಾರೆ.

• ಧನ್ಯತಾ ಎಸ್.ಪೂವಯ್ಯ

ಜಗತ್ತಿನಲ್ಲೇ ಅತಿ ದೊಡ್ಡ ಅಡಿಕೆ ಉತ್ಪಾದಕ ಮತ್ತು ಬಳಕೆಯ ದೇಶ ಭಾರತ. ಅಷ್ಟೇ ಅಲ್ಲ ದೊಡ್ಡ ಆಮದುದಾರ ದೇಶವೂ ಹೌದು. ದಕ್ಷಿಣ ಮತ್ತು ಈಶಾನ್ಯ ರಾಜ್ಯಗಳಲ್ಲಿ ಅಡಿಕೆಯನ್ನು ಹೆಚ್ಚು ಬೆಳೆಯಲಾಗುತ್ತದೆ. ರಾಜ್ಯಗಳ ಪೈಕಿ ಅಡಿಕೆ ಬೆಳೆಯಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ಜಗತ್ತಿನ ಅಡಿಕೆ ಉತ್ಪಾದನೆಯಲ್ಲಿ ಭಾರತದ ಪಾಲು ಶೇಕಡ 60 ರಷ್ಟಿದ್ದರೆ, ಇದರಲ್ಲಿ ಕರ್ನಾಟಕದ ಕೊಡುಗೆಯೇ ಶೇಕಡ 70ರಷ್ಟು.

ವಿಶಿಷ್ಟ ಸ್ವಾದ, ಸುವಾಸನೆ, ಆಕಾರ, ಬಣ್ಣದಿಂದ ಪ್ರಸಿದ್ಧಿಗೆ ಬಂದಿರುವ ಉತ್ತರ ಕನ್ನಡ ಜಿಲ್ಲೆಯ ‘ಶಿರಸಿ ಸುಪಾರಿ’ಯು ಭೌಗೋಳಿಕ ಗುರುತಿನ (ಜಿಐ) ಮಾನ್ಯತೆ ಪಡೆದಿರುವ ದೇಶದ ಏಕೈಕ ಅಡಿಕೆ ತಳಿ ಎಂಬ ಹೆಗ್ಗಳಿಕೆಯೂ ಇದೆ.

‘ಬಿಸಿ ಮತ್ತು ತೇವಾಂಶದಿಂದ ಕೂಡಿದ ವಾತಾವರಣ ಮತ್ತು ಸಾಕಷ್ಟು ಮಳೆಯಾಗುವ ರಾಜ್ಯದ ಮಲೆನಾಡು ಭಾಗದಲ್ಲಿ ಶತಮಾನಗಳಿಂದ ಅಡಿಕೆ ಕೃಷಿ ಇದೆ. ಈಗ ನೀರಾವರಿ ಸೌಲಭ್ಯ ವಿಸ್ತರಿಸಿರುವುದರಿಂದ ರಾಜ್ಯದ ಇತರ ಪ್ರದೇಶಗಳಲ್ಲೂ ಅಡಿಕೆ ಬೆಳೆಯಲಾಗುತ್ತಿದೆ’ ಎಂಬುದು ಶಿವಮೊಗ್ಗದ ಅತಿರಥ ಬಿಳುವೆ ಅವರ ಮಾತು. ಇವರು ತಮ್ಮ ಕುಟುಂಬದಲ್ಲಿ ನಾಲ್ಕನೇ ತಲೆಮಾರಿನ ಅಡಿಕೆ ಬೆಳೆಗಾರ.

ಹಿಂದಿನಿಂದಲೂ ಅಡಿಕೆ ಕೃಷಿ ಎಂದರೆ ವೀಳ್ಯದೆಲೆಯೊಂದಿಗೆ ಸೇವಿಸಲು ಬೇಕಾದ ಅಡಿಕೆಯನ್ನು ಬೆಳೆಯುವುದು ಎಂದಷ್ಟೇ ಪರಿಗಣಿಸಲಾಗುತ್ತಿತ್ತು. ಧಾರ್ಮಿಕ ವಿಧಿವಿಧಾನಗಳಲ್ಲಿ, ಸಾಂಸ್ಕೃತಿಕ ಆಚರಣೆಗಳ ಭಾಗವಾಗಿ ವೀಳ್ಯದೆಲೆ ಅಡಿಕೆಯ ಬಳಕೆ ಮೊದಲಿನಿಂದಲೂ ಇದೆ. ವೀಳ್ಯದೆಲೆಯೊಂದಿಗೆ ಅಡಿಕೆ ಜಗಿಯುವುದು ಸಾಮಾಜಿಕ ವ್ಯವಸ್ಥೆಯಲ್ಲಿ ರೂಢಿಯೂ ಆಗಿದೆ. ಆದರೆ ಈಗ ಇದು ಬದಲಾಗಿದೆ. ಅಡಿಕೆ ಕೃಷಿಯು ಔದ್ಯಮಿಕ ಅಲೆಯೊಂದರ ಕೇಂದ್ರವೂ ಆಗಿ ರೂಪುಗೊಂಡಿದೆ. ಅಡಿಕೆಮರದ ಸೋಗೆಯಿಂದ ಹಿಡಿದು ಹಾಳೆ, ಅಡಿಕೆಯ ರಸ/ಚೊಗರು, ಸಿಪ್ಪೆ, ಮರದ ಕಾಂಡ ಸೇರಿದಂತೆ ಅದರ ಭಾಗಗಳನ್ನು ಯಾವೆಲ್ಲಾ ರೀತಿಯಲ್ಲಿ ಉಪಯೋಗ ಮಾಡಬಹುದು ಎಂಬುದನ್ನು ಕಂಡುಕೊಳ್ಳುವುದರಲ್ಲಿ ಸಂಶೋಧಕರು, ಉದ್ಯಮಿಗಳು ಮತ್ತು ಕರಕುಶಲಿಗಳು ತೊಡಗಿದ್ದಾರೆ.



ಅಡಿಕೆ ಹಾಳೆಯಿಂದ ತಯಾರಿಸಿದ ಚಪ್ಪಲಿಗಳು

‘ಅಡಿಕೆಮರದ ಉಪ ಉತ್ಪನ್ನಗಳು ಸುಸ್ಥಿರ ಮತ್ತು ಪರಿಸರ-ಸ್ನೇಹಿಯಾಗಿದ್ದು, ನಾವು ಈಗ ಬಳಸುತ್ತಿರುವ ಹಲವು ಉತ್ಪನ್ನಗಳಿಗೆ ಪರ್ಯಾಯವಾಗಲ್ಲದು. ಪೀಠೋಪಕರಣಗಳಿಂದ ಹಿಡಿದು ಚರ್ಮದವರೆಗೆ ಹಲವಾರು ಉತ್ಪನ್ನಗಳನ್ನು ತಯಾರಿಸಬಹುದು’ ಎಂದು ಹೇಳುತ್ತಾರೆ ಪತ್ರಕರ್ತ, ಕೃಷಿಕ ಹಾಗೂ ಸುಸ್ಥಿರತೆಯ ಬಗ್ಗೆ ಜಾಗೃತಿ ಮೂಡಿಸುತ್ತಿರುವ ಶ್ರೀ ಪಡ್ರೆ.



ನೈಸರ್ಗಿಕ ಬಣ್ಣ

ಅಡಿಕೆಯ ಮತ್ತೊಂದು ಪ್ರಮುಖ ಉಪ ಉತ್ಪನ್ನ ಎಂದರೆ ಚೊಗರು. ಮಲೆನಾಡು ಭಾಗದಲ್ಲಿ ಹಸಿ ಅಡಿಕೆಯನ್ನು (ಕೆಂಪಡಿಕೆ) ಬೇಯಿಸುವಾಗ ಸಿಗುವ ಕೆಂಪು ಬಣ್ಣದ ದ್ರಾವಣವನ್ನು ಈಗ ಬಣ್ಣವಾಗಿ ಬಳಸುವ ಪ್ರಯೋಗಗಳು ನಡೆಯುತ್ತಿವೆ. ಮೊದಲೆಲ್ಲ ಈ ಚೊಗರನ್ನು ಎಸೆಯಲಾಗುತ್ತಿತ್ತು. ಆದರೆ, ಕುಶಲಕರ್ಮಿಗಳು ಉಡುಪುಗಳನ್ನು ತಯಾರಿಸುವಾಗ ಈ ಚೊಗರನ್ನು ಈಗ ನೈಸರ್ಗಿಕ ಬಣ್ಣವಾಗಿ ಬಳಸುತ್ತಿದ್ದಾರೆ.

‘ಅಡಿಕೆಯ ಚೊಗರು ಸಾಮಾನ್ಯವಾಗಿ ಕಂದು ಕೆಂಪು, ಗಾಢ ಕೆಂಪು ಮತ್ತು ಕಂದು ಬಣ್ಣಗಳಿಂದ ಕೂಡಿರುತ್ತದೆ. ಹತ್ತಿ, ಉಣ್ಣೆ ಮತ್ತು ರೇಷ್ಮೆಯಿಂದ ಮಾಡಿದ ಬಟ್ಟೆಗಳಿಗೆ ಈ ಬಣ್ಣಗಳು ಅತ್ಯುತ್ತಮವಾಗಿ ಹೊಂದುತ್ತವೆ’ ಎಂದು ಹೇಳುತ್ತಾರೆ ಶಿವಮೊಗ್ಗದ ಸಹಕಾರ ಕೈಮಗ್ಗ ಸಂಘ ‘ಚರಕ’ದ ಟೆರೆನ್ಸ್ ಪೀಟರ್. ಈ ಸಂಘವು ಪ್ರತಿ ಲೀಟರ್‌ಗೆ ₹100 ನೀಡಿ ಅಡಿಕೆ ಬೆಳೆಗಾರರಿಂದ ಚೊಗರನ್ನು ಖರೀದಿಸುತ್ತಿದೆ. ಇದು ಬೆಳೆಗಾರರಿಗೆ ಹೆಚ್ಚುವರಿ ಆದಾಯವನ್ನು ತಂದುಕೊಡುತ್ತಿದೆ. ಚರ್ಮವನ್ನು ಹದಮಾಡುವ ಉದ್ದಿಮೆಯಲ್ಲೂ ಅಡಿಕೆ ಚೊಗರಿನ ಬಳಕೆ ಇದೆ.

ಹಾಳೆಯ ಉತ್ಪನ್ನಗಳು

ಕಣ್ಣಿಗೆ ಕಾಣಿಸುವಂತಹ ಹಾಗೂ ಈಗ ಹೆಚ್ಚು ಬಳಕೆಯಲ್ಲಿರುವ ಅಡಿಕೆಮರದ ಉಪ ಉತ್ಪನ್ನವೆಂದರೆ ಹಾಳೆಯಿಂದ ಮಾಡಲಾಗುತ್ತಿರುವ ಉತ್ಪನ್ನಗಳು. ತಟ್ಟೆ, ಬೋಗುಣಿ (ಬೌಲ್), ಚಮಚ ಸೇರಿದಂತೆ ಆಹಾರವನ್ನು ನೀಡಲು ಬಳಸುವ ಉತ್ಪನ್ನಗಳು ಹೆಚ್ಚು ಬಳಕೆಯಲ್ಲಿವೆ. ಅಡಿಕೆಮರದಿಂದ ಬಿದ್ದ ಹಾಳೆಯನ್ನು ಸಂಗ್ರಹಿಸಿ, ಸ್ವಚ್ಛಗೊಳಿಸಿ, ಅಚ್ಚನ್ನು ಬಳಸಿಕೊಂಡು ಉಷ್ಣ–ಒತ್ತಡ ತಂತ್ರಜ್ಞಾನದಲ್ಲಿ ಬೇಕಾದ ಗಾತ್ರದ, ಆಕಾರದ ಹಾಳೆಯ ತಟ್ಟೆ ಸೇರಿದಂತೆ ಇತರ ಉತ್ಪನ್ನಗಳನ್ನು ತಯಾರಿಸಲಾಗುತ್ತಿದೆ.

ರಾಸಾಯನಿಕಗಳಿಂದ ಮುಕ್ತವಾಗಿರುವ ಇವುಗಳು ಪರಿಸರಸ್ನೇಹಿಯಾಗಿವೆ. ಬಳಸಿ ಎಸೆದ ಹಾಳೆಯ ಉತ್ಪನ್ನಗಳು ಮಣ್ಣಿನೊಂದಿಗೆ ಬೆರೆತು ಮಣ್ಣಾಗುತ್ತವೆ. ಫ್ರೀಜರ್/ಮೈಕ್ರೊವೇವ್ ಬಳಕೆಗೂ ಯೋಗ್ಯ. ಏಕ ಬಳಕೆಯ ಪ್ಲಾಸ್ಟಿಕ್ ಮತ್ತು ಕಾಗದದಿಂದ ತಯಾರಿಸಿದ ತಟ್ಟೆ, ಬೋಗುಣಿ, ಚಮಚ ಹಾಗೂ ಆಹಾರ ವಿತರಣೆಗೆ ಬಳಸುವ ಇನ್ನಿತರ ವಸ್ತುಗಳಿಗೆ ಇವು ಅತ್ಯುತ್ತಮ ಪರ್ಯಾಯವಾಗಿವೆ.

ಮರಮುಟ್ಟು ಆಗಿ ಬಳಕೆ

ಅಡಿಕೆಮರಗಳು 50 ಅಡಿ ಎತ್ತರದವರೆಗೂ ಬೆಳೆಯುತ್ತವೆ. ರೋಗಬಾಧೆ ಅಥವಾ ನೈಸರ್ಗಿಕ ಕಾರಣಗಳಿಂದ ಸತ್ತ ಅಡಿಕೆ ಮರವನ್ನು ಪೀಠೋಪಕರಣಗಳನ್ನು ತಯಾರಿಸುವ ಮರಮುಟ್ಟು ಆಗಿ ಕೂಡ ಬಳಸಬಹುದು. ‘ಅಡಿಕೆಮರ ತುಂಬಾ ಗಟ್ಟಿ ಮತ್ತು ಹೆಚ್ಚು ಬಾಳಿಕೆಯ ಸಾಮರ್ಥ್ಯ ಹೊಂದಿದೆ’ ಎಂದು ಹೇಳುತ್ತಾರೆ ಸಾಗರದ ಉದ್ಯಮಿ, ಪೀಠೋಪಕರಣಗಳು ಮತ್ತು ಅಲಂಕಾರಿಕ ವಸ್ತುಗಳನ್ನು ತಯಾರಿಸುವ ಸಂತೋಷ್ ಕುಮಾರ್.

‘ದಶಕಗಳ ಹಿಂದೆ ಅಡಿಕೆಮರಗಳ ಕಾಂಡವನ್ನು ಅಟ್ಟಣಿಗೆ ನಿರ್ಮಿಸಲು ಬಳಸುತ್ತಿದ್ದರು. ಇತ್ತೀಚಿನ ವರ್ಷಗಳಲ್ಲಿ ಅದನ್ನು ತ್ಯಾಜ್ಯವಾಗಿ ಪರಿಗಣಿಸಲಾಗುತ್ತಿತ್ತು. ಆದರೆ. ನಾವೀಗ ಅಡಿಕೆಮರದ ಕಾಂಡಗಳನ್ನು ಪೀಠೋಪಕರಣಗಳು ಮತ್ತು ಇತರ ಉತ್ಪನ್ನಗಳಾಗಿ ಮಾರ್ಪಡಿಸುತ್ತಿದ್ದೇವೆ’ ಎನ್ನುತ್ತಾರೆ ಅವರು.

ಸಂತೋಷ್ ಅವರು ಅಡಿಕೆಮರದ ದೃಢವಾದ ಕಾಂಡದಿಂದ ಬೆಂಚುಗಳು, ಗೋಡೆಗೆ ಅಳವಡಿಸುವ ಪಟ್ಟಿಗಳು (ವಾಲ್ ಪ್ಯಾನಲ್), ಗೋಡೆ ವಿಭಜಕಗಳು, ಸುಲಭವಾಗಿ ಅಳವಡಿಸಬಹುದಾದ ಆಕರ್ಷಕ ಬೇಲಿ ಮತ್ತು ವಿವಿಧ ಅಲಂಕಾರಿಕ ವಸ್ತುಗಳನ್ನು ತಯಾರಿಸುತ್ತಿದ್ದಾರೆ. ಅಡಿಕೆಮರದ ಕೆಲಸ ಸುಲಭವಲ್ಲ. ಅದಕ್ಕೆ ವಿಶೇಷ ಯಂತ್ರೋಪಕರಣ ಮತ್ತು ತರಬೇತಿ ಪಡೆದ ಕುಶಲಕರ್ಮಿಗಳು ಬೇಕು ಎಂಬುದು ಸಂತೋಷ್ ಅವರ ಅನುಭವದ ಮಾತು.

‘ಅಡಿಕೆಮರದಿಂದ ಪ್ಲೈವುಡ್ ತಯಾರಿಸುವುದಕ್ಕೆ ಸಾಕಷ್ಟು ಅವಕಾಶಗಳಿವೆ. ಆದರೆ, ಇದರ ಬಗ್ಗೆ ಇನ್ನಷ್ಟು ಸಂಶೋಧನೆ ಮತ್ತು ಅಭಿವೃದ್ಧಿ ಕೆಲಸಗಳು ನಡೆಯಬೇಕು’ ಎಂದು ಪ್ರತಿಪಾದಿಸುತ್ತಾರೆ ಅವರು.

ಸಾವಯವ ಗೊಬ್ಬರ

ಒಂದು ಕಾಲದಲ್ಲಿ ತ್ಯಾಜ್ಯವಾಗಿ ಸುಡುತ್ತಿದ್ದ ಅಡಿಕೆಮರದ ಸೋಗೆ ಮತ್ತು ಅಡಿಕೆ ಸಿಪ್ಪೆಯು ಈಗ ಸಾವಯವ ಗೊಬ್ಬರ ತಯಾರಿಕೆಯಲ್ಲೂ ಬಳಕೆಯಾಗುತ್ತಿದೆ. ‘ಎರೆಹುಳಗೊಬ್ಬರ ತಯಾರಿಕೆಯಲ್ಲಿ ನಾವು ಅಡಿಕೆ ಸೋಗೆ ಮತ್ತು ಸಿಪ್ಪೆಯನ್ನು ಬಳಸುತ್ತೇವೆ. ಈ ಎರಡನ್ನೂ ಸೆಗಣಿಯೊಂದಿಗೆ ಬೆರೆಸಿ ಅದನ್ನು ದ್ರವರೂಪದ ಗೊಬ್ಬರವನ್ನಾಗಿ ಮಾಡಿ ನಂತರ ಅದಕ್ಕೆ ಎರೆಹುಳಗಳನ್ನು ಬಿಟ್ಟು ಗೊಬ್ಬರ ತಯಾರಿಸುತ್ತೇವೆ’ ಎಂದು ಮೈಸೂರು ಮೂಲದ ಸುರಭಿ ಪ್ಲಾನ್‌ಟೆಕ್ ಸಂಸ್ಥೆಯ ಟೀಮ್ ಮ್ಯಾನೇಜರ್ ರವಿ ಕೆ.ಜಿ ಅವರು ಹೇಳುತ್ತಾರೆ.

‘ಗೊಬ್ಬರ ತಯಾರಿಸಲು ನಾಲ್ಕು ತಿಂಗಳು ಬೇಕಾಗುತ್ತದೆ. ಗೊಬ್ಬರವನ್ನು ಅತ್ಯಂತ ವ್ಯವಸ್ಥಿತವಾಗಿ ದಾಸ್ತಾನು ಇರಿಸಿದರೆ ಅದು ಹಾಳಾಗುವುದೇ ಇಲ್ಲ. ರಾಸಾಯನಿಕ ರಸಗೊಬ್ಬರಗಳಿಗೆ ಹೋಲಿಸಿದರೆ ಈ ಗೊಬ್ಬರ ಅಗ್ಗವೂ ಹೌದು’ ಎನ್ನುವುದು ಅವರ ವಿವರಣೆ.

ಸಸ್ಯಜನ್ಯ ಚರ್ಮ ಪ್ರವರ್ಧಮಾನಕ್ಕೆ

ಅಡಿಕೆಮರದ ಹಾಳೆಯನ್ನು ಸಂಪೂರ್ಣ ಸಸ್ಯಜನ್ಯ ಚರ್ಮವನ್ನಾಗಿ ಮಾರ್ಪಡಿಸಿರುವುದು ಅಡಿಕೆಗೆ ಸಂಬಂಧಿಸಿದಂತೆ ನಡೆದಿರುವ ಮತ್ತೊಂದು ಸಂಶೋಧನೆ. ಸಸ್ಯಗಳ ಸೊನೆ ಅಥವಾ ಹಾಲಿನಂಥ ದ್ರಾವಣವು ಈ ಸಸ್ಯಜನ್ಯ ಚರ್ಮಕ್ಕೆ ಮೂಲ ಆಧಾರವಾಗಿದೆ. ಅಡಿಕೆ ಹಾಳೆಯ ನಾರುಗಳು ಸದೃಢವಾಗಿದ್ದು ನೇಯ್ಗೆಗೆ ಹೇಳಿಮಾಡಿಸಿದಂತೆ. ಆದರೆ ಸಣ್ಣ ಹಾಳೆಗಳನ್ನು ಈ ಉದ್ದೇಶಕ್ಕೆ ಬಳಸುವುದು ದೊಡ್ಡ ಸವಾಲು ಎಂಬುದು ಈಗಷ್ಟೇ ಪ್ರವರ್ಧಮಾನಕ್ಕೆ ಬರುತ್ತಿರುವ ಈ ಕ್ಷೇತ್ರದಲ್ಲಿ ಪೇಟೆಂಟ್ ಪಡೆದಿರುವ ಶಿವಮೊಗ್ಗದ ಉದ್ಯಮಿ ಸುರೇಶ್ ಎಸ್.ಆರ್. ಅವರ ಅಭಿಮತ.

‘ಹತ್ತಿಯೊಂದಿಗೆ ಅಡಿಕೆ ಹಾಳೆಯ ನಾರನ್ನು ಸೇರಿಸಿದರೆ ಪೇಟಾ-ಪ್ರಮಾಣಿತ ಕೊಳೆಯಬಲ್ಲ ಚರ್ಮವನ್ನು ತಯಾರಿಸಬಹುದು. ಇದು ಬಾಳಿಕೆಯಲ್ಲಿ ಪ್ರಾಣಿಗಳ ಚರ್ಮಕ್ಕೆ ಸವಾಲೆಸೆಯಬಹುದು. ಇದು ಉತ್ತಮವಾದ ಸ್ಥಿತಿಸ್ಥಾಪಕತ್ವ ಮತ್ತು ದೃಢತೆಯನ್ನು ಹೊಂದಿದೆ. ನೀರು ತಾಗಿದರೂ ಏನಾಗದು. ಇಂಗಾಲ ಉಗುಳುವಿಕೆಯೂ ಕಡಿಮೆ’ ಎಂಬುದು ಸುರೇಶ್ ವಿವರಣೆ.

10ನೇ ಪುಟಕ್ಕೆ...

ಬಂಗಾಳದಲ್ಲಿ ಕನ್ನಡದ ಹೊನ್ನು

• ಬಿ.ವಿ.ಶ್ರೀನಾಥ್

ಪಶ್ಚಿಮ ಬಂಗಾಳದ ವಿದ್ಯಾಸಾಗರ ವಿಶ್ವವಿದ್ಯಾಲಯವು ‘ವಿದ್ಯಾಸಾಗರ ಪುರಸ್ಕಾರ’ವನ್ನು ಪ್ರತಿವರ್ಷ ನೀಡುತ್ತದೆ. ಕಲೆ, ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರಗಳ ಸಾಧಕರಿಗೇ ಹೆಚ್ಚಾಗಿ ಸಲ್ಲುತ್ತಿದ್ದ ಪ್ರಶಸ್ತಿಯು 2025ನೇ ಸಾಲಿನಲ್ಲಿ ಒಬ್ಬ ಐಎಎಸ್ ಅಧಿಕಾರಿಗೆ ಸಂದಿದೆ. ಇಲ್ಲೊಂದು ವಿಶೇಷವಿದೆ. ಆ ಐಎಎಸ್ ಅಧಿಕಾರಿ ಅಂಧ. ನೂರರಷ್ಟು ದೃಷ್ಟಿದೋಷ ಇರುವವರು. ಮತ್ತೊಂದು ವಿಶೇಷವೂ ಇದೆ. ಆ ಐಎಎಸ್ ಅಧಿಕಾರಿ ಕನ್ನಡಿಗರು. ಅವರೇ ಕೆಂಪಹೊನ್ನಯ್ಯ. ಪಶ್ಚಿಮ ಬಂಗಾಳದ ಪಶ್ಚಿಮ ಮಿಡ್ನಾಪುರ ಜಿಲ್ಲೆಯಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿಯಾಗಿ ಕೈಗೊಂಡ ಅಭಿವೃದ್ಧಿ ಕಾರ್ಯಗಳು, ಜಾರಿ ಮಾಡಿದ ಯೋಜನೆಗಳಿಗಾಗಿ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ಚೌಡನಕುಪ್ಪೆಯ ಬಡ ರೈತ ಕುಟುಂಬದ ಕೆಂಪಹೊನ್ನಯ್ಯ ಅವರ ಹೋರಾಟವು ಬಾಲ್ಯದಿಂದಲೇ ಆರಂಭವಾಯಿತು. ಐದನೇ ತರಗತಿಯಲ್ಲಿದ್ದಾಗ ರೆಟಿನಾ ಡಿಟ್ಯಾಚ್‌ಮೆಂಟ್‌ನಿಂದ ದೃಷ್ಟಿಹೀನರಾದರು. ತಂದೆ ಹೊನ್ನಯ್ಯ ತೀರಿಕೊಂಡಿದ್ದರು. ಸಂಸಾರದ ನೊಗವನ್ನು ತಾಯಿ ಮುನಿಯಮ್ಮ ಹೊತ್ತರು; ಕೂಲಿನಾಲಿ ಮಾಡಿ ಮಕ್ಕಳನ್ನು ಸಾಕತೊಡಗಿದರು. ಅಂಧನಾಗಿದ್ದ ಮಗ ಶಾಲೆಯನ್ನು ತ್ಯಜಿಸಿ ಮನೆಯಲ್ಲಿ ಕೂತದ್ದು ತಾಯಿಕರುಳು ಜೀರ್ಣಿಸಿಕೊಳ್ಳಲಿಲ್ಲ. ಅಂಧ ಶಿಕ್ಷಕರೊಬ್ಬರು ಕುಟುಂಬದ ನೆರವಿಗೆ ಬಂದರು. ಅವರ ನೆರವಿನಿಂದ ಮೈಸೂರಿನ ಅಂಧ ಮಕ್ಕಳ ಶಾಲೆಗೆ ಮಗನನ್ನು ಸೇರಿಸಿದರು. ಕೆಂಪಹೊನ್ನಯ್ಯ ಅವರಿಗೆ ಅಲ್ಲಿ ಬ್ರೈಲ್ ಲಿಪಿ ಪರಿಚಯವಾಯಿತು. ಮುಂದಿನ ಅವರ ವಿದ್ಯಾಭ್ಯಾಸಕ್ಕೆ ಅದೇ ಅವರ ಕಣ್ಣಾಯಿತು.

ಎಸ್‌ಎಸ್‌ಎಲ್‌ಸಿವರೆಗೆ ಮೈಸೂರಿನಲ್ಲಿ ಓದಿದ ಕೆಂಪಹೊನ್ನಯ್ಯ ಅವರು ಪಿಯುಸಿಗೆ ಮತ್ತೆ ಕುಣಿಗಲ್‌ಗೆ ಬಂದರು. ಆದರೆ, ಅವರಿಗೆ ಮೈಸೂರಿನಲ್ಲಿ ಸಿಕ್ಕ ನೆರವು ಇಲ್ಲಿ ಸಿಗಲಿಲ್ಲ. ಪದವಿಗೆ ಮೈಸೂರಿಗೇ ಹಿಂದಿರುಗಿ, ಮಹಾರಾಜ ಕಾಲೇಜು ಸೇರಿದರು. ಉನ್ನತ ಶ್ರೇಣಿಯಲ್ಲಿ ಪದವಿ ಪಡೆದರು. ಬೇಗ ಕೆಲಸ ಸಿಗುತ್ತದೆ ಎಂದು ಡಿಪ್ಲೊಮಾ ಇನ್ ಸ್ಪೆಷಲ್ ಎಜುಕೇಷನ್ ಮಾಡಿಕೊಂಡರು. ತಾನೊಬ್ಬ ಸ್ನಾತಕೋತ್ತರ ಪದವೀಧರ ಆಗಲೇಬೇಕು ಎನ್ನುವ ಛಲ ಹುಟ್ಟಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂಎ ಪೂರೈಸಿದರು. ಅದರ ಬೆನ್ನಲ್ಲೇ ಕೆಪಿಎಸ್‌ಸಿ ಪರೀಕ್ಷೆ ಬರೆದು ಪಿಯು ಕಾಲೇಜಿನ ಅಧ್ಯಾಪಕರೂ ಆದರು.



ಕೆಂಪಹೊನ್ನಯ್ಯ

ಎಚ್.ಡಿ.ಕೋಟೆ ತಾಲ್ಲೂಕಿನ ಕಾಡಂಚಿನ ಬಿ.ಮಟಕೆರೆಯ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಕೆಲಸ ಮಾಡಿದ್ದು ಮರೆಯಲಾಗದ ಅನುಭವ. ಮೈಸೂರಿನಿಂದ 70 ಕಿ.ಮೀ.ಓಡಾಟ. ವಿದ್ಯಾರ್ಥಿಗಳನ್ನು ಹುರಿದುಂಬಿಸುತ್ತಾ ಜನಪ್ರಿಯ ಅಧ್ಯಾಪಕರಾದರು. ವಿದ್ಯಾರ್ಥಿಗಳಿಂದ ಪ್ರತಿನಿತ್ಯ ‘ಪ್ರಜಾವಾಣಿ’ ಓದಿಸುತ್ತಿದ್ದರು. ಅಲ್ಲಿಂದ ಮೈಸೂರಿನ ಒಂಟಿಕೊಪ್ಪಲ್‌ನ ಸರ್ಕಾರಿ ಕಾಲೇಜಿಗೆ ವರ್ಗಾವಣೆಯಾಯಿತು. ಮೈಸೂರಿಗೆ ಬಂದ ಮೇಲೆ ಓಡಾಟ ಕಡಿಮೆಯಾಗಿ ಹೆಚ್ಚು ಸಮಯ ಸಿಗುತ್ತಿತ್ತು. ಅವರ ಬದುಕು ಬೇರೊಂದು ಮಗ್ಗುಲಿಗೆ ಹೊರಳಿತು.

ಅಂಧರಾಗಿದ್ದ ಗೋಪಾಲಕೃಷ್ಣ ತಿವಾರಿ ಐಎಎಸ್ ಮಾಡಲು ಪಟ್ಟ ಪಾಡು, ಎದುರಿಸಿದ ಸವಾಲುಗಳು ಕಡಿಮೆ ಏನು ಅಲ್ಲ. ಅಂಧರೂ ಐಎಎಸ್ ಅಧಿಕಾರಿಗಳಾಗಲು ಸಾಧ್ಯವಾಗುವ ದಿಸೆಯಲ್ಲಿ ತಿವಾರಿ ಅವರು ಸುಪ್ರೀಂ ಕೋರ್ಟ್‌ವರೆಗೆ ಹೋಗಿ ಕೇಸು ಗೆದ್ದಿದ್ದರು. ಅದನ್ನು ಓದಿದ ಬಳಿಕ ಐಎಎಸ್ ಗುಂಗೀಹುಳು ಕೆಂಪಹೊನ್ನಯ್ಯ ಅವರ ತಲೆ ಹೊಕ್ಕಿತು. ಸರಿ, ಶುರುವಾಯಿತು ತಯಾರಿ.

ಒಂದನೇ ತರಗತಿಯಿಂದ ಎಂಎವರೆಗೆ ಕನ್ನಡ ಮಾಧ್ಯಮದಲ್ಲಿಯೇ ಓದಿದ್ದ ಅವರು, ಐಎಎಸ್ ಅನ್ನೂ ಕನ್ನಡ ಮಾಧ್ಯಮದಲ್ಲಿಯೇ ಮಾಡಲು ಮುಂದಾದರು. ಮನೆಯೇ ಕೋಚಿಂಗ್ ಅಕಾಡೆಮಿಯಾಯಿತು. ಹೆಂಡತಿಯೇ ಕೋಚ್ ಆದರು.

10ನೇ ಪುಟಕ್ಕೆ...



‘ವಿದ್ಯಾಸಾಗರ ಪುರಸ್ಕಾರ’ ಸ್ವೀಕರಿಸುತ್ತಿರುವ ಕೆಂಪಹೊನ್ನಯ್ಯ

ಇವರನ್ನು ಮರೆಯೋದುಂಟೆ...

ಕೆಂಪಹೊನ್ನಯ್ಯ ಜೀವನದಲ್ಲಿ ಸಾಧಿಸಿದ್ದೆಲ್ಲವನ್ನೂ ಇಬ್ಬರು ಮಹಿಳೆಯರಿಗೆ ಅರ್ಪಿಸುತ್ತಾರೆ. ಒಬ್ಬರು ತಾಯಿ, ಮತ್ತೊಬ್ಬರು ಹೆಂಡತಿ.

‘ದೃಷ್ಟಿ ಕಳೆದುಕೊಂಡು ದಿಕ್ಕುಗಾಣದೇ ಮನೆಯಲ್ಲಿ ಕೂತಿದ್ದ ನನ್ನನ್ನು ಅಮ್ಮ ಮೈಸೂರಿಗೆ ಕರೆದುಕೊಂಡು ಹೋಗಿ ಅಂಧರ ಶಾಲೆಗೆ ಸೇರಿಸದೇ ಇದ್ದಿದ್ದರೆ, ಬಹುಶಃ ಭಿಕ್ಷೆ ಬೇಡಿ ಬದುಕಬೇಕಾದ ಸ್ಥಿತಿಯಲ್ಲಿರುತ್ತಿದ್ದೆ. ಅನಕ್ಷರಸ್ಥೆಯಾಗಿದ್ದ ಆಕೆಯ ಆ ನಿರ್ಧಾರ ನನ್ನ ಬದುಕು ಬದಲಿಸಿತು’ ಎನ್ನುತ್ತಾರೆ ಅವರು. ಕೂಲಿ ಮಾಡುತ್ತಿದ್ದರೂ, ‘ನಿನಗೆ ಎಷ್ಟು ಬೇಕೋ ಅಷ್ಟು ಓದು ಎನ್ನುತ್ತಿದ್ದರೇ ಹೊರತು ಕೆಲಸಕ್ಕೆ ಸೇರು ಎನ್ನುತ್ತಿರಲಿಲ್ಲ’ ಎಂದು ಗದ್ಗದಿತರಾಗುತ್ತಾರೆ.

ಒಮ್ಮೆ ಕೆಂಪಹೊನ್ನಯ್ಯ ಮೈಸೂರು ಬಸ್ ನಿಲ್ದಾಣದಲ್ಲಿ ನಿಂತಿದ್ದರು. ಅವರ ಬಳಿ ಬಂದ ಮಹಿಳೆಯೊಬ್ಬರು, ‘ನಿಮಗೆ ಏನಾದರೂ ಸಹಾಯ ಬೇಕೇ’ ಎಂದು ಕೇಳಿದರು. ‘ಹೌದು, ಬೇಕು’ ಎಂದರು ಕೆಂಪಹೊನ್ನಯ್ಯ. ತಮ್ಮ ಮನೆ ವಿಳಾಸ ನೀಡಿದರು ಮಹಿಳೆ. ಮುಂದೆ ಆ ಮನೆ ಕೆಂಪಹೊನ್ನಯ್ಯ ಅವರ ಮನೆಯೇ ಆಯಿತು. ಆ ಮಹಿಳೆ ಅವರ ಹೆಂಡತಿಯಾದರು.

ಕೆಂಪಹೊನ್ನಯ್ಯ ಕೆಪಿಎಸ್‌ಸಿ ಪರೀಕ್ಷೆ, ಐಎಎಸ್ ಪರೀಕ್ಷೆ ಪಾಸು ಮಾಡಲು ಮುಖ್ಯ ಕಾರಣ ಪತ್ನಿ ಅಚಿಂತಾ. ಮೈಸೂರಿನ ‘ಮೈತ್ರಿ’ ವಿಶೇಷ ಶಾಲೆಯಲ್ಲಿ ಶಿಕ್ಷಕಿಯಾಗಿದ್ದ ಅವರು, ಆಡಿಯೋ ರೆಕಾರ್ಡ್ ಮಾಡಿ, ಅಧ್ಯಯನ ಸಾಮಗ್ರಿ ಸಿದ್ಧಪಡಿಸಿಕೊಡುತ್ತಿದ್ದರು. ಅನುಕೂಲಸ್ಥ ಕ್ರಿಶ್ಚಿಯನ್ ಕುಟುಂಬದ ಅಚಿಂತಾ ನನ್ನ ಬಾಳಿಗೆ ಬೆಳಕಾದರು ಎನ್ನುತ್ತಾರೆ. ದಂಪತಿಗೆ ಇಬ್ಬರು ಮಕ್ಕಳು: ಪ್ರಬೋಧ್, ನಿಬೋಧ್.

ಕುವೆಂಪು ಕವಿತೆ, ಚೈತನ್ಯದ ಒರತೆ

ಸಾಹಿತ್ಯದ ವಿದ್ಯಾರ್ಥಿ, ಅಧ್ಯಾಪಕರಾಗಿದ್ದ ಕೆಂಪಹೊನ್ನಯ್ಯ ಅವರಿಗೆ ಕುವೆಂಪು ಸಾಹಿತ್ಯ ಎಂದರೆ ಅಚ್ಚುಮೆಚ್ಚು. ‘ಓ ನನ್ನ ಚೇತನ, ಆಗು ನೀ ಅನಿಕೇತನ..’ ಕವಿತೆ ಅವರನ್ನು ಅಪಾರವಾಗಿ ಪ್ರಭಾವಿಸಿದೆ. ‘ಎಲ್ಲಿಯೂ ನಿಲ್ಲದಿರು..’ ಎನ್ನುವ ಕುವೆಂಪು ಅವರ ನುಡಿಯು ಮನುಷ್ಯ ಚೈತನ್ಯ ಅಮಿತವಾದದ್ದು ಎನ್ನುವ ಸಂದೇಶದೊಂದಿಗೆ ಜೀವನದಲ್ಲಿ ಮುನ್ನುಗ್ಗಲು ನನಗೆ ಸ್ಫೂರ್ತಿಯಾಗಿದೆ’ ಎನ್ನುತ್ತಾರೆ.

> **ಸಾಧನೆಗೆ ಕುಟುಂಬದ ಬಡತನ, ಅಂಗವಿಕಲತೆಯೇ ಪ್ರೇರಣೆ. ರಕ್ತಸಂಬಂಧದಲ್ಲಿ ಮದುವೆಯಾಗಿದ್ದರಿಂದಲೋ ಏನೋ, ಅಮ್ಮ ಅಪ್ಪನಿಗೆ ಹುಟ್ಟಿದ ಮಕ್ಕಳ ಪೈಕಿ ನಾನು ಅಂಧನಾದೆ. ಅಣ್ಣನೂ ಅಂಗವಿಕಲನಾದ; ಅಕಾಲಿಕವಾಗಿ ಸತ್ತೂ ಹೋದ. ಇಬ್ಬರು ಅಕ್ಕಂದಿರು ಚಿಕ್ಕಂದಿನಲ್ಲೇ ತೀರಿಹೋದರು. ನನ್ನ ಪರಿಸ್ಥಿತಿಗಳು, ನೋವುಗಳೇ ನನ್ನನ್ನು ರೂಪಿಸಿದವು.**
>
> **ಕೆಂಪಹೊನ್ನಯ್ಯ,** ಐಎಎಸ್ ಅಧಿಕಾರಿ



ಗೊಡಚಿಯಲ್ಲಿ ಬಳುವಲ ಜಾತ್ರೆ

ಗೊಡಚಿಯ ಬಳುವಲ ಹಣ್ಣಿನ ಜಾತ್ರೆ

ಅಪ್ರದಾನ ಹಣ್ಣೆಂಬ ಎಂಬ ಹಣೆಪಟ್ಟಿ ಹೊತ್ತಿರುವ ಪೋಷಕಾಂಶಗಳ ಆಗರವಾದ ಬೇಲದ ಹಣ್ಣಿಗೆ ಗೊಡುಚಿ ವೀರಭದ್ರೇಶ್ವರ ದೇವರ ಸನ್ನಿಧಿಯಲ್ಲಿ ‘ಪ್ರಸಾದ’ ದ ಸ್ಥಾನ ದೊರೆತಿದೆ. ಈ ದೇವರ ಜಾತ್ರೆಗೆ ಬರುವ ಲಕ್ಷಾಂತರ ಭಕ್ತರು ಬೇಲದ ಹಣ್ಣನ್ನು ಪ್ರಸಾದವಾಗಿ ಸೇವಿಸುತ್ತಾರೆ.

• ಗಾಣಧಾಳು ಶ್ರೀಕಂಠ / ಚನ್ನಪ್ಪ ಮಾದರ

ಡಿಸೆಂಬರ್ ತಿಂಗಳಲ್ಲಿ ಹೊಸ್ತಿಲ ಹುಣ್ಣಿಮೆಯ ದಿನ ಬಂತೆಂದರೆ ಗೊಡಚಿಯ ವೀರಭದ್ರೇಶ್ವರ ದೇವಸ್ಥಾನದ ಅಂಗಳದ ತುಂಬಾ ಬೇಲದ ಹಣ್ಣುಗಳ ರಾಶಿಗಳು ಕಾಣಿಸಿಕೊಳ್ಳುತ್ತವೆ. ದೇವರ ದರ್ಶನ ಪಡೆದ ಭಕ್ತರು ನೇರವಾಗಿ ಹಣ್ಣಿನ ರಾಶಿ ಎದುರು ನಿಂತು ಡಜನ್ ಗಟ್ಟಲೆ ಬೇಲದ ಹಣ್ಣುಗಳನ್ನು ಖರೀದಿಸಿ, ಮನೆಗೆ ಒಯ್ಯುತ್ತಾರೆ..!

ಹೌದು. ಬೆಳಗಾವಿ ಜಿಲ್ಲೆ ರಾಮದುರ್ಗ ತಾಲ್ಲೂಕಿನ ಗೊಡಚಿಯ ವೀರಭದ್ರೇಶ್ವೇರ ದೇವರ ಜಾತ್ರೆಯಲ್ಲಿ ಭಕ್ತರು ಬೇಲ–ಬಾರೆ ಹಣ್ಣುಗಳನ್ನು ಪ್ರಸಾದದ ರೂಪದಲ್ಲಿ ಮನೆಗೆ ಒಯ್ಯುವುದು ವಾಡಿಕೆ. ಇದು ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಆಚರಣೆ.

ಹುಣ್ಣಿಮೆಯಿಂದ ಐದು ದಿನಗಳು ನಡೆಯುವ ಈ ಜಾತ್ರೆಗೆ ಬೆಳಗಾವಿ ಜಿಲ್ಲೆಯಲ್ಲದೇ, ಬಾಗಲಕೋಟೆ, ವಿಜಯಪುರ, ಹಾವೇರಿ, ಕೊಪ್ಪಳ ಸೇರಿದಂತೆ ದೂರದ ಊರುಗಳಿಂದ ಲಕ್ಷಾಂತರ ಭಕ್ತರು ಬರುತ್ತಾರೆ. ಜಾತ್ರೆಗೆ ಬಂದವರು (ಬಹುತೇಕರು) ದೇವರ ದರ್ಶನ ಮಾಡಿ ಪ್ರಸಾದವಾಗಿ ಬೇಲ- ಬಾರೆ ಹಣ್ಣನ್ನು ಒಯ್ಯುತ್ತಾರೆ. ಐದನೇ ದಿನದ ಲಕ್ಷ ದೀಪೋತ್ಸವದ ನಂತರವೂ ಭಕ್ತರು ಅಮಾವಾಸ್ಯೆವರೆಗೂ, ದೇವರ ದರ್ಶನಕ್ಕೆ ಬರುವುದಿದೆ.

ಬೇಲದಹಣ್ಣನ್ನು, ಪ್ರಾದೇಶಿಕವಾಗಿ ಬ್ಯಾಲ, ಬೇಲ, ಬೆಲವತ್ತೆ, ಬೆಳವಲ, ಬಳುವಲ, ಬಳುವೊಲ, ಬಳೋಳ, ಬೊಳ್ಕೋಳಿ, ದಂತಶಠ, ಕಪಿತ್ಥ ಹೀಗೆ ಹಲವು ಹೆಸರುಗಳಿಂದ ಕರೆಯುತ್ತಾರೆ. ಇದರ ಸಸ್ಯಶಾಸ್ತ್ರೀಯ ಹೆಸರು ಲೀಮೊನಿಯಾ ಆಸಿಡಿಸೀಮಾ, ಇಂಗ್ಲಿಷ್‌ನಲ್ಲಿ 'ವುಡ್ ಆ್ಯಪಲ್".

ರಾಮದುರ್ಗ ಭಾಗದಲ್ಲಿ ಈ ಹಣ್ಣನ್ನು ಬಳುವಲ ಎಂದು ಕರೆಯುತ್ತಾರೆ. ಈ ಜಾತ್ರೆಯಲ್ಲಿ ಭಕ್ತರು ಹೆಚ್ಚಾಗಿ ಬಳುವಲ ಹಣ್ಣನ್ನು ಪ್ರಸಾದವಾಗಿ ಖರೀದಿಸುತ್ತಾರೆ. ‘ಜಾತ್ರೆಗೆ ಬಂದವರು ಬಳುವಲ ಹಣ್ಣು ಖರೀದಿಸಿಕೊಂಡು ಹೋದರೆ ಮಾತ್ರ ಜಾತ್ರೆ ಪರಿಪೂರ್ಣಗೊಳ್ಳುತ್ತದೆ. ಅದಕ್ಕೆ ಗೊಡಚಿ ವೀರಭದ್ರ ದೇವರ ಜಾತ್ರೆಯು, ಬಳುವಲ ಹಣ್ಣಿನ ಜಾತ್ರೆ ಎಂದೇ ಪ್ರಸಿದ್ಧಿಯಾಗಿದೆ’ ಎನ್ನುತ್ತಾರೆ ಗೊಡಚಿ ಕ್ಷೇತ್ರದ ಭಕ್ತ ಈರಣ್ಣ ಕಾಮನ್ನವರ.

ಲಾರಿಗಟ್ಟಲೆ ವಹಿವಾಟು

ಪ್ರತಿ ವರ್ಷ ಜಾತ್ರೆ ಆರಂಭದ ದಿನವೇ ಗೊಡಚಿಗೆ ಲಾರಿಗಟ್ಟಲೆ ಬೇಲದಹಣ್ಣು ಬರುತ್ತದೆ. ಈ ಬಾರಿ ಜಾತ್ರೆಗೆ ಸುಮಾರು 15 ಲಾರಿಗಳಷ್ಟು ಹಣ್ಣುಗಳು ಬಂದಿವೆಯಂತೆ. ಗ್ರಾಮ ಪಂಚಾಯಿತಿ ಮತ್ತು ಜಾತ್ರಾ ಸಮಿತಿಯವರು ಬೇಲ, ಬಾರೆ, ಬಾಳೆ ಹಣ್ಣುಗಳ ಮಾರಾಟಕ್ಕಾಗಿ ಪ್ರತ್ಯೇಕ ಜಾಗಗಳ ವ್ಯವಸ್ಥೆ ಮಾಡುತ್ತಾರೆ. ವ್ಯಾಪಾರಸ್ಥರು ಪುಟ್ಟ ತೆರೆದ ಮಳಿಗೆಗಳಲ್ಲಿ ಬೇಲದ ಹಣ್ಣುಗಳನ್ನು ರಾಶಿ ಹಾಕಿಕೊಂಡು ವ್ಯಾಪಾರ ಆರಂಭಿಸುತ್ತಾರೆ.

ಜಾತ್ರೆಗೆ ಬರುವ ಭಕ್ತರು ದೇವರ ದರ್ಶನ ಪಡೆದು ನಂತರ ಬೇಲದ ಹಣ್ಣು ಖರೀದಿಸಿ ಊರಿನತ್ತ ಹೊರಡುತ್ತಾರೆ. ‘ಒಂದು ಕುಟುಂಬದವರು ಕನಿಷ್ಠ ಐದು, ಗರಿಷ್ಟ ಒಂದು ದೊಡ್ಡ ಕೈಚೀಲದ ತುಂಬಾ ಹಣ್ಣುಗಳನ್ನು ಕೊಂಡೊಯ್ಯುತ್ತಾರೆ' ಎನ್ನುತ್ತಾರೆ ಬೇಲದ ಹಣ್ಣಿನ ವ್ಯಾಪಾರಿ ದ್ಯಾಮಣ್ಣ ನಾಗಪ್ಪ ಅಮರಗೋಳ.

ಒಬ್ಬರೇ ಇಷ್ಟೊಂದು ಹಣ್ಣುಗಳನ್ನು ತಗೊಂಡು ಹೋಗಿ ಏನು ಮಾಡುತ್ತಾರೆ’ ಎಂಬ ನನ್ನ ಕುತೂಹಲದ ಪ್ರಶ್ನೆಗೆ, ದ್ಯಾಮಣ್ಣ ಅವರು, ‘ಈ ಹಣ್ಣುಗಳನ್ನು ತಮ್ಮೂರಿನ ಸ್ನೇಹಿತರು, ಪರಿಚಿತರಿಗೆ, ಸಂಬಂಧಿಕರಿಗೆ ಹಂಚುತ್ತಾರೆ. ಇದೂ ಕೂಡ ಒಂದು ಸಂಪ್ರದಾಯ' ಎಂದು ಅವರು ವಿವರಿಸಿದರು.

‘ಬಳುವಲು ಹಣ್ಣಿನೊಳಗಿರುವ ತಿರುಳು ತೆಗೆದು ಅದಕ್ಕೆ ಬೆಲ್ಲ ಸೇರಿಸಿ ಮತ್ತೆ ಸೊಗಟೆಗೆ (ಚಿಪ್ಪಿಗೆ) ತುಂಬಿ ಒಂದು ದಿನ ಕಳೆಯುವಂತೆ ಇಡುತ್ತಾರೆ. ಒಂದು ದಿನ ಬಿಟ್ಟು ಆ ಹೂರಣ ಸವಿದರೆ ಉತ್ತರ ಕರ್ನಾಟಕದ ಹುಗ್ಗಿಯ ಸವಿ ದೊರಕುತ್ತದೆ’ ಎನ್ನುತ್ತಾ ಬಳುವಲ ಪ್ರಸಾದ ಸವಿಯುವ ವಿಧಾನವನ್ನು ವಿವರಿಸುತ್ತಾರೆ ಚಂದರಗಿ ಗ್ರಾಮದ ಬಸವ್ವ ತೋಟಗಟ್ಟಿ.



ಬಳುವಲ ಹಣ್ಣಿನ ಪ್ರಸಾದ

9ನೇ ಪುಟಕ್ಕೆ...

ಅಣಬೆಯ ಆಕಾರದೊಳಗೆ ಕಲೆಯ ಸಾಕ್ಷಾತ್ಕಾರ



ದುರ್ಗಂಧದ ಅಣಬೆಯ ನೃತ್ಯ









• ರೂಪಾ ಕೆ.ಎಂ.

ಪ್ರಕೃತಿಯಲ್ಲಿ ಅಡಗಿರುವ ಪ್ರತಿ ಕಣವೂ ಕಲಾತ್ಮಕತೆಯ ಚೌಕಟ್ಟಿನಲ್ಲಿಯೇ ವಿಕಸನಗೊಳ್ಳುತ್ತಿರುತ್ತದೆ. ಆದರೆ, ಅದನ್ನು ನೋಡುವ ದೃಷ್ಟಿಕೋನವೊಂದು ಸುಲಲಿತವಾಗಿ ದಕ್ಕಬೇಕಷ್ಟೆ. ಹಾಗೊಮ್ಮೆ ನೋಡಲು ಸಾಧ್ಯವಾದರೆ ಪ್ರತಿ ಜೀವಿಯ ವಿನ್ಯಾಸ, ರಚನೆ, ಆಕಾರ, ಲಯ, ಬಣ್ಣಗಳೆಲ್ಲವೂ ಕೇವಲ ಅವುಗಳನ್ನಷ್ಟೆ ಪ್ರತಿನಿಧಿಸದೇ, ಹಲವು ಭಾವಗಳನ್ನು ಏಕಕಾಲಕ್ಕೆ ಸ್ಫುರಿಸಬಲ್ಲ, ಕಲಾಲೋಕವನ್ನು ಸೃಷ್ಟಿಸಬಲ್ಲ ಧಾತುಗಳಾಗುತ್ತವೆ.

ಇಂಥ ಹೊಳಹುಗಳನ್ನು 'ಅಣಬೆ' ಕಲಾಕೃತಿಗಳ ಮೂಲಕ ತೆರೆದಿಡುತ್ತಾ ಹೋಗಿದ್ದಾರೆ ಕಲಾವಿದ ಗಣಪತಿ ಅಗ್ನಿಹೋತ್ರಿ. ಈ ಕಲಾಕೃತಿಗಳ ಪ್ರದರ್ಶನ ಬೆಂಗಳೂರಿನ ವೆಂಕಟಪ್ಪ ಕಲಾಗ್ಯಾಲರಿಯಲ್ಲಿ ಈಚೆಗೆ ನಡೆಯಿತು.

ಪಶ್ಚಿಮಘಟ್ಟದಲ್ಲಿ ಹೇರಳವಾಗಿ ಲಭ್ಯವಿರುವ ದುರ್ಗಂಧದ ಅಣಬೆಯನ್ನು (ಸ್ಟಿಂಕ್‌ಹಾರ್ನ್) ಕೇಂದ್ರವಾಗಿಟ್ಟುಕೊಂಡು ಗಣಪತಿ ಅಗ್ನಿಹೋತ್ರಿ ಅನೂಹ್ಯ ಎನಿಸುವ ಕಲಾಕೃತಿಗಳನ್ನು ರಚಿಸಿದ್ದಾರೆ. ಸತ್ತ ಸಾವಯವ ವಸ್ತುಗಳ ಮೇಲೂ ಸುಲಭವಾಗಿ ಈ ಅಣಬೆ ಬೆಳೆಯುತ್ತದೆ. ಮಣ್ಣಿನ ಫಲವತ್ತತೆಯನ್ನು ಸುಧಾರಿಸುವ ಪೋಷಕಾಂಶಗಳಾಗಿ ಸಸ್ಯದ ಅವಶೇಷಗಳನ್ನು ಪರಿವರ್ತಿಸುವಲ್ಲಿ ಈ ಅಣಬೆಯು ಪ್ರಮುಖ ಪಾತ್ರವಹಿಸುತ್ತದೆ. ವಿಷಕಾರಿ ಎನಿಸಿರುವ ಈ ಅಣಬೆಯ ಭಿನ್ನ ಭಿನ್ನ ಭಂಗಿಯನ್ನು ಈ ಕಲಾಕೃತಿಗಳಲ್ಲಿ ನೋಡಬಹುದು.

ಬಾಗಿಯೂ ಸ್ಥಿರವಾಗಿ ನಿಂತಂತೆ ಕಾಣುವ ಅಣಬೆ ಸಮೂಹಗಳು ಮುಖವಾಡ ತೊಟ್ಟ ಮನುಷ್ಯ ಲೋಕದ ಹಲವು ತಲ್ಲಣಗಳ ರೂಪಕದಂತೆ ಕಾಣುತ್ತವೆ. ಕೇವಲ ಎಂಟರಿಂದ ಹತ್ತು ದಿನಗಳ ಆಯುಷ್ಯ ಹೊಂದಿರುವ ಈ ದುರ್ಗಂಧದ ಅಣಬೆಯು ಪ್ರತಿ ದಿನವೂ ಹೊಸ ಬಣ್ಣ, ಆಕಾರಗಳ ಮೂಲಕ ಹೊಸ ಹೊಳಹುಗಳ ಸಾಧ್ಯತೆಯನ್ನು ವಿಸ್ತರಿಸುತ್ತಲೇ ಹೋಗುತ್ತದೆ.

ಕಾಡಿದ ಹಳೆಯ ಸಂಗತಿಗಳಿಗೆ ಸಮಕಾಲೀನತೆಯ ಚೌಕಟ್ಟು ಹಾಕಬೇಕು ಎನ್ನುವುದು ಮೊದಲಿನಿಂದಲೂ ಅಗ್ನಿಹೋತ್ರಿಯವರು ಕಂಡುಕೊಂಡ ಕಲಾಸತ್ಯ. ಈ ಹಿನ್ನೆಲೆಯಲ್ಲಿ ಪಶ್ಚಿಮಘಟ್ಟದ ತಪ್ಪಲಿನಲ್ಲಿ ಬೆಳೆದ ಅಗ್ನಿಹೋತ್ರಿ ಅವರಿಗೆ ಬಾಲ್ಯದಲ್ಲಿ ಕಂಡ ಅಣಬೆಗಳು ಮತ್ತು ಮನೆಯಲ್ಲಿ ಅಣಬೆಗಳನ್ನು ತಿನ್ನುವುದಕ್ಕೆ ನಿಷೇಧವಿದ್ದರಿಂದ ಅದರ ಬಗ್ಗೆ ವಿಪರೀತ ಎನ್ನುವಷ್ಟು ಕುತೂಹಲವಿತ್ತು. ಆ ಕುತೂಹಲವನ್ನೇ ಇಲ್ಲಿ ಕಲಾಕೃತಿಗಳನ್ನಾಗಿಸಿದ್ದಾರೆ.

ದುರ್ಗಂಧದ ಅಣಬೆಗಳ ಬಗ್ಗೆ ನಿರಂತರ ಆರು ತಿಂಗಳು ಅಧ್ಯಯನ ನಡೆಸಿದ್ದಾರೆ. ಹತ್ತು ದಿನಗಳ ಅದರ ಜೀವಿತಾವಧಿಯ ಪ್ರತಿ ದಿನವನ್ನೂ ಸೂಕ್ಷ್ಮವಾಗಿ ಗ್ರಹಿಸಿ, ಅದರ ವಿಕಾಸದಲ್ಲಿ ಅಡಗಿರುವ ಸೌಂದರ್ಯವನ್ನು ಕಲಾರಸಿಕರಿಗೆ ಉಣಬಡಿಸಿದ್ದಾರೆ. ಅಣಬೆಗಳ ಆಂಗಿಕ ಅಭಿವ್ಯಕ್ತಿಯನ್ನು ಸೃಷ್ಟಿಕ್ರಿಯೆಗೆ ಹೋಲಿಸಿರುವುದು ಕಲಾವಿದರ ಕೈಚಳಕವೇ ಸರಿ.



ಗಣಪತಿ ಅಗ್ನಿಹೋತ್ರಿ

ಈ ಬಗ್ಗೆ ಅಗ್ನಿಹೋತ್ರಿ ಹೇಳುವುದಿಷ್ಟು: ಈ ಮುಂಚೆ ಬಾಲ್ಯದ ಬಗ್ಗೆ ಕಲಾಸರಣಿ ಮಾಡಿದಾಗ ಅಣಬೆಗಳನ್ನು ಅಲ್ಲಲ್ಲಿ ತಂದಿದ್ದೆ. ಆದರೆ, ಸಮಗ್ರವಾಗಿ ಅಣಬೆ ಸುತ್ತವೇ ಕಲಾಕೃತಿಗಳನ್ನು ರಚಿಸಿರುವುದು ಇದೇ ಮೊದಲು. ಮನೆಯಲ್ಲಿದ್ದ ನಿಷೇಧದ ನಡುವೆಯೂ ಚಿಕ್ಕವನಿದ್ದಾಗ ಅಣಬೆಗಳನ್ನು ಕದ್ದು ತಿಂದಿದ್ದೇನೆ. ಅಣಬೆ ಎನ್ನುವುದು ಲೋಕದ ಕಣ್ಣಿಗೆ ಒಂದು ಯಕಃಶ್ಚಿತ್ ಜೀವಿ ಅನಿಸಬಹುದು. ಆದರೆ, ನನ್ನ ಪಾಲಿಗೆ ನಿಷೇಧವನ್ನು ಮುರಿಯುವುದಕ್ಕೆ, ಅನಿಸಿದ್ದನ್ನು ಮಾಡುವುದಕ್ಕೆ, ಸೌಂದರ್ಯವನ್ನು ಸೂಕ್ಷ್ಮವಾಗಿ ಗ್ರಹಿಸುವುದಕ್ಕೆ ಒದಗಿಬಂದ ಕಲಾವಸ್ತು.

ಮರ, ಲೋಹ, ದಾರ ಹಾಗೂ ಮಣ್ಣಿನ ಮಾಧ್ಯಮಗಳ ಮೂಲಕ ದೊಡ್ಡ ಗಾತ್ರದಲ್ಲಿ ಅಣಬೆಗಳ ಕಲಾಕೃತಿಗಳನ್ನು ರಚಿಸುವ ಇರಾದೆಯಿದ್ದು, ಇದಕ್ಕಾಗಿ ಕೆಲಸ ಪ್ರಗತಿಯಲ್ಲಿದೆ ಎನ್ನುವ ಖುಷಿಯನ್ನು ಹಂಚಿಕೊಂಡರು. ❖



ಗಣೇಶ್ ಧಾರೇಶ್ವರ್

ಅಧ್ಯಾತ್ಮದ ಅನುಭೂತಿ

ಅಗ್ನಿಹೋತ್ರಿ ಅವರ ಕಲಾಕೃತಿಗಳ ಪ್ರದರ್ಶನ ಪ್ರಕೃತಿಯ ವಿಸ್ಮಯವನ್ನು ಹೇಳುತ್ತಾ ಹೋದರೆ, ಇದೇ ಸಂದರ್ಭದಲ್ಲಿ ಪ್ರದರ್ಶನಕ್ಕೆ ಇಡಲಾದ ಮತ್ತೊಬ್ಬ ಕಲಾವಿದ ಗಣೇಶ್ ಧಾರೇಶ್ವರ್ ಅವರ ಕಲಾಕೃತಿಗಳು ಅಧ್ಯಾತ್ಮದ ಅನುಭೂತಿಯನ್ನು ನೋಡುಗರ ಎದೆಯೊಳಗೆ ಇಳಿಸುತ್ತಾ ಹೋಯಿತು.

ಭಗವದ್ಗೀತೆಯ ಹಲವು ಪ್ರಸಿದ್ಧ ಶ್ಲೋಕಗಳನ್ನು ಏಕಾಂತದಲ್ಲಿ ಹೇಳಿಕೊಳ್ಳುತ್ತಾ ಕಲಾವಿದನೊಬ್ಬನ ಮನಸ್ಸಿನಲ್ಲಿ ಮೂಡಿದ ಕಲಾಕೃತಿಗಳೆಲ್ಲವೂ ಕ್ಯಾನ್ವಾಸ್‌ಗೆ ರೂಪಾಂತರಗೊಂಡು, ಲೋಕಾಂತಕ್ಕೆ ಬಹಳ ನಾಜೂಕಾಗಿ ದಾಟಿಸುವಂತೆ ಈ ಕಲಾಕೃತಿಗಳು ಕಂಡವು.



ಧಾರೇಶ್ವರ್ ಅವರ ಅಮೂರ್ತ ಕಲಾಕೃತಿ

'ಎಲ್ಲರೊಳಗೂ ನಾನಿದ್ದೇನೆ' ಎನ್ನುವ ಶ್ರೀಕೃಷ್ಣನ ಮಾತನ್ನು ಅಮೂರ್ತವಾಗಿ ತೋರಿಸಿದ್ದಾರೆ. ಬಹುತೇಕ ಕಲಾಕೃತಿಗಳಲ್ಲಿ ಬಾನಿನ ನೀಲಿ ಬಣ್ಣವನ್ನು ಬಳಸಲಾಗಿದೆ. ಈ ನೀಲಿ ಬಣ್ಣವು ಜ್ಞಾನದ ಸಂಕೇತ. ಅಂದರೆ ಭಗವಂತ ಜ್ಞಾನಸ್ವರೂಪಿಯಾಗಿ ಎಲ್ಲರೊಳಗೂ ಒಂದಾಗಿದ್ದಾನೆ ಎಂಬುದನ್ನು ಬಣ್ಣದ ಮೂಲಕವೇ ಬಹಳ ಸೂಕ್ಷ್ಮವಾಗಿ ಹೇಳಿದ್ದಾರೆ ಧಾರೇಶ್ವರ್.



ತನ್ನ ರಾಜ್ಯವನ್ನು ಕಾಪಾಡಲು ರಾಣಿ ಪದ್ಮಿನಿ ತೆಗೆದುಕೊಳ್ಳುವ ದಿಟ್ಟ ನಿರ್ಧಾರ ಆಕೆಯ ಬದುಕಿಗೆ ಕಳಂಕ ತರುವ ದುರಂತಮಯ ಕಥೆಯನ್ನು ಸಾಗರದ 'ಸ್ಪಂದನ' ತಂಡ ರಂಗದ ಮೇಲೆ ತಂದಿದೆ. ಬೆಲ್ಜಿಯಂನ ಮಾರಿಸ್ ಮ್ಯಾಟರ್ ಲಿಂಕ್ ಎಂಬ ಕವಿ 1902ರಲ್ಲಿ ರಚಿಸಿದ 'ಮೊನ್ನವನ್ನ' ನಾಟಕದಿಂದ ಪ್ರೇರಿತ ರಂಗಪ್ರಯೋಗವಿದು...

ವಿಚಾರ ವಿಮರ್ಶೆಗೆ ಒಳಪಡಿಸುವ ಪ್ರಾಣ ಪದ್ಮಿನಿ

• ಗೌರಿ ಚಂದ್ರಕೇಸರಿ

ಯುದ್ಧ ಮತ್ತು ಸೌಂದರ್ಯ ಇವೆರಡೂ ಪದಗಳು ಒಂದಕ್ಕೊಂದು ಸಂಬಂಧ ಪಡದಿರುವ ಪದಗಳು. ಆದರೆ ಪುರಾಣೇತಿಹಾಸಿಕ ಕಾಲದಿಂದಲೂ ಹಲವಾರು ಯುದ್ಧಗಳು ಸೌಂದರ್ಯದ ಕಾರಣದಿಂದಲೇ ನಡೆದಿವೆ. ಒಂದು ಸುಂದರವಾದ ವಸ್ತುವನ್ನೋ, ಹೆಣ್ಣನ್ನೋ ತನ್ನದಾಗಿಸಿಕೊಳ್ಳಲು ಯುದ್ಧವನ್ನು ಅನಿವಾರ್ಯವಾಗಿಸಿಕೊಳ್ಳಲಾಗಿದೆ. ಈ ಗುದ್ದಾಟದಲ್ಲಿ ಹಲವಾರು ಕೋಟೆ ಕೊತ್ತಲಗಳು ಉರುಳಿ ಹೋಗಿವೆ.

'ಪ್ರಾಣ ಪದ್ಮಿನಿ' ಇದೇ ವಸ್ತುವಿಷಯವುಳ್ಳ ನಾಟಕ. ಯಾವುದೇ ಕಾಮನೆಗಳಿಲ್ಲದ ನವಿರಾದ ಪ್ರೇಮ ನಿವೇದನೆಯ ಸರಳ ಕತೆ ನಾಟಕದ್ದು. ನಾಯಕಿ ಕಳಂಕ ರಹಿತಳಾಗಿದ್ದರೂ ಸೀತೆಯಂತೆ ತಾನು ಅಕಳಂಕಿತಳು ಎಂಬುದನ್ನು ಪರಿ ಪರಿಯಾಗಿ ತಿಳಿಸುವ ಅನಿವಾರ್ಯತೆ. ಚಿತ್ತೋರಿನ ಪದ್ಮಾವತಿಯಂತೆಯೇ ವಿಜಯನಗರದ ಪದ್ಮಿನಿ ಎಂಬ ರಾಣಿಯೂ ಮಾನ-ಪ್ರಾಣ ಎರಡರಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳುವ ಸಂದರ್ಭ ಎದುರಾಗುತ್ತದೆ.

ಅಜ್ಮಲ್‌ಖಾನನೆಂಬ ಸೇನಾಧಿಪತಿ ವಿಜಯನಗರದ ಮೇಲೆ ಘೋಷಿಸಿರುವ ದಾಳಿಯನ್ನು ಹಿಂಪಡೆಯಬೇಕೆಂದರೆ ಅಲ್ಲಿನ ರಾಣಿ ಪದ್ಮಿನಿ ತನ್ನ ಬಳಿ ಬರಬೇಕೆಂಬ ಷರತ್ತನ್ನು ಹಾಕುತ್ತಾನೆ. ಅನ್ನ ಆಹಾರಗಳಿಲ್ಲದೇ ಕಂಗಾಲಾದ ವಿಜಯನಗರದ ಪ್ರಜೆಗಳಿಗೆ ಆಹಾರ ತುಂಬಿದ ಬಂಡಿಗಳನ್ನು ಕಳಿಸುವ ಭರವಸೆ ನೀಡುತ್ತಾನೆ. ಹೀಗೆ ಆರಂಭವಾಗುವ ನಾಟಕದುದ್ದಕ್ಕೂ ಸರಿ-ತಪ್ಪು, ಸ್ವಾರ್ಥ-ತ್ಯಾಗಗಳ ಸಂಘರ್ಷಕ್ಕೆ ಪ್ರತೀ ಪಾತ್ರಗಳೂ ತಮ್ಮನ್ನು ತಾವು ಒಡ್ಡಿಕೊಳ್ಳುತ್ತವೆ. ಹಸಿವಿನಿಂದ ಕಂಗೆಟ್ಟ ಪ್ರಜೆಗಳಿಗೆ ಪದ್ಮಿನಿ ಅಜ್ಮಲ್‌ಖಾನನ ಹತ್ತಿರ ತೆರಳುವುದು ಸರಿ ಎನ್ನಿಸಿದರೆ, ಪತಿ ರಾಮರಾಯನಿಗೆ ಪತ್ನಿಯ ನಡೆ ಅಧರ್ಮ, ಅಶ್ಲೀಲವಾಗಿ ಕಾಣುತ್ತದೆ. ಸೊಸೆಯ ನಿರ್ಧಾರ ಮಾವನಿಗೆ ತ್ಯಾಗವಾಗಿ ಕಂಡರೆ ಪದ್ಮಿನಿಗೆ ಕರ್ತವ್ಯವೆಂಬಂತೆ ಕಾಣುತ್ತದೆ. ಪಾತ್ರ ಪಾತ್ರಗಳ ಮಧ್ಯದಲ್ಲಿ ನಡೆಯುವ ಈ ಎಲ್ಲ ಸಂಘರ್ಷಗಳು ನೋಡುಗರನ್ನು ವಿಚಾರ ವಿಮರ್ಶೆಗೆ ಒಳಪಡುವಂತೆ ಮಾಡುತ್ತದೆ.

ಪತಿಯ ಯೋಚನೆಗೆ ತದ್ವಿರುದ್ಧವಾಗಿ ನಿರ್ಧಾರ ಕೈಗೊಳ್ಳುವ ಪದ್ಮಿನಿ ಅಜ್ಮಲ್‌ಖಾನನ ಪ್ರೇಮವನ್ನು ತಳ್ಳಿಹಾಕಿ ಅವನ ಮನವನ್ನು ಪರಿವರ್ತಿಸುವುದರಲ್ಲಿ ಯಶಸ್ವಿಯಾಗುತ್ತಾಳೆ. ಮುಸ್ಲಿಂ ದೊರೆಯ ಸೈನ್ಯದಿಂದ ಅಪಾಯದಲ್ಲಿರುವ ಅವನ ಜೀವವನ್ನು ಉಳಿಸಲು ವಿಜಯನಗರಕ್ಕೆ ಕರೆತರುತ್ತಾಳೆ. ತನ್ನನ್ನು ತಾನು ಎಷ್ಟೇ ಸಮರ್ಥಿಸಿಕೊಂಡರೂ ಪತಿ ರಾಮರಾಯ ಅವಳೊಬ್ಬ ಕುಲಟೆ ಎನ್ನುವಂತೆ ನೋಡುತ್ತಾನೆ. ಅವಳ ತ್ಯಾಗ, ಸತ್ಯ, ಧೈರ್ಯ ಅವನಿಗೆ ಗೌಣವಾಗಿ ಕಾಣುತ್ತವೆ. ರಾವಣನಿಂದ ಬಂಧಮುಕ್ತಳಾಗಿ ಆಗಮಿಸಿದ ಸೀತೆ ಅನುಭವಿಸಿದ ಅಪವಾದಗಳನ್ನು ರಾಣಿ ಪದ್ಮಿನಿ ಪತಿಯಿಂದ ಎದುರಿಸುತ್ತಾಳೆ. ರಾಮರಾಯನಿಗಿಂತ ಬಂಧಿಯಾಗುವ ಅಜ್ಮಲ್‌ಖಾನನ ವ್ಯಕ್ತಿತ್ವ ಉತ್ಕೃಷ್ಟವಾಗಿ ಕಾಣುತ್ತದೆ.

ಬೆಲ್ಜಿಯಂನ ಮಾರಿಸ್ ಮ್ಯಾಟರ್ ಲಿಂಕ್ ಎಂಬ ಕವಿ 1902ರಲ್ಲಿ ರಚಿಸಿದ 'ಮೊನ್ನವನ್ನ' ಎಂಬ ನಾಟಕವನ್ನು ಎಸ್.ಜಿ.ಶಾಸ್ತ್ರಿಯವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಅದನ್ನು ಆಧಾರವಾಗಿಟ್ಟುಕೊಂಡು ಮಂಜುನಾಥ ಬಡಿಗೇರ ನಾಟಕವನ್ನು ರೂಪಾಂತರಿಸಿ ವಿನ್ಯಾಸ ಹಾಗೂ ನಿರ್ದೇಶನ ಮಾಡಿದ್ದಾರೆ.

ಸರಳ, ಅರ್ಥಪೂರ್ಣವೆನಿಸುವ ರಂಗಸಜ್ಜಿಕೆ ನಾಟಕಕ್ಕೆ ಮೆರುಗು ನೀಡಿತು. ಜೀವನ್ ಕುಮಾರ ಹೆಗ್ಗೋಡು ಒದಗಿಸಿದ ಬೆಳಕಿನಿಂದ ನಾಟಕ ಕಳೆಗಟ್ಟಿತು. ಭಾರ್ಗವ ಹೆಗ್ಗೋಡು ಸಂಗೀತ ನಾಟಕಕ್ಕೆ ಪೂರಕವಾಗಿತ್ತು. ಮುಖ್ಯ ಭೂಮಿಕೆಯಲ್ಲಿದ್ದ ಶಿವಕುಮಾರ ಉಳವಿ, ವಿವೇಕ ನಾಯಕ, ಭೂಮಿ, ಕಾರ್ತಿಕ. ಕೆ ಅಭಿನಯದಿಂದ ನುರಿತ ಕಲಾವಿದರೆನ್ನುವುದನ್ನು ಸಾಬೀತು ಪಡಿಸಿದರು. ಮಂಜುನಾಥ ಬಡಿಗೇರ ಅವರ ಶ್ರಮ, ಕೌಶಲ್ಯ ನಾಟಕದುದ್ದಕ್ಕೂ ಕಂಡು ಬಂದಿತು. ಸಾಗರದ 'ಸ್ಪಂದನ' ರಂಗ ತಂಡ ಈ ನಾಟಕವನ್ನು ಶಿವಮೊಗ್ಗದಲ್ಲಿ ಇತ್ತೀಚೆಗೆ ಪ್ರದರ್ಶಿಸಿತು.

ಇತಿಹಾಸದ ರಾಜ, ರಾಣಿ ಮತ್ತು ಪ್ರದೇಶಗಳ ಹೆಸರುಗಳನ್ನು ಈ ನಾಟಕಕ್ಕೆ ಹೊಂದುತ್ತದೆ ಎಂಬ ಕಾರಣದಿಂದ ಬಳಸಲಾಗಿದ್ದು ಅಷ್ಟೊಂದು ಸಮಂಜಸವೆನ್ನಿಸಲಿಲ್ಲ. ❖

ಗೊಡಚಿಯ ಬಳುವಲ ಹಣ್ಣಿನ ಜಾತ್ರೆ

8ನೇ ಪುಟದಿಂದ..

ಪ್ರತಿವರ್ಷ ಜಾತ್ರೆಯಲ್ಲಿ ಐವತ್ತಕ್ಕೂ ಹೆಚ್ಚು ವ್ಯಾಪಾರಸ್ಥರು ಬೇಲದ ಹಣ್ಣುಗಳನ್ನು ಮಾರಾಟ ಮಾಡುತ್ತಾರೆ. ತಿಂಗಳು ಪೂರ್ತಿ ನಡೆಯುವ ಜಾತ್ರೆಯಾದರೂ ಬಳುವಲ ಹಣ್ಣಿನ ವ್ಯಾಪಾರ ಹೆಚ್ಚು ನಡೆಯುವುದು ಹುಣ್ಣಿಮೆಯಿಂದ ಅಮಾವಾಸ್ಯೆವರೆಗೆ (ಐದು ದಿನಗಳಲ್ಲಿ ವ್ಯಾಪಾರ ಜೋರು) ಮಾತ್ರ. ಆನಂತರ ಹಣ್ಣುಗಳು ಖಾಲಿಯಾಗುತ್ತವೆ ಎನ್ನುತ್ತಾರೆ ವ್ಯಾಪಾರಸ್ಥರು.

ಇಷ್ಟಕ್ಕೂ ಬೇಲದ ಹಣ್ಣನ್ನು ಈ ಭಾಗದಲ್ಲಿ ಬೆಳೆಯುವುದು ಕಡಿಮೆ. ಹಾವೇರಿ, ಶಿಗ್ಗಾವಿ, ಹಾನಗಲ್, ಗೊಂದಿ, ಆನವಟ್ಟಿ ಸುತ್ತಮುತ್ತಲಿನ ಪ್ರದೇಶದಲ್ಲಿ ಹೆಚ್ಚು ಬೆಳೆಯುತ್ತಾರೆ. ಜಾತ್ರೆ ಸಮಯದಲ್ಲಿ ಈ ಸ್ಥಳಗಳಿಂದ ಹಣ್ಣನ್ನು ತರಿಸಿಕೊಳ್ಳುತ್ತೇವೆ ಎಂದು ವ್ಯಾಪಾರಸ್ಥರು ಹೇಳುತ್ತಾರೆ.

ಬೇಲಕ್ಕೂ ಜಾತ್ರೆಗೂ ನಂಟು

12ನೇ ಶತಮಾನದಲ್ಲಿದ್ದ ಮಡಿವಾಳ ಮಾಚಯ್ಯ ಶರಣರು ಈ ಭಾಗಕ್ಕೆ ಒಮ್ಮೆ ಭೇಟಿ ನೀಡಿದ್ದಾರೆ. ಆಗ ಈ ಪ್ರದೇಶದಲ್ಲಿ ರೋಗರುಜಿನ ಹೆಚ್ಚಿತ್ತಂತೆ. ಹಲವು ರೋಗಗಳಿಂದ ಮುಕ್ತಿ ಕೊಡುವ ಹಣ್ಣು ಬೇಲ-ಬಾರೆ ಯನ್ನು ಈ ಕಡೆ ಹೆಚ್ಚು ಬೆಳೆಯುತ್ತಿದ್ದರಂತೆ. ರೋಗಗಳಿಗೆ ಔಷಧವಾಗುವ ಬೇಲದ ಹಣ್ಣನ್ನು 'ಸುಮ್ಮನೆ ತಿನ್ನಿ' ಎಂದರೆ ಯಾರೂ ತಿನ್ನುವುದಿಲ್ಲ. ಹೀಗಾಗಿ ಬೇಲ–ಬಾರೆ ಹಣ್ಣಿನ ಜಾತ್ರೆ ಎಂದೇ ಪ್ರಚಾರ ಮಾಡಿದರೆ ಜನ ದೈವಿಕ ಭಾವನೆಯಿಂದ ಹಣ್ಣು ತಿಂದಾರು ಎಂದು ಶರಣರು ಯೋಚಿಸಿದರಂತೆ. ಅಲ್ಲಿಂದ ಪ್ರಸಾದದ ರೂಪದಲ್ಲಿ ಬೇಲ-ಬಾರೆ ಹಣ್ಣುಗಳು ಭಕ್ತರ ಮನೆ ಸೇರುತ್ತಿವೆ' ಎಂದು ಗೊಡಚಿಯ 70 ರ ಹರೆಯದ ಹಿರೇಮಠ ಎಂಬ ಹಿರಿಯರು ವಿಜ್ಞಾನಿ ಡಾ.ಕಿರಣ್‌ಕುಮಾರ ಗೋರಬಾಳ ಅವರಿಗೆ ಮಾಹಿತಿ ನೀಡಿದ್ದಾರೆ.

ಸದ್ಯ ಬಾಗಲಕೋಟೆಯ ತೋಟಗಾರಿಕೆ ವಿವಿಯಲ್ಲಿ ಪ್ರಾಧ್ಯಾಪಕರಾಗಿರುವ ಕಿರಣ್ ಕುಮಾರ್ 20 ವರ್ಷಗಳಿಂದ ಬೇಲದ ಅಧ್ಯಯನ ನಡೆಸುತ್ತಿದ್ದಾರೆ. ಇದರ ಭಾಗವಾಗಿ (2015ರಲ್ಲಿ) ಗೊಡಚಿಗೆ ಹೋಗಿದ್ದಾಗ ಜಾತ್ರೆ–ಬೇಲದ ನಂಟಿನ ಬಗ್ಗೆ ಹಿರೇಮಠರು ಈ ಮಾಹಿತಿ ನೀಡಿದ್ದಾರೆ. ಆದರೆ, ಈ ವಿಷಯಕ್ಕೆ ಸಂಬಂಧಿಸಿದಂತೆ ಎಲ್ಲೂ ಲಿಖಿತ ದಾಖಲೆಗಳು ಲಭ್ಯವಾಗಿಲ್ಲ. ಬಹುಶಃ ಈ ಭಾಗದ ಜನರಲ್ಲಿರುವ ನಂಬಿಕೆಯೂ ಇರಬಹುದು.

ಬಹಳ ಹಿಂದಿನಿಂದಲೂ ಭಕ್ತರು ಬೇಲದ ಹಣ್ಣನ್ನು ಭಕ್ತರು ಪ್ರಸಾದವಾಗಿ ಸೇವಿಸುತ್ತಿದ್ದಾರೆ ಎನ್ನುವುದಕ್ಕೆ ಹಣ್ಣಿನ ವ್ಯಾಪಾರ ಮಾಡುವ ಬಸಪ್ಪ ಅಮರಗೋಳ ನೀಡುವ ಮಾಹಿತಿ ಸಾಕ್ಷಿಯಾತ್ತದೆ. 'ನಮ್ಮ ತಂದೆ ಈ ಜಾತ್ರೆಯಲ್ಲಿ ಬೇಲದ ಹಣ್ಣನ್ನು ಮಾರುತ್ತಿದ್ದರು. ನಮ್ಮ ತಾತ ಕೂಡ ಮಾರಾಟ ಮಾಡುತ್ತಿದ್ದರಂತೆ. ಈಗ ನಾನು ಮುಂದುವರಿಸಿರುವೆ' ಎಂದು ಮೂರು ತಲೆಮಾರುಗಳ ಬೇಲದ ವಹಿವಾಟನ್ನು ವಿವರಿಸಿದರು ಹಣ್ಣಿನ ವ್ಯಾಪಾರಿ ದ್ಯಾಮಣ್ಣ ಅಮರಗೋಳ.

ಪೋಶಕಾಂಶಗಳ ಆಗರ

ಹುಳಿ-ಸಿಹಿ ಮಿಶ್ರಿತ ರುಚಿಯಿರುವ ಬೇಲದಹಣ್ಣು ಪೋಷಕಾಂಶಗಳ ಆಗರ. ವಿಟಮಿನ್ ಸಿ, ಪೊಟ್ಯಾಸಿಯಂ, ಫಾಸ್ಪರಸ್ ಮತ್ತಿತರ ಪೋಷಕಾಂಶಗಳನ್ನು ಹೊಂದಿದೆ. ಹಲವು ರೋಗಗಳಿಗೆ ಔಷಧವಾಗುವ ಗುಣಗಳಿರುವ ಕಾರಣಕ್ಕೆ ಇದನ್ನ 'ಬಹುರೋಗಗಳಿಗೆ ಔಷಧಿಯಾಗುವ ಹಣ್ಣು' ಎಂದು ಕರೆಯುತ್ತಾರೆ. ಇಂಥ ಅಪರೂಪದ ಹಣ್ಣು, ಉತ್ತರ ಕರ್ನಾಟಕದ ಹಲವು ಜಿಲ್ಲೆಗಳ ಜನರಿಗೆ ದೇವರ ಪ್ರಸಾದದ ರೂಪದಲ್ಲಿ ತಲುಪುತ್ತಾ, ಆರೋಗ್ಯ ವೃದ್ಧಿಗೆ ಪೂರಕವಾಗುತ್ತಿರುವುದು ಉತ್ತಮ ಬೆಳವಣಿಗೆ. ❖



ಗೊಡಚಿ ಜಾತ್ರೆಯಲ್ಲಿ ಬೇಲದ ಹಣ್ಣಿನ ರಾಶಿ

ಮುನ್ನೋಟ 14-12-2025 ರಿಂದ 20-12-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ವಾರದ ಆರಂಭದಲ್ಲಿ ಹಲವಾರು ಯೋಜನೆಗಳು ನಿಮ್ಮ ತಲೆಯಲ್ಲಿರುತ್ತವೆ, ಸರಿಯಾಗಿ ಆಯ್ಕೆ ಮಾಡಿ ಮುಂದುವರಿಸಿ. ಆದಾಯವು ಕಡಿಮೆ ಇದ್ದರೂ, ಖರ್ಚಿಗೆ ತಕ್ಕಷ್ಟು ಬರುತ್ತದೆ. ಗುರು ಹಿರಿಯರ ವಿಶ್ವಾಸ ಸಂಪಾದಿಸಲು ಯತ್ನ ಮಾಡುವಿರಿ. ವ್ಯವಹಾರಗಳಲ್ಲಿ ನಷ್ಟವಾಗುವ ಸಂಭವವಿದೆ ಎಚ್ಚರ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲ ಮಾತ್ರ ಇರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಮನಸ್ಸಿನಲ್ಲಿ ಅನಿಶ್ಚಿತತೆ ಇರುತ್ತದೆ. ಆದಾಯವು ನಿಮ್ಮ ನಿರೀಕ್ಷೆಯಂತೆ ಇರುತ್ತದೆ. ಕೃಷಿಭೂಮಿ ವ್ಯವಹಾರದಲ್ಲಿ ಸ್ವಲ್ಪ ಆದಾಯವಿರುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶವಿರುತ್ತದೆ. ಅನಾರೋಗ್ಯ ಪೀಡಿತರ ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು. ಹಣ್ಣು ತರಕಾರಿ ವ್ಯಾಪಾರ ಮಾಡುವವರಿಗೆ ವ್ಯಾಪಾರದಲ್ಲಿ ವೃದ್ಧಿ ಇರುತ್ತದೆ. ಕೃಷಿಯುತ್ಪನ್ನಗಳಿಗೆ ಹೆಚ್ಚಿನ ಬೆಲೆ ದೊರಕುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಸಮಾಜದಿಂದ ಗೌರವ ಸಿಗುವ ಸಾಧ್ಯತೆಗಳಿವೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಕೆಲಸಗಳಿಗೆ ಹಿರಿಯರ ಸಹಕಾರ ದೊರೆಯುತ್ತದೆ. ಭೂಮಿ ವ್ಯವಹಾರ ಮಾಡುವವರ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಪ್ರಮಾಣದ ಫಲಿತಾಂಶವಿರುವುದಿಲ್ಲ. ಕೆಲವರಿಗೆ ತಲೆನೋವು ಅಥವಾ ಕಣ್ಣಿನ ತೊಂದರೆ ಕಾಣಿಸಿಕೊಳ್ಳಬಹುದು. ಹಣಕಾಸಿನ ವ್ಯವಹಾರಗಳಲ್ಲಿ ಎಚ್ಚರವಾಗಿರಿ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಬಹಳ ಶಾಂತ ಮನಸ್ಥಿತಿ ನಿಮ್ಮಲ್ಲಿ ಇರುತ್ತದೆ. ಧಾರ್ಮಿಕ ಉಪನ್ಯಾಸ ನೀಡುವವರಿಗೆ ಬೇಡಿಕೆ ಹೆಚ್ಚುತ್ತದೆ. ಭೂಮಿ ಸಂಬಂಧಿತ ವ್ಯವಹಾರಗಳಲ್ಲಿ ಹಾಗೂ ನೀರಿನ ವ್ಯವಹಾರಗಳಲ್ಲಿ ಹೆಚ್ಚು ಆದಾಯವಿರುತ್ತದೆ. ಕೃಷಿಯಿಂದ ಆದಾಯ ಕಡಿಮೆಯಾಗಬಹುದು. ಆಸ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ಸರಿ ಮಾಡಿಕೊಳ್ಳಲು ಸೂಕ್ತ ಮಾರ್ಗದರ್ಶನ ಮಾಡುವಿರಿ. ಕಾನೂನಾತ್ಮಕ ವ್ಯವಹಾರಗಳಲ್ಲಿ ಸೂಕ್ತ ಮಾರ್ಗದರ್ಶನ ಪಡೆದು ವ್ಯವಹರಿಸಿ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ವಾರದ ಆರಂಭದಲ್ಲಿ ಕೆಲಸ ಮಾಡುವ ಮನಸ್ಸು ಇರುವುದಿಲ್ಲ. ಆದಾಯವು ಅಗತ್ಯವನ್ನು ಪೂರೈಸುವಷ್ಟಿರುತ್ತದೆ. ಬಂಧುಗಳೊಡನೆ ವಿಶ್ವಾಸ ವೃದ್ಧಿ ಮಾಡಿಕೊಳ್ಳುವುದು ಉತ್ತಮ. ಆಸ್ತಿ ಸಂಬಂಧಿತ ವ್ಯವಹಾರಗಳನ್ನು ಮಾಡುವವರಿಗೆ ಹೆಚ್ಚು ಹಣ ದೊರೆಯುತ್ತದೆ. ಎಲೆಕ್ಟ್ರಾನಿಕ್ಸ್ ವಿದ್ಯಾರ್ಥಿಗಳಿಗೆ ಹೆಚ್ಚು ಅಭಿವೃದ್ಧಿ ಇರುತ್ತದೆ. ವಾಹನ ಚಾಲನೆಯಲ್ಲಿ ಹೆಚ್ಚಿನ ಜಾಗರೂಕತೆ ಅಗತ್ಯ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಆದಾಯವು ಕಡಿಮೆ ಇದ್ದರೂ ನಿಮ್ಮ ಶ್ರಮದಿಂದ ಹೆಚ್ಚು ಮಾಡಿಕೊಳ್ಳಬಹುದು. ಮನೆ ಬದಲಾವಣೆ ವಿಚಾರ ಮುನ್ನೆಲೆಗೆ ಬರುತ್ತದೆ. ಕ್ರೀಡಾಪಟುಗಳಿಗೆ ಉತ್ತೇಜನ ದೊರೆತು ಸಾಧನೆ ಮಾಡುವ ಸಂದರ್ಭವಿದೆ. ನಿಮ್ಮ ಅನುಕೂಲಕ್ಕಾಗಿ ಎಲ್ಲರನ್ನೂ ಓಲೈಸುವಿರಿ. ವಾಹನ ಮಾರಾಟಗಾರರಿಗೆ ವ್ಯಾಪಾರ ಈಗ ವೃದ್ಧಿಸುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ದೃಢ ನಿರ್ಧಾರಗಳು ನಿಮ್ಮಲ್ಲಿರಲಿ. ಆದಾಯವು ಸ್ವಲ್ಪ ಉತ್ತಮಗೊಳ್ಳುತ್ತದೆ. ಒರಟು ಮಾತಿನಿಂದ ನಿಮಗೆ ಅನಾನುಕೂಲ. ನಿಮ್ಮ ಉನ್ನತ ಶಿಕ್ಷಣ ಅಥವಾ ಉನ್ನತ ಅಧ್ಯಯನಕ್ಕಾಗಿ ದೂರ ಪ್ರಯಾಣ ಮಾಡಬೇಕಾದೀತು. ಕೈಸಾಲಗಳನ್ನು ತೀರಿಸಿ ನಿರಾಳರಾಗುವಿರಿ. ವಿದೇಶದಿಂದ ಮಕ್ಕಳ ಆಗಮನವನ್ನು ನಿರೀಕ್ಷಿಸುತ್ತಿರುವಿರಿ. ಮನೆಯ ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ಆಸಕ್ತಿ ತೋರಿ ಸಂಗಾತಿಗೆ ಸಹಾಯ ಮಾಡುವಿರಿ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ನಿಮ್ಮ ಬುದ್ಧಿವಂತಿಕೆ ಮತ್ತು ವಿವೇಚನೆಯನ್ನು ಬಳಸಿ ಕೆಲಸ ಮಾಡುವಿರಿ. ಅನಿರೀಕ್ಷಿತ ಮೂಲದಿಂದ ಹಣ ದೊರೆತು ಸಂತಸವಾಗುವುದು. ಕೃಷಿಯಿಂದ ಹೆಚ್ಚು ಆದಾಯ ಬರುತ್ತದೆ. ಶತ್ರುಗಳನ್ನು ಸಾಕಷ್ಟು ಕಾಡುವಿರಿ. ಕೆಲವು ಹಂಗಾಮಿ ಮಹಿಳಾ ಉದ್ಯೋಗಿಗಳಿಗೆ ಉದ್ಯೋಗ ಖಾಯಂ ಆಗಬಹುದು. ಗೃಹಾಲಂಕಾರ ವಸ್ತುಗಳನ್ನು ಕೊಳ್ಳುವ ಯೋಗವಿದೆ. ಕೃಷಿವಿಷಯದಲ್ಲಿ ನೂತನ ವಿಧಾನಗಳನ್ನು ಅಳವಡಿಸಿಕೊಂಡು ಪ್ರಯೋಗಶೀಲರಾಗುವಿರಿ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಮುನ್ನುಗ್ಗುವ ಉತ್ಸಾಹ ಬಹಳ ಹೆಚ್ಚಿರುತ್ತದೆ. ಆದಾಯವು ಕಡಿಮೆ ಇರುತ್ತದೆ. ಬಂಧುಗಳ ಸಹಕಾರ ಸಿಗುವುದು ಕಡಿಮೆ. ಸಂಸಾರದಲ್ಲಿನ ಸಂಕಷ್ಟಗಳು ಪರಿಹಾರಗೊಂಡು ಹೊಸಬೆಳಕು ಮೂಡುತ್ತದೆ. ಸಂಗೀತ ಕ್ಷೇತ್ರದಲ್ಲಿ ಸಾಧನೆಯನ್ನು ಮಾಡಬೇಕೆನ್ನುವವರಿಗೆ ಸೂಕ್ತ ಅವಕಾಶಗಳು ಇರುತ್ತವೆ. ಆರೋಗ್ಯದ ಬಗ್ಗೆ ನಿಗಾವಹಿಸಿರಿ. ಕೈಕೆಳಗಿನ ಕೆಲಸಗಾರರ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದಲ್ಲಿ ಹೆಚ್ಚಿನ ಕೆಲಸ ಕಾರ್ಯಗಳು ಆಗುತ್ತವೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ವೃತ್ತಿ ಶ್ರದ್ಧೆಯಿಂದ ಎಲ್ಲರ ಗಮನ ಸೆಳೆಯುವಿರಿ. ವ್ಯವಹಾರಗಳಲ್ಲಿ ಸ್ವಲ್ಪ ಮುನ್ನಡೆ ಇರುತ್ತದೆ. ಸಂಗ್ರಹಿಸಿಟ್ಟ ವಸ್ತುಗಳ ಮಾರಾಟದಿಂದ ಹೆಚ್ಚಿನ ಲಾಭ ಇರುತ್ತದೆ. ವಿದೇಶಿ ವ್ಯವಹಾರಗಳಿಂದ ಆದಾಯಬರುತ್ತದೆ. ಮಕ್ಕಳಿಗಾಗಿ ವಸ್ತುಗಳನ್ನು ಖರೀದಿಮಾಡುವಿರಿ. ವ್ಯಾಪಾರದಲ್ಲಿನ ಸಮಸ್ಯೆಗಳಿಗೆ ಹಂತ ಹಂತವಾಗಿ ಪರಿಹಾರವನ್ನು ಕಂಡುಕೊಳ್ಳುವಿರಿ. ಸಹೋದ್ಯೋಗಿಗಳ ಸಹಕಾರದಿಂದ ವೃತ್ತಿಯಲ್ಲಿ ಏಳಿಗೆ ಇರುತ್ತದೆ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಆದಾಯವು ಕಡಿಮೆ ಇರುತ್ತದೆ. ಕ್ರೀಡಾಪಟುಗಳಿಗೆ ತಮ್ಮ ಕ್ರೀಡೆಯಿಂದ ಹೆಚ್ಚು ಹಣಗಳಿಸುವ ಯೋಗವಿದೆ. ತಂದೆ, ತಾಯಿ ಮಕ್ಕಳಿಗಾಗಿ ವಿದೇಶಕ್ಕೆ ಅಥವಾ ದೂರದೂರಿಗೆ ಪ್ರಯಾಣ ಬೆಳೆಸಬೇಕಾಗಬಹುದು. ಅಧ್ಯಯನದಲ್ಲಿನ ಆಸಕ್ತಿಯಿಂದ ಉತ್ತಮ ಭವಿಷ್ಯ ನಿರ್ಮಾಣವಾಗುವುದು. ಬ್ಯಾಂಕಿಂಗ್ ಮತ್ತು ಹಣಕಾಸು ಸಂಸ್ಥೆಯಲ್ಲಿರುವ ಹಿರಿಯ ಅಧಿಕಾರಿಗಳು ಎಚ್ಚರವಾಗಿರಿ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಆದಾಯದಲ್ಲಿ ಸ್ವಲ್ಪ ಕಡಿಮೆಯಾಗಿ ಖರ್ಚುಗಳಿಗೆ ಕಡಿವಾಣ ಹಾಕಬೇಕಾಗುತ್ತದೆ. ಹೊಸ ಆದಾಯದ ಮೂಲಗಳತ್ತ ಗಮನ ಹರಿಸುವಿರಿ. ನೀರಾವರಿ ಭೂಮಿಯನ್ನು ಹೊಂದುವ ಯೋಗವಿದೆ. ಲೆಕ್ಕಪತ್ರ ಪರೀಕ್ಷಕರಿಗೆ ಉತ್ತಮ ಕೆಲಸ ದೊರೆತು ಆದಾಯ ಹೆಚ್ಚುತ್ತದೆ. ಸ್ತ್ರೀಯರು ನಡೆಸುವ ವ್ಯವಹಾರಗಳಲ್ಲಿ ಸಾಕಷ್ಟು ಲಾಭವನ್ನು ಕಾಣಬಹುದು.

ಪದಬಂಧ 2922

ಮೇಲಿನಿಂದ ಕೆಳಕ್ಕೆ
1. ವಿವಾದದಲ್ಲಿ ಒಂದಕ್ಷರ ತೆಗೆದರೆ ಮದುವೆಯಾಗಬಹುದು 3
2. ಹಾಡು ಹಳೆಯದಾದರೂ ಭಾವ ಹೊಚ್ಚ ಹೊಸತು 5
3. ಯಾವ ಕೃತಕತೆಯೂ ಇಲ್ಲದ ಹಾಸ 5
4. ತಾರೆಯಂತೆ ಹೊಳೆ 3
7. ವರವಾಗಿ ಬಂದ ಧನ ವೃದ್ಧಿ 3
11. ಕನ್ನಡದ ಆಂಗ್ಲ ವಕೀಲ 3
13. ಸರೋವರದಂತಹ ಮನಸ್ಸುಳ್ಳವಳು 3
15. ಜಾನಪದದಲ್ಲಿ ಪತಿವ್ರತೆ ಪಾಡುವ ಪದ 5
16. ನೋವಿನ ಅರಿವಿಲ್ಲದಂತೆ ಮಾಡುವ ವೈದ್ಯ ಪ್ರಕ್ರಿಯೆ 5
17. ದೀರ್ಘವಾದ ಶರದ ಕಾಲದಿಂದ ಉದ್ಭವವಾಗುವ ಶೃಂಗೇರಿ ಪುರವಾಸಿನಿ 3
19. ಪಾಕದಲ್ಲಿ ತಯಾರಾಗಬಹುದಾದ ನಿಂಬೆ ಸಕ್ಕರೆಯ ತಂಪು ಪೇಯ 3
21. ಧಾನ್ಯದಲ್ಲಿ ಕಲ್ಲು ಮಣ್ಣು ಬೇರ್ಪಡಿಸುವ ಅನೇಕ ಕಣ್ಣುಗಳುಳ್ಳ ಸಾಧನ 3

ಎಡದಿಂದ ಬಲಕ್ಕೆ
1. ಪರರಾಷ್ಟ್ರದ ಪಯಣ 5
3. ಚಾಂದ್ರಮಾನದಲ್ಲಿ ತಿಂಗಳ ಏಳನೇ ದಿನ 3
5. ಪದಾರ್ಥಗಳನ್ನು ಶೇಕರಿಸುವ ಕ್ರಿಯೆ 5
6. ಕುದುರೆ ಮುಖಕ್ಕೊಂದು ಪರ್ಯಾಯ ಕೊಟ್ಟ ನಾಟಕ 5
8. ಹನಿಹನಿಯಾಗಿ ಒಂದೇ ಸಮನೆ ಹಿಡಿದ ಮಳೆ 3
9. ಶಾರದೆ, ರಾವಣರ ಪ್ರಿಯವಾದ ತಂತಿ ವಾದ್ಯದ ಮೀಟುವಿಕೆ 5
10. ನದಿಗೆ ಈ ಪ್ರದೇಶದಿಂದ ನೀರು ಹರಿಯುತ್ತದೆ 5
12. ಉತ್ತರಭಾರತದವರಿಗೆ ಬರಬಹುದಾದ ಅನುಮಾನ 3
14. ಮತ್ತೆ ಮತ್ತೆ ಪರಿಮಳ ಬೀರುವ ಪತ್ರೆ 3
16. ಅನುಸರಿಸಬೇಕಾದ ಕಟ್ಟಳೆ ಕಾನೂನು 5
18. ಸಂಸ್ಕೃತದ ಭಾನುವಾರ 5
19. ಪಾವತಿಗೆ ಅರ್ಕಾವತ್ತು ಸೇರಿದಾಗ ಶಿವೆಯಾಗುತ್ತಾಳೆ 3
20. ಕೊಡುಗೈ ಅರಸನೆಂದು ಪ್ರಸಿದ್ಧಿ ಪಡೆದ ಶ್ರೀನಿವಾಸ 5
22. ಚಳಿಯಲ್ಲಿ ಹೊದೆಯುವುದಕ್ಕೆ ಮತ್ತು ಹಾಸಿದರೆ ಕೂರಲು ಬೆಚ್ಚಗಿರುವ ತುಪ್ಪಟ 5
23. ನಿರ್ಣಯ ಪ್ರಕಟಿಸುವ ಹಸ್ತ ಪ್ರತಿ ಇನ್ನೂ ತಿದ್ದಬೇಕಾಗಿದೆ 3
24. ಇನ್ನೊಬ್ಬರಿಗೆ ಒಳ್ಳೆಯದನ್ನು ಬಯಸದ ಕೇಡು ಮಾತು 5



ಪದಬಂಧ ಉತ್ತರ -2921

ಮೇಲಿಂದ ಕೆಳಕ್ಕೆ
1.ಆಧಾರ 2.ವನಿತೆ 3.ಹಣತೆ 4.ಹಮ್ಮೀರಾ 7.ಸಿನಿಮಾ 9.ಲಿಖಿತ 10.ವಿರಹಿ 11.ಸಂಸಾರಿ 12.ರಹಿತ 13.ಮತ್ತೂರು 14.ರಮಣ 16.ಗಿಡುಗ 18.ರಸೀದಿ 20.ಹವ್ಯಾಸ 21.ನವಿಲು 22.ವಿನಯ 23.ನಿಧಾನ

ಎಡದಿಂದ ಬಲಕ್ಕೆ
1.ಆದಿದೇವ 3.ಹಣದಾಹ 5.ನಿಜಗುಣ 6.ರಸಿಕತೆ 8. ತೆನಾಲಿರಾಮ 10. ವಿಮಾನಸಂಚಾರ 13.ಮತದಾರ 15.ಹಿಮಗಿರಿ 17.ತಳಿರುತೋರಣ 19.ಸಹಗಮನ 22.ವಿನೋದಿನಿ 24.ವಿಚ್ಛೇದನ 15.ಸಮಪಾಲು 26.ಯಥಾಸ್ಥಾನ

‘ಸಂವಿಧಾನ ಪೀಠಿಕೆ ಸಾಹಿತ್ಯ, ಚಳವಳಿಯ ಆಶಯವಾಗಲಿ’

ಡಿಸೆಂಬರ್ 20, 21ರಂದು ರಾಯಚೂರಿನಲ್ಲಿ ನಡೆಯುವ 11ನೆಯ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಜಯದೇವಿ ಗಾಯಕವಾಡ ಆಯ್ಕೆಯಾಗಿದ್ದಾರೆ. ಸಂಶೋಧಕಿ, ಕಾದಂಬರಿಕಾರ್ತಿ, ಕವಯತ್ರಿಯೂ ಆಗಿರುವ ಅವರೊಂದಿಗೆ ನಡೆಸಿದ ಸಂದರ್ಶನ ಇಲ್ಲಿದೆ.

• ಅನಸೂಯ ಕಾಂಬಳೆ

• ನಿಮ್ಮ ಬದುಕನ್ನು ಹಿಂದಿರುಗಿ ನೋಡಿದರೆ...

ನಾನು ಏಕಕಾಲಕ್ಕೆ ಅಸ್ಪೃಶ್ಯತೆಯ ನೋವು, ಬಡತನದ ಸಂಕಟ, ಹೆಣ್ಣಿನ ತಾರತಮ್ಯತೆ ಅನುಭವಿಸಿದವಳು. ನನ್ನ ತಂದೆ-ತಾಯಿ ಉಪವಾಸ ಇದ್ದರೂ ನನ್ನನ್ನು ಓದಿಸಿದ್ದಾರೆ. ಅವರ ಶ್ರಮ, ತ್ಯಾಗದಿಂದ ಬದುಕು ಕಟ್ಟಿಕೊಂಡಿದ್ದೇನೆ. ಬಾಬಾ ಸಾಹೇಬ ಅಂಬೇಡ್ಕರ್ ಬದುಕು ಹೋರಾಟದಿಂದ ಪ್ರೇರಣೆಗೊಂಡು, ಬರವಣಿಗೆ ತೊಡಗಿಸಿಕೊಂಡಿದ್ದೇನೆ. ಅಂಬೇಡ್ಕರ್ ಇಲ್ಲದಿದ್ದರೆ ನನ್ನಂಥವರು ಇವತ್ತು ಯಾರದೋ ಗೌಡರ ಹೊಲದಲ್ಲಿ ಕಳೆ ತೆಗೆಯುವ ಕೆಲಸ ಮಾಡಬೇಕಾಗಿತ್ತು. ದಲಿತ ಸಂಘರ್ಷ ಸಮಿತಿ, ಚಳವಳಿಗಳಲ್ಲಿ ಭಾಗವಹಿಸಿ ಮಾತನಾಡುವುದನ್ನು ಕಲಿತುಕೊಂಡಿದ್ದೇನೆ. ಇಲ್ಲಿಯ ತನಕ ಒಂದಿಷ್ಟು ವೈಚಾರಿಕವಾಗಿ ಚಿಂತನೆಗೆ ತೊಡಗಿಸಿಕೊಂಡದ್ದು ಹೆಮ್ಮೆ ಅನಿಸುತ್ತದೆ.

• ತಾವು ಬರವಣಿಗೆಗೆ ತೊಡಗಿಸಿಕೊಂಡ ಅನುಭವದ ಬಗ್ಗೆ ಹೇಳಿ.

ನಾನು ಬೆಳೆದು ಬಂದ ಪರಿಸರದ ತಳ ಸಮುದಾಯದ ತಲ್ಲಣಗಳು, ಸಮಸ್ಯೆಗಳು ಬಹುವಾಗಿ ಕಾಡಿದವು. ಗ್ರಾಮೀಣ ಪ್ರದೇಶದ ಜನಸಾಮಾನ್ಯರ ಸ್ಥಿತಿಗತಿ, ಬಡತನ, ಅಜ್ಞಾನ, ಮೌಢ್ಯ, ಅಂಧಕಾರ ಕಾಡಿದವು, ವಸ್ತುಗಳಾದವು. ದಲಿತ ಮಹಿಳೆಯರ ಚಿಂತಾಜನಕ ಸ್ಥಿತಿ, ಅವರು ಶಿಕ್ಷಣದಿಂದ ವಂಚಿತರಾದದ್ದು, ದೇವದಾಸಿ ಪದ್ಧತಿ, ಬಾಲ್ಯ ವಿವಾಹ, ದೇವರು-ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಅಮಾನವೀಯ ಕೃತ್ಯಗಳು ನನ್ನನ್ನು ಘಾಸಿಗೊಳಿಸಿದವು. ನನ್ನ ಕೇರಿಯ ಸಂಕಟ, ವೇದನೆ, ಸಮಸ್ಯೆ ಸವಾಲುಗಳಂತಹ ವಸ್ತುಗಳೇ ನನ್ನ ಬರಹಗಳ ಅಭಿವ್ಯಕ್ತಿಯ ಮಾಧ್ಯಮವಾಗಿವೆ.



ಜಯದೇವಿ ಗಾಯಕವಾಡ

• ದಲಿತ ಚಳವಳಿಗೆ ಮತ್ತು ದಲಿತ ಸಾಹಿತ್ಯ ಚಳವಳಿಗೆ ದಲಿತ ಸಾಹಿತ್ಯ ಪರಿಷತ್ತಿನ ಕೊಡುಗೆಯನ್ನು ಹೇಗೆ ಪರಿಗಣಿಸುತ್ತೀರಿ?

ದಲಿತ ಸಾಹಿತ್ಯ ಪರಿಷತ್ತು ಮೂವತ್ತೊಂದು ವರ್ಷಗಳಿಂದ ಸಾಹಿತ್ಯ ಸಂಘಟನೆ, ಚಳವಳಿಗೆ ಪ್ರೇರಕಶಕ್ತಿಯಾಗಿ ಕೆಲಸ ಮಾಡುತ್ತಾ ಬಂದಿದೆ. ಆ ಮೂಲಕ ದಲಿತ ಮತ್ತು ಪ್ರಗತಿಪರ ಬರಹಗಾರರನ್ನು ಚಳವಳಿಗೆ ತೊಡಗಿಸಿ ದಲಿತ ಚಳವಳಿಗೆ ಇಂಬು ನೀಡಿದೆ. ದಲಿತ ಸಾಹಿತ್ಯದಲ್ಲಿ ಅನೇಕ ಯುವ ಬರಹಗಾರರನ್ನು ಹುಟ್ಟು ಹಾಕಿದೆ. ಅನೇಕ ಬರಹಗಾರರ ಪುಸ್ತಕಗಳನ್ನು ಪ್ರಕಟಿಸಿ ಬೆಳಕಿಗೆ ತಂದಿದೆ. ಮೌಲಿಕ ಪುಸ್ತಕಗಳಿಗೆ ಪ್ರಶಸ್ತಿಗಳನ್ನು ನೀಡಿ ಗೌರವಿಸುವುದರ ಮೂಲಕ ಮುಖ್ಯವಾಹಿನಿಗೆ ತಂದಿದೆ. ಕಲಾವಿದರು, ಗಾಯಕರಿಗೆ ವೇದಿಕೆ ನೀಡುವುದರ ಮೂಲಕ ಸಾಂಸ್ಕೃತಿಕ ಪರಿಸರ ನಿರ್ಮಿಸುತ್ತಿದೆ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಅವಕಾಶ ವಂಚಿತರಾದ ಶೋಷಿತ ಸಮುದಾಯದವರನ್ನು ತಮ್ಮ ಪರಿಷತ್ತಿನಲ್ಲಿ ಅವಕಾಶ ಮಾಡಿಕೊಡುವುದರ ಮೂಲಕ ಸಂವಿಧಾನದ ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿದಿದೆ. ಇದುವರೆಗೂ ಸಿದ್ಧಲಿಂಗಯ್ಯ, ಅರವಿಂದ ಮಾಲಗತ್ತಿ, ಮೂಡ್ನಾಕೂಡು ಚಿನ್ನಸ್ವಾಮಿ, ಸತ್ಯಾನಂದ ಪಾತ್ರೋಟ, ಚನ್ನಣ್ಣ ವಾಲೀಕಾರ, ಅಲ್ಲಾಗಿರಿ ರಾಜ, ಸಮತಾ ದೇಶಮಾನೆ, ಚಿನ್ನಸ್ವಾಮಿ ಸೋಸಲೆಯವರಂತಹ ಅನೇಕರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಮಾಡುವ ಮೂಲಕ ಕನ್ನಡ ಸಾಹಿತ್ಯಕ್ಕೆ ಕೊಡುಗೆ ನೀಡಿದೆ.

• ಹೊಸ ತಲೆಮಾರನ್ನು ಬೆಳೆಸುವುದಕ್ಕೆ ದಲಿತ ಸಾಹಿತಿಗಳು ಮತ್ತು ದಲಿತ ಸಾಹಿತ್ಯ ಪರಿಷತ್ತು ಯಾವ ರೀತಿಯ ಕಾರ್ಯ ಯೋಜನೆಗಳನ್ನು ರೂಪಿಸಬೇಕು?

ಇತ್ತೀಚೆಗೆ ಯುವ ದಲಿತ ಲೇಖಕ, ಲೇಖಕಿಯರು ತುಂಬಾ ಸತ್ವಯುತವಾಗಿ, ಶಕ್ತಿಯುತವಾಗಿ ಬರೆಯುತ್ತಿದ್ದಾರೆ. ಗ್ರಾಮೀಣ ಪ್ರದೇಶದಿಂದ ಬಂದ ಅನೇಕ ಬರಹಗಾರರು ತಮ್ಮ ಸುತ್ತಲಿನಲ್ಲಿ ನಡೆಯುತ್ತಿರುವ ಸಮಸ್ಯೆ ತಲ್ಲಣಗಳಿಗೆ ಪರಿಹಾರ ರೂಪದಲ್ಲಿ ಸಾಹಿತ್ಯ ರಚಿಸುತ್ತಿರುವುದು ಖುಷಿಯ ಸಂಗತಿ. ಅನೇಕ ಹಿರಿಯ ಲೇಖಕರು ಈಗಾಗಲೇ ಅನೇಕರನ್ನು ಬೆಳೆಸಿದ್ದಾರೆ; ಬೆಳೆಸುತ್ತಿದ್ದಾರೆ. ಇನ್ನೂ ಹೆಚ್ಚಿನ ರೀತಿಯಲ್ಲಿ ಯುವ ಬರಹಗಾರರಿಗೆ ಪ್ರೋತ್ಸಾಹಿಸಬೇಕು. ಅವಕಾಶಗಳು ಅವರಿಗೆ ಸಿಗುವಂತೆ ಕಾಳಜಿ ವಹಿಸಬೇಕು. ಶಿಬಿರ, ಕಮ್ಮಟ, ವಿಚಾರ ಸಂಕಿರಣಗಳನ್ನು ಏರ್ಪಡಿಸಿ ತರಬೇತಿ ನೀಡಬೇಕು. ದಲಿತ ಸಾಹಿತ್ಯ ಪರಿಷತ್ತು ಸಾಹಿತ್ಯದ ಜೊತೆಗೆ ಚಳವಳಿಗಾರರನ್ನು, ಸಂಘಟನೆಯನ್ನು ಒಂದುಗೂಡಿಸುವ ನಿಟ್ಟಿನಲ್ಲಿ ಯೋಜನೆ ರೂಪಿಸಬೇಕು.

• ಚಳವಳಿಯ ಕಾವು ಕಡಿಮೆ ಆಗಿರುವ ಕಾಲದಲ್ಲಿ ಲಿಂಗತ್ವ ಅಲ್ಪಸಂಖ್ಯಾತರ (ಟ್ರಾನ್ಸಜೆಂಡರ್) ಸಂವೇದನೆಯನ್ನು ಹೇಗೆ ವ್ಯಾಖ್ಯಾನಿಸುವುದು ಮತ್ತು ಬೆಂಬಲಿಸುವುದು?

ದಲಿತ ಚಳವಳಿಯ ಕಾವು ಕಡಿಮೆಯಾಗಿರುವಾಗ ಈ ಹೊತ್ತಿನಲ್ಲಿ ಮತ್ತೆ ಚಳವಳಿ, ಸಂಘಟನೆ ಕಟ್ಟಬೇಕು. ದಲಿತ ಸಾಹಿತ್ಯ ಮತ್ತು ಚಳವಳಿಯು ರೈತರ ಹಿತಾಸಕ್ತಿ, ಮಹಿಳೆಯರ ಹಿತ, ಶೋಷಿತರ ಪರವಾಗಿ ಹೋರಾಟ ಮಾಡುತ್ತಲೇ ಬಂದಿವೆ. ಲಿಂಗತ್ವ ಅಲ್ಪಸಂಖ್ಯಾತರ (ಟ್ರಾನ್ಸ್‌ಜೆಂಡರ್) ಸಂವೇದನೆಯು ಅವರ ಸಾಹಿತ್ಯ ಮತ್ತು ಆತ್ಮಕತೆಗಳ ಮೂಲಕ ಕನ್ನಡಕ್ಕೆ ದಕ್ಕಿದೆ. ಅವರನ್ನೂ ಒಳಗೊಳ್ಳುವ ಸಾಹಿತ್ಯ ರಚನೆಯಾಗಬೇಕು. ಮತ್ತು ಅವರ ಸಮಸ್ಯೆಗಳ ಪರಿಹಾರಕ್ಕಾಗಿ ದನಿ ಎತ್ತುವ ಕೆಲಸ ಚಳವಳಿ ಮಾಡಬೇಕು. ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡಿ ಸಾಮಾಜಿಕ ಒಳಗೊಳ್ಳುವಿಕೆಗೆ ಅನುವು ಮಾಡಿಕೊಡಬೇಕು. ಅವರಿಗೆ ಆತ್ಮಗೌರವ ತಂದು ಕೊಡುವುದು ಪ್ರತಿಯೊಬ್ಬರ ಕರ್ತವ್ಯವಾಗಬೇಕು.

• ಇತ್ತೀಚಿನ ಒಳ ಮೀಸಲಾತಿ ಕುರಿತು ನ್ಯಾ. ನಾಗಮೋಹನ್‌ದಾಸ ಅವರ ಒಳ ಮೀಸಲಾತಿ ವರದಿಯನ್ನು ಸರ್ಕಾರ ಜಾರಿಗೆ ತರಲು ಹೊರಟಿದೆ. ಅದು ದಲಿತ ಸಾಹಿತ್ಯ ಮತ್ತು ಚಳವಳಿಗೆ ಹೇಗೆ ಪರಿಣಾಮವನ್ನುಂಟು ಮಾಡಬಹುದು?

ಒಳ ಮೀಸಲಾತಿ ಜಾರಿಯಾಗಲಿ. ಅದು ವೈಜ್ಞಾನಿಕವಾಗಿ ಎಲ್ಲರಿಗೂ ನ್ಯಾಯ ಸಿಗುವ ರೀತಿಯಲ್ಲಿ ಆಗಬೇಕು. ಜನಸಂಖ್ಯೆ ಅನುಗುಣವಾಗಿ ಪಾಲು ಸಿಗಲಿ ಮತ್ತು ಅಲೆಮಾರಿ ಜನಾಂಗದಂತಹ ಸಣ್ಣ ಸಣ್ಣ ಸಮುದಾಯಗಳಿಗೂ ಅನ್ಯಾಯವಾಗಬಾರದು. ಎಡ-ಬಲ ಸಮುದಾಯಗಳು ಒಂದಾಗಿ ಹೋಗುವ ಅನಿವಾರ್ಯತೆ ಇದೆ. ದಲಿತ ಸಮುದಾಯ ಮೀಸಲಾತಿಗಷ್ಟೇ ಗಮನ ಕೊಡದೆ ರಾಜ್ಯಾಧಿಕಾರ ಹಿಡಿಯುವತ್ತ ಆಲೋಚಿಸಬೇಕು. ಆ ನಿಟ್ಟಿನಲ್ಲಿ ಚಳವಳಿಗಳು ಮತ್ತು ಸಾಹಿತ್ಯ ಗಟ್ಟಿಯಾಗಿ ರೂಪಗೊಳ್ಳಬೇಕಾಗಿದೆ.

• ಇತ್ತೀಚೆಗೆ ವೈಚಾರಿಕ, ವೈಜ್ಞಾನಿಕ ಮನೋಭಾವ ಮತ್ತು ಚಳವಳಿಗಳ ಆಶಯ ಹಾಗೂ ಸಂವೇದನೆಗಳನ್ನು ಅಮಾನ್ಯಗೊಳಿಸುವಂತಹ ಸಾಮಾಜಿಕ ಜಾಲತಾಣಗಳು ಮುನ್ನೆಲೆಗೆ ಬಂದಿವೆ. ಅದಕ್ಕಾಗಿ ಹಿನ್ನಡೆಯನ್ನು ಅನುಭವಿಸುವಂತಾಗಿದೆ. ಈ ಸವಾಲುಗಳನ್ನು ಎದುರಿಸಲು ಯೋಜನೆಗಳು ಹೇಗಿರಬೇಕು?

ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳನ್ನು ನಿತ್ಯ ಹರಡುವ ಮತ್ತು ವೈಭವೀಕರಿಸುವ ಕೆಲಸ ನಡೆಯುತ್ತಿದೆ. ಶಾಂತಿಯನ್ನು ಕೆಡಿಸುವ ವಿಕೃತ ಮನಸ್ಸುಗಳು ಹೆಚ್ಚಾಗಿವೆ. ಇದರಿಂದ ಸಮಾಜದಲ್ಲಿ ದ್ವೇಷ, ತಾರತಮ್ಯ ಹೆಚ್ಚಾಗಿವೆ. ಈ ಸವಾಲುಗಳನ್ನು ಎದುರಿಸಲು ಸಂವಿಧಾನ ಪೀಠಿಕೆ ಸಾಹಿತ್ಯದ ಮತ್ತು ಚಳವಳಿಯ ಆಶಯವಾಗಬೇಕಾಗಿದೆ. ಸಂವಿಧಾನವೇ ನಮ್ಮ ಬದುಕಾಗಬೇಕು. ಶಾಲಾ-ಕಾಲೇಜುಗಳಲ್ಲಿ ಮತ ಧರ್ಮ ಜಾತಿ ಪದ್ಧತಿ ಲಿಂಗ ತಾರತಮ್ಯ ಮಾಡದೇ ನಾವು ಭಾರತೀಯರು ಎಂಬ ರಾಷ್ಟ್ರ ಮನೋಭಾವವನ್ನು ಮಕ್ಕಳಲ್ಲಿ ಬೆಳೆಸಬೇಕು. ಸಮಾನತೆ, ಸಹೋದರತೆ, ಸ್ವಾತಂತ್ರ್ಯ, ಭ್ರಾತೃತ್ವ ಮತ್ತು ಬಹುತ್ವವನ್ನು ಹಾಗೂ ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯುವ ಯೋಜನೆಗಳನ್ನು ಸಾಹಿತಿಗಳು, ಚಳವಳಿಗಾರರು ರೂಪಿಸಬೇಕು. ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು, ಸರ್ವ ಜನಾಂಗದ ಶಾಂತಿಯ ತೋಟ ಇದುವೇ ಸಾಹಿತಿಗಳ, ಚಳವಳಿಗಾರರ ಉಸಿರಾಗಬೇಕು.

ಕ.ವೆಂ. ಮೌಲ್ಯಗಳ ಪ್ರತಿರೂಪದ ಸಾರ್ಥಕ ಬದುಕು

• ಮುರಳಿ ಕೂಡ್ಲೂರು

ಆಧುನಿಕ ಕನ್ನಡ ಸಾಹಿತ್ಯ, ರಂಗಭೂಮಿ ಮತ್ತು ವೈಚಾರಿಕ ವಲಯದಲ್ಲಿ ತಮ್ಮದೇ ಛಾಪು ಮೂಡಿಸಿದವರು ಪ್ರೊ. ಕ.ವೆಂ. ರಾಜಗೋಪಾಲ (ಕ.ವೆಂ.). ಅವರ ಜನ್ಮಶತಮಾನೋತ್ಸವದ (1924-2024) ಈ ಸಂದರ್ಭವು, ನಾಡು ಕಂಡ ಅಪರೂಪದ ‘ಸೇತುಬಂಧ’ ವ್ಯಕ್ತಿತ್ವವೊಂದನ್ನು ಮರುನೆನಪಿಸಿಕೊಳ್ಳುವ, ಮರುಮೌಲ್ಯಮಾಪನ ಮಾಡುವ ಸಮಯವಾಗಿದೆ. ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಕಟ್ಟೆಪುರ ಎಂಬ ಪುಟ್ಟ ಹಳ್ಳಿಯೊಂದರಿಂದ ಬಂದು, ಬೆಂಗಳೂರಿನ ಬೌದ್ಧಿಕ ವಲಯದಲ್ಲಿ ಹೊಸ ಆಲೋಚನೆಗಳ ಕಿಡಿ ಹೊತ್ತಿಸಿದ ಕ.ವೆಂ. ಅವರ ಬದುಕು ಇಂದಿನ ಪೀಳಿಗೆಗೆ ಒಂದು ತೆರೆದ ಪುಸ್ತಕವಿದ್ದಂತೆ.


ಹಳೆಯ ಮೌಲ್ಯಗಳ ಗಟ್ಟಿತನವನ್ನು ಕಳೆದುಕೊಳ್ಳದೆ, ಹೊಸ ಕಾಲದ ವೈಚಾರಿಕತೆಯನ್ನು ಮೈಗೂಡಿಸಿಕೊಂಡಿದ್ದ ಕ.ವೆಂ., ನವೋದಯದ ಆದರ್ಶ ಮತ್ತು ನವ್ಯದ ಬೌದ್ಧಿಕತೆಗಳ ನಡುವಿನ ಕೊಂಡಿಯಾಗಿದ್ದರು. ಕೇವಲ ಬರಹಗಾರರಾಗಿ ಉಳಿಯದೆ, ಬದುಕಿನುದ್ದಕ್ಕೂ ಮಾನವೀಯ ಮೌಲ್ಯಗಳನ್ನು ಉಸಿರಾಡಿದರು.

ವೈಚಾರಿಕ ಪಲ್ಲಟ: ಬಲದಿಂದ ಎಡಕ್ಕೆ

ಕ.ವೆಂ. ರಾಜಗೋಪಾಲ ಅವರ ಬದುಕಿನ ಅತ್ಯಂತ ವಿಸ್ಮಯಕಾರಿ ಮತ್ತು ಗಮನಾರ್ಹ ಸಂಗತಿಯೆಂದರೆ ಅವರಲ್ಲಾದ ವೈಚಾರಿಕ ಬದಲಾವಣೆ. ಸ್ವಾತಂತ್ರ್ಯ ಪೂರ್ವದಲ್ಲಿ ದೇಶಭಕ್ತಿಯ ಕಿಚ್ಚಿನೊಂದಿಗೆ ಬದುಕನ್ನು ಆರಂಭಿಸಿದ ಅವರು, ಯೌವನದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಪ್ರಚಾರಕರಾಗಿದ್ದರು. ಆದರೆ, ಗಾಂಧೀಜಿ ಹತ್ಯೆಯ ನಂತರದ ಪ್ರಕ್ಷುಬ್ಧ ದಿನಗಳಲ್ಲಿ ಅವರು ಸೆರೆಮನೆವಾಸವನ್ನೂ ಅನುಭವಿಸಬೇಕಾಯಿತು. ಆ ಜೈಲಿನ ಏಕಾಂತ ಮತ್ತು ಅಲ್ಲಿನ ಆಳವಾದ ಓದು ಅವರ ಅಂತರಂಗವನ್ನು ಕಲಕಿತು, ಹೊಸದೊಂದು ಜಗತ್ತಿನ ಕಡೆಗೆ ಅವರ ಕಣ್ಣುತೆರೆಸಿತು.

ಜೈಲುವಾಸದ ಅನಂತರದ ದಿನಗಳಲ್ಲಿ ಕ.ವೆಂ. ಸಂಪೂರ್ಣವಾಗಿ ಬದಲಾದರು. ಬಲಪಂಥೀಯ ಒಲವಿನಿಂದ ಹೊರಬಂದು, ಶೋಷಿತರ ಪರ ದನಿಯೆತ್ತುವ ಮಾರ್ಕ್ಸ್‌ವಾದಿ (ಎಡಪಂಥೀಯ) ಚಿಂತನೆಯತ್ತ ಹೊರಳಿದರು. ಆದರೆ ಅವರು ಎಂದಿಗೂ ಸಿದ್ಧಾಂತಗಳ ದಾಸರಾಗಲಿಲ್ಲ; ಸಿದ್ಧಾಂತಕ್ಕಿಂತ ಮನುಷ್ಯತ್ವ ದೊಡ್ಡದು ಎಂಬುದನ್ನು ತಮ್ಮ ನಡವಳಿಕೆಯಲ್ಲಿ ತೋರಿಸಿಕೊಟ್ಟರು. ಒಮ್ಮೆ ಗೋಕರ್ಣ ಪ್ರವಾಸದ ವೇಳೆ, ಅಲ್ಲಿನ ದೇವಾಲಯದಲ್ಲಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಪ್ರವೇಶ ನಿರಾಕರಿಸಿದಾಗ, ಅಲ್ಲಿನ ಅರ್ಚಕರೊಂದಿಗೆ ವಾದಕ್ಕಿಳಿದು, ಆ ವಿದ್ಯಾರ್ಥಿಗಳ ಹಕ್ಕನ್ನು ಪ್ರತಿಪಾದಿಸಿ ಒಳಗೆ ಕರೆದೊಯ್ದ ಘಟನೆ ಅವರಲ್ಲಿನ ಮಾನವತಾವಾದಿ ಎಚ್ಚರಗೊಂಡಿದ್ದಕ್ಕೆ ಸಾಕ್ಷಿಯಾಗಿತ್ತು.

ಕ.ವೆಂ. ಅವರ ಸಾಹಿತ್ಯ ಕೃಷಿ ವೈವಿಧ್ಯಮಯವಾದುದು. ಗೋಪಾಲಕೃಷ್ಣ ಅಡಿಗರ ನೇತೃತ್ವದ ನವ್ಯ ಸಾಹಿತ್ಯ ಚಳವಳಿ ಉತ್ತುಂಗದಲ್ಲಿದ್ದಾಗ, ಕ.ವೆಂ. ಅವರು ‘ಅಂಜೂರ’, ‘ನದಿಯ ಮೇಲಿನ ಗಾಳಿ’ಯಂತಹ ಕವನ ಸಂಕಲನಗಳ ಮೂಲಕ ತಮ್ಮದೇ ಆದ ಛಾಪು ಮೂಡಿಸಿದರು. ಅವರ ಕವಿತೆಗಳಲ್ಲಿ ಬೌದ್ಧಿಕ ತೀವ್ರತೆಯ ಜೊತೆಗೆ ಗ್ರಾಮೀಣ ಸಂವೇದನೆಯೂ ಬೆರೆತಿತ್ತು. ‘ಕ್ಷಾರಪಾನೀಯಂ’ ನಂತಹ ಲೇಖನಗಳ ಮೂಲಕ ಅವರು ಹಳಗನ್ನಡ ಸಾಹಿತ್ಯದ ವಿಮರ್ಶೆಯಲ್ಲೂ ತಮ್ಮ ಪಾಂಡಿತ್ಯವನ್ನು ಮೆರೆದರು. ಅವರ ಸಣ್ಣಕತೆಗಳು ಅಂದಿನ ಕಾಲದ ಮಧ್ಯಮ ವರ್ಗದ ತಲ್ಲಣಗಳನ್ನು ಮತ್ತು ಭ್ರಮನಿರಸನಗಳನ್ನು ಪರಿಣಾಮಕಾರಿಯಾಗಿ ಹಿಡಿದಿಟ್ಟಿವೆ.



ಕ.ವೆಂ. ರಾಜಗೋಪಾಲ

ರಂಗಭೂಮಿ: ಬ್ರೆಕ್ಟ್ ಮತ್ತು ಪ್ರಯೋಗಶೀಲತೆ

ಕನ್ನಡ ರಂಗಭೂಮಿಗೆ ಕ.ವೆಂ. ಅವರ ಕೊಡುಗೆ ಅಪಾರ. ಪಾಶ್ಚಾತ್ಯ ರಂಗಭೂಮಿಯ ದಿಗ್ಗಜ ಬರ್ಟೋಲ್ಟ್ ಬ್ರೆಕ್ಟ್‌ನ ‘ಎಪಿಕ್ ಥಿಯೇಟರ್’ ತಂತ್ರಗಳನ್ನು ಕನ್ನಡಕ್ಕೆ ಪರಿಚಯಿಸಿದವರಲ್ಲಿ ಇವರು ಪ್ರಮುಖರು. ‘ಅತ್ತೆಯ ಕಾಂಚಿ’ (ಬ್ರೆಕ್ಟ್‌ನ ನಾಟಕದ ಅನುವಾದ) ಇದಕ್ಕೊಂದು ಉದಾಹರಣೆ. ಅವರ ‘ಕಲ್ಯಾಣದ ಕೊನೆಯ ದಿನಗಳು’ ನಾಟಕವು ಶರಣ ಚಳವಳಿಯ ಅಂತಃಸಂಘರ್ಷಗಳನ್ನು ಮತ್ತು ಬಿಜ್ಜಳನ ಆಳ್ವಿಕೆಯಲ್ಲಾದ ಪಲ್ಲಟಗಳನ್ನು ಮಾರ್ಮಿಕವಾಗಿ ಚಿತ್ರಿಸಿದೆ. ಹಾಗೆಯೇ ‘ಭಗತ್ ಸಿಂಗ್ ವಿಚಾರಣೆ’ ಮತ್ತು ‘ವಿಚಾರಣೆ’ (ಗಾಂಧಿ ಕುರಿತ) ನಾಟಕಗಳು ರಂಗಭೂಮಿಯಲ್ಲಿ ವೈಚಾರಿಕ ಸಂಚಲನ ಮೂಡಿಸಿದವು. ‘ಕನ್ನಡ ರಂಗಭೂಮಿಯ ಶೋಧದಲ್ಲಿ’ ಎಂಬ ಅವರ ಕೃತಿ ರಂಗಭೂಮಿಯ ಇತಿಹಾಸವನ್ನು ದಾಖಲಿಸುವ ಮಹತ್ವದ ಪ್ರಯತ್ನವಾಗಿದೆ.

ಕ.ವೆಂ. ಗಂಭೀರ ಸಂಶೋಧಕರೂ ಆಗಿದ್ದರು. ‘ಯಕ್ಷಗಾನವು ಬೌದ್ಧಮತದ ಮೂಲದಿಂದ ಬಂದಿರಬಹುದು’ ಎಂಬ ಅವರ ಸಂಶೋಧನಾತ್ಮಕ ವಾದವು (‘ಬೌದ್ಧ ಮತದಲ್ಲಿ ಯಕ್ಷಕಲೆ’) ವಿದ್ವಾಂಸರ ವಲಯದಲ್ಲಿ ದೊಡ್ಡ ಚರ್ಚೆಯನ್ನೇ ಹುಟ್ಟುಹಾಕಿತ್ತು. ಇದು ಸಾಂಪ್ರದಾಯಿಕ ನಂಬಿಕೆಗಳಿಗೆ ವಿರುದ್ಧವಾಗಿದ್ದರೂ, ಅವರು ತಮ್ಮ ವಾದವನ್ನು ಮಂಡಿಸಿದ ರೀತಿ ಅವರ ಬೌದ್ಧಿಕ ಧೈರ್ಯವನ್ನು ತೋರಿಸುತ್ತದೆ. ಹಾಗೆಯೇ ‘ಒಕ್ಕಲಿಗರ ಆಚರಣೆಗಳು’ ಮತ್ತು ‘ಗಂಗರ ಇತಿಹಾಸ’ದ ಕುರಿತಾದ ಅವರ ಅಧ್ಯಯನಗಳು ಸಮಾಜಶಾಸ್ತ್ರೀಯ ಮತ್ತು ಐತಿಹಾಸಿಕ ಮಹತ್ವವನ್ನು ಹೊಂದಿವೆ.

ಬೆಂಗಳೂರಿನ ಎಂ.ಇ.ಎಸ್. ಕಾಲೇಜಿನ ಪ್ರಾಂಶುಪಾಲರಾಗಿ ಮತ್ತು ನಂತರ ಬೆಂಗಳೂರು ವಿಶ್ವವಿದ್ಯಾಲಯದ ನೃತ್ಯ, ನಾಟಕ ಮತ್ತು ಸಂಗೀತ ವಿಭಾಗದ ನಿರ್ದೇಶಕರಾಗಿ ಕೆಲಸ ಮಾಡಿದರು. ಅವರು ವಿದ್ಯಾರ್ಥಿಗಳ ಪಾಲಿಗೆ ಕೇವಲ ಮೇಷ್ಟ್ರಾಗಿರದೆ ಮಾರ್ಗದರ್ಶಕರಾಗಿದ್ದರು. ಕೆ.ವಿ ನಾರಾಯಣ, ಎಚ್.ಎಸ್. ರಾಘವೇಂದ್ರರಾವ್, ಸಿ. ವೀರಣ್ಣ, ಚಿ. ಶ್ರೀನಿವಾಸ ರಾಜು ಮುಂತಾದವರಿಗೆ ಮೊದಲು ಅಭಿನಯಕ್ಕೆ ಬಣ್ಣ ಅಚ್ಚಿದರು. ಟಿ.ಪಿ. ಕೈಲಾಸಂ ಅವರ ‘ಪರ್ಪಸ್’ ನಾಟಕದ ಪ್ರತಿಯನ್ನು ನಾಶವಾಗದಂತೆ ಕಾಪಾಡಿ, ಅದನ್ನು ಮುಂದಿನ ಪೀಳಿಗೆಗೆ ಉಳಿಸಿಕೊಟ್ಟ ಶ್ರೇಯಸ್ಸು ಇವರದ್ದು.

ಅವರ ಸರಳತೆ ಎಂಥವರನ್ನೂ ಬೆರಗುಗೊಳಿಸುವಂತಿತ್ತು. ಹೊರಗಿನ ಆಡಂಬರಕ್ಕೆ ಜೋತುಬೀಳದ ಅವರು, ಸ್ವತಃ ಟೈಲರಿಂಗ್ ಕಲಿತಿದ್ದರು ಮತ್ತು ರಂಗಭೂಮಿಗೆ ಬೇಕಾದ ಬಟ್ಟೆಗಳನ್ನು ತಾವೇ ಹೊಲಿದುಕೊಳ್ಳುತ್ತಿದ್ದರು. ತರಗತಿಯಲ್ಲಿ ಅಶಿಸ್ತಿನಿಂದ ವರ್ತಿಸುತ್ತಿದ್ದ ವಿದ್ಯಾರ್ಥಿಗಳನ್ನು ಪ್ರೀತಿಯಿಂದಲೇ ತಿದ್ದುತ್ತಿದ್ದರು. ಅಷ್ಟೇ ಅಲ್ಲ, ಆರ್ಥಿಕವಾಗಿ ಕಷ್ಟದಲ್ಲಿದ್ದ ಎಷ್ಟೋ ಬಡ ವಿದ್ಯಾರ್ಥಿಗಳಿಗೆ ತಾವೇ ಶುಲ್ಕ ಕಟ್ಟಿ ಓದಿಸಿದ ಉದಾಹರಣೆಗಳೂ ಇವೆ.

ಅಪ್ಪಟ ಜಾತ್ಯತೀತ ಬದುಕು

ಬ್ರಾಹ್ಮಣ ಕುಟುಂಬಕ್ಕೆ ಸೇರಿದವರಾಗಿದ್ದರೂ, ಕ.ವೆಂ. ಅವರು ಜಾತಿ-ಮತಗಳ ಸಂಕೋಲೆಯನ್ನು ಕಳಚಿ ಹಾಕಿ ಬದುಕಿದರು. ದಲಿತ ಕವಿ ಸಿದ್ಧಲಿಂಗಯ್ಯನವರಿಗೆ ತಮ್ಮ ಕೆಂಗೇರಿಯ ಮನೆಯನ್ನು ಬಾಡಿಗೆಗೆ ನೀಡಿ, ಅವರಿಂದ ಬಾಡಿಗೆ ಹಣವನ್ನೂ ಪಡೆಯದೆ, ಅವರ ಸಾಹಿತ್ಯ ಕೃಷಿಗೆ ಬೆನ್ನೆಲುಬಾಗಿ ನಿಂತರು. ತಮ್ಮ ಮಗಳು ಅಂತರ್ಜಾತಿ ವಿವಾಹವಾಗಲು ನಿರ್ಧರಿಸಿದಾಗ, ಅದನ್ನು ಮುಕ್ತ ಮನಸ್ಸಿನಿಂದ ಸ್ವಾಗತಿಸುವ ಮೂಲಕ, ತಾವು ನಂಬಿದ ಜಾತ್ಯತೀತ ತತ್ವವನ್ನು ತಮ್ಮ ಬದುಕಿನಲ್ಲಿ ಪಾಲಿಸಿ ತೋರಿಸಿದರು. ತಮ್ಮ ಪತ್ನಿಯೊಂದಿಗಿನ ಭಿನ್ನಾಭಿಪ್ರಾಯವನ್ನೂ, ‘ನನಗೆ ನೀತಿ ಮುಖ್ಯ, ಅವಳಿಗೆ ರೀತಿ (ಸಂಪ್ರದಾಯ) ಮುಖ್ಯ’ ಎಂದು ತಾತ್ವಿಕವಾಗಿ ವಿಶ್ಲೇಷಿಸುತ್ತಿದ್ದ ಅವರ ಪ್ರಬುದ್ಧತೆ ಅಸಾಮಾನ್ಯವಾದುದು.

ಶತಮಾನೋತ್ಸವದ ಈ ಸಂದರ್ಭದಲ್ಲಿ, ಪ್ರಚಾರದ ಹಪಾಹಪಿಯಿಲ್ಲದೆ, ಅಧಿಕಾರದ ಆಸೆಯಿಲ್ಲದೆ, ನಂಬಿದ ಮೌಲ್ಯಗಳಿಗಾಗಿ ನಿಷ್ಠುರವಾಗಿ ಬದುಕಿದ ಕ.ವೆಂ. ರಾಜಗೋಪಾಲ ಅವರನ್ನು ಸ್ಮರಿಸುವುದು ನಮ್ಮೆಲ್ಲರ ಸಾಂಸ್ಕೃತಿಕ ಕರ್ತವ್ಯವಾಗಿದೆ. ಅವರ ಬದುಕು ಇಂದಿನ ಪೀಳಿಗೆಗೆ ‘ಮಾನವೀಯತೆ’ಯ ಪಾಠಶಾಲೆಯಂತಿದೆ.

ಇವರ ಶತಮಾನೋತ್ಸವನ್ನು ಕರ್ನಾಟಕ ಸರ್ಕಾರ ತನ್ನ ನಾಟಕ ಅಕಾಡೆಮಿಯ ಮತ್ತು ಕ.ವೆಂ ಜನ್ಮಶತಮಾನೋತ್ಸವ ಸಮಿತಿ ವರ್ಷ ಪೂರ್ತಿ ಕಾರ್ಯಕ್ರಮ ಹಮ್ಮಿಕೊಂಡಿರುವುದು ಅರ್ಥಪೂರ್ಣ. ಇದು ಅವರ ಸಾಂಸ್ಕೃತಿಕ ಕಲಾವಂತಿಕೆಗೆ ನೀಡಿದ ಮನ್ನಣೆ. ಈ ಸಂದರ್ಭದಲ್ಲಿ ಅವರ ಸಾಹಿತ್ಯ ಮತ್ತು ಚಿಂತನೆಗಳನ್ನು ಮುಂದಿನ ತಲೆಮಾರಿಗೆ ದಾಟಿಸುವುದು ಅವರಿಗೆ ಸಲ್ಲಿಸಬಹುದಾದ ನಿಜವಾದ ಗೌರವವಾಗಿದೆ.

ಬಹುರೂಪಿ ಅಡಿಕೆ!

8ನೇ ಪುಟದಿಂದ..

ಅಡಿಕೆ ಹಾಳೆ ಬಳಸಿ ತಯಾರಿಸಿದ ಚರ್ಮವು ಹಾವು ಅಥವಾ ಆನೆಯ ಚರ್ಮದಂತೆಯೇ ಇರುತ್ತದೆ. ಸದ್ಯ ಇದನ್ನು ಪರ್ಸ್, ಹ್ಯಾಂಡ್‌ಬ್ಯಾಗ್‌ಗಳು, ಚಪ್ಪಲಿಗಳು ಮತ್ತು ಡೈರಿಗಳ ಕವರ್ ತಯಾರಿಸಲು ಬಳಸಲಾಗುತ್ತಿದೆ.

ಸ್ಪಿರಿಟ್ ತಯಾರಿಕೆ

ಅಡಿಕೆಯನ್ನು ಈಗ ವೈನ್ ತಯಾರಿಕೆಯಲ್ಲೂ ಬಳಸಲಾಗುತ್ತಿದೆ. ಶಿವಮೊಗ್ಗದ ಸುಷ್ಮಾ ಸಂಜಯ್ ಮತ್ತು ಅವರ ಮಗ ಆಕರ್ಷ್ ಸಂಜಯ್ ಅವರ ತಲಿಸ್ವ ವೈನ್ಸ್ ಸಂಸ್ಥೆಯು ಜೇನು, ವೀಳ್ಯದೆಲೆ ಮತ್ತು ಅಡಿಕೆಯನ್ನು ಉಪಯೋಗಿಸಿಕೊಂಡು ಪಾನ್-ಸ್ವಾದದ ವೈನ್ ತಯಾರಿಸಿದೆ.

‘ಪಾನ್ ಜಗಿಯುವುದು ನಮ್ಮ ಸಂಸ್ಕೃತಿಯ ಭಾಗ. ಆದರೆ, ಯುವಜನರಿಗೆ ಇದು ಅಷ್ಟೊಂದು ಇಷ್ಟವಾಗುವುದಿಲ್ಲ. ಹಾಗಾಗಿ, ನಾವ್ಯಾಕೆ ಇದನ್ನು ಪಾನೀಯವನ್ನಾಗಿ ಮಾಡಬಾರದು ಎಂದು ಯೋಚಿಸಿದೆವು. ಅದರ ಫಲಿತಾಂಶವೇ ಸಿಹಿಯ ಜೊತೆಗೆ ಸ್ವಲ್ಪ ಖಾರ ರುಚಿಯನ್ನು ಹೊಂದಿರುವ ವೈನ್. ಇದರಲ್ಲಿ ಆಲ್ಕೊಹಾಲ್‌ನ ಪ್ರಮಾಣ ಶೇಕಡ 9ರಷ್ಟು ಇದೆ. ಜೊತೆಗೆ ವೀಳ್ಯದೆಲೆಯ ವಿಶಿಷ್ಟ ಕಂಪು ಕೂಡ ಇದೆ’ ಎಂದು ಮತ್ತು ಆಕರ್ಷ್ ಹೇಳುತ್ತಾರೆ.

ಬೇಕಿದೆ ಸುಸ್ಥಿರ ಪ್ರಯತ್ನಗಳು

ಜಗತ್ತಿನ ಅತ್ಯಂತ ದೊಡ್ಡ ಅಡಿಕೆ ಉತ್ಪಾದಕ ರಾಷ್ಟ್ರವಾಗಿದ್ದರೂ ಭಾರತ ಈಗಲೂ ಅಡಿಕೆಯನ್ನು ಪ್ರಮುಖವಾಗಿ ಸೇವನೆ ಮತ್ತು ಆಚರಣೆಗಳ ಉದ್ದೇಶಕ್ಕಷ್ಟೇ ಬಳಸುತ್ತಿದೆ. ಇದಕ್ಕೆ ವ್ಯತಿರಿಕ್ತವಾಗಿ ಆಗ್ನೇಯ ಏಷ್ಯಾದ ರಾಷ್ಟ್ರಗಳು ವೈವಿಧ್ಯಮಯವಾಗಿ ಬಳಸುತ್ತಿವೆ. ವಿಶೇಷವಾಗಿ ಅಡಿಕೆಯಲ್ಲಿನ ಔಷಧೀಯ ಗುಣಗಳನ್ನು ಅವುಗಳು ಕಂಡು ಕೊಂಡಿವೆ. ಅಡಿಕೆಯ ಟೂತ್‌ಪೇಸ್ಟ್, ಐಸ್‌ಕ್ರೀಂಗಳು, ಸ್ಕ್ವಾಶ್‌ಗಳು ಮಾತ್ರವಲ್ಲದೆ ಅಂಟು ಪದಾರ್ಥ ಸೇರಿದಂತೆ ಹಲವು ಉದ್ದೇಶಗಳಿಗೆ ಉಪಯೋಗಿಸುತ್ತಿವೆ.

‘ಅಡಿಕೆಯನ್ನು ತರಹೇವಾರಿ ಉದ್ದೇಶಗಳಿಗೆ ಬಳಸುವ ವಿಚಾರದಲ್ಲಿ ನಾವು ಅವರಿಂದ ಕಲಿಯಬೇಕು’ ಎಂಬುದು ಶ್ರೀ ಪಡ್ರೆ ಅವರ ಅಭಿಪ್ರಾಯ.

‘ಯಾವುದೇ ವಸ್ತು ಅಥವಾ ಉತ್ಪನ್ನವು ಮಾರುಕಟ್ಟೆಯಲ್ಲಿ ಯಶಸ್ವಿಯಾಗಬೇಕಾದರೆ ವೈವಿಧ್ಯತೆ, ಸಂಶೋಧನೆ ಮತ್ತು ವಾಣಿಜ್ಯೀಕರಣ ಮುಖ್ಯ. ನಮ್ಮಲ್ಲಿ ಯಾವುದೇ ಹೊಸ ಸಂಶೋಧನೆ ಅಥವಾ ನಾವಿನ್ಯ ಕಲ್ಪನೆಯು ಸಂಶೋಧನಾ ವರದಿಗಷ್ಟೇ ಸೀಮಿತವಾಗುತ್ತದೆ. ವರದಿ ಪ್ರಕಟಗೊಂಡ ನಂತರ ಅದು ಮಾರುಕಟ್ಟೆಗೆ ಬರುವುದಿಲ್ಲ. ಸುಸ್ಥಿರ ಬೆಂಬಲ ಮತ್ತು ವ್ಯವಸ್ಥಿತ ಹಣಕಾಸಿನ ನೆರವು ಸಿಕ್ಕಿದರೆ ಅಡಿಕೆಯು ಕೇವಲ ಬೆಳೆಯಾಗಿರದೆ, ಆವರ್ತನದ ಸುಸ್ಥಿರ ಆರ್ಥಿಕತೆಯ ಸಂಕೇತವಾಗಲಿದೆ’ ಎಂದು ಪ್ರತಿಪಾದಿಸುತ್ತಾರೆ ಅವರು.



ಅಡಿಕೆ ಮರದಿಂದ ಮಾಡಿರುವ ಗೇಟು

ಅಡಿಕೆ ಹಾಗೂ ಅದರ ಮರದ ಉಪ ಉತ್ಪನ್ನಗಳ ಬಗ್ಗೆ ಜನರಲ್ಲಿ ಜಾಗೃತಿ ಇಲ್ಲದಿರುವುದು ಮತ್ತು ಉತ್ಪನ್ನಗಳ ಬೆಲೆ ದುಬಾರಿಯಾಗಿರುವುದರಿಂದ ಸುಸ್ಥಿರವಾದ ಮತ್ತು ಪರಿಸರ ಸ್ನೇಹಿಯಾದ ಇವುಗಳ ಬಳಕೆ ತುಂಬಾ ಕಡಿಮೆ ಎಂದು ಹೇಳುತ್ತಾರೆ ತಜ್ಞರು.

ಕೃಷಿಯಲ್ಲಿ ರೈತರು ತಮ್ಮ ಉತ್ಪನ್ನಗಳಿಗೆ ಮೌಲ್ಯವರ್ಧನೆ ಮಾಡಿದಾಗ ಮಾತ್ರ ಹೆಚ್ಚು ಆದಾಯ ಗಳಿಸಲು ಸಾಧ್ಯ. ಇಂತಹ ಪ್ರಯತ್ನಗಳು ಹೆಚ್ಚಾಗಲಿ, ರೈತರ ಜೇಬು ತುಂಬಲಿ.

(ಅನುವಾದ: ಸೂರ್ಯನಾರಾಯಣ ವಿ.)

ಬಂಗಾಳದಲ್ಲಿ ಕನ್ನಡದ ಹೊನ್ನು


8ನೇ ಪುಟದಿಂದ..

ಮೊದಲೆರಡು ಪ್ರಯತ್ನಗಳಲ್ಲಿ ಪ್ರಿಲಿಮ್ಸ್ ಕೂಡ ದಾಟಲು ಸಾಧ್ಯವಾಗಿಲಿಲ್ಲ. ಮಾಡು ಇಲ್ಲವೇ ಮಡಿ ಎಂದು ಹಟ ತೊಟ್ಟು ಅಧ್ಯಯನ ಮಾಡಿದರು. ಮೂರನೇ ಪ್ರಯತ್ನದಲ್ಲಿ 344ನೇ ರ‍್ಯಾಂಕ್ ಪಡೆದರು. 2017ರಲ್ಲಿ ಪಶ್ಚಿಮ ಬಂಗಾಳ ಕೇಡರ್ ಐಎಎಸ್ ಅಧಿಕಾರಿಯಾಗಿ ಆಯ್ಕೆಯಾದರು.

ಐಎಎಸ್ ಅಧಿಕಾರಿಯಾದ ಮೇಲೆ ಅವರು ನಡೆದುಬಂದ ಹಾದಿಯನ್ನು ಮರೆಯಲಿಲ್ಲ. ಮಿಡ್ನಾಪುರ ಪ್ರದೇಶದಲ್ಲಿ ಬಾಲ್ಯ ವಿವಾಹ, ಶಾಲೆ ತೊರೆಯುವುದು, ಮಕ್ಕಳ ಅಪೌಷ್ಟಿಕತೆಯಂಥ ಸಮಸ್ಯೆಗಳು ಹೆಚ್ಚಾಗಿದ್ದವು. ಅವುಗಳ ತಡೆಗೆ ಶ್ರಮಿಸಿದ್ದಲ್ಲದೇ, ಅರ್ಹರಿಗೆ ವಿಧವಾ ವೇತನ, ವೃದ್ಧಾಪ್ಯ ವೇತನ, ನರೇಗಾ, ರೈತರೊಂದಿಗೆ ಕೆಲಸ, ಕಾಲೇಜು ವಿದ್ಯಾರ್ಥಿಗಳಿಗೆ ನೆರವು, ಕೌಶಲಾಭಿವೃದ್ಧಿ ಹೀಗೆ ಹತ್ತಾರು ಸವಲತ್ತು ಅರ್ಹರಿಗೆ ಸಿಗುವಂತೆ ಮಾಡಿದರು. ಅಂಗನವಾಡಿ ಕೇಂದ್ರಗಳನ್ನು ಅಭಿವೃದ್ಧಿಪಡಿಸಿದರು. ಹಿಂದುಳಿದ ಜಿಲ್ಲೆಯಲ್ಲಿ ಅಭಿವೃದ್ಧಿ ಪರ್ವವನ್ನೇ ಆರಂಭಿಸಿದರು. ಪಶ್ಚಿಮ ಬಂಗಾಳದಲ್ಲಿ ಮನೆಮಾತಾದರು.

ಮೊದಲ ಓದು

ಪಾರಾಯಣಕ್ಕೆ ಒದಗುವ ರಾಮಾಯಣದ ಶುದ್ಧ ಪಠ್ಯ



ಶ್ರೀಮದ್ವಾಲ್ಮೀಕಿರಾಮಾಯಣಮ್ - 3 ಸಂಪುಟಗಳು
ಸಂ: ಶೇಷಗುರು ಗಂಗಾಧರ ಭಟ್ಟ
ಪ್ರ: ಸಾಕೇತಪ್ರತಿಷ್ಠಾನಮ್
ಸಂ: 9448142866


ವಾಲ್ಮೀಕಿ ವಿರಚಿತ ರಾಮಾಯಣವನ್ನು ತಪ್ಪುಗಳೇ ಇಲ್ಲ ಎಂಬಷ್ಟು ಶುದ್ಧ ಪಠ್ಯದೊಂದಿಗೆ ನೀಡುವ ಯತ್ನ ‘ಶ್ರೀಮದ್ವಾಲ್ಮೀಕಿರಾಮಾಯಣಮ್’ ಕೃತಿಯಲ್ಲಿ ಕಾಣುತ್ತದೆ. ಮೂರು ಸಂಪುಟಗಳಲ್ಲಿ ಪ್ರಕಟಗೊಂಡಿರುವ ಈ ಕೃತಿ ಸಾಂಪ್ರದಾಯಿಕ ರಾಮಾಯಣ ಪಾರಾಯಣ ಮಾಡುವವರಿಗೆ ಅತ್ಯಂತ ಸೂಕ್ತವಾಗಿದೆ. ಪ್ರತಿ ಸಂಪುಟವನ್ನು ಒಂಬತ್ತು ದಿನಗಳು ಯಾವ ರೀತಿ ಪಾರಾಯಣ ಮಾಡಬೇಕೆಂಬ ಮಾಹಿತಿಯೂ ಕೃತಿಯಲ್ಲಿದೆ.

‘ಪ್ರಾಚೀನಮುದ್ರಿತ ಪುಸ್ತಕಗಳನ್ನು ಅನುಸರಿಸಿ ದೇವನಾಗರಿ ಮತ್ತು ಕನ್ನಡ ಲಿಪಿಗಳಲ್ಲಿ ಸಂಪೂರ್ಣ ರಾಮಾಯಣದ ಮೂಲವನ್ನು ಮೂರು ಭಾಗಗಳಾಗಿ ಮುದ್ರಿಸಲಾಗಿದೆ. ಶ್ರೀಮದ್ರಾಮಾಯಣಪಾರಾಯಣೆಯನ್ನು ಮಾಡುವ ಆಸ್ತಿಕರಿಗೆ ಇದರಿಂದ ಅತ್ಯಂತ ಉಪಕಾರವಾಗುತ್ತದೆ ಎಂಬ ವಿಷಯದಲ್ಲಿ ಯಾವುದೇ ಸಂದೇಹವಿಲ್ಲ’ ಎಂಬುದಾಗಿ ಶೃಂಗೇರಿಯ ಶ್ರೀ ಭಾರತೀತೀರ್ಥ ಸ್ವಾಮೀಜಿ ಅನುಗ್ರಹ ಸಂದೇಶದಲ್ಲಿ ಹೇಳಿರುವುದು ಪುಸ್ತಕದ ಸಂಶೋಧನಾ ಶ್ರೇಷ್ಠತೆಗೆ ಹಿಡಿದ ಕನ್ನಡಿಯಂತಿದೆ.

ಸಾಕೇತ ಪ್ರತಿಷ್ಠಾನದ ಮೂಲಕ ಪ್ರಕಟಗೊಂಡಿರುವ ಈ ಕೃತಿಗೆ ನಾಡಿನ ಹಲವು ವಿದ್ವಾಂಸರು ಸೂಕ್ತ ಆಕರ ಗ್ರಂಥಗಳನ್ನು ಒದಗಿಸಿ, ಕೃತಿ ಪರಿಶೀಲಿಸುವ ಮೂಲಕ ಕೊಡುಗೆ ನೀಡಿದ್ದಾರೆ. ಪಾರಾಯಣಕ್ಕೆ ಅನುಕೂಲವಾಗುವಂತೆ ಶ್ಲೋಕಗಳನ್ನು ಮೂರು ಸಂಪುಟಗಳಲ್ಲಿ ವಿಂಗಡಿಸಲಾಗಿದ್ದು, ಶೃಂಗೇರಿ ಮಠದ ಮೇಲ್ವಿಚಾರಣೆಯೊಂದಿಗೆ ಈ ಸರಣಿ ಸಿದ್ಧಗೊಂಡಿದೆ. ಪರಿಣಾಮವಾಗಿ ವಸ್ತು-ವಿಷಯ ಗುಣಮಟ್ಟದಲ್ಲಿಯೂ ಉತ್ಕೃಷ್ಟವಾಗಿದೆ. ರಾಮಾಯಣ ಪಾರಾಯಣ ವಿಧಿವಿಧಾನದಿಂದ ಪ್ರಾರಂಭಿಸಿ ಏಳು ಕಾಂಡಗಳ ಸಂಪೂರ್ಣ ಕಥೆಯಿದೆ. ಏಳು ಕಾಂಡಗಳ ಒಟ್ಟು 23,664 ಶ್ಲೋಕಗಳು ಈ ಕೃತಿಯಲ್ಲಿವೆ. ಇಡೀ ಕೃತಿ ಸಂಸ್ಕೃತ ಶ್ಲೋಕ ರೂಪದಲ್ಲಿ ಇರುವುದರಿಂದ, ಶ್ಲೋಕಗಳನ್ನು ಅರ್ಥೈಸಿಕೊಂಡು ರಾಮಾಯಣದ ಕುರಿತು ಆಳವಾದ ಅಧ್ಯಯನ ಬಯಸುವವರಿಗೆ, ರಾಮಾಯಣದ ಮೂಲ ಸ್ವರೂಪವನ್ನು ಸಂಶೋಧಿಸುವ ವಿದ್ವಾಂಸರಿಗೆ ಹೆಚ್ಚು ರುಚಿಸುವ ಹೊತ್ತಿಗೆಯಿದು.

ಪುಟ: 2250 ₹2000

ಸಣ್ಣ ಕತೆಗಳ ದೊಡ್ಡ ಸುಳಿ



ಅದೊಂದು ದಿನ
ಲೇ: ಎ.ಎನ್. ಪ್ರಸನ್ನ
ಪ್ರ: ಅಂಕಿತ ಪುಸ್ತಕ
ಸಂ: 9019190502


ಕತೆಗಳೇ ಕತೆಗಳನ್ನು ಹುಟ್ಟುಹಾಕುವಂತಿದ್ದರೆ? ಕತೆಯ ಹೊಟ್ಟೆಯೊಳಗೊಂದು ಕತೆ ಇದ್ದರೆ? ಕತೆಯೊಂದು ಮುಗಿದ ಕೂಡಲೇ.. ಮುಂದಿನ ಕತೆ ಏನಾಗಿರಬಹುದು ಎಂದು ಹತ್ತಾರು ಕತೆಗಳು ಹೊಳೆಯುತ್ತಿದ್ದರೆ... ಸಣ್ಣ ಕತೆಗಳೆಲ್ಲವೂ ಅಂಥವೇ. ಅವುಗಳ ಹಿಂದಿನ ಮತ್ತು ಮುಂದಿನ ಕತೆಗಳೇ ಸುದೀರ್ಘವಾಗಿರುತ್ತವೆ. ಇಂಥ ಹಲವಾರು ಕತೆಗಳ ಸಂಕಲನವೇ ಅದೊಂದು ದಿನ.

ಕೆಲವು ಎಲ್ಲಿಯೋ ಓದಿರುವ ಇಂಗ್ಲಿಷ್ ಕತೆಗಳನ್ನೂ, ಸಾಮಾಜಿಕ ಜಾಲತಾಣಗಳಲ್ಲಿ ಒಂದೆರಡು ಸಾಲುಗಳನ್ನು ಓದಿರುವೆವೋ ಎಂಬ ಸಂಶಯ ಮೂಡಿಸಬಹುದು. ಆದರೆ ಇವೆಲ್ಲವೂ ಓದಿಸಿಕೊಳ್ಳುತ್ತಲೇ ಮತ್ತೆ ಮತ್ತೆ ತಮ್ಮೊಳಗೆ ಕಳಿಯುವಂತೆ ಮಾಡುತ್ತವೆ.

ಡಿಜಿಟಲ್ ಯುಗದಲ್ಲಿ ಸಂಬಂಧಗಳು, ಬಾಂಧವ್ಯಗಳು ತಮ್ಮ ಆರ್ದ್ರ ಗುಣ ಕಳೆದುಕೊಳ್ಳುತ್ತಿವೆ. ನಾವು ಮಾತುಗಳನ್ನು ಕೇಳುವುದೇ ಪ್ರತಿಕ್ರಿಯಿಸಲು ಎಂಬಂತೆ ಆಗಿರುವ ಈ ದಿನಗಳಲ್ಲಿ ಕತೆ ಕೇಳುವ, ಮಾತಿಗ ಕಿವಿಯಾಗುವ ವ್ಯವಧಾನವನ್ನೇ ಕಳೆದುಕೊಂಡಿದ್ದೇವೆ. ಮನುಷ್ಯ ಸಹಜವಾಗಿರುವ ಕುತೂಹಲ ಮತ್ತು ಕಾಳಜಿ ಎರಡರಿಂದ ದೂರ ಆಗುತ್ತಿರುವ ಬಗೆಯನ್ನು ಹಲವಾರು ಕತೆಗಳು ಧ್ವನಿಸುತ್ತವೆ. ಯಾಂತ್ರಿಕವಾದ ಈ ಬದುಕಿನಲ್ಲಿ ಹಲವಾರು ಮಾತುಗಳು ಹೇಳದೆಯೇ ಉಳಿಯುತ್ತವೆ. ಕೆಲವೊಮ್ಮೆ ಕಾಲ ನಿಷ್ಕರುಣಿಯಾಗಿಯೂ ನಿರ್ದಯಿಯಾಗಿಯೂ ಕಾಣುತ್ತದೆ. ಅಂಥ ಸಂದರ್ಭಗಳನ್ನೆಲ್ಲ ಇಲ್ಲಿ ಕತೆಯಾಗಿ ಹೆಣೆಯಲಾಗಿದೆ. ಕೆಲವು ಅತಿ ವಾಸ್ತವಕ್ಕೆ ಸಮೀಪದವು. ನಮ್ಮ ನಿಮ್ಮೆಲ್ಲರ ಬದುಕಿನಲ್ಲಿ ಘಟಿಸಿದಂಥವು ಎನಿಸುತ್ತವೆ. ಇನ್ನೂ ಕೆಲವು ಕತೆಗಳಿಗೆ ನಾವೇ ಸಾಕ್ಷಿಯಾದಂತೆಯೂ ಭಾಸವಾಗುತ್ತದೆ. ಒಂದಷ್ಟು ಕತೆಗಳು ಕಾಲ್ಪನಿಕವೆಂದೆನಿಸುತ್ತವೆ. ಆದರೆ ಬಹುತೇಕ ಕತೆಗಳು ನಮ್ಮ ನಿಮ್ಮ ನಡುವೆಯೇ ಘಟಿಸಿದ ಸಂಗತಿಗಳಂತೆಯೂ ಕಾಡುತ್ತವೆ. ವಿರಾಮದ ಓದಿಗೆ, ಪ್ರಯಾಣದ ಓದುಗರ ಸ್ನೇಹಿ ಈ ಪುಸ್ತಕ.

ಪುಟ: 132 ₹150

ನಿತ್ಯ ಬದುಕಿನ ಸಾಮಾನ್ಯ ಚಿತ್ರಣ



ವ್ಯಥೆ ಕಥೆ
ಲೇ: ಅಜಕ್ಕಳ ಗಿರೀಶ ಭಟ್
ಪ್ರ: ಚಿಂತನ ಬಯಲು
ಸಂ: 8217703698

ಲೇಖಕರೇ ಹೇಳಿಕೊಂಡಂತೆ ಕಲ್ಪಿತ ವಾಸ್ತವ ಎನ್ನುವ ಸಾಹಿತ್ಯ ಪ್ರಕಾರದ ಪುಸ್ತಕ. ಕಥೆ ಎಂದು ಹೇಳಲಾಗದ, ಕಾದಂಬರಿ ಎನ್ನಲಾಗದ, ಪ್ರಬಂಧ ಎಂದು ಪರಿಗಣಿಸಬಹುದಾದ ಕಿರು ಹೊತ್ತಿಗೆ ಇದು. ಸಾಮಾನ್ಯರ ಜೀವನದಲ್ಲಿ ನಡೆದಿರಬಹುದಾದ ಘಟನೆಗಳನ್ನೇ ಲೇಖಕರು ನವಿರಾಗಿ ವಿವರಿಸಿದ್ದಾರೆ. ಸಿದ್ಧ ಮಾದರಿಯ ಪೀಠಿಕೆ ಇಲ್ಲದೆ ನೇರವಾಗಿ ಕಥೆ ಹೇಳಿದ ಹಾಗೆ ಘಟನೆಗಳನ್ನು ಇಲ್ಲಿ ನಿರೂಪಿಸಲಾಗಿದೆ. ನಿತ್ಯ ಬದುಕಿನ ಸಾಮಾನ್ಯ ಸಂಗತಿಗಳನ್ನೇ ಚಿತ್ರಿಸಲಾಗಿದ್ದು, ಓದುಗರನ್ನು ಕುತೂಹಲಕ್ಕೆ ಹಚ್ಚುತ್ತದೆ. ನಿವೃತ್ತ ದಂಪತಿಯ ರೈಲು ಪ್ರಯಾಣದ ಮೂಲಕ ಕಥೆ ಪ್ರಾರಂಭವಾಗುತ್ತದೆ. ಪ್ರಯಾಣದಲ್ಲಿ ಸಿಗುವ ಪರಿಚಿತರೆನಿಸುವ ಅಪರಿಚಿತರ ನಡುವೆ ನಡೆಯುವ ಸಂಭಾಷಣೆಗಳು, ಪ್ರವಾಸ ಹೋದಾಗ ಊರಿನಲ್ಲಿ ನಡೆಯುವ ಘಟನೆಗಳಿಂದ ಎದುರಾಗುವ ಆತಂಕಗಳು, ನಿವೃತ್ತಿ ಬಳಿಕವೂ ಸರ್ಕಾರಿ ನೌಕರನೊಬ್ಬನ ಪಡಿಪಟಾಲು ಮುಂತಾದವುಗಳು ಇಲ್ಲಿ ದಾಖಲಾಗಿದೆ.

ಆಸ್ತಿ ವಿಚಾರಕ್ಕೆ ನೆರೆಮನೆಯನವರ ನಡುವೆ ನಡೆಯುವ ವ್ಯಾಜ್ಯ, ದೂರು ಕೊಡಲು ಹೋದವರನ್ನು ಪೊಲೀಸರು ನಡೆಸಿಕೊಳ್ಳುವ ಪರಿ, ಕೇಸು ಜಯಿಸಲು ಎದುರಾಳಿಗಳು ಮಾಡುವ ಉಪಾಯಗಳು, ಜಾತಿ ತರಮತದ ನೋವುಗಳೂ ಇಲ್ಲಿ ಅಡಕವಾಗಿದೆ. ಸಮಾಜದ ಓರೆಕೋರೆಗಳ ಬಗ್ಗೆ ಪುಸ್ತಕ ಸೂಕ್ಷ್ಮವಾಗಿ ಬೆಳಕು ಚೆಲ್ಲುತ್ತದೆ. ತಾಯಿಯ ಕರುಳ ನೋವನ್ನೂ ಕೆಲವೇ ಪದಗಳಲ್ಲಿ ಲೇಖಕ ಹಿಡಿದಿಟ್ಟಿದ್ದಾರೆಯಾದರೂ, ಅದರ ಹಿಂದಿನ ಭಾವ ಅನನ್ಯವಾದುದು. ಮೂಢನಂಬಿಕೆಗಳಿಗೆ ಜೋತು ಬೀಳುವ, ಅದನ್ನೇ ಬಂಡವಾಳ ಮಾಡಿಕೊಂಡವರ ಉಲ್ಲೇಖವೂ ಸೂಕ್ಷ್ಮ ಮನಸ್ಸಿನ ಓದುಗರಿಗೆ ದಕ್ಕುತ್ತವೆ. ಸ್ತ್ರೀ-ಪುರುಷ ಸಮಾನತೆಯ ಪ್ರತಿಪಾದನೆಯ ಇನ್ನೊಂದು ಬದಿ ಪುಸ್ತಕದಲ್ಲಿದೆ.

ದೇಶದ ಕಾನೂನು ವ್ಯವಸ್ಥೆಯ ಬಗ್ಗೆ ಇರುವ ದೀರ್ಘ ಅಧ್ಯಾಯ ಲೇಖಕರ ಅಧ್ಯಯನಶೀಲತೆಗೆ ಸಾಕ್ಷಿ. ನ್ಯಾಯದಾನದಲ್ಲಿ ಆಗುತ್ತಿರುವ ವಿಳಂಬ, ಅದಕ್ಕೆ ಕಾರಣಗಳು, ಅದಕ್ಕಿರುವ ಪರಿಹಾರಗಳು, ಈ ಸಂಬಂಧ ಅಂಕಿ ಅಂಶಗಳು ದಾಖಲು ಮಾಡಿರುವುದು ಲೇಖಕರ ವೃತ್ತಿ ಜೀವನದಲ್ಲಿ ಅನುಭವಿಸಿದ ನೋವುಗಳ ಪ್ರತಿಬಿಂಬವೇನೋ ಎಂದನಿಸುತ್ತದೆ. ಈ ಅಧ್ಯಾಯದ ಗಂಭೀರ ಓದು ಎಲ್ಲಾ ಓದುಗರಿಗೆ ಪಥ್ಯವಾಗುವುದು ಅನುಮಾನ. ಸೂಕ್ಷ್ಮ ಮನಸ್ಸಿನಿಂದ ನೋಡುವವರಿಗೆ ಇಲ್ಲಿನ ನಿರೂಪಣೆಯ ಇನ್ನೊಂದು ಮಗ್ಗುಲು ಅರ್ಥವಾಗಬಹುದು.


ಪುಟ: 72 ₹90

ದುರ್ಗಮ ಹಾದಿಯ ಓಟದ ಸಂಭ್ರಮ



ಗುಡ್ಡದ ಮೇಲೆ ಬಿರುಬಿಸಿಲಿನಲ್ಲಿ ಓಟ

ಮ್ಯಾರಥಾನ್ ಓಟವನ್ನೂ ಮೀರಿದ ಅಲ್ಟ್ರಾ ರನ್ ಈಗ ಭಾರತದಲ್ಲಿ ಪ್ರವರ್ಧಮಾನದಲ್ಲಿದೆ. ಅಲ್ಟ್ರಾ ರನ್‌ನಲ್ಲೇ ಅತ್ಯಂತ ದುರ್ಗಮವಾದ ಹಾಗೂ ಸವಾಲಿನ ಅಲ್ಟ್ರಾ ಟ್ರೇಲ್ ರನ್ ಕ್ರೀಡಾಪಟುಗಳ ದೈಹಿಕ ಸಾಮರ್ಥ್ಯ ಮತ್ತು ಮಾನಸಿಕ ಸ್ಥೈರ್ಯವನ್ನು ಒರೆಗೆ ಹಚ್ಚುತ್ತದೆ. ಇದರಲ್ಲಿ ಯಶಸ್ಸು ಕಂಡವರು ಉದ್ಯೋಗ ಮತ್ತು ವೈಯಕ್ತಿಕ ಜೀವನವನ್ನು ಸುಲಲಿತವಾಗಿ ಸಾಗಿಸುತ್ತಿರುವುದು ಓಟಗಾರರ ಅನುಭವದ ಮಾತಿನಿಂದ ತಿಳಿಯುತ್ತದೆ. ಈ ಕಾರಣದಿಂದ ಕಾರ್ಪೊರೇಟ್ ವಲಯದಲ್ಲಿ ಈಗ ಅಲ್ಟ್ರಾ ಓಟಗಳು ಆದ್ಯತೆ ಪಡೆದುಕೊಂಡಿವೆ.



ತಿಪ್ಪಾರೆಡ್ಡಿ

• ವಿಕ್ರಂ ಕಾಂತಿಕೆರೆ

ಇಪ್ಪತ್ತೊಂದು ತಾಸುಗಳೊಳಗೆ ಮುಗಿಸಬೇಕಾಗಿದ್ದ100 ಕಿಮೀ ಹಗಲು-ರಾತ್ರಿ ಓಟವನ್ನು ಸಂಜೆಯೊಳಗೆ, 10 ತಾಸುಗಳಲ್ಲಿ ಮುಗಿಸಿ ಅಚ್ಚರಿಗೊಳಿಸಿ ವಿಶ್ರಾಂತಿ ತಾಣದಲ್ಲಿ ನಿರಾಳವಾಗಿ ಕುಳಿತ ಮಹಾರಾಷ್ಟ್ರದ ವಿಶಾಲ್ ವಳವಿ, 30 ಕಿಮೀ ಓಡಿ ಬಂದು ಸಂಭ್ರಮಿಸಿದ ಬೆಂಗಳೂರಿನಲ್ಲಿ ಉದ್ಯೋಗದಲ್ಲಿರುವ ಬೆಳಗಾವಿಯ ಅಶ್ವಿನಿ ದ್ಯಾಮನಗೌಡರ್ ಮತ್ತು ಮೂವರು ಗೆಳತಿಯರು, ಯುವಕರ ಬಳಗದ ಜೊತೆಗೂಡಿ ಓಡಿದ ನಂತರ ಗುಂಪು ಹರಟೆಯಲ್ಲಿ ತೊಡಗಿದ್ದ ಬಳ್ಳಾರಿಯ ಡಾಕ್ಟರ್ ತಿಪ್ಪಾರೆಡ್ಡಿ...

ಭಾರತದಲ್ಲಿ ಈಗ ಪ್ರವರ್ಧಮಾನಕ್ಕೆ ಬಂದಿರುವ ಅಲ್ಟ್ರಾ ಟ್ರೇಲ್ ರನ್ ಎಂಬ ದುರ್ಗಮ ಹಾದಿಯ ಓಟದಲ್ಲಿ ಇಂಥ ನೋಟಗಳು ಸಾಮಾನ್ಯ. ಯಾಕೆಂದರೆ ಅದರಲ್ಲಿ ಪಾಲ್ಗೊಳ್ಳುವವರೆಲ್ಲರೂ ಓಟವನ್ನು ಪ್ರೀತಿಸುವವರು, ಓಟವೇ ಜೀವಾಳ ಎನ್ನುವವರು.

ಉದ್ಯೋಗದ ಒತ್ತಡವನ್ನು ಬದಿಗಿಟ್ಟು ಕಾಡಂಚಿನಲ್ಲಿ, ಕಾಫಿ ತೋಟಗಳ ಕಾಲುದಾರಿಯಲ್ಲಿ ಓಡಿದ ರಾಜ್ಯ ಆಂತರಿಕ ಭದ್ರತಾ ಘಟಕದ ಇನ್‌ಸ್ಪೆಕ್ಟರ್ ಬಸವರಾಜ ಪಶ್ಚಾಪೂರ, ದೂರದೂರುಗಳಿಗೆ ಪಯಣಿಸಿ ಓಟಗಳಲ್ಲಿ ಭಾಗಿಯಾಗುವ ಮಂಗಳೂರು ರನ್ನರ್ಸ್ ಕ್ಲಬ್ ಸದಸ್ಯರು, ಬರಿಗಾಲಲ್ಲಿ ಕಿಲೊಮೀಟರ್‌ಗಟ್ಟಲೆ ಓಡುವ ಎಂಜಿನಿಯರ್ ಹರ್ಷಿತ್ ರಾವ್, ವಾಸುದೇವ ಕಾಮತ್, ಸಹೋದರರಾದ ಓಂ ಶಿವ ಕೋಟ್ಯಾನ್ ಮತ್ತು ವಿಶ್ವನಾಥ ಕೋಟ್ಯಾನ್ ಅವರಿಗೂ ಓಟವೆಂಬುದು ಸದಾ ಖುಷಿಯ ವಿಷಯ.

ಬೃಹತ್ ಗಾತ್ರದ ಕನ್ನಡದ ಧ್ವಜ ಹಿಡಿದು ಓಟ ಮುಕ್ತಾಯಗೊಳಿಸುವ ಬೆಂಗಳೂರಿನ ಕೆ.ವಿ ಸುರೇಶ್ ಅವರಂಥವರೇನು ಕಡಿಮೆಯೇ. ದೇಹದ ಬಳಲಿಕೆಯನ್ನು ಬದಿಗಿಟ್ಟು ಹಾಗೆ ವಿಶಿಷ್ಟ ರೀತಿಯಲ್ಲಿ ಸಂಭ್ರಮಿಸುವವರೂ ಇದ್ದಾರೆ ದೇಶದಲ್ಲಿ. ಅಲ್ಲಲ್ಲಿ ಆಗಾಗ ನಡೆಯುವ ದೂರ ಓಟಗಳು ಪ್ರತಿ ಓಟಗಾರರ ಕ್ರೀಡಾ ಬದುಕಿನ ಹೊಸ ಆಯಾಮಕ್ಕೆ ದಾರಿಯಾಗುತ್ತವೆ. ನವೆಂಬರ್ ಕೊನೆಯ ವಾರ ಚಿಕ್ಕಮಗಳೂರಿನ ಮಲ್ಲಂದೂರಿನಲ್ಲಿ ನಡೆದ ಮಲೆನಾಡು ಅಲ್ಟ್ರಾ ಟ್ರೇಲ್ ರನ್, ವಿಶಾಲ್ ವಳವಿ ಅವರ ಜೀವನಶ್ರೇಷ್ಠ ಸಾಧನೆಗೆ ವೇದಿಕೆಯಾದದ್ದು ಹೀಗೆಯೇ.

ಅಲ್ಟ್ರಾ ಓಟದಲ್ಲಿ ಎರಡು ಬಗೆ ಇದೆ. ಒಂದು ರೋಡ್ ರೇಸ್, ಮತ್ತೊಂದು ಟ್ರೇಲ್ ರನ್. ಟ್ರೇಲ್ ರನ್ ಅತ್ಯಂತ ಸವಾಲಿನದ್ದು. 30 ಕಿಮೀ, 50 ಕಿಮೀ, 100 ಕಿಮೀ, 120 ಕಿಮೀ, 160 ಕಿಮೀ ಮುಂತಾದ ವಿಭಾಗಗಳು ಇರುವ ಇದರಲ್ಲಿ ಗುಡ್ಡ-ಕಾಡು, ತೋಟ-ತೊರೆ, ಎತ್ತರ-ತಗ್ಗುಗಳನ್ನು ದಾಟಿ ಸಾಗಬೇಕು. ಬಿಸಿಲು, ಮಳೆ, ಚಳಿಯನ್ನು ಲೆಕ್ಕಿಸದೆ ಓಟಗಾರರು ಮುನ್ನುಗ್ಗಬೇಕು.

100 ಕಿಮೀಗೂ ಅಧಿಕ ದೂರದ ಓಟ ಹಗಲು ಮತ್ತು ರಾತ್ರಿ ಇರುತ್ತದೆ. ರಾತ್ರಿಯಷ್ಟೇ ನಡೆಯುವ 50 ಕಿಮೀ ಅಂತರದ ಓಟವೂ ಇರುತ್ತದೆ. ಹಣೆಗೆ ಟಾರ್ಚ್ ಕಟ್ಟಿಕೊಂಡು, ರೇಡಿಯಂ ಟ್ಯಾಗ್‌ಗಳು ತೋರಿಸುವ ಹಾದಿಯ ಜಾಡು ಹಿಡಿದು ಸಾಗುವ ಓಟಗಾರರು ಪ್ರಕೃತಿಯ ರಾತ್ರಿ ಸೊಬಗು ಸವಿಯುವುದರೊಂದಿಗೆ ದಾರಿಯಲ್ಲಿ ಎದುರಾಗುವ ಸಮಸ್ಯೆಗಳಿಗೆ ತಾವೇ ಉತ್ತರ ಕಂಡುಕೊಳ್ಳಬೇಕು. ಓಟ ಆರಂಭವಾಗುವುದು ಗುಂಪಿನಲ್ಲಿ. ಮುಂದೆ ಸಾಗಿದಂತೆ ಕೆಲವು ಸಂದರ್ಭದಲ್ಲಿ ಒಬ್ಬಂಟಿಯಾಗುವ ಸಾಧ್ಯತೆ ಇರುತ್ತದೆ. ಎರಡು ಕಿಮೀಗೆ ಒಂದರಂತೆ 'ನೆರವು ಕೇಂದ್ರ'ಗಳು ಇರುತ್ತವೆ. ಅಲ್ಲಿ ಆಹಾರ, ನೀರು, ವೈದ್ಯಕೀಯ ಸೇವೆ ಮತ್ತು ಅಗತ್ಯ ಬಿದ್ದರೆ ಮುಂದಿನ ಹಾದಿಯ ಮಾರ್ಗದರ್ಶನ ಸಿಗುತ್ತದೆ. ಅದನ್ನು ದಾಟಿದ ನಂತರ ಮತ್ತೆ ಏಕಾಂಗಿಯಾಗಿ ಅಥವಾ ಸಣ್ಣ ಗುಂಪಿನಲ್ಲಿ ಓಡಬೇಕು.

ಕಾರ್ಪೊರೇಟ್ ವಲಯದ ಆದ್ಯತೆ

ದೀರ್ಘದೂರ ಓಟ ದೇಹ ಮತ್ತು ಮನಸ್ಸಿಗೆ ವ್ಯಾಯಾಮ ಒದಗಿಸುವುದರೊಂದಿಗೆ ಜೀವನಶೈಲಿಯಲ್ಲಿ ಉತ್ತಮ ಹವ್ಯಾಸಗಳನ್ನು ಸೇರಿಸಲು ನೆರವಾಗುತ್ತದೆ ಮತ್ತು ಶಿಸ್ತು ಮೂಡಿಸುತ್ತದೆ ಎಂದು ಅಧ್ಯಯನ ವರದಿಗಳು ಹೇಳುತ್ತವೆ. ಮಾನಸಿಕ ತುಮುಲ, ಕೆಲಸದ ಒತ್ತಡ ನಿಯಂತ್ರಣ ಮತ್ತು ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೂ ನೆರವಾಗುತ್ತದೆ. ಹೀಗಾಗಿ ಕಾರ್ಪೊರೇಟ್ ವಲಯ ಈಗ ಓಟಕ್ಕೆ ಹೆಚ್ಚು ಆದ್ಯತೆ ನೀಡುತ್ತದೆ.

ಮಲೆನಾಡು ಅಲ್ಟ್ರಾ ಟ್ರೇಲ್ ರೇಸ್‌ನ ಹೆಚ್ಚಿನ ಅವಧಿ ಕಾಫಿತೋಟಗಳ ನಡುವೆ ಕಳೆಯಬೇಕಾಗುತ್ತದೆ. ಕೆಲವೊಮ್ಮೆ ಕಾಡಂಚಿನ ಮೂಲಕ ಹೋಗಬೇಕು. ಗುಡ್ಡ ಹತ್ತಬೇಕು, ಇಳಿಯಬೇಕು. ಕೆಸರು ತುಳಿದು ಓಡಬೇಕು. ಈ ಎಲ್ಲ ಸಂದರ್ಭದಲ್ಲೂ ಓಟಗಾರರ ಜೊತೆ ಇರುವುದು ಧೈರ್ಯ ಮತ್ತು ಸ್ಥೈರ್ಯ ಮಾತ್ರ. ಫಿಟ್‌ನೆಸ್‌ನ ರಾಜ ಎಂದೇ ಬಣ್ಣಿಸಲಾಗುವ ಓಟವು ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಬೀರುವ ಪ್ರಭಾವದ ಬಗ್ಗೆ ಈಗ ಹೆಚ್ಚು ಪ್ರಚಾರ ಆಗುತ್ತಿದೆ. ಅದನ್ನು ತಿಳಿದುಕೊಂಡವರು ಆರೋಗ್ಯ ಸಂರಕ್ಷಣೆಯ ಜೊತೆಯಲ್ಲಿ ಸಾಹಸ ಮಾಡುವ ಉಮೇದನ್ನೂ ಇರಿಸಿಕೊಂಡು ಓಟದ ಕಣಕ್ಕೆ ಇಳಿಯುತ್ತಿದ್ದಾರೆ.

'100 ಕಿಮೀ ಓಡುವುದೇ ದೊಡ್ಡ ಸವಾಲು. ಅದನ್ನು ಸಾಧಿಸಿದವರಿಗೆ ಉದ್ಯೋಗದ ಸ್ಥಳದಲ್ಲಿ ಅಥವಾ ಜೀವನದಲ್ಲಿ ಎದುರಾಗುವ ಒತ್ತಡ ಯಾವ ಲೆಕ್ಕ? ಮೂರು ವರ್ಷಗಳ ಹಿಂದೆ ಓಡಲು ಶುರು ಮಾಡಿದ ನಂತರ ನನ್ನ ಚಿತ್ತ ಶಾಂತವಾಗಿದೆ. ಬದುಕಿನಲ್ಲಿ ಏನೇ ಬಂದರೂ ಎದುರಿಸಲು ಮನಸ್ಸು ಪಾಕಗೊಂಡಿದೆ' ಎನ್ನುತ್ತಾರೆ ಕರ್ನಾಟಕ ಪೊಲೀಸ್ ಇಲಾಖೆಯ ಆಂತರಿಕ ಭದ್ರತಾ ವಿಭಾಗದ ಇನ್‌ಸ್ಪೆಕ್ಟರ್, 39 ವರ್ಷದ ಬಸವರಾಜ ಪಶ್ಚಾಪೂರ.



ಕಾಡು-ಗುಡ್ಡದ ಹಾದಿಯಲ್ಲಿ ಓಟಗಾರರ ಮುನ್ನಡೆ

'ಇಲಾಖೆಯಲ್ಲಿ ಪ್ರತಿ ವರ್ಷ ಆರೋಗ್ಯ ತಪಾಸಣೆ ನಡೆಯುತ್ತದೆ. ರಕ್ತದೊತ್ತಡ, ರಕ್ತದಲ್ಲಿ ಸಕ್ಕರೆ ಪ್ರಮಾಣ ಯಾವುದೂ ಒಂದು ಪಾಯಿಂಟ್ ಕೂಡ ಹೆಚ್ಚಾಗಲಿಲ್ಲ. 87 ಕೆಜಿ ಇದ್ದ ದೇಹ ತೂಕ ಈಗ 69-70ರ ಆಸುಪಾಸಿನಲ್ಲೇ ಇದೆ. ಹೀಗಾಗಿ ಓಟದ ಖುಷಿಯನ್ನು ಪರಿಪೂರ್ಣವಾಗಿ ಅನುಭವಿಸುತ್ತಿದ್ದೇನೆ' ಎನ್ನುತ್ತಾರೆ ಬಸವರಾಜ.

ಬಳ್ಳಾರಿಯ ಡಾ.ತಿಪ್ಪಾರೆಡ್ಡಿ ತಮ್ಮ ಬಳಿಗೆ ಬರುವವರ ಜೀವನಶೈಲಿ ರೋಗಗಳನ್ನು ಕಂಡು ಓಟದ 'ಟ್ರ್ಯಾಕ್'ಗೆ ಇಳಿದವರು. 65 ವರ್ಷ ವಯಸ್ಸಿನ ಅವರು ಈಗ ಯುವಕರ ತಂಡವನ್ನು ಕಟ್ಟಿಕೊಂಡು ಓಟದಲ್ಲಿ ಪಾಲ್ಗೊಳ್ಳುತ್ತಾರೆ. ಮಲೆನಾಡು ಅಲ್ಟ್ರಾದಲ್ಲಿ 30 ಕಿಮೀ ಓಟವನ್ನು 3.35 ತಾಸುಗಳಲ್ಲಿ ಪೂರ್ಣಗೊಳಿಸಿದ್ದ ಅವರು ತಮ್ಮ ಜೊತೆ ಓಡಿದ ಯುವಕರ ಪೈಕಿ ಕೆಲವರಿಗಿಂತ ಮೊದಲೇ ಗುರಿ ತಲುಪಿದ್ದರು.

ಚೆನ್ನೈನ ಸರವಣನ್ ಆರೋಗ್ಯ ರಕ್ಷಣೆ, ಮಾನಸಿಕ ಸ್ಥೈರ್ಯ ಮತ್ತು ಪ್ರಕೃತಿಯ ಸೌಂದರ್ಯ ಸವಿಯುವುದಕ್ಕಾಗಿ ಅಲ್ಟ್ರಾ ರೇಸ್‌ಗಳು, ವಿಶೇಷವಾಗಿ ಟ್ರೇಲ್ ಅಲ್ಟ್ರಾಗಳಲ್ಲಿ ಪಾಲ್ಗೊಳ್ಳುತ್ತಾರೆ.

'ಮಲೆನಾಡು ಅಲ್ಟ್ರಾದಲ್ಲಿ ನಾಲ್ಕು ವರ್ಷಗಳಿಂದ ಪಾಲ್ಗೊಳ್ಳುತ್ತಿದ್ದೇನೆ. ಇಲ್ಲಿ ಓಟದ ಹಾದಿ ಬಹಳ ಸುಂದರ, ರೋಚಕ. ಓಟ, ನನ್ನ ಸರ್ವಾಂಗೀಣ ಬೆಳವಣಿಗೆಗೆ ನೆರವಾಗಿದೆ' ಎನ್ನುತ್ತಾರೆ ಅವರು.

ಬರಿಗಾಲಲ್ಲೂ ಓಡುತ್ತಾರೆ

ದಕ್ಷಿಣ ಕನ್ನಡ ಜಿಲ್ಲೆ ಮೂಡುಬಿದಿರೆಯ ಹರ್ಷಿತ್ ರಾವ್, ಮಂಗಳೂರಿನ ವಿಶ್ವನಾಥ ಕೋಟ್ಯಾನ್, ಓಂ ಶಿವ ಕೋಟ್ಯಾನ್ ಮತ್ತು ವಾಸುದೇವ ಕಾಮತ್ ಅವರಂತೆ ಬರಿಗಾಲಲ್ಲಿ ಓಡುವವರದು ವಿಶಿಷ್ಟ ಸಾಹಸ.

ಹರ್ಷಿತ್ ರಾವ್ ನೊವಿಗೊ ಸೊಲ್ಯುಷನ್ ಸೆಂಟರ್‌ನ ಎಂಜಿನಿಯರ್. ಮೂರು ವರ್ಷಗಳಲ್ಲಿ ಒಟ್ಟು 45 ಓಟಗಳಲ್ಲಿ ಪಾಲ್ಗೊಂಡಿದ್ದಾರೆ. ಊಟಿ ಅಲ್ಟ್ರಾದಲ್ಲಿ 60 ಕಿಮೀ ಓಡಿದ್ದಾರೆ. ಮಲ್ಲಂದೂರಿನಲ್ಲಿ ಇತರ ಮೂವರ ಜೊತೆ 50 ಕಿಮೀ ಓಡಿದ್ದರು.

ಸುದೀರ್ಘ ಇತಿಹಾಸದ ಅಲ್ಟ್ರಾ ರನ್

ಮೊದಲ ಅಲ್ಟ್ರಾ ಮ್ಯಾರಥಾನ್ ಇಂಗ್ಲೆಂಡ್‌ನಲ್ಲಿ 1954ರಲ್ಲಿ ನಡೆಯಿತು ಎಂದು ದಾಖಲೆಗಳು ಹೇಳುತ್ತವೆ. 1968ರಲ್ಲಿ ಅಮೆರಿಕದಲ್ಲೂ ನಡೆಯಿತು. ಈಗ ಪ್ರಪಂಚದಾದ್ಯಂತ ಪ್ರಚುರಗೊಂಡಿದೆ. ಭಾರತದ ಪ್ರಮುಖ ಅಲ್ಟ್ರಾ ಮ್ಯಾರಥಾನ್ ಮಹಾರಾಷ್ಟ್ರದ 'ಇಂಡಿಯಾ ಅಲ್ಟ್ರಾ ಮ್ಯಾರಥಾನ್'. ಇದರಲ್ಲಿ 100 ಕಿಮೀ ಓಟ ಇರುತ್ತದೆ. ಪುಣೆಯ ಶಿವನೇರಿ ಕೋಟೆಯಿಂದ ಆರಂಭಗೊಂಡು ಸಹ್ಯಾದ್ರಿ ಬೆಟ್ಟಗಳ ಮೋಹಕ ಪರಿಸರದಲ್ಲಿ ಸಾಗುತ್ತದೆ. 17,618 ಅಡಿ ಎತ್ತರದ ಗುಡ್ಡಗಳನ್ನು ಏರಿ ಇಳಿಯುವ 122 ಕಿಮೀ ಓಟದ ಛಲವಂತರ 'ಲಡಾಖ್ ಮ್ಯಾರಥಾನ್' ಕೂಡ ರೋಚಕ. ದೇಶದಲ್ಲಿ ಕ್ರೀಡಾ ಸಂಸ್ಥೆಗಳು ಆಯೋಜಿಸುವ 200ರಷ್ಟು ಅಲ್ಟ್ರಾ ರನ್‌ಗಳು ಇವೆ. ಒಂದೂವರೆ ಲಕ್ಷದಷ್ಟು ವೃತ್ತಿಪರ ಓಟಗಾರರು ದೇಶದಲ್ಲಿದ್ದಾರೆ.

ಕಾರ್ಗಡಿಯಲ್ಲಿ ಅನಾಥವಾದ ಗೋಮುಖ




ಬಸವಮೂರ್ತಿ

• ಚಿತ್ರ-ಲೇಖನ: ಎಂ.ಆರ್.ಮಂಜುನಾಥ್

ಶಿವಮೊಗ್ಗ ಜಿಲ್ಲೆಯ ಹೊಸನಗರದಿಂದ ಕೊಲ್ಲೂರಿಗೆ ಸಾಗುವ ದಾರಿಯಲ್ಲಿ ಸಿಗುವ ಊರು ಕಾರ್ಗಡಿ. ಇಲ್ಲಿನ ದಟ್ಟ ಅರಣ್ಯದಲ್ಲಿಯೇ ಗೋಮುಖ ಎಂಬ ಬೃಹತ್ ಬಸವಮೂರ್ತಿ ಇದೆ. ಗಿಡ ಮರಗಳ ನೆರಳು, ಎತ್ತ ನೋಡಿದರು ಭಯ ಹುಟ್ಟಿಸುವ ಬೃಹತ್ ಗಾತ್ರದ ಮರಗಳಿಂದ ಕೂಡಿದ ದಾರಿಯದು. ದಾರಿ ಉದ್ದಕ್ಕೂ ನರಪಿಳ್ಳೆ ಕೂಡ ಸಿಗುವುದಿಲ್ಲ. ಇಂಥ ದಾರಿಯಲ್ಲಿ ಸಾಗಿದರೆ ಗೋಮುಖವಿರುವ ಜಾಗ ಸಿಗುತ್ತದೆ.

ಸುಂದರವಾದ ಮೂರ್ತಿ ನೆಲ ಮಟ್ಟದಿಂದ ಸುಮಾರು 50 ಅಡಿ ಎತ್ತರವಿದ್ದು, ತಲೆಯಿಂದ ಬಾಲದವರೆಗೆ ಸುಮಾರು 30 ಅಡಿಗಳಷ್ಟು ಉದ್ದವಿದೆ. ಸೌಮ್ಯ ಮುಖಭಾವ, ಎತ್ತರಕ್ಕೆ ತಕ್ಕ ಅದರ ಭುಜ ಹಾಗೂ ದೇಹದ ಆಕೃತಿ, ಅಗಲವಾದ ಕಿವಿಗಳು, ನೋಡುಗರ ಕಣ್ಮನ ಸೆಳೆಯುವ ಕಣ್ಣುಗಳು, ಕಾಲುಗಳು ಮಡಚಿ ಕುಳಿತಿರುವ ಭಂಗಿಯಲ್ಲಿದೆ ಈ ಬಸವ ಮೂರ್ತಿ. ಇದರ ಹೊಟ್ಟೆಯ ಒಳಭಾಗ ಪ್ರವೇಶಿಸಲು ಎರಡು ಬದಿಯಲು ಮೆಟ್ಟಲುಗಳನ್ನು ನಿರ್ಮಿಸಿದ್ದಾರೆ. ಒಳಭಾಗದಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಲು ಕಟ್ಟಿರುವ ಎತ್ತರವಾದ ಕಟ್ಟೆ ಕಂಡು ಬರುತ್ತದೆ. ಆದರೆ ಅರಣ್ಯ ಇಲಾಖೆಗೆ ಸೇರಿರುವ ಜಾಗವಾದ ಕಾರಣ ದೇವರ ವಿಗ್ರಹ ಪ್ರತಿಷ್ಠಾಪನೆಗೊಳ್ಳದೆ ಬಸವಮೂರ್ತಿ ಮಾತ್ರ ನಿರ್ಮಾಣಗೊಂಡಿದೆ.

ಈ ಮೂರ್ತಿಯನ್ನು ರಾಮಚಂದ್ರಾಪುರ ಮಠದವರು ನಿರ್ಮಿಸಿದ್ದು ಎನ್ನುವುದು ಸ್ಥಳೀಯರನ್ನು ವಿಚಾರಿಸಿದಾಗ ತಿಳಿದುಬಂತು. ಅದರ ಸಮೀಪದಲ್ಲಿಯೇ ಒಂದು ಕೆರೆ ಕೂಡ ಇದೆ. ರಾಮಚಂದ್ರಾಪುರ ಮಠಕ್ಕೆ ಹೊಂದಿಕೊಂಡಂತೆ ಇರುವ ಈ ಜಾಗ ಸದ್ಯಕ್ಕೆ ಪಾಳು ಬಿದ್ದಿದೆ. 'ಶಿವಲಿಂಗ ಸ್ಥಾಪಿಸಿ ಇದನ್ನು ಯಾತ್ರಾಸ್ಥಳವಾಗಿಸುವ ಯೋಜನೆಯಿತ್ತು. ಮೊದಲು ಇಲ್ಲಿಯೇ ಸಮೀಪದಲ್ಲಿ ಮಠದ ಗುರುಕುಲವಿತ್ತು. ಅದನ್ನು ಗೋಕರ್ಣಕ್ಕೆ ವರ್ಗಾಯಿಸಲಾಯಿತು. ಅನುಮತಿ ಸಮಸ್ಯೆಯಿಂದಾಗಿ ಗೋಮುಖ ಪಾಳು ಬಿದ್ದಿದೆ' ಎನ್ನುತ್ತಾರೆ ಮಠದ ಅಧಿಕಾರಿಗಳು.



ಮೂರ್ತಿಯ ಒಳಭಾಗದ ನೋಟ

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

majakoora@prajavani.co.in

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ನಯ	+	ನಾಕ	+	ವ	=	
2	ರವಿ	+	ಸಾರು	+	ಮೂ	=	
3	ಕೆಲ	+	ಕರಿ	+	ಬೆ	=	
4	ನೆವ	+	ಮಾನ	+	ಮ	=	
5	ನಸು	+	ಕರ	+	ಗಾ	=	

ಶಬ್ದಾಟ

ಇಲ್ಲಿ ಕೊಟ್ಟಿರುವ 'ರನ್ನ' ಪದಕ್ಕೆ ಹಿಂದೆ ಎರಡಕ್ಷರ ತುಂಬಿ ಒಂದು ಆಹಾರ ಪದಾರ್ಥದ ಹೆಸರು ಮಾಡಿ.


		ರ	ನ್ನ



ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಬೆಕ್ಕಿಗೆ ಮೀನೂಟ, ಗುಂಡನಿಗೆ ಸಂಕಟ

ಊರಿನ ಸಂತೆಗೆ ಹೋಗಿದ್ದ ಗುಂಡ ಅಲ್ಲಿಂದ ಒಂದು ಬೆಕ್ಕಿನ ಚಿತ್ರ ಹಾಗೂ ಮೀನಿನ ಚಿತ್ರವೊಂದನ್ನು ತಂದಿದ್ದ. ಆ ಎರಡೂ ಚಿತ್ರಗಳನ್ನು ಅಕ್ಕಪಕ್ಕದಲ್ಲೇ ನೇತು ಹಾಕಿದ್ದ. ಆ ರಾತ್ರಿ ಬೆಕ್ಕಿಗೆ ಜೀವಬಂದು ಹಸಿವಾಗತೊಡಗಿತ್ತು. ಪಕ್ಕದಲ್ಲೇ ಇದ್ದ ಮೀನನ್ನು ಅದು ಹೊಟ್ಟೆಗಿಳಿಸಿಕೊಂಡಿತು. ಮರುದಿನ ಎದ್ದ ಗುಂಡ ಚಿತ್ರಗಳನ್ನು ನೋಡಿದಾಗ ಮೀನು ಮಾಯವಾಗಿತ್ತು. ಮೀನಿನ ಚಿತ್ರ ಏನಾಯಿತು ಎಂದು ಗುಂಡ ಆಶ್ಚರ್ಯಪಟ್ಟ.



ಮೋಜಿನ ಇಂಗ್ಲಿಷ್

1.ಇಲ್ಲಿ ಕೊಟ್ಟಿರುವ ಒಂದಕ್ಷರಕ್ಕೆ ಹಿಂದೆ ಎರಡು ಸ್ವರಾಕ್ಷರ ತುಂಬಿ ಮೂರಕ್ಷರದ ಪದ ರಚಿಸಿ.

1			K
2			T
3			L
4			D
5			M
6			R
7			T
8			R
9			T

2.ವಾಕ್ಯ ವಿನೋದ

ABCD ಈ ಅಕ್ಷರಗಳನ್ನು ಕ್ರಮವಾಗಿ ಬರುವಂತೆ ಹೀಗೆ ವಾಕ್ಯ ರಚಿಸಬಹುದು.

1.Any Body Can Dance

2.Any Body Can Dream

ಜಾಣಪದ ಆಟ

1.ಇಲ್ಲಿ ಕೊಟ್ಟಿರುವ ಎರಡಕ್ಷರಗಳಿಗೆ ಅಕ್ಷರ ಪಟ್ಟಿಯಿಂದ ಆಯ್ದು ಒಂದಕ್ಷರ ಹಿಂದೆ ಸೇರಿಸಿ ಮೂರಕ್ಷರದ ಅರ್ಥಬದ್ಧ ಪದ ಮಾಡಿ.

1		ಮ	ರ
2		ಮ	ರ
3		ಮ	ರ
4		ಮ	ರ
5		ಮ	ರ
6		ಮ	ರ
7		ನ	ಕ
8		ನ	ಕ
9		ನ	ಕ
10		ನ	ಕ
11		ನ	ಕ
12		ನ	ಕ

ಅಕ್ಷರ ಪಟ್ಟಿ

ಅ	ಜ	ಸ	ಬೆ	ಭೃ	ಕ
ಚಾ	ತ	ಪಾ	ಪಾ	ಮಾ	ನಾ

2.ಇಲ್ಲಿ ಕೊಟ್ಟಿರುವ 'ಅವ' ಎಂಬ ಪದಕ್ಕೆ ಅಕ್ಷರ ಪಟ್ಟಿಯಿಂದ ಇನ್ನೆರಡಕ್ಷರ ಸೇರಿಸಿ ನಾಲ್ಕಕ್ಷರದ ಅರ್ಥಬದ್ಧ ಪದ ರಚಿಸಿ.

1	ಅ	ವ		
2	ಅ	ವ		
3	ಅ	ವ		
4	ಅ	ವ		
5	ಅ	ವ		

ಅಕ್ಷರ ಪಟ್ಟಿ

ಗು	ಶೇ	ಮಾ	ತಾ	ನ
ಷ	ಣ	ರ	ನ	ತಿ

ಗಣಿತದಲ್ಲಿ ಗರ್ದಿಗಮ್ಮತ್ತು

9ರ ಕರಾಮತ್ತು

123456789	X	9	=	1111111101
123456789	X	18	=	2222222202
123456789	X	27	=	3333333303
123456789	X	36	=	4444444404
123456789	X	45	=	5555555505
123456789	X	54	=	6666666606
123456789	X	63	=	7777777707
123456789	X	72	=	8888888808
123456789	X	81	=	9999999909



ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಗಾಜಿನಗುಣ 2.ಅಪಾರಜನ 3.ಸೇನಾತುಕಡಿ 4.ಹಿಡಿದಪಟ್ಟು 5.ಲೋಕೋಪಯೋಗಿ

ಶಬ್ದಾಟ: ತೆತ್ತಬೆಲೆ


ಜಾಣಪದ ಆಟ: 1.ನಾಕ 2.ನಾಗ 3.ನಾನು 4.ನಾಚು 5.ನಾಟು 6.ನಾಡು 7.ನಾತ 8.ನಾದ 9.ನಾಮ 10.ನಾರು

1.ನೀಗು 2.ನೀಚ 3.ನೀಡು 4.ನೀತಿ 5.ನೀನು 6.ನೀರು 7.ನೀರೆ 8.ನೀಲಿ 9.ನೀವು 10.ನೀಳ

ಜಾಣಪದ ಆಟ 2: 1.ಸಭಾಧ್ಯಕ್ಷ 2.ಸಭಾಗೃಹ 3.ಸಭಾಪತಿ 4.ಸಭಾಸದ 5.ಸಭಾತ್ಯಾಗ

ಮೋಜಿನ ಇಂಗ್ಲಿಷ್: 1.DRINK 2.INK 3.LINK 4.PINK 5.SINK 6.ZINK 7.BLINK 8.STINK 9.UPLINK 10.WINK

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ನಿಯತಿ ನಾವಡ, ಕುಂದಾಪುರ

ಪ್ರೇರಣಾ ಎಲ್., ಶಿರಾ



ಜೀವಕಾ ಗೌಡ ವೈ.ಎಲ್., ಬೆಂಗಳೂರು

ತೃಷಿಕಾ ಗೌಡ, ತುಮಕೂರು



ಸಿ.ಆರ್.ಹಂಸ, ಬೆಂಗಳೂರು

ಸಮನ್ವಿತ ಎಸ್., ಮಂಡ್ಯ

ಅಭಿಮಾನ ಆಕ್ರೋಶಕ್ಕೆ ತಿರುಗಿದ್ದು ಹೇಗೆ?

ಮೆಸ್ಸಿ ದರ್ಶನಕ್ಕೆ ಅಡ್ಡಿಯಾದವರ ಮೇಲೆ ವ್ಯಗ್ರರಾದ ಜನ • ಮೈದಾನಕ್ಕೆ ಕುರ್ಚಿ, ಬಾಟಲಿಗಳ ಎಸೆತ



ಫುಟ್‌ಬಾಲ್ ದಿಗ್ಗಜ ಲಯೊನೆಲ್ ಮೆಸ್ಸಿ ಅವರನ್ನು ನೋಡಲು ಸಾಧ್ಯವಾಗದ್ದರಿಂದ ರೊಚ್ಚಿಗೆದ್ದ ಅಭಿಮಾನಿಗಳು ಕೋಲ್ಕತ್ತದ ಸಾಲ್ಟ್ ಲೇಕ್ ಸ್ಟೇಡಿಯಂನಲ್ಲಿ ಶನಿವಾರ ದಾಂದಲೆ ನಡೆಸಿದರು ಎಎಫ್‌ಪಿ ಚಿತ್ರ

ಕೋಲ್ಕತ್ತ (ಪಿಟಿಐ/ಎಎಫ್‌ಪಿ): ಹಲವು ದಿನಗಳಿಂದ ತಮ್ಮ ನೆಚ್ಚಿನ ಆಟಗಾರ ಲಯೊನೆಲ್ ಮೆಸ್ಸಿಯನ್ನು ಹತ್ತಿರದಿಂದ ಕಣ್ತುಂಬಿಕೊಳ್ಳಲು ಸಾವಿರಾರು ಫುಟ್‌ಬಾಲ್ ಅಭಿಮಾನಿಗಳು ಕಾತರಿಸಿದ್ದರು. ಸರ್ವಪ್ರಯತ್ನಗಳನ್ನೂ ಮಾಡಿ ಟಿಕೆಟ್, ಪಾಸ್ ಹೊಂದಿಸಿಕೊಂಡು ಶನಿವಾರ ಸಾಲ್ಟ್ ಲೇಕ್ ಕ್ರೀಡಾಂಗಣದಕ್ಕೆ ಲಗ್ಗೆ ಇಟ್ಟಿದ್ದರು. ಆದರೆ ಎಲ್ಲವೂ ಸಾಂಗವಾಗಿ ಮುಗಿಯಿತು ಎಂದುಕೊಳ್ಳುವಷ್ಟರಲ್ಲಿ ಅಭಿಮಾನಿಗಳು ವ್ಯಗ್ರರಾಗಿದ್ದು ಯಾಕೆ?

‘ಗೋಟ್ (GOAT - Greatest Of All Time) ಟೂರ್ ಆಫ್ ಇಂಡಿಯಾ 2025’ ಕಾರ್ಯಕ್ರಮದ ಅಂಗವಾಗಿ ಮೆಸ್ಸಿ ಭಾರತಕ್ಕೆ ಭೇಟಿ ನೀಡಿದ್ದು, ಅವರ ಮೂರು ದಿನಗಳ ಪ್ರವಾಸ ಶನಿವಾರ ಆರಂಭವಾಗಿತ್ತು. ಬೆಳಿಗ್ಗೆ ಅವರು, 70 ಅಡಿ (21 ಮೀಟರ್) ಎತ್ತರದ ತಮ್ಮ ಪ್ರತಿಮೆಯನ್ನು ವರ್ಚುವಲ್ ಆಗಿ ಅನಾವರಣ ಮಾಡಿದ್ದರು. ನಂತರ, ಸಾಲ್ಟ್ ಲೇಕ್ ಸ್ಟೇಡಿಯಂಗೆ (ವಿವೇಕಾನಂದ ಯುವ ಭಾರತಿ ಕ್ರೀಡಾಂಗಣ) ಮೆಸ್ಸಿ ಬೆಳಿಗ್ಗೆ 11.30ರ ವೇಳೆಗೆ ಬಂದರು. ಅವರೊಂದಿಗೆ ಸಹ ಆಟಗಾರರಾದ ಲೂಯಿಸ್ ಸೊರೇಝ್ ಹಾಗೂ ರಾಡ್ರಿಗೊ ಡಿ ಪಾಲ್ ಅವರೂ ಇದ್ದರು.

ವಾಹನದಿಂದ ಇಳಿದು, ಕ್ರೀಡಾಂಗಣ ಪ್ರವೇಶಿಸಿದ ಬೆನ್ನಲ್ಲೇ, ವಿಐಪಿಗಳು, ಆಯೋಜಕರು, ರಾಜಕಾರಣಿಗಳು, ಖ್ಯಾತನಾಮರು ಹಾಗೂ ಭದ್ರತಾ ಸಿಬ್ಬಂದಿ ಮೆಸ್ಸಿ ಅವರನ್ನು ಸುತ್ತುವರಿದರು.

ಅಲ್ಲಿ ಜಮಾಯಿಸಿದ್ದ ಸಾವಿರಾರು ಅಭಿಮಾನಿಗಳು ಹರ್ಷೋದ್ಗಾರಗಳಿಂದ ಅವರಿಗೆ ಸ್ವಾಗತ ಕೋರಿದರು. ಅವರ ಚಿತ್ರ, ಹೆಸರು ಉಳ್ಳ ಜೆರ್ಸಿ ಧರಿಸಿದ್ದ ಅಭಿಮಾನಿಗಳು, ಅರ್ಜೆಂಟೀನಾ ಧ್ವಜವನ್ನು ಬೀಸುತ್ತಾ, ‘ಮೆಸ್ಸಿ, ಮೆಸ್ಸಿ’ ಎಂಬ ಘೋಷಣೆಗಳನ್ನು ಕೂಗಿ, ಸಂಭ್ರಮಿಸಿದರು. ಭಾರಿ ಭದ್ರತೆ ಇದ್ದ ಕಾರಣ ಮೆಸ್ಸಿ ಅವರನ್ನು ಕಣ್ತುಂಬಿಕೊಳ್ಳಲು ಅಭಿಮಾನಿಗಳಿಗೆ ಸಾಧ್ಯವಾಗಲಿಲ್ಲ. ಅದರಿಂದ ಸಿಟ್ಟಿಗೆದ್ದ ಅಭಿಮಾನಿಗಳು ನೂಕಾಟ ಆರಂಭಿಸಿದರು.

ಇನ್ನೊಂದೆಡೆ, ಮೆಸ್ಸಿ ಅವರು ಪಿಚ್ ಬಳಿ ಬಂದು, ಕೆಲ ದೂರ ನಡೆದು, ಅಭಿಮಾನಿಗಳತ್ತ ಕೈಬೀಸಿದರು. ನಿರೀಕ್ಷೆಗಿಂತಲೂ ಮುಂಚಿತವಾಗಿಯೇ ಕ್ರೀಡಾಂಗಣದಿಂದ ನಿರ್ಗಮಿಸಿದರು. ಇದು ಕೂಡ ಅಭಿಮಾನಿಗಳು ರೊಚ್ಚಿಗೇಳಲು ಕಾರಣವಾಯಿತು.

ಆಗ, ನೂರಾರು ಜನರು ಪ್ರೇಕ್ಷಕರ ಗ್ಯಾಲರಿಯಲ್ಲಿನ ಕುರ್ಚಿಗಳನ್ನು ಧ್ವಂಸಗೊಳಿಸಿ, ಮೈದಾನದತ್ತ ಎಸೆದರು. ನೀರಿನ ಬಾಟಲಿಗಳನ್ನು ಟ್ರ್ಯಾಕ್ ಮೇಲೆ ಬಿಸಾಡಿದರು. ಕ್ರೀಡಾಂಗಣ ದೊಳಗೆ ನುಗ್ಗಿದ ಅಭಿಮಾನಿಗಳು ಅಲ್ಲಿ ಅಳವಡಿಸಿದ್ದ ಬ್ಯಾನರ್‌ಗಳು ಹಾಗೂ ಟೆಂಟ್‌ಗಳನ್ನು ಧ್ವಂಸಗೊಳಿಸಿ, ಸಿಟ್ಟು ಹೊರಹಾಕಿದರು.

ಕೆಲವರು ದಿಢೀರ್‌ನೆ ಪ್ರತಿಭಟನೆ ಆರಂಭಿಸಿ, ಪಶ್ಚಿಮ ಬಂಗಾಳದ ಕ್ರೀಡಾ ಸಚಿವ ಅರೂಪ್ ಬಿಸ್ವಾಸ್ ಹಾಗೂ ಆಯೋಜಕ ಶತಾದ್ರು ದತ್ತ ಅವರನ್ನು ಬಂಧಿಸುವಂತೆ ಒತ್ತಾಯಿಸಿದರು.

‘ಮೆಸ್ಸಿ ಅವರು ಕ್ರೀಡಾಂಗಣದಿಂದ ನಿರ್ಗಮಿಸಿದ ಬೆನ್ನಲ್ಲೇ, ದತ್ತ ಸೇರಿದಂತೆ ಇತರ ಆಯೋಜಕರು ಕೂಡ ಸ್ಥಳದಲ್ಲಿ ಕಾಣಲಿಲ್ಲ. ಇದು ಪರಿಸ್ಥಿತಿ ಮತ್ತಷ್ಟು ಹದಗೆಡಲು ಕಾರಣವಾಯಿತು’ ಎಂದು ಕೆಲ ಪ್ರತ್ಯಕ್ಷದರ್ಶಿಗಳು ಹೇಳಿದರು.

ಅಸಹನೆ: ‘ನನಗೆ ಮೆಸ್ಸಿ ಅವರನ್ನು ಹತ್ತಿರದಿಂದ ನೋಡುವುದೇ ಸಂತಸದ ವಿಷಯ. ಇದು ನನ್ನ ಕನಸು ಕೂಡ ಆಗಿತ್ತು. ಆದರೆ, ಕಾರ್ಯಕ್ರಮವನ್ನು ಸರಿಯಾಗಿ ನಿರ್ವಹಣೆ ಮಾಡದ ಕಾರಣ, ನನ್ನ ನೆಚ್ಚಿನ ಆಟಗಾರನನ್ನು ಕಣ್ತುಂಬಿಕೊಳ್ಳುವ ಅವಕಾಶವನ್ನು ಕಳೆದುಕೊಂಡೆ’ ಎಂದು 37 ವರ್ಷದ ನವೀನ್ ಚಟರ್ಜಿ ಹೇಳಿದರು.

‘ನಾನು ₹5 ಸಾವಿರ ಕೊಟ್ಟು ಟಿಕೆಟ್ ಖರೀದಿಸಿದ್ದು, ರಾಜಕಾರಣಿಗಳನ್ನು ನೋಡಲು ಅಲ್ಲ. ಮೆಸ್ಸಿ ಅವರನ್ನು ನೋಡುವುದಕ್ಕಾಗಿ ಮಗನೊಂದಿಗೆ ಬಂದಿದ್ದೆ. ನಮಗೆ ನೋಡಲು ಅವಕಾಶ ಸಿಗ ಲಿಲ್ಲ. ಆದರೆ, ಪೊಲೀಸರು ಮತ್ತು ಭದ್ರತಾ ಸಿಬ್ಬಂದಿ ಅವರೊಂದಿಗೆ ಸೆಲ್ಫಿ ತೆಗೆದುಕೊಳ್ಳುತ್ತಿದ್ದರು. ಇಂಥ ಅವ್ಯವಸ್ಥೆಗೆ ಕಾರ್ಯಕ್ರಮ ಆಯೋಜಕರನ್ನೇ ಹೊಣೆ ಮಾಡಬೇಕು’ ಎಂದು ಅಜಯ್ ಶಾಹ ದೂರಿದರು.

‘ಕೆಲವರು ತಮ್ಮ ತಿಂಗಳ ವೇತನ ಖರ್ಚು ಮಾಡಿ, ಈ ಕಾರ್ಯಕ್ರಮಕ್ಕೆ ಬಂದಿದ್ದಾರೆ’ ಎಂದೂ ಹೇಳಿದರು.

ತನಿಖೆ: ಸಮಿತಿ ರಚನೆ

‘ಸಾಲ್ಟ್ ಲೇಕ್ ಸ್ಟೇಡಿಯಂನಲ್ಲಿ ನಡೆದ ದಾಂದಲೆ ಕುರಿತು ತನಿಖೆ ನಡೆಸುವುದಕ್ಕಾಗಿ ಕಲ್ಕತ್ತ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅಸೀಮಕುಮಾರ್ ರೇ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ’ ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

‘ಸರ್ಕಾರದ ಮುಖ್ಯ ಕಾರ್ಯದರ್ಶಿ, ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸಮಿತಿ ಸದಸ್ಯರಾಗಿರುವರು. ಈ ದಾಂದಲೆಗೆ ಕಾರಣರಾದವರ ಮೇಲೆ ಹೊಣೆಗಾರಿಕೆ ನಿಗದಿ ಮಾಡುವ ಜೊತೆಗೆ, ಭವಿಷ್ಯದಲ್ಲಿ ಇಂತಹ ಘಟನೆಗಳು ನಡೆಯದಂತೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಸಮಿತಿ ಶಿಫಾರಸು ಮಾಡಲಿದೆ’ ಎಂದು ಅವರು ಹೇಳಿದ್ದಾರೆ.

ನಿರಾಶಾದಾಯಕ: ಬೈಚುಂಗ್ ಭುಟಿಯಾ

ಅರ್ಜೆಂಟೀನಾದ ಫುಟ್‌ಬಾಲ್ ತಾರೆ ಮೆಸ್ಸಿ ಅವರ ಕೋಲ್ಕತ್ತದ ಕಾರ್ಯಕ್ರಮದಲ್ಲಿ ನಡೆದ ಗೊಂದಲ, ಅರಾಜಕತೆಯ ಪರಿಸ್ಥಿತಿಗೆ ಭಾರತ ಫುಟ್‌ಬಾಲ್ ತಂಡದ ಮಾಜಿ ನಾಯಕ ಬೈಚುಂಗ್ ಭುಟಿಯಾ ನಿರಾಶೆ ವ್ಯಕ್ತಪಡಿಸಿದ್ದಾರೆ. ದೇಶದ ವರ್ಚಸ್ಸಿಗೆ ಮಸಿ ಬಳಿಯುವ ಇಂಥ ಘಟನೆಗಳು ಮರುಕಳಿಸದಂತೆ ಆಯೋಜಕರು ಎಚ್ಚರಿಕೆ ವಹಿಸಬೇಕು ಎಂದು ಅವರು ಛತ್ತೀಸಗಢದ ರಾಯಪುರ ವಿಮಾನ ನಿಲ್ದಾಣದಲ್ಲಿ ತಿಳಿಸಿದರು.

‘ಕಾಳಸಂತೆಯಲ್ಲಿ ಟಿಕೆಟ್ ಮಾರಾಟ’

ಲಯೊನೆಲ್ ಮೆಸ್ಸಿ ಕಾರ್ಯಕ್ರಮದ ಟಿಕೆಟ್‌ಗಳನ್ನು ಕಾಳಸಂತೆಯಲ್ಲಿ ಭಾರಿ ಮೊತ್ತಕ್ಕೆ ಮಾರಾಟ ಮಾಡಲಾಗಿದೆ ಎಂದು ಕೆಲ ಪ್ರೇಕ್ಷಕರು ದೂರಿದ್ದಾರೆ.

ಕ್ರೀಡಾಂಗಣದಲ್ಲಿ 50 ಸಾವಿರದಷ್ಟು ಜನರು ಸೇರಿದ್ದರು. ಕೆಲವರು ₹4 ಸಾವಿರದಿಂದ ₹12 ಸಾವಿರ ವರೆಗೆ ಪಾವತಿಸಿ ಟಿಕೆಟ್ ಖರೀದಿಸಿದ್ದರು. ಕೆಲವರು ₹20 ಸಾವಿರ ನೀಡಿ ಕಾಳಸಂತೆಯಲ್ಲಿ ಟಿಕೆಟ್ ಖರೀದಿಸಿದ್ದರು ಎನ್ನಲಾಗಿದೆ.

‘ಕಾರ್ಯಕ್ರಮ ನಡೆದ ಸ್ಥಳದಲ್ಲಿ ತಂಪು ಪಾನೀಯಗಳನ್ನು ₹150ರಿಂದ ₹200ಕ್ಕೆ ಮಾರಾಟ ಮಾಡಲಾಗುತ್ತಿತ್ತು. ನೀರಿನ ಬಾಟಲಿ ಬೆಲೆ ₹200 ಇತ್ತು’ ಎಂದು ಪ್ರೇಕ್ಷಕರು ಹೇಳಿದ್ದಾರೆ.

‘ಟಿಕೆಟ್ ಹಣ ಮರುಪಾವತಿ’

‘ಘಟನೆಗೆ ಸಂಬಂಧಿಸಿ ಮುಖ್ಯ ಆಯೋಜಕನನ್ನು ಬಂಧಿಸಲಾಗಿದೆ. ಪ್ರೇಕ್ಷಕರಿಗೆ ಟಿಕೆಟ್ ಹಣವನ್ನು ಮರುಪಾವತಿ ಮಾಡುವುದಾಗಿ ಆಯೋಜಕ ಲಿಖಿತವಾಗಿ ಭರವಸೆ ನೀಡಿದ್ದಾನೆ’ ಎಂದು ಡಿಜಿಪಿ ರಾಜೀವ್ ಕುಮಾರ್ ಹೇಳಿದ್ದಾರೆ.


‘ಮೆಸ್ಸಿ ಅವರು ಸ್ಟೇಡಿಯಂಗೆ ಬಂದು ಪ್ರೇಕ್ಷಕರತ್ತ ಕೈ ಬೀಸಿ, ಆಯ್ದ ಜನರನ್ನು ಭೇಟಿ ಮಾಡಿ ಅಲ್ಲಿಂದ ನಿರ್ಗಮಿಸುವುದೆಂದು ಕಾರ್ಯಕ್ರಮ ಯೋಜಿಸಲಾಗಿತ್ತು. ನಿರ್ವಹಣೆ ವಿಚಾರವಾಗಿ ಆಯೋಜಕರ ಕಡೆಯಿಂದ ಏನಾದರೂ ವೈಫಲ್ಯವಾಗಿದೆಯೇ ಎಂಬ ಬಗ್ಗೆ ಸರ್ಕಾರ ರಚಿಸಿರುವ ಸಮಿತಿ ಪರಿಶೀಲಿಸಲಿದೆ’ ಎಂದು ಅವರು ಹೇಳಿದ್ದಾರೆ.

ಎಐಎಫ್‌ಎಫ್ ಕಳವಳ

ಕೋಲ್ಕತ್ತದ ಸಾಲ್ಟ್‌ಲೇಕ್ ಕ್ರೀಡಾಂಗಣದಲ್ಲಿ ನಡೆದ ಗೊಂದಲ, ಅಹಿತಕರ ಘಟನೆಗಳಿಗೆ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಕಳವಳ ವ್ಯಕ್ತಪಡಿಸಿದೆ.

‘ಈ ಸಮಾರಂಭವನ್ನು ಖಾಸಗಿ ಸಂಸ್ಥೆ ಆಯೋಜಿಸಿದೆ. ಎಐಎಫ್‌ಎಫ್ ಇದರ ಸಂಘಟನೆ, ಯೋಜನೆ, ಆಯೋಜನೆಯಲ್ಲಿ ಯಾವುದೇ ರೀತಿ ಒಳಗೊಂಡಿಲ್ಲ’ ಎಂದು ಎಐಎಫ್‌ಎಫ್ ಹೇಳಿಕೆಯಲ್ಲಿ ತಿಳಿಸಿದೆ. ಈ ಕಾರ್ಯಕ್ರಮದ ವಿವರಗಳನ್ನು ಎಐಎಫ್‌ಎಫ್‌ಗೆ ತಿಳಿಸಿರಲಿಲ್ಲ ಅಥವಾ ಫೆಡರೇಷನ್‌ನಿಂದ ಅನುಮತಿಯನ್ನೂ ಕೇಳಿರಲಿಲ್ಲ ಎಂದೂ ಹೇಳಿದೆ.

ಹೈದರಾಬಾದ್ ಕಾರ್ಯಕ್ರಮ ಸಾಂಗ



ಲಯೊನೆಲ್ ಮೆಸ್ಸಿ ಅವರು ಉಪ್ಪಳದ ರಾಜೀವಗಾಂಧಿ ಕ್ರೀಡಾಂಗಣದಲ್ಲಿ ಫುಟ್‌ಬಾಲ್ ಆಡಿದರು ಪಿಟಿಐ ಚಿತ್ರ

ಹೈದರಾಬಾದ್ (ಪಿಟಿಐ): ‘ಮುತ್ತಿನ ನಗರಿ’ಯಲ್ಲಿ ಲಯೊನೆಲ್ ಮೆಸ್ಸಿ ಕಾರ್ಯಕ್ರಮವು ಯಾವುದೇ ಗೊಂದಲಗಳಿಲ್ಲದೇ ಸಾಂಗವಾಗಿ ನೆರವೇರಿತು.

ಕೋಲ್ಕತ್ತದ ಭೇಟಿಯ ನಂತರ ಅವರು ಶನಿವಾರ ಸಂಜೆ ಹೈದರಾಬಾದ್‌ಗೆ ಬಂದಿಳಿದರು. ಕೋಲ್ಕತ್ತದ ಸಾಲ್ಟ್ ಲೇಕ್‌ನಲ್ಲಿ ಅಭಿಮಾನಿಗಳ ಗದ್ದಲದ ಸುದ್ದಿಯಿಂದ ಹೈದರಾಬಾದಿನಲ್ಲಿ ತುಸು ಆತಂಕದ ವಾತಾವರಣ ಇತ್ತು. ಅಂಥ ಯಾವುದೇ ಅಹಿತಕರ ಘಟನೆಗಳು ನಡೆಯಲಿಲ್ಲ.

ಉಪ್ಪಳದ ರಾಜೀವಗಾಂಧಿ ಕ್ರೀಡಾಂಗಣದಲ್ಲಿ ಕಿಕ್ಕಿರಿದು ಸೇರಿದ್ದ ಜನಸ್ತೋಮ ತಮ್ಮ ನೆಚ್ಚಿನ ತಾರೆಯನ್ನು ಕಣ್ತುಂಬಿಕೊಂಡರು. ಮೆಸ್ಸಿ ಸಂಜೆ 5.40ಕ್ಕೆ ನಗರಕ್ಕೆ ಬಂದರು. ತಾಜ್ ಫಲಕನುಮಾ ಪ್ಯಾಲೇಸ್‌ನಲ್ಲಿ ಮುಖ್ಯಮಂತ್ರಿ ರೇವಂತ ರೆಡ್ಡಿ ಅವರು ಮೆಸ್ಸಿ ಮತ್ತು ಸಂಗಡಿಗರನ್ನು ಸ್ವಾಗತಿಸಿದರು.

ಹಸಿರುಬಣ್ಣದ ಅರ್ಧತೋಳಿನ ಟೀ ಶರ್ಟ್ ಮತ್ತು ಕಪ್ಪು ಬಣ್ಣದ ಪ್ಯಾಂಟ್, ಸ್ಪೋರ್ಟ್ಸ್ ಶೂಗಳನ್ನು ಧರಿಸಿದ್ದ ಮೆಸ್ಸಿ ಕ್ರೀಡಾಂಗಣಕ್ಕೆ ಪ್ರವೇಶಿಸುತ್ತಿದ್ದಂತೆಯೇ ಅಭಿಮಾನಿಗಳ ಸಂತಸ ಮುಗಿಲು ಮುಟ್ಟಿತು. ಸುಮಾರು ಒಂದು ಗಂಟೆ ಮೆಸ್ಸಿ ಅವರು ಕ್ರೀಡಾಂಗಣದಲ್ಲಿದ್ದರು.

ಈ ಸಂದರ್ಭದಲ್ಲಿ ಗೋಟ್ ಕಪ್ ಪೆನಾಲ್ಟಿ ಶೂಟೌಟ್ ನಲ್ಲಿ ಮೆಸ್ಸಿ ಅವರು ಮುಖ್ಯಮಂತ್ರಿ ರೆಡ್ಡಿಯೊಂದಿಗೆ ಆಡಿದರು. ಮಕ್ಕಳಿಗೆ ಫುಟ್‌ಬಾಲ್ ಕ್ಲಿನಿಕ್ ಕೂಡ ನಡೆಸಿಕೊಟ್ಟರು.

ಕಾಂಗ್ರೆಸ್ ಧುರೀಣ ರಾಹುಲ್ ಗಾಂಧಿ ಮತ್ತು ರೆಡ್ಡಿ ಅವರು ಮೆಸ್ಸಿಯ ಸನ್ಮಾನ ಕಾರ್ಯಕ್ರಮದಲ್ಲಿ ಭಾಗಿಯಾದರು.

ಮೆಸ್ಸಿ ಮುಂಬೈ ಕಾರ್ಯಕ್ರಮಕ್ಕೆ ಬಿಗಿ ಭದ್ರತೆ

ಮುಂಬೈ (ಪಿಟಿಐ): ಭಾನುವಾರ ಇಲ್ಲಿ ನಿಗದಿಯಾಗಿರುವ ಲಯೊನೆಲ್ ಮೆಸ್ಸಿ ಅವರ ಎರಡು ಕಾರ್ಯಕ್ರಮಗಳ ತಾಣದಲ್ಲಿ ಬಿಗಿ ಭದ್ರತೆ ಏರ್ಪಡಿಲಾಗಿದೆ. ಕೋಲ್ಕತ್ತದಲ್ಲಿ ಶನಿವಾರ ಮೆಸ್ಸಿ ಅವರ ಕಾರ್ಯಕ್ರಮದಲ್ಲಿ ಅಹಿತಕರ ಘಟನೆಗಳು ನಡೆದ ಕಾರಣ ಮುನ್ನೆಚ್ಚರಿಕೆ ವಹಿಸಲಾಗಿದೆ.

ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ನಡೆಯಲಿರುವ ಪಾದೆಲ್ ‘ಗೋಟ್’ ಕಪ್ ಕಾರ್ಯಕ್ರಮದಲ್ಲಿ ಮೆಸ್ಸಿ ಭಾಗಿಯಾಗಲಿದ್ದಾರೆ. ನಂತರ ಸೆಲೆಬ್ರಿಟಿಗಳನ್ನು ಒಳಗೊಂಡ ಪ್ರದರ್ಶನ ಪಂದ್ಯವೂ ನಡೆಯಲಿದೆ. ಈ ಕಾರ್ಯಕ್ರಮಕ್ಕೆ ಬರುವ ಪ್ರೇಕ್ಷಕರು ನೀರಿನ ಬಾಟಲಿ, ನಾಣ್ಯಗಳು, ಲೋಹದ ವಸ್ತುಗಳನ್ನು ಕ್ರೀಡಾಂಗಣ ದೊಳಕ್ಕೆ ಒಯ್ಯದಂತೆ ತಡೆ ಹೇರಲಾಗುವುದು.

ಗ್ಲೋಬಲ್ ಚೆಸ್ ಲೀಗ್ ಇಂದಿನಿಂದ

ಮುಂಬೈ (ಪಿಟಿಐ): ತ್ರಿವೇಣಿ ಕಾಂಟಿನೆಂಟಲ್ ಕಿಂಗ್ಸ್ ತಂಡವು, ಭಾನುವಾರ ಇಲ್ಲಿ ಆರಂಭವಾಗುವ ಗ್ಲೋಬಲ್ ಚೆಸ್ ಲೀಗ್‌ನಲ್ಲಿ (ಜಿಸಿಎಲ್) ಹ್ಯಾಟ್ರಿಕ್ ಪ್ರಶಸ್ತಿಯ ನಿರೀಕ್ಷೆಯಲ್ಲಿದೆ. ಮೊದಲೆರಡೂ ಆವೃತ್ತಿಗಳಲ್ಲಿ ಈ ತಂಡ ಚಾಂಪಿಯನ್ ಆಗಿತ್ತು.



ಅಲಿರೇಝಾ ಫಿರೋಜ್

ಟೆಕ್ ಮಹೀಂದ್ರ ಮತ್ತು ವಿಶ್ವ ಚೆಸ್ ಫೆಡರೇಷನ್ (ಫಿಡೆ) ಜಂಟಿ ಉಪಕ್ರಮವಾಗಿರುವ ಜಿಸಿಎಲ್‌ನ ಟ್ರೋಫಿಯನ್ನು ಇಲ್ಲಿನ ರಾಯಲ್ ಒಪೇರಾ ಹೌಸ್‌ನಲ್ಲಿ ಶನಿವಾರ ಅನಾವರಣಗೊಳಿಸಲಾಯಿತು. ಈ ಬಾರಿಯೂ ಆರು ತಂಡಗಳು ಕಣಕ್ಕಿಳಿಯಲಿವೆ. ತ್ರಿವೇಣಿ ತಂಡದಲ್ಲಿ ಫ್ರೆಂಚ್ ಗ್ರ್ಯಾಂಡ್‌ಮಾಸ್ಟರ್ ಅಲಿರೇಝಾ ಫಿರೋಜ್ ನಾಯಕರಾಗಿದ್ದು, ವಿದಿತ್ ಗುಜರಾತಿ, ಝು ಝಿನೆರ್ ಅವರನ್ನು ಒಳಗೊಂಡಿದೆ.


ಈ ಟೂರ್ನಿಯಲ್ಲಿ ತ್ರಿವೇಣಿ ಕಾಂಟಿನೆಂಟಲ್ ಕಿಂಗ್ಸ್ ಜೊತೆಗೆ ಅಪ್‌ಗ್ರಾಡ್ ಮುಂಬಾ ಮಾಸ್ಟರ್ಸ್, ಗ್ಯಾಂಜೆಸ್ ಗ್ರ್ಯಾಂಡ್‌ಮಾಸ್ಟರ್ಸ್, ಅಲ್ಪೈನ್ ಎಸ್‌ಜಿ ಪೈಪರ್ಸ್, ಪಿಬಿಜಿ ಅಲಾಸ್ಕನ್ ನೈಟ್ಸ್, ಫೈಯರ್ಸ್ ಅಮೆರಿಕನ್ ಗ್ಯಾಂಬಿಟ್ಸ್ ಭಾಗವಹಿಸುತ್ತಿವೆ. ವಿಶ್ವಖ್ಯಾತ ಆಟಗಾರರು ಈ ತಂಡಗಳಲ್ಲಿದ್ದಾರೆ.

10 ದಿನಗಳ ಈ ಲೀಗ್, ಡಬಲ್ ರೌಂಡ್‌ರಾಬಿನ್ ಮಾದರಿಯಲ್ಲಿ ನಡೆಯಲಿದೆ. ಫೈನಲ್ ಪಂದ್ಯ ಡಿಸೆಂಬರ್ 23ರಂದು ನಡೆಯಲಿದೆ.

ಭಾರತ–ದಕ್ಷಿಣ ಆಫ್ರಿಕಾ ಮೂರನೇ ಟಿ20 ಪಂದ್ಯ ಇಂದು

ರನ್ ಗಳಿಸುವರೇ ಗಿಲ್, ಸೂರ್ಯ?





ಸೂರ್ಯಕುಮಾರ್ ಯಾದವ್ (ಎಡ). ಶುಭಮನ್ ಗಿಲ್ ಅವರು ಧರ್ಮಶಾಲಾದಲ್ಲಿ ಕ್ಯಾಚಿಂಗ್ ಅಭ್ಯಾಸ ನಡೆಸಿದರು ಪಿಟಿಐ ಚಿತ್ರ

ಧರ್ಮಶಾಲಾ (ಪಿಟಿಐ): ಶುಭಮನ್ ಗಿಲ್ ಅವರಿಗೆ ಟಿ20 ಕ್ರಿಕೆಟ್ ತಂಡದಲ್ಲಿ ಸ್ಥಾನ ಉಳಿಸಿಕೊಳ್ಳಲು ತಮ್ಮ ಸಂಪೂರ್ಣ ಸಾಮರ್ಥ್ಯವನ್ನು ಪಣಕ್ಕೊಡ್ಡುವ ಕಾಲ ಈಗ ಬಂದಿದೆ. ದಕ್ಷಿಣ ಆಫ್ರಿಕಾ ಎದುರಿನ ಟಿ20 ಸರಣಿಯಲ್ಲಿ ಉಳಿದಿರುವ ಮೂರು ಪಂದ್ಯಗಳಲ್ಲಿ ಲಯಕ್ಕೆ ಮರಳುವ ಸವಾಲು ಗಿಲ್ ಅವರ ಮುಂದಿದೆ.

ಸರಣಿಯ ಮೊದಲೆರಡೂ ಪಂದ್ಯಗಳಲ್ಲಿ ಗಿಲ್ ವಿಫಲರಾಗಿದ್ದರು. ಅಭಿಷೇಕ್ ಶರ್ಮಾ ಜೊತೆಗೆ ಅವರು ಈ ಪಂದ್ಯಗಳಲ್ಲಿ ಇನಿಂಗ್ಸ್ ಆರಂಭಿಸಿದ್ದರು. ಒಂದೊಮ್ಮೆ ಗಿಲ್ ಲಯಕ್ಕೆ ಮರಳದೇ ಹೋದರೆ 11ರ ಬಳಗದಲ್ಲಿ ಸ್ಥಾನ ತಪ್ಪಲಿರುವುದು ಬಹುತೇಕ ಖಚಿತ.

ಭಾನುವಾರ ನಡೆಯಲಿರುವ ದಕ್ಷಿಣ ಆಫ್ರಿಕಾ ಎದುರಿನ ಮೂರನೇ ಟಿ20 ಪಂದ್ಯವು ಗಿಲ್ ಅವರಿಗೆ ಮೊದಲ ಪರೀಕ್ಷೆಯಾಗಲಿದೆ. ಏಕೆಂದರೆ ಭಾರತ ತಂಡಕ್ಕೆ ಸರಣಿ ಜಯ ಸಾಧಿಸಬೇಕಾದರೆ, ಇನ್ನುಳಿದಿರುವ ಮೂರರಲ್ಲಿ ಎರಡು ಪಂದ್ಯಗಳನ್ನಾದರೂ ಗೆಲ್ಲಬೇಕಿದೆ.

ಹಿಮಾಲಯದ ಮಡಿಲಲ್ಲಿರುವ ಧರ್ಮಶಾಲಾದಲ್ಲಿ ಈಗ 10 ಡಿಗ್ರಿ ಸೆಲ್ಸಿಯಸ್ ತಾಪಮಾನವಿದೆ. ಚಳಿಯ ವಾತಾವರಣದಲ್ಲಿ ಗಿಲ್ ಅವರಲ್ಲದೇ ನಾಯಕ ಸೂರ್ಯಕುಮಾರ್ ಯಾದವ್ ಅವರು ಕೂಡ ಮೈಕೊಡವಿ ಏಳಬೇಕಾದ ಅಗತ್ಯವಿದೆ. ಗಿಲ್ ಅವರಿಗೆ ಸ್ಥಾನ ಕೊಡುವುದಕ್ಕಾಗಿ ಸಂಜು ಸ್ಯಾಮ್ಸನ್ ಅವರನ್ನು ಕಣಕ್ಕೆ ಇಳಿಸಿಲ್ಲ. ಮುಖ್ಯ ಕೋಚ್ ಗೌತಮ್ ಗಂಭೀರ್ ಅವರನ್ನು ಟೀಕೆ ಮಾಡಲಾಗುತ್ತಿದೆ. ಟಿ20 ಕ್ರಿಕೆಟ್‌ನಲ್ಲಿ ಗಿಲ್ ಅವರು ಆರಂಭಿಕ ಆಟಗಾರನಾಗಿ ಆಡಲು ಸರಿಹೊಂದುವುದಿಲ್ಲ ಎಂಬುದು ಗೊತ್ತಿದ್ದರೂ ಅವರನ್ನೇ ಕಣಕ್ಕಿಳಿಸುತ್ತಿರುವುದು ಹಲವು ಪ್ರಶ್ನೆಗಳನ್ನು ಮೂಡಿಸಿರುವುದು ಸುಳ್ಳಲ್ಲ. ಟಿ20 ಮಾದರಿಯಲ್ಲಿ 165ರ ಸ್ಟ್ರೈಕ್ ರೇಟ್ ಹೊಂದಿರುವ ಯಶಸ್ವಿ ಜೈಸ್ವಾಲ್ ಅವರಿಗೂ ಅವಕಾಶ ದೊರೆಯುತ್ತಿಲ್ಲ.

ಎರಡನೇ ಪಂದ್ಯದಲ್ಲಿ ಅಕ್ಷರ್ ಪಟೇಲ್ ಅವರನ್ನು ಮೂರನೇ ಕ್ರಮಾಂಕದಲ್ಲಿ ಹಾಗೂ ಶಿವಂ ದುಬೆ ಅವರನ್ನು ಎಂಟನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಲು ಕಳಿಸಿದ್ದು ಕೋಚ್ ಗಂಭೀರ್ ಅವರ ಅಸ್ಪಷ್ಟ ಮನಸ್ಥಿತಿಯನ್ನು ಬಿಂಬಿಸುತ್ತಿದೆ ಎಂಬ ಟೀಕೆಗಳು ವ್ಯಕ್ತವಾಗಿವೆ.

ಹಿಮಾಚಲ ಪ್ರದೇಶ ಕ್ರಿಕೆಟ್ ಸಂಸ್ಥೆ (ಎಚ್‌ಪಿಸಿಎ) ಕ್ರೀಡಾಂಗಣದ ಪಿಚ್‌ನಲ್ಲಿ ಚೆಂಡು ಹೆಚ್ಚು ಪುಟಿಯುತ್ತದೆ. ವೇಗವಾಗಿ ಕೂಡ ಚಲಿಸುವುದರಿಂದ ಬ್ಯಾಟರ್‌ಗಳಿಗೆ ಸವಾಲಾಗಲಿದೆ.

ದಕ್ಷಿಣ ಆಫ್ರಿಕಾದ ವೇಗದ ಬೌಲರ್‌ಗಳಾದ ಎನ್ರಿಚ್ ನಾಕಿಯಾ, ಮಾರ್ಕೊ ಯಾನ್ಸೆನ್, ಲುಂಗಿ ಎನ್‌ಗಿಡಿ, ಒಟ್ನೀಲ್ ಬಾರ್ತ್‌ಮನ್ ಮತ್ತು ಲುಥೋ ಸಿಪಾಮ್ಲಾ ಅವರಿಗೆ ಭಾರತದ ಪಿಚ್‌ಗಳಲ್ಲಿ ಬೌಲಿಂಗ್ ಮಾಡುವ ಮರ್ಮ ತಿಳಿದಿದೆ. ಕಳೆದ ಪಂದ್ಯಗಳಲ್ಲಿ ಅವರು ಸಾಮರ್ಥ್ಯವನ್ನೂ ಮೆರೆದಿದ್ದಾರೆ. ಆದರೆ, ಭಾರತದ ಬೌಲಿಂಗ್ ಪಡೆಯಲ್ಲಿ ಎಲ್ಲವೂ ಸರಿಯಿಲ್ಲ. ಕಳೆದ ಪಂದ್ಯದಲ್ಲಿ ಅರ್ಷದೀಪ್ ಅವರ ‘13 ಎಸೆತಗಳ ಓವರ್’ ಈಗ ಚರ್ಚೆಗೆ ಗ್ರಾಸವಾಗಿದೆ. ಅವರು ತಮ್ಮ ಲೈನ್ ಮತ್ತು ಲೆಂತ್ ಸರಿಪಡಿಸಿಕೊಳ್ಳದಿದ್ದರೆ ಜಸ್‌ಪ್ರೀತ್ ಬೂಮ್ರಾ ಮತ್ತು ಹಾರ್ದಿಕ್ ಪಾಂಡ್ಯ ಮೇಲೆ ಒತ್ತಡ ಹೆಚ್ಚುತ್ತದೆ.

ಕ್ವಿಂಟನ್ ಡಿಕಾಕ್, ಏಡನ್ ಮರ್ಕರಂ, ರೀಜಾ ಹೆನ್ರಿಕ್ಸ್, ಡೆವಾಲ್ಡ್ ಬ್ರೆವಿಸ್, ಡೇವಿಡ್ ಮಿಲ್ಲರ್, ಟ್ರಿಸ್ಟನ್ ಸ್ಟಬ್ಸ್ ಅವರನ್ನು ನಿಯಂತ್ರಿಸುವುದು ಆತಿಥೇಯ ಬೌಲರ್‌ಗಳ ಮುಂದಿರುವ ಪ್ರಮುಖ ಸವಾಲು.

ಪಂದ್ಯ ಆರಂಭ: ರಾತ್ರಿ 7
ನೇರಪ್ರಸಾರ: ಜಿಯೊಹಾಟ್‌ಸ್ಟಾರ್ ಆ್ಯಪ್, ಸ್ಟಾರ್ ಸ್ಪೋರ್ಟ್ಸ್.

ಕರ್ನಾಟಕ ತಂಡಕ್ಕೆ ಮಣಿದ ವಿದರ್ಭ

ಬೆಂಗಳೂರು: ನಾಯಕಿ ರಚಿತಾ ಹತ್ವಾರ್ (156; 154ಎ; 4x21) ಅವರ ಶತಕದ ಬಲದಿಂದ ಕರ್ನಾಟಕ ತಂಡವು ಬಿಸಿಸಿಐ 19 ವರ್ಷದೊಳಗಿನ ಮಹಿಳೆಯರ ಏಕದಿನ ಟ್ರೋಫಿ ಎಲೀಟ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಶನಿವಾರ 29 ರನ್‌ಗಳಿಂದ ವಿದರ್ಭ ತಂಡವನ್ನು ಮಣಿಸಿತು.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 50 ಓವರ್‌ಗಳಲ್ಲಿ 7 ವಿಕೆಟ್‌ಗೆ 284 (ರಚಿತಾ ಹತ್ವಾರ್ 156, ಶ್ರೇಯಾ ಎಸ್. ಚವಣ್ 57; ಧನಶ್ರೀ ಜಿ. 46ಕ್ಕೆ2); ವಿದರ್ಭ: 48.1 ಓವರ್‌ಗಳಲ್ಲಿ 255 (ಶ್ರದ್ಧಾ ಎನ್. 71, ಅಕ್ಷರಾ 72; ವಂದಿತಾ ರಾವ್ 49ಕ್ಕೆ4, ದೀಕ್ಷಾ ಜೆ. 53ಕ್ಕೆ4).



ಪ್ರಶಸ್ತಿ ಜಯಿಸಿದ ಬೆಂಗಳೂರು ಈಗಲ್ಸ್ ತಂಡದ ಆಟಗಾರರು ಮತ್ತು ನೆರವು ಸಿಬ್ಬಂದಿ ಟ್ರೋಫಿಯೊಂದಿಗೆ ಸಂಭ್ರಮಿಸಿದರು

ಬೆಂಗಳೂರು ಈಗಲ್ಸ್‌ಗೆ ಕಿರೀಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಲೂರಿನಲ್ಲಿರುವ ಕೆಎಸ್‌ಸಿಎ ಕ್ರಿಕೆಟ್ ಕ್ರೀಡಾಂಗಣದಲ್ಲಿ ಶನಿವಾರ ವಿಭಿನ್ನವಾದ ರೋಚಕ ಲೋಕವೊಂದು ಅನಾವರಣಗೊಂಡಿತು. ನೋಡುಗರನ್ನು ಬೆರಗಾಗಿಸಿತು. ಅಲ್ಲಿ ನಡೆದಿದ್ದ ಕ್ರಿಕೆಟ್ ಪಂದ್ಯದಲ್ಲಿ ಓಡುವವರೇ ಇರಲಿಲ್ಲ. ಆದರೆ ತಮ್ಮ ಕಾಲುಗಳ ಶಕ್ತಿಯನ್ನು ಕಿತ್ತುಕೊಂಡು ಓಡದಂತೆ ಮಾಡಿದ ವಿಧಿಗೇ ಸಡ್ಡು ಹೊಡೆದವರ ದಂಡು ಅಲ್ಲಿತ್ತು.

ಹೌದು; ಗಾಲಿಕುರ್ಚಿಗಳ ಸಹಾಯದಿಂದ ಅವರೆಲ್ಲರೂ ಕ್ರಿಕೆಟ್ ಆಡಿದರು. ಉರುಳುಗಾಲಿ ಕುರ್ಚಿಯ ವೇಗ, ಚಲನೆಯನ್ನು ನಿಯಂತ್ರಿಸುವುದರ ಜೊತೆಗೆ ಗಾಳಿಯಲ್ಲಿ ತೇಲುವ ಚೆಂಡನ್ನು ಕ್ಯಾಚ್ ಮಾಡಿದರು. ಕ್ರೀಸ್‌ನಲ್ಲಿ ಶಿಸ್ತಿನಿಂದ ಬೌಲಿಂಗ್ ಮಾಡಿದರು. ಬ್ಯಾಟರ್‌ಗಳು ಸಿಕ್ಸರ್, ಬೌಂಡರಿ ಸಿಡಿಸಿದರು. ವಿಕೆಟ್ ಪಡೆದಾಗಲೆಲ್ಲ ಫೀಲ್ಡರ್‌ಗಳು ಸೇರಿ ಸಂಭ್ರಮಿಸಿದ ಪರಿಯೂ ಅನನ್ಯ. ತಮ್ಮ ವಿಶೇಷ ಸಾಮರ್ಥ್ಯದೊಂದಿಗೆ ಎಲ್ಲರ ಮನಗೆದ್ದರು.

ಟೆಕ್ ಸ್ಪೋರ್ಟ್ಸ್ ಎಬಿಲಿಟಿ ಟಿ20 ಲೀಗ್ ಕ್ರಿಕೆಟ್ ಟೂರ್ನಿಯ ಎರಡನೇ ಆವೃತ್ತಿಯ ಫೈನಲ್ ಪಂದ್ಯವದು. ಅದರಲ್ಲಿ ಬೆಂಗಳೂರು ಈಗಲ್ಸ್ ತಂಡವು 59 ರನ್‌ಗಳಿಂದ ಲಖನೌ ಸ್ಟಾಲಿಯನ್ಸ್ ವಿರುದ್ಧ ಜಯಭೇರಿ ಬಾರಿಸಿತು. ಟ್ರೋಫಿಯನ್ನು ತನ್ನದಾಗಿಸಿಕೊಂಡಿತು.

2024ರಲ್ಲಿ ಚೆನ್ನೈ ವಿರುದ್ಧ ಫೈನಲ್ ಪಂದ್ಯದಲ್ಲಿ ಸೋತು ರನ್ನರ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದ್ದ ಬೆಂಗಳೂರು ಪಡೆ, ಈ ಬಾರಿ ಲೀಗ್‌ನಲ್ಲಿ ಸತತ ಗೆಲುವುಗಳ ನಂತರ ಫೈನಲ್ ತಲುಪಿತ್ತು. ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಬೆಂಗಳೂರು ಈಗಲ್ಸ್ ತಂಡ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್‌ಗಳ ನಷ್ಟಕ್ಕೆ 217 ರನ್ ಗಳಿಸಿತ್ತು. ಲಖನೌ ಸ್ಟಾಲಿಯನ್ಸ್ ಪಡೆಗೆ 20 ಓವರ್‌ಗಳಲ್ಲಿ ಕೇವಲ 159 ರನ್ ಗಳಿಸಲು ಸಾಧ್ಯವಾಯಿತು.

ಫೈನಲ್‌ಗೆ ಉನ್ನತಿ, ಇಶಾರಾಣಿ



ಇಶಾರಾಣಿ ಬರೂವಾ

ಕಟಕ್ (ಪಿಟಿಐ): ಅಗ್ರ ಶ್ರೇಯಾಂಕ ಪಡೆದಿರುವ ಭಾರತದ ಉನ್ನತಿ ಹೂಡ ಮತ್ತು ಇಶಾರಾಣಿ ಬರೂವಾ ಅವರು ಒಡಿಶಾ ಮಾಸ್ಟರ್ಸ್ ಸೂಪರ್ 100 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ಫೈನಲ್ ಪ್ರವೇಶಿಸಿದರು. ಸೆಮಿಫೈನಲ್‌ನಲ್ಲಿ ಇಬ್ಬರೂ ಮೂರು ಗೇಮ್‌ಗಳ ಪಂದ್ಯದಲ್ಲಿ ಜಯಗಳಿಸಿದರು.

2022ರಲ್ಲಿ ಇಲ್ಲಿ ಪ್ರಶಸ್ತಿ ಗೆದ್ದುಕೊಂಡಿದ್ದ 18 ವರ್ಷ ವಯಸ್ಸಿನ ಉನ್ನತಿ ಉತ್ತಮ ಹೋರಾಟ ಕಂಡ ಪಂದ್ಯದಲ್ಲಿ 18–21, 21–16, 21–16 ರಿಂದ ತಸ್ನಿಮ್ ಮೀರ್ ಅವರನ್ನು ಸೋಲಿಸಿದರು.

ಮತ್ತೊಂದು ಸೆಮಿಫೈನಲ್‌ನಲ್ಲಿ ಅಸ್ಸಾಂನ ಇಶಾರಾಣಿ ಅವರು 18–21, 21–7, 21–7 ರಿಂದ ಕರ್ನಾಟಕದ ತನ್ವಿ ಹೇಮಂತ್ ಅವರನ್ನು ಹಿಮ್ಮೆಟ್ಟಿಸಿದರು.

ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ಆಟಗಾರರ ವ್ಯವಹಾರವಾಗಿದ್ದ ಸೆಮಿಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಕಿರಣ್ ಜಾರ್ಜ್ ಅವರು 21–19, 8–21, 21–18 ರಿಂದ ಸ್ವದೇಶದ ರೋನಕ್ ಚೌಹನ್ ಅವರನ್ನು ಸೋಲಿಸಿದರು. ಕಿರಣ್ ಅವರು ಫೈನಲ್‌ನಲ್ಲಿ ಇಂಡೋನೇಷ್ಯಾದ ಮುಹಮದ್ ಯೂಸುಫ್ ಅವರನ್ನು ಎದುರಿಸಲಿದ್ದಾರೆ. ಯೂಸುಫ್ ಇನ್ನೊಂದು ಸೆಮಿಫೈನಲ್‌ನಲ್ಲಿ ಸ್ವದೇಶದ ಬಿಸ್ಮೊ ರಾಯಾ ಒಕ್ಟೊರಾ ಅವರನ್ನು 42 ನಿಮಿಷಗಳವರೆಗೆ ನಡೆದ ಪಂದ್ಯದಲ್ಲಿ 21–12, 21–18 ರಿಂದ ಸೋಲಿಸಿದರು.

ಮಹಿಳೆಯರ ಡಬಲ್ಸ್ ಸೆಮಿಫೈನಲ್‌ನಲ್ಲಿ ಭಾರತದ ಅಶ್ವಿನಿ ಭಟ್ ಕೆ.- ಶಿಖಾ ಗೌತಮ್ ಜೋಡಿ ನಿರ್ಗಮಿಸಿತು.

ಸ್ಕ್ವಾಷ್: ಚೊಚ್ಚಲ ಬಾರಿ ವಿಶ್ವಕಪ್ ಫೈನಲ್‌ಗೆ ಭಾರತ



ಅನಾಹತ್ ಸಿಂಗ್

ಚೆನ್ನೈ (ಪಿಟಿಐ): ಎರಡು ಬಾರಿಯ ಚಾಂಪಿಯನ್ ಈಜಿಪ್ಟ್ ತಂಡವನ್ನು ಮಣಿಸಿದ ಆತಿಥೇಯ ಭಾರತ ತಂಡವು ಚೊಚ್ಚಲ ಬಾರಿಗೆ ಸ್ಕ್ವಾಷ್ ವಿಶ್ವಕಪ್ ಫೈನಲ್ ಪ್ರವೇಶಿಸಿತು.

ಎರಡನೇ ಶ್ರೇಯಾಂಕದ ಭಾರತ ತಂಡ, ಇಲ್ಲಿನ ಎಕ್ಸ್‌ಪ್ರೆಸ್ ಅವೆನ್ಯೂ ಮಾಲ್‌ನಲ್ಲಿ ಶನಿವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ 3–0ಯಿಂದ ಹಾಲಿ ಚಾಂಪಿಯನ್ ಈಜಿಪ್ಟ್ ತಂಡವನ್ನು ಸೋಲಿಸಿತು.

ಆತಿಥೇಯ ತಂಡದ ವಿ.ಸೆಂಥಿಲ್‌ಕುಮಾರ್ 3–0ಯಿಂದ ಇಬ್ರಾಹಿಂ ಎಲ್ಕಬ್ಬನಿ ಅವರನ್ನು ಸುಲಭವಾಗಿ ಮಣಿಸಿದರು. ಉದಯೋನ್ಮುಖ ಆಟಗಾರ್ತಿ ಅನಾಹತ್ ಸಿಂಗ್ ಅವರು 3–2ರಿಂದ ನೂರ್ ಹೈಕಲ್ ವಿರುದ್ಧ ರೋಚಕ ಗೆಲುವು ಸಾಧಿಸಿದರೆ, ಅಭಯ್‌ಸಿಂಗ್ 3–1ರಿಂದ ಆ್ಯಡಂ ಹವಾಲ್ ಅವರನ್ನು ಸೋಲಿಸಿದರು.

ಭಾರತ ತಂಡವು ಭಾನುವಾರ ನಡೆಯಲಿರುವ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಹಾಂಗ್‌ಕಾಂಗ್ ತಂಡವನ್ನು ಎದುರಿಸಲಿದೆ.